ಅರ್ಪಣೆ

ಪ್ರಭುಸೇವಾಪರಾಯಣರೂ ಉತ್ಕಟ ದೇಶಾಭಿಮಾನಧನರೂ ಪ್ರಜಾಪ್ರೇಮಪರಿಪೂರ್ಣರೂ ಸಾಹಿತ್ಯಸೇವಾನಿರತರೂ ಮೈಸೂರು ಸಂಸ್ಥಾನದ ಅಮಾತ್ಯವರ್ಯರೂ ಆದ

ಅಮೀರ್-ಉಲ್-ಮುಲ್ಕ್

ಸರ್ ಮಿರ್ಜಾ ಎಂ. ಇಸ್ಮಾಯಿಲ್

ಕೆ.ಸಿ.ಐ.ಇ., ಒ.ಬಿ.ಇ., ಸಿ.ಎಸ್‌ಟಿ.ಜೆ.

ಅವರ ಕೃಪಾಪರಿಪೂರ್ಣವಾದ ಅಪ್ಪಣೆಯನ್ನು ಪಡೆದು ಈ ಗ್ರಂಥ ಕುಸುಮವನ್ನು ಭಕ್ತಿಪುರಸ್ಸರವಾಗಿ ಅವರಿಗೆ ಸಮರ್ಪಿಸಲಾಗಿದೆ.

ರಾಜಸೇವಾಸಕ್ತ ಪ್ರೊಫೆಸರ್ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವ

ಎಂ.ಎ., ಬಿ.ಎಲ್., ಅವರಿಂದ

ಮುನ್ನುಡಿ

ಭಾರತ ಭೂಮಿಯ ಚರಿತ್ರೆಯಂತೆಯೇ ಮೈಸೂರಿನ ಚರಿತ್ರೆಯು
ಹಿಂದೂ, ಮುಸಲ್ಮಾನ್, ಬ್ರಿಟಿಷ್ ಈ ಮೂರು ಪ್ರಭಾವಗಳು ಸೇರಿ ಮುಪ್ಪು
ಗೊಂಡಿದೆ. ಈ ಸಾಂಸ್ಕೃತಿಕ ಮತ್ತು ರಾಜಕೀಯ ರೀತಿನೀತಿಗಳ ಹಿನ್ನೆ
ಯಲ್ಲಿ, ಪುಣ್ಯಶ್ಲೋಕರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಭವ
ಚರಿತ್ರೆಯನ್ನು ಶ್ರೀ|| ಓ. ಎನ್. ಲಿಂಗಯ್ಯ, ಬಿ.ಎ., (ಆನರ್ಸ್) ಅವರ
ಈ ಚಿಕ್ಕ ಪುಸ್ತಕದಲ್ಲಿ ಸಂಕ್ಷೇಪವಾಗಿ ಚತುರತೆಯಿಂದ ಚಿತ್ರಿಸಿದ್ದಾರೆ.

ಮಹಾನುಭಾವರಾದ ಕಥಾನಾಯಕರ ಜೀವನಚರಿತ್ರೆಯಲ್ಲಿ ಎರಡ
ಮೂರು ಅಂಶಗಳು ಎದ್ದು ಕಾಣುವುವು:

(೧) ಹಿಂದನೆಯ ಶತಮಾನದ ಭಾರತದ, ಮೈಸೂರಿನ ಕಲಕಿಹೋದ
ಪರಿಸ್ಥಿತಿ; ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳ ಹೋರಾಟ; ನಾಡಿನಲ್ಲಿ
ಒಕ್ಕಟ್ಟು ಒಗ್ಗುರಿಗಳಿಲ್ಲದೆ ಜನಶಕ್ತಿ ಛಿನ್ನ ಭಿನ್ನವಾಗಿದ್ದುದು —

(೨) ಇಂತಹ ಶಾಂತಿಯಿಲ್ಲದ ಕಡಲಲೆಗಳ ಹೊಡೆತದಲ್ಲಿ, ಹಡಗು
ನಡಸುವ ನಾಯಕರ ಮನೋಧರ್ಮ; ಘನವ್ಯಕ್ತಿತ್ವ; ಶ್ರೀ ಮುಮ್ಮಡಿ
ಕೃಷ್ಣರಾಜ ಒಡೆಯರವರ ತೇಜಸ್ಸು ಕೂಡಿದ ಬಿಂಬ ಈ ಅವಾಂತರ ಸನ್ನಿವೇಶ
ದಲ್ಲಿ ಧ್ರುವ ನಕ್ಷತ್ರದಂತೆ ಹೊಳೆಯುತ್ತಿರುವುದು. ಅವರ ಧೈರ್ಯ, ಸ್ಥೈರ್ಯ,
ಗಾಂಭೀರ್ಯಗಳು, ಅವರ ಸಾತ್ವಿಕತೆ, ದೈವಭಕ್ತಿ, ದಾನಧರ್ಮಬುದ್ಧಿ; ಅವರ
ಪ್ರಜಾಪ್ರೇಮ, ಸಹನೆ, ಸಾಹಿತ್ಯ ಸಂಗೀತ ಕಲೆಗಳ ಉಪಾಸನೆ; ಅವರ
ಮೈತ್ರಿ, ಅವರ ಸೌಜನ್ಯತೆ, ಅವರ ಹಾಸ್ಯ ವಿನೋದಗಳು—ಕಾಲ ಹೇಗಾ
ದರೂ ಇರಲಿ; ಪುರುಷಗುಣ ಮುಖ್ಯವೆನ್ನುವುದನ್ನು ನಮಗೆ ಬೋಧಿಸುವ
ಪೂಜ್ಯವ್ಯಕ್ತಿತ್ವವದು. ಅವರ ಹೆಸರು ಹಸುರಾಗಿ ಇಂದಿಗೂ—ಎಂದಿಗೂ—
ಹಳ್ಳಿಹಳ್ಳಿಗಳಲ್ಲಿ ದಂತ ಕಥೆಗಳಲ್ಲಿ ಅಂಟಿಕೊಂಡಿರುವುದು; ಕರ್ನಾಟಕದೊಳಗೆ
ಹೊರಗೆ, ತಂಗಾಳಿಯಲ್ಲಿ ಹಬ್ಬಿ ಕಂಪು ಬೀರುತ್ತಿರುವುದು.

(೩) ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಘನತೆಯ ವ್ಯಕ್ತಿತ್ವ ರಾಜಕೀಯದ ಬಿಕ್ಕಟ್ಟಿನ ಸಮಸ್ಯೆಯಲ್ಲಿ ಯಾವರೀತಿ ಕಾರ್ಯನಿರ್ವಾಹ ಮಾಡಿ ಜಯಸಾಧನೆಗೊಂಡಿತೆಂದು ಪರಿಶೀಲಿಸುವುದು ಒಂದು ಆನಂದ, ದೊಡ್ಡ ಸ್ಫೂರ್ತಿ. ಬ್ರಿಟಿಷರು ಕೊಟ್ಟ ರಾಜ್ಯವನ್ನು, ಬ್ರಿಟಿಷರು ತೆಗೆದುಕೊಂಡರು. ಹಿಂದೂ ಮುಸಲ್ಮಾನ ಪ್ರಭುಗಳು ವಿಸ್ತರಿಸಿ ಒಂದುಮಾಡಿದ ವಿಜಯನಗರ ಶಿಖರದಿಂದ ಉರುಳಿದ್ದ, ಕರ್ನಾಟಕ ಮತ್ತೆ ಹೊಮ್ಮಿ ಚಿಮ್ಮುತ್ತಿತ್ತು. ಮತ್ತೆ ಹರಿಯಿತು, ಹಂಚಿತು. ಸ್ವತಂತ್ರ ದೇಶೀಯ ಸಂಸ್ಥಾನದ ರಾಜಮನೆತನ ತನ್ನ ಪಿತ್ರಾರ್ಜಿತವನ್ನು ಮತ್ತೆ ಕಳೆದುಕೊಂಡಿತು. ಈ ಸಂಕಟದಲ್ಲಿ ಸತ್ಯವೇ ಬಲವೆಂದು ನಂಬಿ, ಸತ್ಯ ಮತ್ತು ಅಹಿಂಸೆ, ನ್ಯಾಯ ಮತ್ತು ಶಾಂತಿ, ಸರಳತೆ ಮತ್ತು ಸ್ವಾಮಿನಿಷ್ಠೆ---ಈ ಸಾತ್ವಿಕ ಮಾರ್ಗವೇ ಶ್ರೇಯಸ್ಕರವೆಂದು ದೃಢಸಂಕಲ್ಪಮಾಡಿ, ಬ್ರಿಟಿಷರೊಡನೆ ಧರ್ಮ ಯುದ್ಧವನ್ನು ಹೂಡಿ, ಪ್ರೇಮದಿಂದ ಹೋರಾಡಿ, ಹೋದ ರಾಜ್ಯವನ್ನು ಮತ್ತೆ ತಮ್ಮ ವಂಶಕ್ಕೆ ಬದುಕಿಸಿಕೊಂಡರು. ಸಾತ್ವಿಕಶಿರೋಮಣಿಗಳಾದವರು, ರಾಜರ್ಷಿಗಳಾದವರು, ಸಾತ್ವಿಕ ಬಲವನ್ನೇ ಪ್ರಯೋಗಿಸಿ ಕಾರ್ಯಸಿದ್ಧಿಯನ್ನು ಪಡೆದರು, ಪಡೆಯುವರು.

"ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ"

ಈಗಿನ ಹೋರಾಟದ ಭಾರತವೂ, ಒಕ್ಕೂಟದ ಕನಸುಗಳನ್ನು ಕಾಣುತ್ತಿರುವ ಕರ್ನಾಟಕವೂ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ದಿವ್ಯವಾದ ಮಹಾ ವ್ಯಕ್ತಿಯನ್ನೂ ಅವರು ತೋರಿಕೊಟ್ಟಿರುವ ಮಹಾ ಪಥವನ್ನೂ ಮನಸ್ಸಿಗೆ ತಂದುಕೊಂಡು ಕೃತಾರ್ಥರಾಗಬಹುದಲ್ಲವೆ?

ಉತ್ತಮ ವಿಷಯಗಳನ್ನೊಳಗೊಂಡಿರುವ ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಆದರದಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಬಸವನಗುಡಿ
ತಾ॥ ೧೬-೧-೧೯೪೦.

ಬಿ. ಎಂ. ಶ್ರೀಕಂಠಯ್ಯ

ವಿಜ್ಞಾಪನೆ.

ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರು ಒಬ್ಬ ಮಹಾ ಪುರುಷರು, ಆದರ್ಶಪ್ರಭುಗಳು. ಅವರ ಜೀವನಚರಿತ್ರೆಯೆಂದರೆ ಮೈಸೂರು ಸಂಸ್ಥಾನದಲ್ಲಿ ನಡೆದ ಒಂದು ಶತಮಾನದ ಜನಜೀವನ ಚರಿತ್ರೆಯೆಂದು ಹೇಳಬಹುದು. ಹತ್ತೊಂಬತ್ತನೆಯ ಶತಮಾನದಲ್ಲಿ ಭರತಖಂಡದಲ್ಲಿಯೂ, ಮುಖ್ಯವಾಗಿ ಮೈಸೂರು ದೇಶದಲ್ಲಿಯೂ ಸಂಘಟಿಸಿದ ನಾನಾ ರೀತಿಯ ಚಲನವಲನಗಳು ಆ ಮಹನೀಯರ ಚರಿತ್ರೆಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಅವರದು ತುಂಬು ಜೀವನ; ಸರ್ವತೋಮುಖವಾದ ಪ್ರಭುಜೀವನ. ಅವರು ರಾಜ ವರೇಣ್ಯರಾಗಿ ಕರವಾಲ ಹಿಡಿದ ಕೈಯಿಂದ, ಲೇಖನಿ ಹಿಡಿದು ಅಖಂಡ ಸಾಹಿತ್ಯವನ್ನು ಸೃಷ್ಟಿಸಿದ ರಾಜ ಕವಿಪುಂಗವರು ; ಕಾಲಮಹತ್ವದಿಂದ ಮಾಸಿ ಹೋಗಿದ್ದ ಸನಾತನಧರ್ಮವನ್ನು, ಕನ್ನಡ ಸಂಸ್ಕೃತಿಯನ್ನು, ಲಲಿತ ಕಲೆಗಳನ್ನು ರಾಜಾಶ್ರಯದಲ್ಲಿ ಪರಿಪುಷ್ಟಿಗೊಳಿಸಿ, ಕಾಂತಿಗೂಡಿಸಿ, ಪುನರುಜ್ಜೀವನಮಾಡಿದ ಪುಣ್ಯಾತ್ಮರು! ಅವರಲ್ಲಿ ದೈವಭಕ್ತಿ, ಪ್ರಜಾಪ್ರೇಮ, ಸತ್ಯಪ್ರಿಯತೆ, ಧರ್ಮಾಭಿಮಾನ, ಸಾಹಸಪರತೆ, ತಾಳ್ಮೆ, ಕಾರ್ಯಸಂಧಾನ ಚತುರತೆ, ಕ್ಷಾತ್ರಮನೋದಾರ್ಢ್ಯ ಮತ್ತು ಸೌಜನ್ಯ ಮುಂತಾದ ಗುಣಗಳು ತುಂಬಿತುಳುಕುತ್ತಿದ್ದುವು. ಈ ಚಿಕ್ಕ ಪುಸ್ತಕದಲ್ಲಿ ಅವರ ಸಮಗ್ರ ಜೀವನ ಚರಿತ್ರೆಯನ್ನು ವಿವರವಾಗಿ ಬರೆಯಲು ಅವಕಾಶವಿಲ್ಲ. ಆದರೂ ನಮ್ಮ ನಾಡಿನ ತರುಣರು ಈ ಪುಟ್ಟ ಪುಸ್ತಕವನ್ನು ಓದಿ ಆ ಮಹಾ ಪುರುಷರ ಜೀವನಪರಿಚಯ ಮಾಡಿಕೊಂಡರೆ ಅದೇ ಒಂದು ಮಹೋಪಕಾರ! ನಮ್ಮ ನಾಡು, ನಮ್ಮ ದೊರೆ, ನಮ್ಮ ಜನ—ಎಂಬ ಅಭಿಮಾನಹೃದಯರಾಗಿ, ಶ್ರೇಷ್ಠಜೀವನವನ್ನು ಸಾಗಿಸಿ, ಯಶೋವಿಶಾಲರಾದರೆ, ನಾಡಿಗೆ ಅದೇ ಒಂದು ಭಾಗ್ಯ! "ಯಥಾರಾಜಾ ತಥಾಪ್ರಜಾಃ" ಎಂಬ ಹಿರಿಯರ ನುಡಿಯು ಸಾರ್ಥಕವಾಗಲೆಂಬುದು ಲೇಖಕನ ಹಾರೈಕೆ. ಈ ಪುಸ್ತಕದಲ್ಲಿ ಪ್ರಯೋಗಿಸಿರುವ ದೌಲತ್ತು, ಫೌಜು, ಖುದ್ದು, ಖಾಸಾ, ಮುಫತ್ತು, ಮಾಫೀ, ಖರೀತ, ಹುಕುಂ ಮುಂತಾದ ಕೆಲವು ಅನ್ಯಭಾಷಾಪದಗಳು ಆಯಾ ಸಂದರ್ಭೋಚಿತವಾಗಿ ಬಂಧುರವಾಗಿರುತ್ತವೆಯೆಂಬುದು ಲೇಖಕನ ಅಭಿಪ್ರಾಯ.

ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ದಿವ್ಯ ಜೀವನಚರಿತ್ರೆಯನ್ನು ಕನ್ನಡದಲ್ಲಿ ಬರೆಯಬೇಕೆಂಬುದರ ಆವಶ್ಯಕತೆಯನ್ನು ಮೊಟ್ಟ ಮೊದಲು ನನಗೆ ಸೂಚಿಸಿ, ಕೆಲವು ಸಂಗತಿಗಳನ್ನು ತಿಳಿಸಿ, ನನ್ನನ್ನು ಕಾರ್ಯರಂಗಕ್ಕೆ ಇಳಿಸಿ ಈ ಪುಸ್ತಕದ ಕರಡುಪ್ರತಿಯು ಸಿದ್ಧವಾಗುವುದಕ್ಕೆ ಮುಂಚೆಯೇ ಅನಿರೀಕ್ಷಿತವಾಗಿ ವೈಕುಂಠವಾಸಿಗಳಾದ, 'ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾಯರು, ಎಂ.ಎ., ಅವರನ್ನು ಸ್ಮರಿಸುತ್ತೇನೆ.

ಈ ಪುಸ್ತಕವನ್ನು ದಯೆಯಿಟ್ಟು ಓದಿ, ಮುನ್ನುಡಿಯನ್ನು ಬರೆದಿರುವ ಕನ್ನಡ ಭಾಷೆಯ ಉಜ್ವಲ ಪ್ರೇಮಿಗಳೂ, ಶ್ರೇಷ್ಠ ಸಾಹಿತಿಗಳೂ, ಘನವಿದ್ವಾಂಸರೂ, ಉದಾರ ಹೃದಯರೂ ಆದ ರಾಜಸೇವಾಸಕ್ತ ಪ್ರೊಫೆಸರ್ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಎಂ. ಎ., ಬಿ. ಎಲ್., ಅವರಿಗೆ ಅತ್ಯಂತ ಋಣಿಯಾಗಿದ್ದೇನೆ. ಆ ಮಹನೀಯರು ಅವ್ಯಾಜ ಪ್ರೇಮಾದರಗಳಿಂದ ಹರಸಿ, ಪ್ರೋತ್ಸಾಹಿಸಿದುದಕ್ಕಾಗಿ ಚಿರಕೃತಜ್ಞನಾಗಿರುತ್ತೇನೆ.

ಈ ಪುಸ್ತಕದಲ್ಲಿ ಅಚ್ಚಾಗಿರುವ ಪಡಿಯಚ್ಚುಗಳನ್ನು ದಯೆಯಿಟ್ಟು ಒದಗಿಸಿಕೊಟ್ಟು ಸಹಾಯಮಾಡಿದ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರಿಗೂ, ಅರಮನೆಯ ಇಲಾಖೆಯ ಅಧಿಕಾರಿಗಳಿಗೂ, ನಿವೃತ್ತ ಎಕ್ಸೈಜು-ಕಮಿಷನರಾದ ಶ್ರೀಮಾನ್ ಅಂಬಳೆ ಸುಬ್ರಹ್ಮಣ್ಯ ಐಯರ್, ಬಿ.ಎ., ಅವರಿಗೂ, ಸಾಹಿತ್ಯಾಭಿಮಾನಿಗಳಾದ ಮೈಸೂರು ಶ್ರೀಮಾನ್ ಎಫ್. ಸಿ. ದೇವರಾಜೇ ಅರಸಿನವರಿಗೂ, 'ಶರಣ ಸಾಹಿತ್ಯ' ಮಾಸಪತ್ರಿಕೆಯ ಸಂಪಾದಕರಾದ ವೇ|| ಬಿ. ಶಿವಮೂರ್ತಿಶಾಸ್ತ್ರಿಗಳಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

ಈ ಪುಸ್ತಕವ ಕರಡು ಪ್ರತಿಯನ್ನು ಆಮೂಲಾಗ್ರವಾಗಿ ಓದಿನೋಡಿ ಸರ್ವೋತ್ತಮವಾದ ಸಲಹೆಗಳನ್ನು ಕೊಟ್ಟು ಬಹಳಮಟ್ಟಿಗೆ ಸಹಾಯಮಾಡಿದ ಸಹೃದಯರಾದ ಮೈಸೂರು ಶ್ರೀಯುತ ಎಫ್. ಸಿ. ದೇವರಾಜೇ ಅರಸಿನವರ ಉಪಕಾರವನ್ನು ನೆನೆಯುತ್ತೇನೆ.

ಶ್ರೀ ಗೌರೀವಿಹಾರ
ಮಲ್ಲೇಶ್ವರಮ್, ಬೆಂಗಳೂರು
ಪ್ರಮಾಥಿ ಸಂ|| ಮಹಾಶಿವರಾತ್ರಿ

ಕನ್ನಡಜನ ಸೇವಕ
ಓ. ಎಸ್. ಲಿಂಗಯ್ಯ

ವಿದ್ವಾಂಸರ ಅಭಿಪ್ರಾಯಗಳು

ಶ್ರೀಮಾನ್ ಓ. ಎಸ್. ಲಿಂಗಯ್ಯ, ಬಿ. ಎ., (ಆನರ್ಸ್) ಇವರಿಂದ ಇತ್ತೀಚೆಗೆ ಕನ್ನಡದಲ್ಲಿ ಬರೆದು ಪ್ರಚುರಗೊಳಿಸಲಾಗಿರುವ ಮೈಸೂರಿನ ಆಳಿದ ಮಹಾಪ್ರಭುಗಳಾದ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಜೀವನ ಚರಿತ್ರೆಯನ್ನು ತುಂಬ ಸಂತೋಷದಿಂದ ಓದಿ ನೋಡಿದೆನು. ಶ್ರೀ|| ಲಿಂಗಯ್ಯನವರು ಮೈಸೂರು ರಾಜವಂಶದವರ ಚರಿತ್ರೆಯನ್ನೇ ತಮ್ಮ ಅಭ್ಯಾಸದ ಮತ್ತು ಪರಿಶೋಧನೆಯ ವಿಶೇಷ ವಿಷಯವಾಗಿ ಇಟ್ಟುಕೊಂಡು, ಈ ಮೊದಲೇ ಈ ಸಂಬಂಧವಾದ ಒಂದೆರಡು ಗ್ರಂಥಗಳನ್ನು ಬರೆದು ಕನ್ನಡ ಜನತೆಗೆ ಸಮರ್ಪಿಸಿರುವರೆಂಬುದನ್ನು ಜ್ಞಾಪಿಸಿಕೊಳ್ಳಲು ಉಲ್ಲಾಸವಾಗುತ್ತಿದೆ. ರಾಜರ್ಷಿಗಳೆಂದು ಕೀರ್ತಿಗೊಂಡ, ಆಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಪೂಜ್ಯ ತಾತಂದಿರಾದ, ಅದೇ ಮಂಗಳನಾಮದಿಂದ ಪ್ರಸಿದ್ಧರಾಗಿದ್ದ ಆ ಮಹಾರಾಜರವರು ತಮ್ಮ ನಿಸ್ಸೀಮವಾದ ದೈವಭಕ್ತಿ, ಔದಾರ್ಯ, ಆಡಳಿತದ ವಿಚಕ್ಷಣತೆ, ಉದ್ದಾಮ ಪಾಂಡಿತ್ಯ, ಗ್ರಂಥಲೇಖನಶಕ್ತಿ, ವಿದ್ವಜ್ಜನ ಪೋಷಣಾಸಕ್ತಿಯೇ ಮೊದಲಾಗಿ ಅನೋಘವಾದ ಅನೇಕಾನೇಕ ಕಲ್ಯಾಣ ಗುಣಗಳಿಂದ ಅಲಂಕೃತರಾಗಿದ್ದು, ಕನ್ನಡ ದೇಶವನ್ನೂ ಸಂಸ್ಕೃತಿಯನ್ನೂ ಪರಮೋನ್ನತಸ್ಥಾನಕ್ಕೇರಿಸಲು ಅಹೋರಾತ್ರಿ ದುಡಿದಿದ್ದರು. ಇಂತಹ ಈ ಪುಣ್ಯಶ್ಲೋಕರಾದ ಮಹಾರಾಜರ ಯಥಾರ್ಥವಾದ ಚರಿತ್ರೆಯನ್ನು ಹೊರಗೆಡವಲು ಪ್ರಯತ್ನಿಸಬೇಕಾದುದು ಕನ್ನಡಿಗರಾದ ನಮ್ಮ ಪವಿತ್ರ ಕರ್ತವ್ಯವಾಗಿದೆ; ಮತ್ತು ಈ ಸಂಬಂಧದಿಂದ ನಮ್ಮ ಪಂಡಿತಶ್ರೇಷ್ಠರುಗಳು ಕೆಲಸಮಾಡತೊಡಗಿರುವುದು ನಮ್ಮ ಕನ್ನಡ ಜನತೆಯಲ್ಲಿ ಜಾಗ್ರತಿಯುಂಟಾಗಿರುವುದರ ಮತ್ತು ಭವಿಷ್ಯದುನ್ನತಿಯ ಶುಭ ಸೂಚನೆಯಾಗಿದೆ.

ಶ್ರೀ|| ಲಿಂಗಯ್ಯನವರು ಈ ಪುಸ್ತಕವನ್ನು ಬಹಳ ಸ್ವಾರಸ್ಯವಾಗಿ ಬರೆದು, ಮೈಸೂರು ರಾಜಮನೆತನದ ಮಾನ್ಯ ಪ್ರಭುಗಳೊಬ್ಬರ ಮೇಲೆ ಪರದೇಶೀಯ ಲೇಖಕರಿಂದ ಅನ್ಯಾಯವಾಗಿ ಹೊರಿಸಲಾಗಿರುವ ಅಪವಾದ

ವನ್ನು ಸಾಧಾರಣವಾಗಿ ಹೋಗಗೊಳಿಸಿ, ಕನ್ನಡಿಗರನ್ನು ಚಿರಋಣಿಗಳನ್ನಾಗಿ ಮಾಡಿದ್ದಾರೆ. ಈ ಪುಸ್ತಕವನ್ನು ಸಮಸ್ತ ಕನ್ನಡ ಮಹಾಜನರು ಆದರಬುದ್ಧಿಯಿಂದ ಓದಿ, ದೇಶಾಭಿಮಾನಪ್ರೇರಿತರಾಗಿ ಬರೆದ ಕರ್ತೃವಿನ ಶ್ರಮವನ್ನು ಸಾರ್ಥಕಗೊಳಿಸಬೇಕೆಂದು ಕೋರುತ್ತೇನೆ.

—ಬೆನಗಲ್ ರಾಮರಾವ್.

೨

ಉದಾರಹೃದಯರಾದ ಮತ್ತು ಆದರ್ಶಪ್ರಾಯರಾದ ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರ ಜೀವನ ಪರಿಚಯವನ್ನು ಶ್ರೀಮಾನ್ ಓ. ಎಲ್. ಲಿಂಗಯ್ಯನವರು ಕಥಾರೂಪವಾಗಿ ಸರಳವೂ ಶುದ್ಧವೂ ಮತ್ತು ನಿರ್ದುಷ್ಟವೂ ಆದ ಭಾಷೆಯಲ್ಲಿ ಸಂಕ್ಷೇಪವಾಗಿ ಚಿತ್ರಿಸಿರುತ್ತಾರೆ. ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ಅನೇಕ ವರ್ಷಕಾಲ ಮೈಸೂರು ದೇಶವನ್ನು ಎಷ್ಟು ನ್ಯಾಯಪರತೆಯಿಂದಲೂ ಚತುರತೆಯಿಂದಲೂ ಆಳಿದರೆಂಬುದನ್ನೂ, ಅಲ್ಲದೆ ಸಾಮ್ರಾಜ್ಯ ಸರ್ಕಾರದವರು ಮೈಸೂರು ದೇಶದ ಆಡಳಿತಗಳನ್ನು ವಹಿಸಿಕೊಂಡಮೇಲೂ, ಒಡೆಯರು ಎಷ್ಟುಮಟ್ಟಿಗೆ ಸಾಹಿತ್ಯ ಸಂಪೋಷಕರಾಗಿದ್ದುಕೊಂಡು ಲಲಿತಕಲೆಗಳಿಗೆ ಆಶ್ರಯವನ್ನು ಕೊಟ್ಟಿದ್ದರೆಂಬುದನ್ನೂ ಮತ್ತು ಅವರು ಎಷ್ಟುಮಟ್ಟಿಗೆ ವಿದ್ಯಾಪಾಂಡಿತ್ಯವನ್ನು ಗಳಿಸಿ, ದೇಶಾಭಿಮಾನಿಗಳಾಗಿ ಮಿತಿಯಿಲ್ಲದಷ್ಟು ಧರ್ಮಾಭಿಮಾನಿಗಳಾಗಿದ್ದರೆಂಬುದನ್ನೂ ಮತ್ತು ಅನೇಕ ವಿಷಮ ಸನ್ನಿವೇಶಗಳೊದಗಿದ್ದಾಗಲೂ ಅವರು ಪರ್ವತದಂತೆ ಅಚಲರಾಗಿದ್ದುಕೊಂಡು, ಘನೌದಾರ್ಯ ಮತ್ತು ನಿರ್ಲಿಪ್ತ ಗುಣಗಳಿಂದ ಹೇಗೆ ಪರಿಶೋಭಿಸುತ್ತಿದ್ದರೆಂಬುದನ್ನೂ ಗ್ರಂಥಕರ್ತರು ಸುಲಭವಾದ ಮತ್ತು ನಿರರ್ಗಳವಾದ ಶೈಲಿಯಲ್ಲಿ ರೂಪಿಸಿರುತ್ತಾರೆ.

ಈ ಗ್ರಂಥವನ್ನು ಪ್ರತಿಯೊಬ್ಬರೂ ಆಸಕ್ತಿಯಿಂದ ಓದಿ ಉಪಕೃತರಾಗಬಲ್ಲರೆಂಬ ನಂಬುಗೆಯು ಇದೆ. ಕನ್ನಡ ಸಾಹಿತ್ಯದಲ್ಲಿ ಇಂಥ ಉಪಯೋಗಕರವಾದ ಸೇವೆಯನ್ನು ಮಾಡಿರುತ್ತಾರಾಗಿ ಶ್ರೀಮಾನ್ ಲಿಂಗಯ್ಯನವರು ಕನ್ನಡಿಗರ ಪ್ರಶಂಸೆಗೆ ಪಾತ್ರರಾಗಿರುವುದಲ್ಲದೆ ಅವರ ಕೃತಜ್ಞತೆಯನ್ನು ಗಳಿಸಿಕೊಂಡಿರುತ್ತಾರೆ.

—ಕೆ. ಶಂಕರನಾರಾಯಣರಾವ್.

೩

ಈ ಪುಸ್ತಕದ ಅವತರಣಿಕೆಯಲ್ಲಿ / ಮೈಸೂರು ದೇಶದ ನಾನಾಮುಖ್ಯವಾದ ಮೇಲ್ಮೆಯನ್ನು ಬಹಳ ಅಂದವಾಗಿ ವರ್ಣಿಸಿದೆ. ಗ್ರಂಥದಲ್ಲಿ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಚರಿತ್ರೆಯನ್ನು ಆದಿಯಿಂದ ಅಂತ್ಯದವರೆಗೂ, ಮುಖ್ಯ ವಿಷಯಗಳು ಯಾವುದನ್ನೂ ಬಿಡದೆ, ಓದುಗರಿಗೆ ಬೇಸರವಾಗದಂತೆ, ಮನೋಹರವಾಗಿ ಚಿತ್ರಿಸಿದೆ. ಆಗಿನ ಕಾಲದ ಮೈಸೂರು ಚರಿತ್ರೆಯು ಈಗಿನವರ ಗಮನಕ್ಕೆ ಬರಲು ಕನ್ನಡದಲ್ಲಿ ತಕ್ಕ ಪುಸ್ತಕಗಳು ಯಾವುದೂ ಇರಲಿಲ್ಲ. ಈ ಕೊರತೆಯನ್ನು ಶ್ರೀಮಾನ್ ಲಿಂಗಯ್ಯನವರು ಬಹಳಮಟ್ಟಿಗೆ ಹೋಗಲಾಡಿಸಿದ್ದಾರೆ. ಹುಡುಗರು ಮಾತ್ರವಲ್ಲದೆ ದೊಡ್ಡವರೂ ಈ ಪುಸ್ತಕವನ್ನು ಓದಿ ಪ್ರಯೋಜನ ಪಡೆಯಬಹುದು. ಗ್ರಂಥದ ಭಾಷೆಯು ನಿರ್ದುಷ್ಟವಾಗಿಯೂ ಸಹಜವಾಗಿಯೂ ಲಲಿತವಾಗಿಯೂ ಇದೆ. ಮುದ್ರಣದ ಮೊದಲಾದ ತಪ್ಪುಗಳು ಬಹಳ ಕಡಿಮೆ.

ಕನ್ನಡಿಗರು ಈ ಪುಸ್ತಕಕ್ಕೆ ತಕ್ಕಷ್ಟು ಪ್ರೋತ್ಸಾಹ ಕೊಟ್ಟು ಈ ಗ್ರಂಥಕರ್ತರಿಂದ ಇಂತಹ ಗ್ರಂಥಗಳು ಇನ್ನೂ ಅನೇಕವಾಗಿ ಪ್ರಕಟವಾಗುವಂತೆ ನೆರವಾಗಬೇಕೆಂದು ಹಾರೈಸುತ್ತೇನೆ.

—ಬೆಳ್ಳಾವೆ ವೆಂಕಟನಾರಾಯಣಪ್ಪ.

ದ್ವಿತೀಯ ಮುದ್ರಣ

ಮೈಸೂರ ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯ ಟೆಕ್ಸ್ಟ್‌ಬುಕ್ ಕಮಿಟಿಯವರು ಈ ಪುಸ್ತಕವನ್ನು ೧೯೪೭ನೆಯ ಇಸವಿಯ ಮಿಡ್ಲ್‌ಸ್ಕೂಲ್ ಪರೀಕ್ಷೆಗೆ ಪಠ್ಯ ಪುಸ್ತಕವನ್ನಾಗಿ ನಿಯಮಿಸಿ, ಪ್ರೋತ್ಸಾಹಿಸಿರುವುದರಿಂದ ಅವರಿಗೆ ಅತ್ಯಂತ ಕೃತಜ್ಞನಾಗಿರುತ್ತೇನೆ. ಈ ಪುಸ್ತಕವನ್ನು ದ್ವಿತೀಯ ಮುದ್ರಣಕ್ಕೆ ಸಿದ್ಧಗೊಳಿಸುವ ಮೊದಲು, ಮಹಾರಾಜಾ ಕಾಲೇಜಿನಲ್ಲಿ ಕನ್ನಡದ ಪ್ರೊಫೆಸರ್ ಆಗಿರುವ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು, ಎಂ.ಎ., ಅವರೂ ಮತ್ತು ಮೈಸೂರು ಸರ್ಕಾರದ ಸೆಕ್ರಿಟೇರಿಯಟ್‌ನಲ್ಲಿ ಅಂಡರ್ ಸೆಕ್ರಿಟರಿಯವರಾಗಿದ್ದು ಈಗ ವಿಶ್ರಾಂತಿ ಸುಖವನ್ನು ಅನುಭವಿಸುತ್ತಿರುವ ಸಾಹಿತ್ಯಾಭಿಮಾನಿಗಳಾದ ಶ್ರೀಮಾನ್ ಡಿ. ಸಿ. ಸುಬ್ಬರಾಯಪ್ಪನವರು, ಬಿ.ಎ., ಬಿ.ಎಲ್., ಅವರೂ, ಅನೇಕ ವಾದ ಸಲಹೆಗಳನ್ನು ಕೊಟ್ಟು ಸಹಾಯ ಮಾಡಿರುತ್ತಾರೆ. ಆ ಮಹನೀಯರುಗಳಿಗೆ ನನ್ನ ವಂದನೆಗಳು.

ಈ ಪುಸ್ತಕವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರು ಸಿಟಿ ಚಿಕ್ಕಪೇಟೆ, ದಿ ಪವರ್ ಪ್ರಿಂಟಿಂಗ್ ವರ್ಕ್ಸ್ ನವರ ಉಪಕಾರವನ್ನು ಸ್ಮರಿಸುತ್ತೇನೆ.

ವಿಷು ಸಂ॥ ಚೈತ್ರ ಶುದ್ಧ
ಪಾಡ್ಯಮಿ, ಯುಗಾದಿ

ಓ. ಎಸ್. ಲಿಂಗಯ್ಯ
ತಾ॥ ೨೮ ನೆಯ ಮಾರ್ಚಿ ೧೯೪೭.

ಗ್ರಂಥದರ್ಪಣ

~ Ramachandra

ಶ್ರೀ

ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ, ಒಡೆಯರು

ಒಂದನೆಯ ಅಧ್ಯಾಯ

ಅವತರಣಿಕೆ

' ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ "

ಮೈಸೂರು ಸಂಸ್ಥಾನವು ಬಹು ಸುಂದರವಾದ ನಾಡು. ಸಮುದ್ರ ಮಟ್ಟದಿಂದ ೩,೦೦೦ ಅಡಿಗಳ ಎತ್ತರವಾಗಿರುವ ಈ ನಾಡು ಪ್ರಕೃತಿ ಸೌಂದರ್ಯದ ತವರುಮನೆಯಂತೆ ಶೋಭಿಸುತ್ತಿದೆ. ವಾಯುಗುಣವು ಹಿತಕರವಾಗಿದೆ. ಈ ನಾಡು ರಮಣೀಯವಾದ ಕಾಂತಾರ ಪ್ರದೇಶಗಳಿಂದಲೂ, ಉನ್ನತೋನ್ನತವಾದ ಪರ್ವತಶ್ರೇಣಿಗಳಿಂದಲೂ ಕಂಗೊಳಿಸುತ್ತಿದೆ. ಎಲ್ಲಿ ನೋಡಿದರೂ ಅಚ್ಚಹಸುರಿನ ಹುಲ್ಲು ಬಯಲುಗಳೂ, ವಿಶಾಲವಾದ ಕೆರೆಗಳೂ ನಾಡಿನಲ್ಲಿ ತುಂಬಿರುವುವು. ಕಾವೇರಿ, ಕಪಿಲಾ, ಹೇಮಾವತೀ, ಲೋಕಪಾವನೆ, ತುಂಗಭದ್ರಾ, ವೇದಾವತೀ, ಶರಾವತೀ, ಪಿನಾಕಿನೀ, ಜಯಮಂಗಳಾ ಮುಂತಾದ ಪುಣ್ಯ ನದಿಗಳು ಈ ಸಂಸ್ಥಾನದಲ್ಲಿ ಪ್ರವಹಿಸುತ್ತಿವೆ. ಪೈರುಪಚ್ಚೆಗಳಿಂದಲೂ, ವಿಸ್ತಾರವಾದ ಗದ್ದೆ ಬಯಲುಗಳಿಂದಲೂ, ಅನೇಕ ವಿಧವಾದ ಫಲವೃಕ್ಷಗಳಿಂದಲೂ ಕೂಡಿರುವ ಈ ನಾಡಿನ ಚೆಲುವು ಮನಮೋಹಕವಾಗಿದೆ. ಸುಮಧುರಗಾನದಿಂದ ಹಾಡುತ್ತಿರುವ ನಾನಾ ಜಾತಿಯ ಸುಂದರತರವಾದ ಬಣ್ಣಬಣ್ಣದ ಪಕ್ಷಿಗಳೂ, ಕೋಮಲವಾಗಿ ಬೆಳೆದಿರುವ ಗಿಡಗಳಲ್ಲಿ ಅರಳಿ ಪರಿಮಳವನ್ನು ಬೀರುತ್ತಿರುವ ನಾನಾ ಬಗೆಯ ಪುಷ್ಪಗಳೂ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತಿರುವುವು.

ಈ ನಾಡಿನ ನೈರುತ್ಯ ಭಾಗದಲ್ಲಿಯೂ, ಪಡುವಲು ಭಾಗದಲ್ಲಿಯೂ ದೊಡ್ಡ ದೊಡ್ಡ ಕಾನನಗಳಿವೆ. ಈ ಕಾನನಗಳಲ್ಲಿ ಆನೆ, ಹುಲಿ, ಕಾಡೆಮ್ಮೆ,

ಕಾಡುಕೋಣ, ಕರಡಿ, ಕಡವೆ, ಸಾರಗ, ತೋಳ, ನರಿ ಮತ್ತು ಕುಂದಿಲಿ ಮೊದಲಾದ ಕಾಡುಪ್ರಾಣಿಗಳು ಸ್ವೇಚ್ಛೆಯಾಗಿ ಸಂಚರಿಸುತ್ತಿರುವುವು. ಈ ದೇಶದ ಬಡಗಲು ಭಾಗದಲ್ಲಿಯೂ, ಮೂಡಲು ಭಾಗದಲ್ಲಿಯೂ ಇರುವ ಕುರುಚಲು ಗಿಡಗಳ ಪ್ರದೇಶಗಳಲ್ಲಿ ಜಿಂಕೆಗಳು ಹಿಂಡು ಹಿಂಡಾಗಿ ಸಂಚರಿಸುತ್ತಿರುವುದನ್ನು ಕಾಣಬಹುದು.

ಈ ಸಂಸ್ಥಾನದಲ್ಲಿರುವ ಚಾಮುಂಡೀಬೆಟ್ಟ, ಚಂದ್ರದ್ರೋಣ ಪರ್ವತ, ಕಾಮನದುರ್ಗ, ಚಿತ್ರದುರ್ಗ, ಪಾವುಗಡ, ಮಧುಗಿರಿ, ನಂದಿಯದುರ್ಗ, ದೇವರಾಯನದುರ್ಗ, ಸಾವನದುರ್ಗ, ಬಿಳಿಗಿರಿರಂಗನಬೆಟ್ಟ, ಹಿಮವದ್ಗೋಪಾಲ ಸ್ವಾಮಿ ಬೆಟ್ಟ, ಶಿವಗಂಗೆ ಮುಂತಾದ ಬೆಟ್ಟಗಳಮೇಲೆ ಕಾಣುವ ಪ್ರಾಚೀನ ಕಾಲದ ಅದ್ಭುತವಾದ ಕೋಟೆ ಕೊತ್ತಲುಗಳನ್ನಾಗಲಿ, ಅಚ್ಚಳಿಯದೆ ನಿಂತಿರುವ ದೇವಾಲಯಗಳನ್ನಾಗಲಿ ನೋಡಿದರೆ ನಮ್ಮ ಹಿರಿಯರ ಶೌರ್ಯ ಪ್ರತಾಪಗಳು ನೆನಪಿಗೆ ಬರುತ್ತವೆ. ಶಿಲ್ಪಕಲಾ ಸೌಂದರ್ಯದಿಂದ ತುಂಬಿರುವ ಅನೇಕ ದೇವಾಲಯಗಳು ನೋಟಕರ ಕಣ್ಮನಗಳನ್ನು ತಣಿಸುತ್ತಿರುವುವು. ಶ್ರವಣ ಬೆಳಗೊಳದ ಬೆಟ್ಟದಮೇಲೆ ಒಂದೇ ಕಲ್ಲಿನಲ್ಲಿ ಕೆತ್ತಿರುವ ಐವತ್ತೇಳು ಅಡಿಗಳ ಎತ್ತರದ ಗೋಮಟೇಶ್ವರ ವಿಗ್ರಹವು ಹಿಂದಿನವರ ಸಂಸ್ಕೃತಿಯ ವೈಭವವನ್ನು ತೋರಿಸುತ್ತಿರುವ ಒಂದು ಹೆಗ್ಗುರುತಾಗಿದೆ.

ಈ ದೇಶದಲ್ಲಿ ನಂಜನಗೂಡು, ವಿದುರಾಶ್ವತ್ಥ, ಬ್ರಹ್ಮಾಶ್ವತ್ಥ, ಸುಬ್ರಹ್ಮಣ್ಯ, ಮೇಲುಕೋಟೆ, ಹೊಂಬುಜ, ಚುಂಚನಗಿರಿ ಮುಂತಾದ ಪುಣ್ಯ ಕ್ಷೇತ್ರಗಳಿವೆ. ಹಿಂದೆ ಅನೇಕ ಮಹರ್ಷಿಗಳೂ, ಪುಣ್ಯಾತ್ಮರೂ ಸಂಚರಿಸಿ ಈ ನಾಡನ್ನು ಪಾವನಗೊಳಿಸಿರುತ್ತಾರೆ. ಅಗಸ್ತ್ಯ, ಋಷ್ಯಶೃಂಗ, ಕಣ್ವ, ಮಾರ್ಕಂಡೇಯ, ಗೌತಮ ಮುಂತಾದ ಋಷಿವರ್ಯರು ಈ ದೇಶದ ಬೇರೆ ಬೇರೆ ಭಾಗಗಳಲ್ಲಿ ಆಶ್ರಮಗಳನ್ನು ಕಟ್ಟಿಕೊಂಡು ತಪಸ್ಸು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಶ್ರೀರಾಮಚಂದ್ರನು ಲೋಕಮಾತೆಯಾದ ಸೀತಾದೇವಿಯೊಂದಿಗೂ, ತಮ್ಮನಾದ ಲಕ್ಷ್ಮಣನೊಂದಿಗೂ ಈ ಪ್ರಾಂತದಲ್ಲಿ ಸಂಚರಿಸಿರುವುದಾಗಿ ಇತಿಹಾಸದಿಂದ ಗೊತ್ತಾಗುತ್ತದೆ. ಮಹಾ ತೇಜಸ್ವಿಯೂ, ತಪೋಬಲ ಸಮನ್ವಿತನೂ ಆದ ಪರಶುರಾಮನು ಈ ನಾಡಿನಲ್ಲಿ ತೀರ್ಥಯಾತ್ರೆ ಮಾಡಿದ

ನೆಂಬುದಕ್ಕೆ ಅನೇಕ ಪ್ರಮಾಣಗಳು ದೊರೆಯುತ್ತವೆ. ಸತ್ಯವಂತರಾದ ಪಾಂಡುಕುಮಾರರೂ, ಕುಂತೀಮಾತೆಯೂ ಈ ನಾಡಿನಲ್ಲಿ ಕೆಲವು ಕಾಲ ವಾಸಮಾಡಿದರೆಂಬುದಾಗಿ ಪ್ರತೀತಿಯಿದೆ. ಬಭ್ರುವಾಹನ, ಚಂದ್ರಹಾಸ ಮೊದಲಾದ ವೀರಪುಂಗವರು ಈ ಸಂಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ಆಳುತ್ತಿದ್ದರೆಂದು ಇತಿಹಾಸವು ತಿಳಿಸುತ್ತದೆ. ಪಾಂಡವರ ವಂಶಜನಾದ ಜನಮೇಜಯ ಮಹಾರಾಜನು ಈ ಸಂಸ್ಥಾನದಲ್ಲಿರುವ ಹರಿಯಮುಗಳೂರು ಸಮೀಪದಲ್ಲಿ ಸರ್ಪಯಾಗವನ್ನು ಮಾಡಿ ಹರಿಹರೇಶ್ವರನ ಸನ್ನಿಧಿಯಲ್ಲಿ ಬ್ರಾಹ್ಮಣರಿಗೆ ಭೂದಾನ, ಗೋದಾನ, ಸುವರ್ಣದಾನಗಳನ್ನೂ, ಅಗ್ರಹಾರ ಗಳನ್ನೂ ಧಾರಾಪೂರ್ವಕವಾಗಿ ಕೊಟ್ಟನೆಂಬುದಾಗಿ ತಾಮ್ರಶಾಸನಗಳಿಂದ ವ್ಯಕ್ತವಾಗುತ್ತದೆ.

ಬಹಳ ಹಿಂದಿನ ಕಾಲದಲ್ಲಿಯೇ ಭದ್ರಬಾಹುವೆಂಬ ಜೈನ ಸಂನ್ಯಾಸಿಯು ಉತ್ತರದೇಶದಿಂದ ಬಂದು, ಈ ದೇಶದಲ್ಲಿರುವ ಶ್ರವಣಬೆಳಗೊಳದ ಚಂದ್ರಗಿರಿಯಲ್ಲಿದ್ದು, ಅಲ್ಲಿಯೇ ಪರಮಪದವಿಯನ್ನು ಹೊಂದಿದನೆಂದೂ ಮತ್ತು ಆ ಸಂನ್ಯಾಸಿಯ ಶಿಷ್ಯನಾದ ಚಂದ್ರಗುಪ್ತ ಚಕ್ರವರ್ತಿಯೂ ತನ್ನ ರಾಜ್ಯವನ್ನು ಪರಿತ್ಯಜಿಸಿ, ಯಾತ್ರಾರ್ಥಿಯಾಗಿ ಬಂದು ಶ್ರವಣಬೆಳಗೊಳ ದಲ್ಲಿಯೇ ಮುಕ್ತನಾದನೆಂದೂ ಚರಿತ್ರೆಯಿಂದ ಗೊತ್ತಾಗುತ್ತದೆ. ಜಿನದತ್ತರಾಯ ನೆಂಬುವನು ಉತ್ತರ ದೇಶದಿಂದ ಬಂದು, ಈ ದೇಶದಲ್ಲಿರುವ ಹೊಂಬುಚದಲ್ಲಿ ಒಂದು ರಾಜ್ಯವನ್ನು ಸ್ಥಾಪಿಸಿದನೆಂದು ಜೈನಶಾಸನಗಳಲ್ಲಿಯೂ, ಜೈನಪುರಾಣ ಗಳಲ್ಲಿಯೂ ಉಕ್ತವಾಗಿದೆ.

ಮೈಸೂರು ಸಂಸ್ಥಾನವನ್ನು ಸನಾತನಧರ್ಮದ ಪವಿತ್ರಭೂಮಿಯೆಂದು ಕರೆಯಬಹುದು. ವೇದಧರ್ಮೋದ್ಧಾರಕರಾದ ಶ್ರೀ ಶಂಕರಾಚಾರ್ಯರೂ, ಶ್ರೀ ರಾಮಾನುಜಾಚಾರ್ಯರೂ, ಶ್ರೀ ಮಧ್ವಾಚಾರ್ಯರೂ ತಮ್ಮ ತಮ್ಮ ಮತಸಿದ್ಧಾಂತಪ್ರಚಾರಕ್ಕಾಗಿ ಮೈಸೂರು ನಾಡಿನಲ್ಲಿ ಸಂಚರಿಸಿ ಧರ್ಮಜ್ಯೋತಿ ಯನ್ನು ಬೆಳಗಿಸಿದರು. ಶ್ರೀ ರೇಣುಕಾಚಾರ್ಯರು ಬಾಳೆಹೊನ್ನೂರಿನಲ್ಲಿ ಒಂದು ಮಠವನ್ನು ಸ್ಥಾಪಿಸಿ, ವೀರಶೈವ ತತ್ತ್ವಪ್ರಚಾರಮಾಡಿದರೆಂದು ಆ ಮತದ ಗ್ರಂಥಗಳಿಂದ ತಿಳಿದುಬರುತ್ತದೆ. ಈ ನಾಡು ಅನೇಕ ಪುಣ್ಯ

ನದಿಗಳಿಂದಲೂ, ಪುಣ್ಯಕ್ಷೇತ್ರಗಳಿಂದಲೂ, ಯಾತ್ರಾಸ್ಥಳಗಳಿಂದಲೂ ಕಂಗೊಳಿಸುತ್ತಾ ಧರ್ಮಭೂಮಿಯಾಗಿರುವಂತೆಯೇ, ಹಿಂದಿನ ಕಾಲದ ಕೋಟೆ ಕೊತ್ತಲುಗಳ ಅವಶೇಷಭಾಗಗಳಿಂದಲೂ, ಯುದ್ಧದಲ್ಲಿ ಮಡಿದ ವೀರರ ಸ್ಮಾರಕಗಳಿಂದಲೂ, ಕೆಚ್ಚಿನಿಂದ ತಲೆಯೆತ್ತಿ ನಿಂತಿರುವಂತೆ ಕಾಣುತ್ತಿರುವ ಗಿರಿ ದುರ್ಗಗಳಿಂದಲೂ ಕೂಡಿ ವೀರ ಭೂಮಿಯೆನಿಸಿಕೊಂಡಿದೆ.

ಸೌಭಾಗ್ಯದ ಆಗರವಾದ ಮೈಸೂರು ಸಂಸ್ಥಾನದಲ್ಲಿ ಅನೇಕ ರಾಜ ಮನೆತನಗಳು ಹುಟ್ಟಿ ಬೆಳೆದಿವೆ. ಶೂರರಾದ ರಾಜರು ದರ್ಪದಿಂದ ರಾಜ್ಯ ಪರಿಪಾಲನೆಮಾಡಿ, ಯುದ್ಧದಲ್ಲಿ ಪೌರುಷಪ್ರತಾಪಗಳನ್ನು ತೋರಿ, ಯಶೋವಂತರಾಗಿದ್ದಾರೆ. ಈ ಸಂಸ್ಥಾನದ ಪಶ್ಚಿಮ ಭಾಗದಲ್ಲಿ ಹಿಂದೆ ಕದಂಬರೂ, ತೆಂಕಲ ಭಾಗದಲ್ಲಿ ಗಂಗವಂಶದವರೂ, ಮೂಡಲ ಭಾಗದಲ್ಲಿ ಪಲ್ಲವನೃಪರೂ ಆಳುತ್ತಿದ್ದರೆಂದು ಶಾಸನಗಳಿಂದಲೂ, ಚರಿತ್ರೆಯಿಂದಲೂ ವಿದಿತವಾಗುತ್ತದೆ. ಈ ರಾಜ ವಂಶಗಳಲ್ಲಿ ಅನೇಕ ಪ್ರಭುಗಳು ರಣಪರಾಕ್ರಮಿಗಳಾಗಿದ್ದುದಲ್ಲದೆ, ಧರ್ಮಾಭಿಮಾನಿಗಳೂ, ಸಾಹಿತ್ಯಪ್ರಿಯರೂ ಆಗಿದ್ದರು. ಹೊಯ್ಸಳ ಬಲ್ಲಾಳರು ದ್ವಾರಸಮುದ್ರದಲ್ಲಿ ರಾಜ್ಯವಾಳುತ್ತಾ ಕವಿಜನಾಶ್ರಯರಾಗಿದ್ದುಕೊಂಡು, ಅನೇಕ ದೇವಾಲಯಗಳನ್ನು ಕಟ್ಟಿಸಿ, ಕಲಾಪರಿಪೋಷಣೆಯನ್ನು ಮಾಡಿದರು. ತಪೋಧನರಾದ ಶ್ರೀ ವಿದ್ಯಾರಣ್ಯರ ಕೃಪಾಬಲದಿಂದ ಹಕ್ಕ, ಬುಕ್ಕರು ತುಂಗಭದ್ರಾತೀರದಲ್ಲಿ ಸ್ಥಾಪಿಸಿದ್ದ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನರಾಗಿದ್ದ ಸಾಮಂತರಾಜರು ಈಗಿನ ಮೈಸೂರು ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಆಳುತ್ತಿದ್ದರು. ಆ ಮಹಾಸಾಮ್ರಾಜ್ಯವು ಹಾಳಾದ ಮೇಲೆ ಸಾಮಂತರಾಜರು ಸ್ವತಂತ್ರರಾಗುತ್ತಾ ಬಂದರು. ಆ ಕಾಲದಲ್ಲಿ ಚಾಮರಾಜನೆಂಬ ದೊರೆಯು ಮೈಸೂರು ಪಟ್ಟಣದಲ್ಲಿ ಆಳುತ್ತಿದ್ದನು.

ಮೈಸೂರು ಪಟ್ಟಣದ ದೊರೆಯಾದ ಚಾಮರಾಜನಿಗೆ ಗಂಡು ಮಕ್ಕಳಿರಲಿಲ್ಲ; ಒಬ್ಬಳೇ ಮಗಳಿದ್ದಳು. ಆ ರಾಜನು ಕೆಲವು ಕಾಲದ ಮೇಲೆ ತೀರಿಹೋದುದರಿಂದ, ಅವನ ರಾಜ್ಯವು ಶತ್ರುಗಳ ಪಾಲಾಗುವ ಸಂಭವವಿತ್ತು. ಚಾಮರಾಜನ ಪತ್ನಿಯೂ ಮತ್ತು ಅವನ ಏಕಮಾತ್ರ ಪುತ್ರಿಯೂ ಬಹಳವಾಗಿ ವ್ಯಥೆಪಡುತ್ತಿದ್ದರು. ಆ ಸಮಯದಲ್ಲಿ ಯದುರಾಯ

ಮತ್ತು ಕೃಷ್ಣರಾಯ ಎಂಬ ಇಬ್ಬರು ಸಹೋದರರು ಉತ್ತರದೇಶದ ದ್ವಾರಕಾನಗರ ಪ್ರಾಂತದಿಂದ ಹೊರಟು, ತೀರ್ಥಯಾತ್ರೆಮಾಡುತ್ತಾ, ದೈವಾನುಗ್ರಹಬಲದಿಂದ ಮೈಸೂರು ಪಟ್ಟಣದ ಬಳಿಗೆ ಬಂದು ಸೇರಿದರು. ಪರಾಕ್ರಮಿಗಳಾದ ಆ ರಾಜಕುಮಾರರು ಶ್ರೀ ಕೃಷ್ಣನ ವಂಶೋತ್ಪನ್ನನಾದ ರಾಜದೇವನೆಂಬುವನ ಮಕ್ಕಳು; ಆತ್ರೇಯಸ ಗೋತ್ರಜರು. ಸಾಹಸವಂತರೂ, ಚತುರರೂ, ಕಾರ್ಯಸಂಧಾನಪರರೂ ಆದ ಯದುರಾಯರು ಒಬ್ಬ ಜಂಗಮನ ಸಹಾಯದಿಂದ ಮೈಸೂರು ದೊರೆಯ ಮಗಳನ್ನು ಮದುವೆಯಾದರು. ಈ ಯದುರಾಯರೇ ಮೈಸೂರು ಒಡೆಯರ ವಂಶದ ಮೂಲಪುರುಷರಾದರು. ಇವರ ವಂಶಕ್ಕೆ ಯದುವಂಶವೆಂದು ಹೆಸರು ಯದುರಾಯರು ತಮಗೆ ನೆರ ವಾದ ಜಂಗಮರೊಡೆಯನ ಜ್ಞಾಪಕಾರ್ಥವಾಗಿ ತಮ್ಮ ಹೆಸರಿಗೆ "ಒಡೆಯರು" ಎಂಬ ಬಿರುದನ್ನು ಸೇರಿಸಿಕೊಂಡು ಜಂಗಮರಿಗೆ ಲಾಂಛನವಾದ ಕಾವಿಯ ವಸ್ತ್ರವನ್ನು ರಾಜಧ್ವಜಕ್ಕೆ ಕಟ್ಟುವಂತೆ ಮಾತುಕೊಟ್ಟರು. ಅಂದಿನಿಂದಲೂ ಯದುವಂಶದ ಮೈಸೂರು ದೊರೆಗಳಿಗೆ "ಒಡೆಯರು" ಎಂಬ ಹೆಸರು ಬಂದಿದೆ.

ಯದುರಾಯರ ತರುವಾಯ ಮೈಸೂರು ರಾಜ್ಯವನ್ನು ಪರಿಪಾಲಿಸಿದ ಒಡೆಯರುಗಳ ವೀರಪಟ್ಟಾವಳಿಯನ್ನು ಹಿಡಿದು ನೋಡಿದರೆ ಒಬ್ಬೊಬ್ಬರೂ ಅಸಹಾಯಶೂರರೂ, ಪ್ರಜಾವತ್ಸಲರೂ ಮತ್ತು ಧರ್ಮಾನುರತರೂ ಆಗಿರು ತ್ತಾರೆ. ಸತ್ಯಸಂಧರಾದ ಯದುವಂಶದ ಮೈಸೂರು ಒಡೆಯರುಗಳ ಪವಿತ್ರ ಹೃದಯದಲ್ಲಿ ಪ್ರತಿಬಿಂಬಿಸುತ್ತಿರುವ ದೈವಭಕ್ತಿ, ಸಾಹಸ, ದೇಶಾಭಿಮಾನ, ಲೋಕಪ್ರೇಮ, ಪ್ರಜಾವಾತ್ಸಲ್ಯ, ಭೂತದಯೆ, ಸೌಜನ್ಯ, ಸೌಶೀಲ್ಯ ಮುಂತಾದ ಗುಣಗಳನ್ನು ವ್ಯಕ್ತಪಡಿಸುವ ಸನ್ನಿವೇಶಗಳು ಚರಿತ್ರೆಯೆಂಬ ಗಣಿಯಲ್ಲಿ ಅಡಗಿರುವ ರತ್ನಗಳಂತಿವೆ. ಮೈಸೂರು ರತ್ನಸಿಂಹಾಸನವನ್ನು ಅಲಂಕರಿಸಿದ ಪ್ರಭುಗಳು ತಮ್ಮ ಭುಜಪರಾಕ್ರಮದಿಂದ ರಾಜ್ಯವನ್ನು ವಿಸ್ತರಿಸುತ್ತಾ, ಮೈಸೂರು ನಾಡಿನ ಕೀರ್ತಿಯನ್ನು ಆಸೇತುಹಿಮಾಚಲಪರ್ಯಂತವಾಗಿ ಹಬ್ಬಿಸಿದರು. ಮುಮ್ಮಡಿ ಶ್ರೀ ಕೃಷ್ಣಭೂಪಾಲರ ಕಾಲದವರೆಗೆ ಮೈಸೂರು ರಾಜಮನೆತನದ ಕೀರ್ತಿಗೌರವಗಳನ್ನು ಹೆಚ್ಚಿಸಿಕೊಂಡು ಬಂದವರಲ್ಲಿ ರಾಜ ಒಡೆಯರೂ, ರಣಧೀರ ಕಂಠೀರವ ನರಸರಾಜ ಒಡೆಯರೂ, ದೊಡ್ಡದೇವರಾಜ ಒಡೆಯರೂ, ಚಿಕ್ಕದೇವರಾಜ ಒಡೆಯರೂ, ಇಮ್ಮಡಿ ಕೃಷ್ಣರಾಜ ಒಡೆಯರೂ

ಬಹಳ ಪ್ರಸಿದ್ಧರಾಗಿದ್ದಾರೆ. ರಾಜ ಒಡೆಯರ ಕಾಲದವರೆಗೂ ಮೈಸೂರು ದೇಶವು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾಗಿದ್ದಿತು. ಕಾಲಕ್ರಮದಲ್ಲಿ ರಾಜಒಡೆಯರು ಸ್ವತಂತ್ರರಾಗಿ ಅನೇಕ ಶತ್ರುಗಳನ್ನು ಜಯಿಸಿ ರಾಜ್ಯವನ್ನು ವಿಸ್ತರಿಸಿದರು. ಅವರ ಕಾಲದಲ್ಲಿ ಶ್ರೀರಂಗಪಟ್ಟಣವು ಮೈಸೂರು ರಾಜ್ಯದ ರಾಜಧಾನಿಯಾಯಿತು. ರಾಜಒಡೆಯರ ಅನಂತರ ಆಳಿದ ದೊರೆಗಳಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರೂ, ದೊಡ್ಡ ದೇವರಾಜ ಒಡೆಯರೂ ರಾಜ್ಯವನ್ನು ಬಹಳವಾಗಿ ವಿಸ್ತರಿಸಿ ಮೈಸೂರು ದೇಶದ ಕೀರ್ತಿಯನ್ನು ಹೆಚ್ಚಿಸಿದರು. ಅನಂತರ ಬಂದ ಚಿಕ್ಕದೇವರಾಜ ಒಡೆಯರು ಮೈಸೂರು ನಾಡಿನಲ್ಲಿ ಸುವರ್ಣಯುಗವನ್ನು ಸ್ಥಾಪಿಸಿದರು. ಜನಜೀವನ, ರಾಜಕೀಯ ಪರಿಸ್ಥಿತಿ, ಸಾಹಿತ್ಯ, ಸಂಸ್ಕೃತಿಗಳು ಪುಷ್ಟಿಗೊಂಡು ರಾಜ್ಯದಲ್ಲಿ ಶಾಂತಿ ಸಮಾಧಾನಗಳು ತಾಂಡವವಾಡುತ್ತಿದ್ದುವು. ಚಿಕ್ಕದೇವರಾಜ ಒಡೆಯರು ರಾಜನೀತಿ ಕುಶಲರೂ, ಪರಾಕ್ರಮಿಗಳೂ ಆಗಿದ್ದುದಲ್ಲದೆ, ಸ್ವಯಂಕವಿಗಳೂ, ಶ್ರೇಷ್ಠ ಸಾಹಿತಿಗಳೂ ಆಗಿದ್ದರು. ಅವರ ಆಸ್ಥಾನದಲ್ಲಿ ವಿದ್ವನ್ಮಣಿಗಳೂ ಪಂಡಿತಪ್ರಕಾಂಡರೂ, ವಾದಿವಾಗ್ಮಿಗಳೂ, ಕವಿಗಮಕಿಗಳೂ ಪರಿಶೋಭಿಸುತ್ತಿದ್ದರು. ಕನ್ನಡ ಸಾಹಿತ್ಯೋದ್ಯಾನದಲ್ಲಿ ಕಾವ್ಯ ಕುಸುಮಗಳು ಅರಳಿ ದಶದಿಕ್ಕುಗಳಿಗೂ ಪರಿಮಳವನ್ನು ಬೀರಿದುವು. ಅವರ ಕಾಲದಲ್ಲಿ ಕನ್ನಡ ಸಾಹಿತ್ಯವು ವಿಶೇಷವಾಗಿ ಬೆಳೆಯಿತು.

ಚಿಕ್ಕದೇವರಾಜ ಒಡೆಯರ ತರುವಾಯ ಆಳಿದ ರಾಜರು ಅಸಮರ್ಥರೂ, ಭೋಗಾಸಕ್ತರೂ, ವಿಷಯಲೋಲುಪ್ತರೂ ಆಗಿದ್ದುದರಿಂದ ರಾಜ್ಯಾಡಳಿತಗಳನ್ನು ಮಂತ್ರಿಗಳಾಗಲಿ, ದಳವಾಯಿಗಳಾಗಲಿ ನಿರ್ವಹಿಸುತ್ತಾ ರಾಜರನ್ನು ಹೆಸರಿಗೆ ಮಾತ್ರ ಇಟ್ಟುಕೊಂಡಿದ್ದರು. ದೊಡ್ಡ ಕೃಷ್ಣರಾಜ ಒಡೆಯರ ಕಾಲದಲ್ಲಿ ದಳವಾಯಿ ದೇವರಾಜಯ್ಯ, ಅವನ ತಮ್ಮ ಕರಾಚೂರಿ ನಂಜರಾಜಯ್ಯ ಮತ್ತು ಸರ್ವಾಧಿಕಾರಿ ನಂಜರಾಜಯ್ಯ ಎಂಬುವರು ದಿನ ದಿನಕ್ಕೆ ಪ್ರಬಲರಾಗುತ್ತಾ ಬಂದು, ಮೈಸೂರು ಒಡೆಯರುಗಳನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಂಡಿದ್ದರು. ಇವರ ಪ್ರಾಬಲ್ಯವು ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ತಪ್ಪಿಹೋಯಿತಾದರೂ, ಆಗ ಮೈಸೂರು

ಸೈನ್ಯದಲ್ಲಿ ಒಬ್ಬ ಸಣ್ಣ ಅಧಿಕಾರಿಯಾಗಿದ್ದ ಹೈದರ್ ಆಲಿಯ ಪ್ರಾಬಲ್ಯವು ಮತ್ತೊಂದು ಕಡೆಯಿಂದ ಬೆಳೆಯುತ್ತಾ ಬರುತ್ತಿತ್ತು. ಇಮ್ಮಡಿ ಕೃಷ್ಣರಾಜ ಒಡೆಯರ ಅನಂತರ ಆಳಿದ ನಂಜರಾಜ ಒಡೆಯರೂ ಅವರ ತರುವಾಯ ಆಳಿವ ಬೆಟ್ಟದ ಚಾಮರಾಜ ಒಡೆಯರೂ ಬಹಳ ಕಾಲ ಬದುಕಿರಲಿಲ್ಲ; ಅವರಿಗೆ ಮಕ್ಕಳೂ ಇರಲಿಲ್ಲ. ಮುಂದೆ ಪಟ್ಟಾಭಿಷಿಕ್ತರಾಗಲು ಯದುವಂಶ ದಲ್ಲಿ ಪುತ್ರಸಂತಾನವಿರಲಿಲ್ಲ. ಆಗ ಇಮ್ಮಡಿ ಕೃಷ್ಣರಾಜ ಒಡೆಯರ ಮೂರನೆಯ ಪತ್ನಿಯವರಾದ ಲಕ್ಷ್ಮಮ್ಮಣ್ಣಿಯವರಿಗೆ ಹೈದರನು ಮೂರು ವರ್ಷದ ಒಬ್ಬ ಅರಸು ಕುಮಾರನನ್ನು ದತ್ತುಮಾಡಿಸಿದನು; ಆ ಮಗುವಿಗೆ ಪಟ್ಟಾಭಿಷೇಕಮಹೋತ್ಸವವೂ ಆಯಿತು. ಈ ಪುತ್ರನಿಗೆ ಖಾಸಾ ಚಾಮರಾಜ ಒಡೆಯರೆಂದು ಹೆಸರಾಯಿತು. ಹೈದರನು ಸರ್ವತಂತ್ರ ಸ್ವತಂತ್ರನಾಗಿ ರಾಜಕಾರ್ಯಗಳನ್ನು ನಡೆಯಿಸುತ್ತಿದ್ದನು. ಅವನು ಬದುಕಿರುವ ವರೆಗೂ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರ ಮಾತಾಗಲಿ ಅಥವಾ ಚಿಕ್ಕ ವಯಸ್ಸಿನ ಮಹಾರಾಜರ ಅಧಿಕಾರವಾಗಲಿ ಏನೇನೂ ಸಾಗುತ್ತಿರಲಿಲ್ಲ. ಒಮ್ಮೆ ಹೈದರನು ಆರ್ಕಾಟನ್ನು ಜಯಿಸಲು ಹೋಗಿದ್ದಾಗ ಅವನಿಗೆ ಬೆನ್ನುಫಣಿ ಎದ್ದು ಕೆಲವು ದಿನಗಳಲ್ಲಿಯೇ ಕಾಲವಾದನು. ಆಗ ಖಾಸಾ ಚಾಮರಾಜ ಒಡೆಯರಿಗೆ ಒಂಬತ್ತು ವರ್ಷ ವಯಸ್ಸು. ಹೈದರನು ಕಾಲವಾದಮೇಲೆ ಅವನ ಮಗ ಟೀಪೂಸುಲ್ತಾನನು ಸರ್ವಾಧಿಕಾರಿಯಾದನು.

ಟೀಪುವು ಬಹಳ ಸಾಹಸಿಯಾದರೂ ಕಾರ್ಯಚತುರನಾಗಿರಲಿಲ್ಲ. ಶ್ರೀರಂಗಪಟ್ಟಣದ ಅರಮನೆಯಲ್ಲಿ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ದಿನದಿನಕ್ಕೂ ಕಿರುಕುಳ ಹೆಚ್ಚಾಗುತ್ತಲೇ ಬಂದಿತು. ಮೈಸೂರು ರಾಜ್ಯವನ್ನು ತಮ್ಮ ವಂಶಜರ ಆಳಿಕೆಗೆ ಒಳಪಡಿಸಬೇಕೆಂಬುದೇ ಲಕ್ಷ್ಮಮ್ಮಣ್ಣಿಯವರ ಸಂಕಲ್ಪ. ಆ ಕಾಲದಲ್ಲಿ ವ್ಯಾಪಾರೋದ್ದೇಶದಿಂದ ಭರತಖಂಡಕ್ಕೆ ಬಂದಿದ್ದ ಇಂಗ್ಲಿಷಿನವರು ಅಲ್ಲಲ್ಲಿ ತಮ್ಮ ಸ್ವಾಸ್ಥ್ಯಗಳನ್ನು ಭದ್ರಪಡಿಸಿಕೊಳ್ಳುತ್ತಾ ಕಂಪೆನಿ ಸರ್ಕಾರವನ್ನು ಸ್ಥಾಪಿಸಿ, ರಾಜ್ಯಸಂಪಾದನೆಯ ಕಾರ್ಯದಲ್ಲಿ ಉತ್ಸಾಹ ದಿಂದ ತೊಡಗಿದ್ದರು. ಮರಾಟೆಯವರೂ, ಹೈದರಾಬಾದಿನ ನಿಜಾಮನೂ ಆ ಕಂಪೆನಿ ಸರ್ಕಾರದವರೊಂದಿಗೆ ಸಹಕರಿಸಿಕೊಂಡು ಸ್ವಾರ್ಥಸಾಧನೆ ಮಾಡಿಕೊಳ್ಳುತ್ತಿದ್ದರು. ರಾಜತಂತ್ರಜ್ಞೆಯರಾದ ಮಹಾರಾಣಿ ಲಕ್ಷ್ಮಮ್ಮಣ್ಣಿ

ಯವರು ತಮ್ಮ ಕಡೆಯ ಪುಟ್ಟಮಾದಯ್ಯ ಮತ್ತು ತಿರುಮಲಾಚಾರ್ಯ-ಎಂಬ ಇಬ್ಬರು ರಾಯಭಾರಿಗಳನ್ನು ಆಗ ಮದ್ರಾಸಿನಲ್ಲಿದ್ದ ಇಂಗ್ಲಿಷ್ ಅಧಿಕಾರಿಗಳ ಬಳಿಗೆ ರಹಸ್ಯವಾಗಿ ಕಳುಹಿಸಿದರು. ಆ ರಾಯಭಾರಿಗಳು ಮೈಸೂರು ಸಂಸ್ಥಾನದ ಪರಿಸ್ಥಿತಿಯನ್ನೆಲ್ಲಾ ಅಲ್ಲಿನ ಅಧಿಕಾರಿಗಳಿಗೆ ಗೋಪ್ಯವಾಗಿ ತಿಳಿಸಿ, ಟೀಪೂ ಸುಲ್ತಾನನ ಹಿಡಿತದಿಂದ ರಾಜ್ಯವನ್ನು ತಪ್ಪಿಸಿ, ಮೈಸೂರು ದೊರೆಗಳಿಗೆ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಇಂಗ್ಲಿಷಿನವರೂ, ಮರಾಟಿಯವರೂ ಹೈದರನಿಗೆ ವೈರಿಗಳಾಗಿದ್ದಂತೆಯೇ ಟೀಪೂಸುಲ್ತಾನನಿಗೂ ಪ್ರಬಲರಾದ ಶತ್ರುಗಳಾಗಿದ್ದರು. ಟೀಪುವು ಇಂಗ್ಲಿಷಿನವರ ಹಗೆಗಳಾದ ಫ್ರೆಂಚರೊಂದಿಗೆ ಸ್ನೇಹಮಾಡಿಕೊಂಡಿದ್ದನು. ಫ್ರೆಂಚರ ಸಹಾಯದಿಂದ ಇಂಗ್ಲಿಷಿನವರನ್ನು ಇಂಡಿಯಾ ದೇಶದಿಂದಲೇ ಓಡಿಸಿಬಿಡಬೇಕೆಂಬ ಹಠ ತೊಟ್ಟಿದ್ದನು. ಇದರಿಂದ ಇಂಗ್ಲಿಷಿನವರು ಟೀಪುವಿನಂಥ ಬಲಾಢ್ಯನಾದ ಶತ್ರುವನ್ನು ಕೊನೆಗಾಣಿಸಬೇಕೆಂದು ಸಮಯ ಕಾಯುತ್ತಿದ್ದರು. ಅದೇ ಸಮಯದಲ್ಲಿ ಲಕ್ಷ್ಮಮ್ಮಣ್ಣಿಯವರ ಸಂಧಾನ ಪ್ರಯತ್ನಗಳಿಂದ ಇಂಗ್ಲಿಷಿನವರಿಗೆ ಮತ್ತಷ್ಟು ಪ್ರೋತ್ಸಾಹ ದೊರೆತಂತಾಯಿತು. ಟೀಪುವೂ ಇಂಗ್ಲಿಷಿನವರಮೇಲೆ ಕತ್ತಿ ಮಸೆಯುತ್ತ ಕಲಹಕ್ಕೆ ಕಾಲು ಕೆರೆಯುತ್ತಲೇ ಇದ್ದನು.

ಖಾಸಾ ಚಾಮರಾಜ ಒಡೆಯರು ಪ್ರಾಪ್ತವಯಸ್ಕರಾದಮೇಲೆ ಅವರಿಗೆ ವಿವಾಹ ಮಹೋತ್ಸವವೂ ನಡೆಯಿತು. ಸಮ್ಮುಖದ ನಂಜರಾಜಯ್ಯನ ಪುತ್ರಿ ಕೆಂಪನಂಜಮ್ಮಣ್ಣಿಯವರು ಖಾಸಾ ಚಾಮರಾಜ ಒಡೆಯರ ಪಟ್ಟಮಹಿಷಿಯರಾದರು. ಇವರಲ್ಲದೆ ಅವರಿಗೆ ಇನ್ನೂ ಆರು ಮಂದಿ ಪತ್ನಿಯರಿದ್ದರು. ಕಾಲಕ್ರಮದಲ್ಲಿ ಅವರ ದ್ವಿತೀಯ ಪತ್ನಿಯು ಗರ್ಭವತಿಯಾಗಿ ಸುಪುತ್ರನನ್ನು ಪಡೆದು, ದುರದೃಷ್ಟವಶದಿಂದ ಕೆಲವು ದಿನಗಳಲ್ಲಿಯೇ ಕಾಲವಾದರು; ಮಗುವೂ ತೀರಿಹೋಯಿತು. ಇದರಿಂದ ಅವರ ಮನಸ್ಸಿಗೆ ಅತ್ಯಂತ ವ್ಯಥೆಯಾಯಿತು. ಆಗ ಟೀಪೂ ಸುಲ್ತಾನನ ದೌಲತ್ತಿನಿಂದ ದೇಶದ ಪರಿಸ್ಥಿತಿಯೂ ಹದಗೆಟ್ಟು, ರಾಜ್ಯದಲ್ಲಿ ಶಾಂತಿ ಸಮಾಧಾನಗಳೇ ಇರಲಿಲ್ಲ. ಬಹಳ ಕಾಲವಾದರೂ ಅವರಿಗೆ ಮಕ್ಕಳಾಗದಿರಲು ಮುಂದೆ ಮೈಸೂರು ನಾಡಿನ ಪ್ರಭುಸಂತತಿಯು ನಷ್ಟವಾಗುವುದಲ್ಲಾ-ಎಂದು ಅವರು ಹಗಲಿರುಳು ಚಿಂತೆಪಡುತ್ತಿದ್ದರು. ಅವರು ತಮ್ಮ ಪಟ್ಟದ ರಾಣಿಯವರಾದ ಕೆಂಪನಂಜಮ್ಮಣ್ಣಿಯವರೊಂದಿಗೆ

ಅನೇಕ ವ್ರತನಿಯಮಗಳನ್ನೂ ಆಚರಿಸುತ್ತಿದ್ದರು. ಆ ರಾಜದಂಪತಿಗಳು ತಮಗೆ ಮಕ್ಕಳಾಗಲಿಲ್ಲವೆಂಬ ಚಿಂತೆಯಿಂದ ಪರಿತಪಿಸುತ್ತಿದ್ದುದೂ ಅಲ್ಲದೆ ರಾಜ್ಯದಲ್ಲಿ ಉಂಟಾಗಿದ್ದ ಪ್ರಜಾಕ್ಷೋಭೆಯನ್ನೂ ನೋಡಿ ಬಹಳವಾಗಿ ವ್ಯಸನಪಡುತ್ತಿದ್ದರು. ಟೀಪೂಸುಲ್ತಾನನು ಮಹಾರಾಣಿಯವರನ್ನೂ ಲಕ್ಷಿಸದೆ ಪ್ರಾಪ್ತವಯಸ್ಕರಾಗಿದ್ದ ಒಡೆಯರನ್ನೂ ಪುರಸ್ಕರಿಸದೆ, ತಾನೇತಾನಾಗಿ ರಾಜಕಾರ್ಯಗಳನ್ನು ನಡೆಯಿಸುತ್ತಿದ್ದನು.

ಹೀಗೆಯೇ ದಿನಗಳು ಕಳೆಯುತ್ತಾಬಂದುವು. ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಇಂಗ್ಲಿಷಿನವರೊಡನೆ ಗೋಪ್ಯವಾಗಿ ಸಂಧಾನ ನಡೆಯಿಸುತ್ತಲೇ ಇದ್ದರು. ಪುತ್ರಾಪೇಕ್ಷಿಗಳಾದ ಒಡೆಯರೂ, ಕೆಂಪನಂಜಮ್ಮಣ್ಣಿಯವರೂ ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯನ್ನು ಭಕ್ತಿಯಿಂದ ಆರಾಧಿಸುತ್ತಾ ಕಾಲಕಳೆಯುತ್ತಿದ್ದರು. ಈ ಪುಣ್ಯ ದಂಪತಿಗಳೇ ಮುಮ್ಮಡಿ ಶ್ರೀಕೃಷ್ಣರಾಜೇಂದ್ರ ಒಡೆಯರನ್ನು ಪಡೆದ ತಾಯಿ ತಂದೆಗಳು.

ಎರಡನೆಯ ಅಧ್ಯಾಯ

ಜನನ, ಬಾಲ್ಯ, ರಾಜ್ಯಾಭಿಷೇಕ, ಯೌವನ

"ನಾವಿಷ್ಣುಃ ಪೃಥಿವೀಪತಿಃ"

ಖಾಸಾ ಚಾಮರಾಜ ಒಡೆಯರು ಧರ್ಮಾನುರತರು; ದೈವಭಕ್ತರು. ಪ್ರಜಾಕ್ಷೇಮಚಿಂತನೆಯೇ ಅವರ ಜೀವನದ ಧ್ಯೇಯವಾಗಿತ್ತು. ಪ್ರಜೆಗಳೆಂದರೆ ಪಂಚಪ್ರಾಣ ಅವರಿಗೆ. "ದಯೆಯುಳ್ಳ ಹೃದಯವೇ ದೇವಾಲಯ" ಎಂಬುದಾಗಿ ಅವರು ಭಾವಿಸಿದ್ದರು. ಅದರಂತೆಯೆ ಅವರು ಪರಮ ದಯಾನ್ವಿತರಾಗಿದ್ದರು. ತಾವು ರಾಜ್ಯಾಧಿಪತಿಗಳಾಗಿದ್ದೂ ತಮ್ಮ ಮಾತೇನೂ ರಾಜಕಾರ್ಯದಲ್ಲಿ ನಡೆಯುತ್ತಿರಲಿಲ್ಲವೆಂಬ ಚಿಂತೆಗಿಂತಲೂ ತಮ್ಮ ದೇಶದ ಪ್ರಜೆಗಳು ನಾನಾ ಕಿರುಕುಳಗಳಿಗೆ ಸಿಕ್ಕಿ ತೊಂದರೆಪಡುತ್ತಿದ್ದಾರೆಂದು ತಿಳಿದು ಬಹಳ ವ್ಯಥೆಪಡುತ್ತಿದ್ದರು. ಅವರು ಲೋಕಕಲ್ಯಾಣ ಬುದ್ಧಿಯಿಂದ ಯಾವಾಗಲೂ ದೇವರನ್ನು ಪ್ರಾರ್ಥಿಸುತ್ತಿದ್ದರು; ಪ್ರಜಾಕ್ಷೇಮಕ್ಕಾಗಿ ತಮ್ಮ ದೇಹವನ್ನಾದರೂ ಬಿಡಲು ಸಿದ್ಧರಾಗಿದ್ದರು. ತಮ್ಮ ತರುವಾಯ ಮೈಸೂರು ರಾಜ್ಯಕ್ಕೆ ಉತ್ತರಾಧಿಕಾರಿಯಾಗಲು ಸಂತಾನವಿಲ್ಲವೆಂಬ ಯೋಚನೆಯೂ ಅವರನ್ನು ದಹಿಸುತ್ತಿತ್ತು. ಎಂದಾದರೊಂದುದಿನ ಮೈಸೂರು ರಾಜ್ಯವು ತಮ್ಮ ವಂಶೀಯರ ಕೈಸೇರುವುದೆಂಬ ದೃಢ ನಂಬುಗೆಯು ಅವರಿಗಿದ್ದಿತ್ತು. ಮೈಸೂರು ರಾಜ್ಯಲಕ್ಷ್ಮಿಯು ನಿರಾತಂಕವಾಗಿ ಒಡೆಯರ ಬೆಳ್ಗೊಡೆಯ ನೆರಳಿನಲ್ಲಿ ನಲಿದಾಡುವಳೆಂಬ ಆಶಾಭರವಸೆಗಳು ಅವರ ಹೃದಯದಲ್ಲಿ ಅಂಕುರಿಸಿದ್ದುವು. ಮೈಸೂರು ದೇಶದ ಭಾಗ್ಯಸೂರ್ಯನ ಹೊಂಬೆಳಗು ಪ್ರಸರಿಸುವ ಮಂಗಳ ದಿನಗಳು ಶೀಘ್ರವಾಗಿಯೇ ಬರುವುವೆಂದು ಅವರ ಅಂತರ್ವಾಣಿಯು ನುಡಿಯುತ್ತಿದ್ದಿತು.

ಖಾಸಾ ಚಾಮರಾಜ ಒಡೆಯರು ತಮ್ಮ ಧರ್ಮಪತ್ನಿ ಕೆಂಪನಂಜಮ್ಮಣ್ಣಿಯವರೊಂದಿಗೆ ನಂಜನಗೂಡಿಗೆ ಹೋಗಿ, ಅಲ್ಲಿ ಕೆಲವು ಕಾಲ ಶ್ರೀಕಂಠೇಶ್ವರ

ಸ್ವಾಮಿಯನ್ನು ಬಹು ಭಕ್ತಿಯಿಂದ ಆರಾಧಿಸುತ್ತಿದ್ದರು. ನಂಜನಗೂಡು ಶ್ರೀರಂಗಪಟ್ಟಣಕ್ಕೆ ದಕ್ಷಿಣದಲ್ಲಿ ಎರಡು ಗಾವುದ ದೂರದಲ್ಲಿದೆ. ಅಲ್ಲಿ ಕಪಿಲಾ ನದಿಯು ಪ್ರವಹಿಸುತ್ತಿದೆ. ಆ ನದಿಯ ತೀರದಲ್ಲಿ ಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನವಿದೆ. ಆ ದೇವಸ್ಥಾನದಲ್ಲಿರುವ ಶಿವಲಿಂಗವನ್ನು ಬಹಳ ಹಿಂದಿನ ಕಾಲದಲ್ಲಿ ಗೌತಮ ಮಹರ್ಷಿಯು ಪ್ರತಿಷ್ಠೆ ಮಾಡಿದನೆಂದು ಆ ಸ್ಥಳಪುರಾಣದಿಂದ ತಿಳಿದುಬರುತ್ತದೆ. ನಂಜನಗೂಡಿನ ಸಮೀಪದಲ್ಲಿ ಚೂರ್ಣಾವತಿ ಮತ್ತು ಕೌಂಡಿನ್ಯ ನದಿಗಳೂ ಹರಿಯುತ್ತಿವೆ. ಈ ಎರಡು ನದಿಗಳೂ ಸೇರುವ ಸ್ಥಳವನ್ನು ಪರಶುರಾಮ ಕ್ಷೇತ್ರವೆಂದು ಕರೆಯುತ್ತಾರೆ. ತೃಣಜಲತರು ಸಮೃದ್ಧವಾದ ಆ ಪ್ರದೇಶವು ದೇವರ ಮಹಾಸಾನ್ನಿಧ್ಯದಿಂದ ಪ್ರಶಾಂತವಾಗಿ ಕಾಣುತ್ತಿದೆ. ಆ ಪುಣ್ಯಕ್ಷೇತ್ರಕ್ಕೆ ಸಾವಿರಾರು ಮಂದಿ ಯಾತ್ರಾರ್ಥಿಗಳು ಬಂದು ಹೋಗುತ್ತಾರೆ. ಸಂತಾನಾಪೇಕ್ಷಿಗಳಾಗಿ ಖಾಸಾ ಚಾಮರಾಜ ಒಡೆಯರೂ, ಕೆಂಪನಂಜಮ್ಮಣ್ಣಿಯವರೂ ಆ ಪುಣ್ಯಕ್ಷೇತ್ರದಲ್ಲಿ ದೇವತಾ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನಡೆಯಿಸುತ್ತಿದ್ದರು. ಆ ಮಹಾದೇವನನ್ನು ಕುರಿತು ಕೋಟಿ ಪಂಚಾಕ್ಷರೀ ಜಪ, ತಪ, ಹೋಮ ಮುಂತಾದ ಕಾರ್ಯಗಳನ್ನು ಯಥಾವಿಧಿಯಾಗಿ ಆಚರಿಸುತ್ತಿದ್ದರು. ಆ ದಂಪತಿಗಳ ಭಕ್ತಿಪೂರ್ವಕವಾದ ಪೂಜಾಕೈಂಕರ್ಯಗಳಿಗೆ ಪರಮೇಶ್ವರನು ಸಂತುಷ್ಟನಾದನು. ಒಂದು ದಿನ ತೇಜಃಪುಂಜನಾದ ಒಬ್ಬ ಶಿವಯೋಗಿಯು ಆ ದಂಪತಿಗಳಿಗೆ ಕಾಣಿಸಿಕೊಂಡು "ನೀವು ಮಾಡಿದ ಕೋಟಿ ಪಂಚಾಕ್ಷರೀ ಜಪದಿಂದ ಶ್ರೀಕಂಠೇಶ್ವರನು ಪ್ರಸನ್ನನಾದನು, ಮಹಾ ವಿಷ್ಣುವಿನ ಅಂಶದಿಂದ ನಿಮಗೆ ಒಬ್ಬ ಪುತ್ರನು ಜನಿಸುವನು" ಎಂದು ಹೇಳಿ ಆ ಸತಿಪತಿಗಳನ್ನು ಆಶೀರ್ವದಿಸಿ ಹೋದನು. ಶ್ರೀಕಂಠೇಶ್ವರನೇ ಶಿವಯೋಗಿಯ ರೂಪದಿಂದ ಬಂದಿದ್ದನೆಂದು ಭಾವಿಸಿ ಆ ದಂಪತಿಗಳು ಭಗವಂತನ ಅಪಾರ ಮಹಿಮೆಯನ್ನು ಮನಸಾರೆ ಸ್ತುತಿಸಿ, ಪೂಜಾಕಾರ್ಯಗಳನ್ನು ಸಾಂಗಗೊಳಿಸಿದರು. ತರುವಾಯ ಅವರು ರಾಜಧಾನಿಗೆ ಹಿಂದಿರುಗಿ ಬಂದು ದೇವರನ್ನು ಧ್ಯಾನಿಸುತ್ತಾ ಸುಖವಾಗಿ ಕಾಲಯಾಪನೆ ಮಾಡುತ್ತಿದ್ದರು.

ಕೆಲವು ದಿನಗಳು ಕಳೆದುವು. ಪಟ್ಟದರಸಿಯರಾದ ಕೆಂಪನಂಜಮ್ಮಣ್ಣಿಯವರು ಶ್ರೀಕಂಠೇಶ್ವರನ ಅನುಗ್ರಹ ಬಲದಿಂದ ಗರ್ಭವತಿಯರಾದರು.

ರಾಜಪತ್ನಿಯವರು ಅಂತರ್ವತ್ನಿಯರಾದರೆಂಬ ಸಂಗತಿಯು ಆಪ್ತ ಸಖಿಯರ ಮೂಲಕ ಅರಮನೆಯಲ್ಲೆಲ್ಲಾ ಹಬ್ಬಿತು. ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿ ಯವರಿಗಂತೂ ಅತ್ಯಾನಂದವಾಯಿತು. ಯದುವಂಶ ಕಲ್ಪವೃಕ್ಷವು ಈಪ್ಸಿತಾರ್ಥ ವನ್ನು ನೀಡುವ ಸುಯೋಗವನ್ನು ಮನಸ್ಸಿನಲ್ಲಿ ನೆನೆನೆನೆದು ಲಕ್ಷ್ಮಮ್ಮಣ್ಣಿ ಯವರು ಸಂತೋಷಪಡುತ್ತಿದ್ದರು. ಮಹಾರಾಜರ ಇತರ ಪತ್ನಿಯರೂ ಸವತಿ ಮಾತ್ಸರ್ಯಕ್ಕೊಳಗಾಗದೆ ಕೆಂಪನಂಜಮ್ಮಣ್ಣಿಯವರನ್ನು ನಾನಾ ವಿಧವಾಗಿ ಉಪಚರಿಸುತ್ತಿದ್ದರು. ಅವರು ಸುಕುಮಾರ ಶುಭೋದಯವನ್ನು ಕುತೂಹಲ ದಿಂದ ನಿರೀಕ್ಷಿಸುತ್ತಿದ್ದರು. ಅರಮನೆಯಲ್ಲಿ ನಿತ್ಯೋತ್ಸವಗಳೂ, ದಾನ ಧರ್ಮಗಳೂ ಯಥಾವಿಧಿಯಾಗಿ ನಡೆಯುತ್ತಿದ್ದುವು. ಪುಂಸವನ ಸೀಮಂತಾದಿ ಶುಭಕರ್ಮಗಳು ಅಟ್ಟಹಾಸದಿಂದ ಜರುಗಿದವು. ನವಮಾಸಗಳು ತುಂಬಿ ಹತ್ತನೆಯ ತಿಂಗಳು ಪ್ರಾಪ್ತವಾಯಿತು. ಆನಂದ ಸಂವತ್ಸರದ ಆಷಾಢ ಬಹುಳ ಬಿದಿಗೆ ಸೋಮವಾರ ಶುಭ ಲಗ್ನದಲ್ಲಿ (ಕ್ರಿ.ಶ ೧೭೯೪ ಜುಲೈ ೧೪ನೆಯ ಇಸವಿ) ಕೆಂಪನಂಜಮ್ಮಣ್ಣಿಯವರು ಗಂಡು ಮಗುವನ್ನು ಪಡೆದರು. ದೇವಕೀದೇವಿಯ ಪುಣ್ಯ ಗರ್ಭದಲ್ಲಿ ಶ್ರೀ ಕೃಷ್ಣನು ಅವತರಿಸಿದಂತೆ ಕೆಂಪನಂಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಸಂತಾನಕೌಸ್ತುಭವು ಆವಿರ್ಭವಿಸಿತು.

ಮಹಾರಾಜರಿಗೆ ಪುತ್ರೋತ್ಸವವಾಯಿತೆಂಬ ಸಮಾಚಾರವನ್ನು ಟೀಪೂಸುಲ್ತಾನನಿಗೆ ಹೇಳಿ ಕಳುಹಿಸಿದರು. ಆಗ ಸುಲ್ತಾನನ ಆಜ್ಞೆಯಂತೆ ಸಂಪ್ರದಾಯಾನುಸಾರವಾಗಿ ಕೋಟೆಯ ಬತೇರಿಯಿಂದ ಗೌರವಸೂಚಕವಾದ ಫಿರಂಗಿಗಳನ್ನು ಹಾರಿಸಿದರು. ಬಂಡಿಗಳಲ್ಲಿ ಸಕ್ಕರೆಯನ್ನು ತುಂಬಿ ರಾಜ ಧಾನಿಯ ಬೀದಿಬೀದಿಗಳಲ್ಲಿ ಹಂಚಿದರು. ಜನ್ಮಪತ್ರಿಕೆಯನ್ನು ರಾಜವೈಭವ ದಿಂದ ನಗರದಲ್ಲೆಲ್ಲಾ ಮೆರವಣಿಗೆ ಮಾಡಿಸಿದರು. ಮಗುವಿಗೆ ಹನ್ನೆರಡನೆಯ ದಿನದಲ್ಲಿ ನಾಮಕರಣ ಮಹೋತ್ಸವವೂ ನೆರವೇರಿತು. ನಂಜುಂಡೇಶ್ವರನ ಅನುಗ್ರಹದಿಂದ ಜನಿಸಿದ ಶಿಶುವಿಗೆ ನಂಜರಾಜ ಒಡೆಯರೆಂಬುದಾಗಿ ಹೆಸರಿ ಟ್ಟರು. ಇವರೇ ಮುಂದೆ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರೆಂಬ ಹೆಸರಿನಿಂದ ಪ್ರಖ್ಯಾತರಾದವರು!

ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಯದುಸಂತಾನವನ್ನು ನೋಡಿ ನೋಡಿ ಆನಂದಪಡುತ್ತಿದ್ದರು; ವಂಶಾಭ್ಯುದಯಕ್ಕಾಗಿ ಕುಮಾರನನ್ನು

ಕರುಣಿಸಿದ ಪರಮೇಶ್ವರನನ್ನು ಕೊಂಡಾಡುತ್ತಿದ್ದರು. ಸುಖದುಃಖಗಳು ಹಗಲಿರುಳುಗಳಂತೆ ಒಂದಾದಮೇಲೊಂದು ಬಂದುಹೋಗುವುವು. ಅದರಂತೆಯೇ ಅರಮನೆಯಲ್ಲಿ ಎಲ್ಲರೂ ಸಂತೋಷದಿಂದಿರುವಾಗ ಕೆಂಪನಂಜಮ್ಮಣ್ಣಿಯವರು ಪುತ್ರನನ್ನು ನೋಡಿ ಆನಂದಿಸುವ ಸುಯೋಗವು ಬಹಳ ದಿನಗಳಿರಲಿಲ್ಲ. ಕುಮಾರನನ್ನು ಪಡೆದ ಒಂದು ತಿಂಗಳೊಳಗಾಗಿಯೇ ಬಾಣಂತಿಗೆ ದೇಹಾಲಸ್ಯವುಂಟಾಯಿತು. ವಿಧಿಯ ಸಂಕಲ್ಪವೇ ಬೇರೆಯಾಗಿದ್ದುದರಿಂದ ಕೆಂಪನಂಜಮ್ಮಣ್ಣಿಯವರು ಇಹಲೋಕವನ್ನು ತ್ಯಜಿಸಿದರು. ಇಂಥ ಅನಿರೀಕ್ಷಿತ ಘಟನೆಯಿಂದ ರಾಜಕುಟುಂಬಕ್ಕೂ, ಮಹಾರಾಜರಿಗೂ ಮಹತ್ತಾದ ವ್ಯಸನ ಪ್ರಾಪ್ತವಾಯಿತು. ಲಕ್ಷ್ಮಮ್ಮಣ್ಣಿಯವರು ದುಃಖವನ್ನು ನುಂಗಿಕೊಂಡು ಆ ಎಳೆಯ ಕಂದನನ್ನು ಬಹಳ ಎಚ್ಚರಿಕೆಯಿಂದ ಕಾಪಾಡುತ್ತಿದ್ದರು. ಒಡೆಯರ ಇತರ ಪತ್ನಿಯರೂ ಹಸುಳೆಯ ಪೋಷಣೆಯಲ್ಲಿ ನಿರತರಾಗಿದ್ದರು. ದಿನದಿನಕ್ಕೆ ಪ್ರವರ್ಧಮಾನನಾಗುತ್ತಿದ್ದ ಕುಮಾರನ ಬಾಲಲೀಲಾ ವಿನೋದಗಳನ್ನು ನೋಡಿಕೊಂಡು ಮಹಾರಾಜರು ಪತ್ನೀವಿಯೋಗ ದುಃಖವನ್ನು ಸ್ವಲ್ಪ ಸ್ವಲ್ಪವಾಗಿ ಮರೆಯುತ್ತಿದ್ದರು.

ಇಂಗ್ಲಿಷಿನವರು ಟೀಪೂಸುಲ್ತಾನನ ಪ್ರಾಬಲ್ಯವನ್ನು ಮುರಿಯಬೇಕೆಂದು ಕಾರ್ಯಸಂಧಾನ ಮಾಡುತ್ತಲೇ ಇದ್ದರು. ಟೀಪುವು ಈ ವೇಳೆಗೆ ಇಂಗ್ಲಿಷಿನವರಮೇಲೆ ಕೈ ಮಾಡಿ ಸೋತು ಬಂದಿದ್ದನು. ಇಷ್ಟಾದರೂ "ಮೈಸೂರು ಹುಲಿ" ಎನ್ನಿಸಿಕೊಂಡಿದ್ದ ಸುಲ್ತಾನನನ್ನು ಕೆಣಕಲು ಇಂಗ್ಲಿಷಿನವರು ಹಿಂದು ಮುಂದು ನೋಡಬೇಕಾಗಿದ್ದಿತು. ಅರಿಭಯಂಕರನಾದ ಟೀಪುವೆಂದರೆ ಇಂಗ್ಲಿಷಿನವರಿಗೆ ಸಿಂಹಸ್ವಪ್ನವಾಗಿದ್ದಿತು. ಟೀಪುವಿನ ಔನ್ನತ್ಯವನ್ನು ಮುರಿಯಬೇಕೆಂದು ಕಂಪೆನಿ ಸರ್ಕಾರದವರೂ, ಇಂಗ್ಲಿಷಿನವರ ಪ್ರಾಬಲ್ಯವನ್ನು ಅಡಗಿಸಬೇಕೆಂದು ಸುಲ್ತಾನನೂ ಪರಸ್ಪರವಾಗಿ ಸ್ಪರ್ಧಿಸುತ್ತಲೇ ಇದ್ದರು. ಹೀಗೆ, ಉಭಯ ಪಕ್ಷದವರೂ ಸಮಯ ಸಂಧಾನ ಚತುರರಾಗಿ ವರ್ತಿಸುತ್ತಾ ಯುದ್ಧಪ್ರಯತ್ನಗಳನ್ನು ನಡೆಯಿಸುತ್ತಿರಲು ಶ್ರೀರಂಗಪಟ್ಟಣದಲ್ಲಿ ಖಾಸಾ ಚಾಮರಾಜ ಒಡೆಯರು ಅನಿರೀಕ್ಷಿತವಾಗಿ ಸ್ವರ್ಗಸ್ಥರಾದರು. 'ಹುಣ್ಣಿನ ಮೇಲೆ ಬೊಕ್ಕೆ ಎದ್ದಂತಾಯಿತು.' 'ತಾನೊಂದು ನೆನೆದರೆ ದೈವವೊಂದು ನೆನೆಯಿತು' ಎಂಬುದಾಗಿ ಆ ವೃದ್ಧಮಾತೆಯು

ಬಹಳವಾಗಿ ಗೋಳಾಡುತ್ತಾ ಕಗ್ಗತ್ತಲೆಯಲ್ಲಿ ದಾರಿತಪ್ಪಿದವರಂತೆ ಪರಿತಪಿಸುತ್ತಿದ್ದರು. ಅವರ ತಲೆಯಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಅಂಥ ದಾರುಣ ಪರಿಸ್ಥಿತಿಯಲ್ಲಿಯೂ ಲಕ್ಷ್ಮಮ್ಮಣ್ಣಿಯವರು ಎದೆಗುಂದಲಿಲ್ಲ. ರಾಜಕುಮಾರನನ್ನು ಜತನದಿಂದ ಸಲಹುತ್ತಾ, "ಒಡಲಿನಲ್ಲಿ ದುಃಖ ಮಡಲಿನಲ್ಲಿ ಮಗು" ವಿದ್ದರೂ, ವೀರರಮಣಿಯರಾದ ಲಕ್ಷ್ಮಮ್ಮಣ್ಣಿಯವರು ತಮ್ಮ ಮೊಮ್ಮಗನಿಗೆ ರಾಜ್ಯಾಭಿಷೇಕ ಮಾಡಿಸಬೇಕೆಂದು ಸರ್ವ ಪ್ರಯತ್ನಗಳನ್ನೂ ಸಮಯವರಿತು ನಡೆಯಿಸುತ್ತಿದ್ದರು. ಟೀಪುವು ಫ್ರೆಂಚರ ಸ್ನೇಹ ಬೆಳೆಸಿದ್ದುದಲ್ಲದೆ ಆಫ್ಘಾನರೊಂದಿಗೂ ಒಳಸಂಚು ನಡೆಯಿಸಿ ಇಂಗ್ಲಿಷರಮೇಲೆ ಯುದ್ಧಮಾಡಲು ಹಾತೊರೆಯುತ್ತಿದ್ದನು. ಮೈಸೂರು ರಾಜ್ಯದಲ್ಲಿದ್ದ ಆಗಿನ ಅನುಕೂಲ ಪರಿಸ್ಥಿತಿಯನ್ನು ಕಂಡು ಇಂಗ್ಲಿಷರು ಶ್ರೀರಂಗಪಟ್ಟಣದಮೇಲೆ ದಂಡೆತ್ತಿ ಬಂದರು. ಮರಾಟಿಯವರೂ, ನಿಜಾಮನೂ ಇಂಗ್ಲಿಷರಿಗೆ ಸಹಾಯಕರಾಗಿದ್ದರು. ಆಗ ನಡೆದ ಕದನದಲ್ಲಿ ಸುಲ್ತಾನನು ಮಡಿದುಬಿದ್ದನು. ಇಂಗ್ಲಿಷರಿಗೆ ಜಯವಾಯಿತು. ಲಕ್ಷ್ಮಮ್ಮಣ್ಣಿಯವರ ಪ್ರಯತ್ನವು ಸಫಲವಾಯಿತು.

ಯುದ್ಧವು ಮುಗಿದಮೇಲೆ ಇಂಗ್ಲಿಷರು ರಾಜ್ಯವಿಭಾಗ ಮಾಡಿಕೊಳ್ಳುವುದಕ್ಕಾಗಿ ಒಂದು 'ಕಮಿಷನ್' ನೇಮಕ ಮಾಡಿದರು. ಅವರು ಟೀಪುವಿನ ರಾಜ್ಯವನ್ನು ನಾಲ್ಕುಪಾಲುಮಾಡಿ, ಒಂದು ಭಾಗವನ್ನು ಕಂಪೆನಿಯವರೂ, ಇನ್ನೊಂದು ಭಾಗವನ್ನು ಮರಾಟಿಯವರೂ, ಮತ್ತೊಂದು ಪಾಲನ್ನು ನಿಜಾಮನೂ ತೆಗೆದುಕೊಳ್ಳತಕ್ಕುದೆಂದೂ, ಉಳಿದುದನ್ನು ಟೀಪುವಿನ ಮಗನಾದ ಫತ್ತೇ ಹೈದರನಿಗೆ ಕೊಡಬೇಕೆಂದೂ ಅಭಿಪ್ರಾಯಪಟ್ಟರು. ಆದರೆ ಆಗ ಗವರ್ನರ್ ಜನರಲ್‌ರವರಾಗಿದ್ದ ಲಾರ್ಡ್ ಮಾರ್ನಿಂಗ್‌ಟನ್‌ರವರು ಅದನ್ನು ಒಪ್ಪದೆ ಟೀಪುವಿನ ವಂಶಜರಿಗೆ ರಾಜ್ಯವನ್ನು ಕೊಟ್ಟರೆ ಮುಂದೆ ಇಂಗ್ಲಿಷರಿಗೆ ಅಪಾಯ ಸಂಭವಿಸಬಹುದೆಂದು ಯೋಚಿಸಿ ಮೈಸೂರು ದೇಶದ ಆರ್ಷೇಯ ರಾಜವಂಶಕ್ಕೆ ಸೇರಿದವರಾದ ಮುಮ್ಮಡಿ ಶ್ರೀ ಕೃಷ್ಣರಾಜಒಡೆಯರಿಗೆ ರಾಜ್ಯವನ್ನು ಕೊಟ್ಟು, ಮೈಸೂರು ಸಂಸ್ಥಾನವನ್ನು ಪುನಃ ಸ್ಥಾಪಿಸಬೇಕೆಂದು ತೀರ್ಮಾನಿಸಿದರು. ಟೀಪುವಿನ ಕುಟುಂಬದವರಿಗೆ ವರ್ಷಕ್ಕೆ ೨,೪೦,೦೦೦ ವರಹಗಳನ್ನು ಜೀವನಾಂಶರೂಪವಾಗಿ ಕೊಡುವಂತೆಯೂ ಏರ್ಪಾಟು ಮಾಡಿದರು.

ತರುವಾಯ ಜನರಲ್ ಹ್ಯಾರಿಸ್‌ರವರೂ ಮತ್ತು ಕರ್ನಲ್ ವೆಲ್ಲೆಸ್ಲಿಯವರೂ ಲಕ್ಷ್ಮಮ್ಮಣ್ಣಿಯವರ ಮತ್ತು ರಾಜಕುಮಾರರ ಸಂದರ್ಶನಕ್ಕಾಗಿ ಅರಮನೆಗೆ ಬಂದರು. ರಾಜಕುಮಾರರ ಸೋದರಮಾವನಾದ ನಂದಿರಾಜಯ್ಯನೂ ಮತ್ತು ಹಿಂದೆ ಹೈದರ್‌ಆಲಿಯ ಕೈಕೆಳಗೂ, ಅನಂತರ ಟೀಪೂ ಸುಲ್ತಾನನ ದೌಲತ್ತಿನಲ್ಲಿಯೂ ಅಧಿಕಾರಿಯಾಗಿದ್ದ ಪೂರ್ಣಯ್ಯನವರೂ ಇಂಗ್ಲಿಷ್ ಸರದಾರರುಗಳನ್ನು ಅರಮನೆಯಲ್ಲಿ ಗೌರವಪೂರ್ವಕವಾಗಿ ಬರಮಾಡಿಕೊಂಡರು. ಆಗ ಐದು ವರ್ಷ ವಯಸ್ಸಿನವರಾಗಿದ್ದ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರು ಅರಮನೆಯಲ್ಲಿ ರಾಜಯೋಗ್ಯವಾದ ಪೀಠದಲ್ಲಿ ಮಂಡಿಸಿದ್ದರು. ಲಕ್ಷ್ಮಮ್ಮಣ್ಣಿಯವರು ತೆರೆಮರೆಯಲ್ಲಿ ಅರಮನೆಯ ಇತರ ಸ್ತ್ರೀಯರೊಂದಿಗೆ ಕುಳಿತಿದ್ದರು. ರಾಜಪೀಠದಲ್ಲಿ ಕುಳಿತಿದ್ದ ಕುಮಾರರು ತೇಜಃಪುಂಜರಾಗಿ ತೋರುತ್ತಿದ್ದರು. ಅವರ ಮುಖದಲ್ಲಿ ರಾಜಠೀವಿಯೂ, ಗಾಂಭೀರ್ಯವೂ ಕಾಣುತ್ತಿದ್ದುವು. ಪ್ರಸನ್ನವದನರಾಗಿ ಕುಳಿತಿದ್ದ ಅವರು ಇಂಗ್ಲಿಷ್ ಸರದಾರರು ಬಂದೊಡನೆಯೇ ದಿಗ್ಭ್ರಮೆಗೊಂಡರು ; ಅವರ ಮುಖವು ನಸುಗೆಂಪೇರಿ ಸ್ವಲ್ಪ ಭಯಚಕಿತರಾದಂತೆ ಕಂಡರು. ಆದರೂ ಮರುಕ್ಷಣದಲ್ಲಿಯೇ ದಿಟ್ಟತನದಿಂದ ಮಂದಹಾಸಯುಕ್ತರಾಗಿ ಸರದಾರರನ್ನು ಕುತೂಹಲದೃಷ್ಟಿಯಿಂದ ಈಕ್ಷಿಸುತ್ತಿದ್ದರು. ಆ ಸರದಾರರು ತಮ್ಮ ಪದ್ಧತಿಯ ಮೇರೆಗೆ ಪುಟ್ಟ ಮಹಾರಾಜರಿಗೆ ಅಭಿವಂದಿಸಿ ತಮಗಾಗಿ ಸಿದ್ಧಪಡಿಸಿದ್ದ ಉಚಿತಾಸನಗಳಲ್ಲಿ ಕುಳಿತುಕೊಂಡರು.

ಜನರಲ್ ಹ್ಯಾರಿಸ್‌ರವರು ತೆರೆಯಹಿಂದೆ ಕುಳಿತಿದ್ದ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರನ್ನು ಕುರಿತು "ನಿಮ್ಮ ವಂಶದವರು ಬಹಳ ಹಿಂದಿನಿಂದಲೂ ದೊರೆತನವನ್ನು ಮಾಡಿದವರು, ನಿಮಗೆ ಒದಗಿದ್ದ ಕಷ್ಟಪರಂಪರೆಗಳನ್ನೆಲ್ಲಾ ಕಂಪೆನಿ ಸರ್ಕಾರದವರು ತಿಳಿದುಕೊಂಡಿರುತ್ತಾರೆ, ಇನ್ನು ನೀವು ಚಿಂತಿಸಬೇಕಾಗಿಲ್ಲ, ದೇವರ ದಯೆಯಿಂದ ನಿಮ್ಮ ಮನೋರಥವು ಈಡೇರುವುದು, ನಿಮ್ಮ ವಂಶದ ಈ ಕುಮಾರರು ಪ್ರಭುವಾಗಿ ರಾಜ್ಯಪರಿಪಾಲನೆ ಮಾಡುವ ಸುಯೋಗವು ಲಭಿಸುವುದು" ಎಂದು ಉರ್ದುಭಾಷೆಯಲ್ಲಿ ತಿಳಿಸಿದರು. ಆಗ ಲಕ್ಷ್ಮಮ್ಮಣ್ಣಿಯವರು "ನಮ್ಮನ್ನೂ ನಮ್ಮ ವಂಶದವರನ್ನೂ ದುಃಖಕೂಪದಿಂದ ಉದ್ಧರಿಸಿ ಪುನಃ ರಾಜ್ಯದಲ್ಲಿ ನೆಲೆಗೊಳಿಸಿದುದಕ್ಕಾಗಿ ನಾವು

ಕಂಪೆನಿ ಸರ್ಕಾರದವರಿಗೆ ಯಾವಜ್ಜೀವವೂ ಕೃತಜ್ಞರಾಗಿರುವೆವು,” ಎಂಬು
ದಾಗಿ ಅರಮನೆಯ ಸ್ತ್ರೀಯರ ಮೂಲಕ ಆ ಸರದಾರರಿಗೆ ಉರ್ದುಭಾಷೆಯಲ್ಲಿ
ಶ್ರುತಪಡಿಸಿದರು. ಅನಂತರ ಅವರಿಗೆ ಉಚಿತವಾದ ಮರ್ಯಾದೆಗಳನ್ನು
ಮಾಡಿ ಬೀಳ್ಕೊಟ್ಟರು.

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕ ಮಹೋತ್ಸವ
ವನ್ನು ನೆರವೇರಿಸುವ ವಿಚಾರದಲ್ಲಿ ಜನರಲ್ ಹ್ಯಾರಿಸ್‌ರವರು ಪೂರ್ಣಯ್ಯ
ನವರ ಸಂಗಡ ಆಲೋಚಿಸಿದರು. ರಾಜ್ಯಾಭಿಷೇಕವನ್ನು ಶ್ರೀರಂಗಪಟ್ಟಣ
ದಲ್ಲಿಯೇ ನಡೆಯಿಸಬಹುದೆಂದು ಮೊದಲು ನಿರ್ಧರಿಸಿದರು. ಆದರೆ ಟೀಪ್ಪೂ
ಸುಲ್ತಾನನ ಜನಾನಾ ಸ್ತ್ರೀಯರೂ, ಅವನ ಮಕ್ಕಳೂ ಇನ್ನೂ ಶ್ರೀರಂಗಪಟ್ಟಣ
ದಲ್ಲಿಯೇ ಇದ್ದುದರಿಂದ ಅಲ್ಲಿ ರಾಜ್ಯಾಭಿಷೇಕವನ್ನು ನಡೆಯಿಸುವುದರಿಂದ
ಅವರ ದುಃಖವು ದ್ವಿಗುಣಿಸುವುದೆಂದು ಭಾವಿಸಿ ಆ ಸ್ಥಳವನ್ನು ಒಪ್ಪಲಿಲ್ಲ
ಬೆಂಗಳೂರು ಬಹಳ ದೂರವಾದುದರಿಂದಲೂ, ಆಗ ಅಲ್ಲಿ ತಕ್ಕ ಅನುಕೂಲ
ಗಳಿರಲಿಲ್ಲವಾದುದರಿಂದಲೂ ಪಟ್ಟಾಭಿಷೇಕವನ್ನು ನಡೆಯಿಸಲು ಅದೂ ತಕ್ಕ
ಸ್ಥಳವಲ್ಲವೆಂದು ಯೋಚಿಸಿದರು. ಕಡೆಗೆ ಮೈಸೂರಿನಲ್ಲೇ ಪಟ್ಟಾಭಿಷೇಕ
ನಡೆಯಬೇಕೆಂದು ನಿರ್ಧರಿಸಿದರು. ಮೈಸೂರು ಶ್ರೀರಂಗಪಟ್ಟಣಕ್ಕೆ ಸಮೀಪ
ವಾಗಿರುವುದೆಂಬ ಅಂಶವನ್ನು ಪರಿಗಣಿಸಿದರಾದರೂ ಆಗ ಮೈಸೂರಿನಲ್ಲಿ
ಅಚ್ಚುಕಟ್ಟಾದ ಯಾವುದೊಂದು ಮನೆಯೂ ಇರಲಿಲ್ಲ. ಹೊಸದಾಗಿ
ಕಟ್ಟಿಸಿದ್ದ ನಜರಬಾದ್ ಕೋಟೆಯಲ್ಲಿಯೂ ಅಂಥ ಉತ್ತಮವಾದ ಮನೆಗಳಿರ
ಲಿಲ್ಲ. ಇದಲ್ಲದೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿತ್ತು. ನಜರಬಾದ್
ಕೋಟೆಯಿಂದ ಅರ್ಧ ಮೈಲಿಯ ದೂರದಲ್ಲಿ ನೀರು ದೊರೆಯುತ್ತಿತ್ತು. ಏನೇ
ಆಗಲಿ ಮೈಸೂರಿನಲ್ಲಿಯೇ ರಾಜ್ಯಾಭಿಷೇಕವನ್ನು ನಡೆಯಿಸಬೇಕೆಂಬುದಾಗಿ
ಜನರಲ್ ಹ್ಯಾರಿಸ್‌ರವರು ಪೂರ್ಣಯ್ಯನವರಿಗೆ ತಿಳಿಸಿದರು.

ಪಟ್ಟಾಭಿಷೇಕವು ೧೭೯೯ನೆಯ ಇಸವಿ ಜೂನ್ ೩೦ನೆಯ ತಾರೀಖಿನದಿನ
ನಡೆಯತಕ್ಕದೆಂದು ಗೊತ್ತಾಯಿತು. ರಾಜಕುಮಾರರೂ, ಬಂಧುವರ್ಗ
ದವರೂ ಮುಂಚಿತವಾಗಿಯೇ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬಂದು
ಸೇರಿದರು ; ನಜರಬಾದ್ ಅರಮನೆಯಲ್ಲಿ ಬಿಡಾರ ಮಾಡಿದರು. ಪೂರ್ಣಯ್ಯ
ನವರು ಸರದಾರರ ಇಷ್ಟದಂತೆ ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನದ

ಮುಂಗಡೆಯಲ್ಲಿ ಅಭಿಷೇಕ ಮಂಟಪವನ್ನು ಕಟ್ಟಿಸಿ, ರಾಜವೈಭವೋಚಿತವಾಗಿ ಅಲಂಕಾರ ಮಾಡಿಸಿದರು. ಪಟ್ಟಾಭಿಷೇಕಕ್ಕೆ ಬೇಕಾದ ಸಕಲ ಸಾಮಗ್ರಿಗಳನ್ನೂ ಸಜ್ಜುಗೊಳಿಸಿ, ಅತಿಥಿಗಳಿಗೂ, ಆಗಂತುಕರಿಗೂ, ಪ್ರೇಕ್ಷಕರಿಗೂ ಉಚಿತಾಸನಗಳನ್ನು ಸಿದ್ಧಪಡಿಸಿದರು.

ಪಟ್ಟಾಭಿಷೇಕದ ಹಿಂದಿನದಿನ, ಅರಮನೆಯಲ್ಲಿ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ರಾಜಕುಮಾರರಿಗೆ ಮಂಗಳಸ್ನಾನವನ್ನು ಮಾಡಿಸಿ, ಅರಮನೆಯ ಸಂಪ್ರದಾಯಕ್ಕನುಸಾರವಾಗಿ ಶ್ರೀಚಾಮುಂಡೇಶ್ವರೀದೇವಿಗೂ ಮತ್ತು ಶ್ರೀಕಂಠೇಶ್ವರಸ್ವಾಮಿಗೂ ಕಾಣಿಕೆ ಕಪ್ಪಗಳನ್ನು ಕಟ್ಟಿಸಿ, ಅಂತಃಪುರದಲ್ಲಿ ನಡೆಯತಕ್ಕ ರಾಜೋಪಚಾರ ಸೇವೆಗಳನ್ನು ಮಾಡಿಸಿದರು. ಪಟ್ಟಾಭಿಷೇಕದ ದಿನ ರಾಜಕುಮಾರರನ್ನು ಆನೆಯಮೇಲೆ ಚಿನ್ನದ ಅಂಬಾರಿಯಲ್ಲಿ ಕುಳ್ಳಿರಿಸಿಕೊಂಡು ಪಟ್ಟದ ಕತ್ತಿಯನ್ನೂ, ಶಿಖಾಸರವನ್ನೂ ಪಲ್ಲಕ್ಕಿಯಲ್ಲಿರಿಸಿಕೊಂಡು, ಮಂಗಳವಾದ್ಯಗಳು ಮೊರೆಯುತ್ತಿರಲು ಅತ್ಯಂತ ವೈಭವದೊಡನೆ ನಜರಬಾದ್ ಅರಮನೆಯಿಂದ ಹೊರಟು ಪಟ್ಟಾಭಿಷೇಕದ ಮಂಟಪಕ್ಕೆ ಬಂದರು. ಅಲ್ಲಿ ರಾಜಕುಮಾರರನ್ನು ಪೂರ್ಣಯ್ಯನವರು ಅಂಬಾರಿಯಿಂದ ಇಳಿಸಿಕೊಂಡು ಭದ್ರಾಸನದಲ್ಲಿ ಕುಳ್ಳಿರಿಸಿದರು. ಮಂಗಳವಾದ್ಯಗಳು ಮೊಳಗುತ್ತಿದ್ದುವು. ಆಗ ಜನರಲ್ ಹ್ಯಾರಿಸ್‌ರವರೂ, ಹೈದರಾಬಾದಿನ ಮೀರ್ ಆಲಂರವರೂ ಮರ್ಯಾದೆಯಿಂದ ಪ್ರಭುಗಳಿಗೆ ವಂದಿಸಿ, ಇಬ್ಬರೂ ಮಹಾರಾಜರ ಕೈಹಿಡಿದು, ಸುಮುಹೂರ್ತದಲ್ಲಿ ಸಿಂಹಾಸನದಮೇಲೆ ಕುಳ್ಳಿರಿಸಿದರು. ಪುರೋಹಿತರೂ, ವೇದವಿದರಾದ ಬ್ರಾಹ್ಮಣರೂ, ಯಥಾಶಾಸ್ತ್ರವಾಗಿ ಪಟ್ಟಾಭಿಷೇಕ ಮಹೋತ್ಸವವನ್ನು ನಡೆಯಿಸಿದರು. ಮಹಾರಾಜರ ಗೌರವ ಸೂಚನಾರ್ಥವಾಗಿ ಫಿರಂಗಿಗಳು ಕೋಟೆಯ ಬತ್ತೇರಿಯಿಂದ ಹಾರಿದುವು. ನೆರೆದಿದ್ದ ಪ್ರೇಕ್ಷಕರೆಲ್ಲರೂ ಲಾಜಪುಷ್ಪಗಳನ್ನು ಸಮರ್ಪಿಸಿದರು. ಉತ್ತಮ ಲಕ್ಷಣಗಳಿಂದ ಕೂಡಿದ ಒಂದು ಆನೆಗೂ ಮತ್ತು ಒಂದು ಕುದುರೆಗೂ ಅದೇ ಶುಭಲಗ್ನದಲ್ಲಿ ಪಟ್ಟಾಭಿಷೇಕ ಮಾಡಿ, ಆನೆಗೆ ಹಂಸರಾಜನೆಂಬುದಾಗಿಯೂ, ಕುದುರೆಗೆ ಜಯರಾಮನೆಂಬುದಾಗಿಯೂ ಹೆಸರಿಟ್ಟರು. ಜನರಲ್ ಹ್ಯಾರಿಸ್‌ರವರು ಪ್ರಭುಗಳಿಗೆ ರತ್ನಾಭಿಷೇಕವನ್ನು ಮಾಡಿ ವಂಶಪಾರಂಪರ್ಯವಾಗಿ ಬಂದಿದ್ದ ಶಿಖಾಸರವನ್ನೂ, ಪಟ್ಟದ ಕತ್ತಿಯನ್ನೂ ಒಪ್ಪಿಸಿ "ಮುಮ್ಮಡಿ ಶ್ರೀ ಕೃಷ್ಣ

ರಾಜೇಂದ್ರ ಒಡೆಯರು" ಎಂಬುದಾಗಿ ಪಟ್ಟಾಭಿಷೇಕ ಸಮಯದಲ್ಲಿ ನೂತನ ನಾಮಧೇಯವನ್ನು ಮಾಡಿದರು. ಎಲ್ಲರೂ ತಮ್ಮ ತಮ್ಮ ಗೌರವಕ್ಕನುಗುಣವಾಗಿ ನಜರು ಮುಜರೆಗಳನ್ನು ಒಪ್ಪಿಸಿದರು.

ಪಟ್ಟಾಭಿಷೇಕ ಮಹೋತ್ಸವವು ಪರಿಸಮಾಪ್ತಿಯಾಗುವುದಕ್ಕೆ ಮೊದಲು, ಜನರಲ್ ಹ್ಯಾರಿಸ್‌ರವರು ಸಭೆಯಲ್ಲಿ ಪೂರ್ಣಯ್ಯನವರನ್ನು ಕುರಿತು "ನಾವು ಈಗ ಮೈಸೂರು ಸಂಸ್ಥಾನದ ಪ್ರಭುಗಳ ಸನ್ನಿಧಿಯಲ್ಲಿ ನಿಮಗೆ ಮಂತ್ರಿ ಪದವಿಯನ್ನು ಕೊಡಿಸಬೇಕೆಂದು ಇಚ್ಛಿಸಿದ್ದೇವೆ. ನೀವು ಇಂದಿನಿಂದ ಸಮಸ್ತ ರಾಜಕಾರ್ಯಗಳಲ್ಲಿಯೂ, ಜಾಗರೂಕರಾಗಿ ವರ್ತಿಸುತ್ತಾ ಪ್ರಭುಗಳ ಹಿತವನ್ನೇ ಕೋರುತ್ತಿರಬೇಕು. ಪ್ರಭುಗಳು ಪ್ರಾಪ್ತವಯಸ್ಕರಾಗಿ ರಾಜ್ಯಭಾರವನ್ನು ವಹಿಸಿಕೊಳ್ಳುವವರೆಗೂ, ನೀವು ಈ ಸಂಸ್ಥಾನದ ಮರ್ಯಾದೆಗೆ ಕುಂದಕ ಬಾರದಂತೆ ಎಲ್ಲ ಕಾರ್ಯಗಳನ್ನೂ ನಡೆಯಿಸಿಕೊಂಡುಬರಬೇಕು. ಒಡೆಯರು ಪ್ರಬುದ್ಧರಾದಮೇಲೆ, ಅವರ ಆಜ್ಞಾನುಸಾರವಾಗಿ ನಡೆದುಕೊಳ್ಳುತ್ತಿರಬೇಕು. ನೀವು ಅನ್ಯಥಾ ವರ್ತಿಸಿದರೆ ಸ್ವಾಮಿದ್ರೋಹಮಾಡಿದ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಈ ದಿನದಿಂದ ನೀವು ಮೈಸೂರು ಸಂಸ್ಥಾನದ ದಿವಾನರವರಾಗಿರುತ್ತೀರಿ" ಎಂದು ಉದ್ಘೋಷಿಸಿ, ಪೂರ್ಣಯ್ಯನವರಿಗೆ ಮಂತ್ರಿಪದವಿಯ ಸನ್ನದನ್ನು ಮಹಾರಾಜರ ಕೈಯಿಂದ ಕೊಡಿಸಿದರು. ಹೀಗೆಯೇ, ಇತರ ಮುಖ್ಯ ಮುಖ್ಯ ಅಧಿಕಾರಸ್ಥಾನಗಳಿಗೆ ಯೋಗ್ಯರಾದ ಮತ್ತು ಸಮರ್ಥರಾದ ಜನರನ್ನು ನೇಮಕಮಾಡಿದರು. ಲೆಫ್ಟಿನೆಂಟ್ ಕರ್ನಲ್ ಕ್ಲೋಸ್ ಎಂಬುವರು ಆಗ ಮೈಸೂರು ಸಂಸ್ಥಾನದ ರೆಸಿಡೆಂಟರಾದರು. ಪಟ್ಟಾಭಿಷೇಕಮಹೋತ್ಸವವು ಸಾಂಗವಾಗಿ ನಡೆದಮೇಲೆ, ಮಹಾರಾಜರು ಅಶ್ವಾರೂಢರಾಗಿ ಸಕಲಸೇನಾ ಪರಿವಾರದೊಡನೆ ಅರಮನೆಗೆ ಅಟ್ಟಹಾಸದಿಂದ ತೆರಳಿದರು. ಲಕ್ಷ್ಮಮ್ಮಣ್ಣಿಯವರ ಆನಂದಕ್ಕೆ ಪಾರವೇ ಇರಲಿಲ್ಲ!

ಕಂಪೆನಿ ಸರ್ಕಾರದವರು ಮಾಡಿದ ಮಹೋಪಕಾರಕ್ಕಾಗಿ, ಲಕ್ಷ್ಮಮ್ಮಣ್ಣಿಯವರು ತಮ್ಮ ಕೃತಜ್ಞತೆಯನ್ನು ಸೂಚಿಸಿ, ಮದ್ರಾಸ್ ಸರ್ಕಾರದವರಿಗೆ ಒಂದು ಕಾಗದವನ್ನು ಬರೆದು ಕಳುಹಿಸಿದರು. "ನಿಮ್ಮ ಸರ್ಕಾರದವರು ಮಾಡಿರುವ ಉಪಕಾರವನ್ನು ನಾವು ಎಂದೆಂದಿಗೂ ಮರೆಯಲಾರೆವು. ನಮ್ಮವಂಶಜ

ರಾದ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರಿಗೆ ಮೈಸೂರು ಸಂಸ್ಥಾನವನ್ನು ಒಪ್ಪಿಸಿ, ಪೂರ್ಣಯ್ಯನವರನ್ನು ದಿವಾನ್ ಪದವಿಗೆ ನೇಮಕಮಾಡಿರುವುದರಿಂದ ನಾವು ಸೂರ್ಯಚಂದ್ರರಿರುವವರೆಗೂ ನಿಮ್ಮ ಸರ್ಕಾರಕ್ಕೆ ಎರಡೆಣಿಸದೆ, ಸದಾ ನಿಮ್ಮ ಉಪಕಾರವನ್ನು ಸ್ಮರಿಸುವೆವು. ನಾವು ಯಾವಾಗಲೂ ನಿಮ್ಮ ರಕ್ಷಣೆಯಲ್ಲಿದ್ದುಕೊಂಡು ನಿಮ್ಮ ಸಲಹೆಯ ಮೇರೆಗೆ ನಡೆಯುತ್ತೇವೆ. ನೀವು ನಮ್ಮ ಸಂತಾನವನ್ನು ರಾಜ್ಯದಲ್ಲಿ ನೆಲೆಗೊಳಿಸಿ, ನಮ್ಮ ಶ್ರೇಯೋಭಿವೃದ್ಧಿಗೆ ನೆರವಾಗಿರುವುದನ್ನು ವಂಶಪಾರಂಪರ್ಯವಾಗಿ ಮರೆಯಲಾರೆವು. ಯಾರ ಸಹಾಯ ಬಲದಿಂದ ನಾವು ಇಂದು ನೆಟ್ಟಗೆ ನಿಂತೆವೋ ಅಂಥ ಸರ್ಕಾರದವರ ಉಪಕಾರವನ್ನು ನಮ್ಮ ವಂಶದ ಭಾವೀಸಂತಾನವು ಮರೆಯಲಾರದು" ಎಂದು ಲಕ್ಷ್ಮಮ್ಮಣ್ಣಿಯವರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ಪಟ್ಟಾಭಿಷೇಕಮಹೋತ್ಸವವು ನಡೆದ ಕೆಲವು ದಿನಗಳ ತರುವಾಯ, ಕಂಪೆನಿ ಸರ್ಕಾರದವರಿಗೂ ಮತ್ತು ಮಹಾರಾಜರಾದ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರಿಗೂ 'ಸಬ್‌ಸಿಡಿಯರಿ' ಒಪ್ಪಂದವೆಂಬ ಒಂದು * ತಹನಾಮೆಯು ನಡೆಯಿತು. ಅದಕ್ಕೆ ಶ್ರೀರಂಗಪಟ್ಟಣದ ತಹನಾಮೆ ಎಂದು ಹೆಸರು. ಮಹಾರಾಜರು ಆಗ ಇನ್ನೂ ಚಿಕ್ಕ ವಯಸ್ಸಿನವರಾಗಿದ್ದುದರಿಂದ ಅವರ ಪರವಾಗಿ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯರೂ ಮತ್ತು ದಿವಾನ್ ಪೂರ್ಣಯ್ಯನವರೂ ಆ ತಹನಾಮೆಗೆ ರುಜು ಹಾಕಿದರು. ಸುಮಾರು ೪೦ ವರ್ಷಗಳ ಕಾಲ ತಮ್ಮ ವಂಶದವರ ಕೈ ಬಿಟ್ಟುಹೋಗಿದ್ದ ರಾಜ್ಯವು ಪುನಃ ಲಭಿಸಿದುದಕ್ಕಾಗಿ ಲಕ್ಷ್ಮಮ್ಮಣ್ಣಿಯವರು ಅತ್ಯಾನಂದಪಟ್ಟರು.

ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರಿಗೆ ಆಗ ವಹಿಸಿಕೊಟ್ಟ ಮೈಸೂರು ಸಂಸ್ಥಾನದಿಂದ ಪ್ರತಿ ವರ್ಷವೂ ಸುಮಾರು ೨೫ ಲಕ್ಷ ವರಹಗಳಷ್ಟು ಉತ್ಪತ್ತಿಯು ಬರುತ್ತಿತ್ತು. ನಿಜಾಮನ ಮತ್ತು ಮರಾಟೆಯವರ ರಾಜ್ಯಗಳಿಗೆ ತೆಂಕಲು ಭಾಗದಲ್ಲಿರುವ ಬಲವಾದ ಗಿರಿದುರ್ಗಗಳ ಪಙ್ಕ್ತಿಯೇ ಮೈಸೂರು ಸಂಸ್ಥಾನದ ಬಡಗಲ ಮೇರೆಯಾಗಿ, ಪೂರ್ವ ದಿಕ್ಕಿಗೆ ಪುಂಗನೂರಿನಿಂದ ಹಿಡಿದು ಪಡುವಲಕಡೆಗೆ ಬಿದನೂರುವರೆಗೂ ವ್ಯಾಪಿಸಿ, ಉಳಿದ ಕಡೆಗಳಲ್ಲಿ

* ದಯೆಯಿಟ್ಟು ಅನುಬಂಧವನ್ನು ನೋಡಿ.

ಕಂಪೆನಿ ರಾಜ್ಯಗಳೇ ಎಲ್ಲೆಯಾಗಿದ್ದ ನಾಡು ಮಹಾರಾಜರ ಪಾಲಿಗೆ ಬಂದಿತು. ಮೈಸೂರು ದೇಶದ ರಕ್ಷಣೆಗಾಗಿ ಕಂಪೆನಿ ಸರ್ಕಾರದವರು ಶ್ರೀರಂಗಪಟ್ಟಣದಲ್ಲಿ ತಮ್ಮ ಫೌಜನ್ನು ಇರಿಸಿದ್ದರು. ಆಗ ಗವರ್ನರ್ ಜನರಲ್‌ರವರಾಗಿದ್ದ ಲಾರ್ಡ್ ವೆಲ್ಲೆಸ್ಲಿಯವರ ತಮ್ಮಂದಿರಾದ ಕರ್ನಲ್ ಆರ್ಥರ್ ವೆಲ್ಲೆಸ್ಲಿಯವರು ಸೇನಾನಾಯಕರಾಗಿದ್ದರು. ಮುಂದೆ, ಎರಡು ಮೂರು ವರ್ಷಗಳ ತರುವಾಯ ಮಾಯಕೊಂಡ, ಹರಿಹರ ಮತ್ತು ಹೊಳಲುಕೆರೆ ಪ್ರಾಂತಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿ, ಮೈಸೂರಿಗೆ ಸೇರಿದ್ದ ಬೂದಿಕೋಟೆ ಮತ್ತು ಇತರ ಕೆಲವು ಪ್ರಾಂತಗಳನ್ನು ಕಂಪೆನಿ ರಾಜ್ಯಕ್ಕೆ ಸೇರಿಸಿಕೊಂಡರು.

ಶ್ರೀರಂಗಪಟ್ಟಣ ಪತನಾನಂತರ ಮರುವರ್ಷವೇ, ಮೈಸೂರು ಸಂಸ್ಥಾನದಲ್ಲಿಯೂ, ಕಂಪೆನಿ ರಾಜ್ಯಗಳಲ್ಲಿಯೂ ಸಂಚರಿಸಿ, ದೇಶದ ಮತ್ತು ಪ್ರಜೆಗಳ ಪರಿಸ್ಥಿತಿಯನ್ನು ಕುರಿತು ಕಲ್ಕತ್ತಾ ಸರ್ಕಾರದವರಿಗೆ ವರದಿ ಮಾಡುವುದಕ್ಕಾಗಿ ಡಾಕ್ಟರ್ ಫ್ರಾನ್ಸಿಸ್ ಬುಕರ್ನ ಎಂಬುವನನ್ನು ಗವರ್ನರ್ ಜನರಲ್‌ರವರು ನೇಮಿಸಿದರು. ಆತನು ಕಂಪೆನಿ ಸರ್ಕಾರದಲ್ಲಿ ಒಬ್ಬ ಸರ್ಜನ್ ಆಗಿದ್ದನು. ವಿಚಾರಗಳನ್ನು ಕೂಲಂಕಷವಾಗಿ ಪರಿಗ್ರಹಿಸುವುದರಲ್ಲಿ ಆತನಿಗೆ ತೀವ್ರವಾದ ಬುದ್ಧಿಶಕ್ತಿಯಿತ್ತು ಮತ್ತು ವಿಷಯ ಸಂಗ್ರಹಣಕ್ಕೆ ಬೇಕಾದ ತಿಳಿವಳಿಕೆಯೂ ಆತನಲ್ಲಿತ್ತು. ಆ ಕಾಲದಲ್ಲಿದ್ದ ಮೈಸೂರು ಸಂಸ್ಥಾನದ ಪರಿಸ್ಥಿತಿ, ಜನಸಂಖ್ಯೆ, ವ್ಯವಸಾಯ, ಕೈಗಾರಿಕೆ ಮತ್ತು ಜನಜೀವನ ಮುಂತಾದ ಸಂಗತಿಗಳು ಆತನು ಬರೆದಿರುವ ವರದಿಯಿಂದ ಬಹಳ ಚೆನ್ನಾಗಿ ಗೊತ್ತಾಗುತ್ತವೆ. ಆ ಪ್ರವಾಸಿಯು ಮೈಸೂರು ಸಂಸ್ಥಾನದಲ್ಲಿ ಸಂಚರಿಸುತ್ತಾ, ಮೈಸೂರು ನಗರಕ್ಕೆ ಬಂದು, ಮಹಾರಾಜರನ್ನು ಸಂದರ್ಶಿಸಿದನು. ಆಗ ಮೈಸೂರು ಕೋಟೆಯ ಒಳ ಆವರಣದಲ್ಲಿ ಅರಮನೆಯನ್ನು ಪುನಃ ಕಟ್ಟಿಸುತ್ತಿದ್ದರು. “ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರಿಗೆ ಆರು ಅಥವಾ ಏಳು ವರ್ಷ ವಯಸ್ಸಿರಬಹುದು. ಅವರು ಸಂಪೂರ್ಣವಾಗಿ ಆರೋಗ್ಯದಿಂದಿದ್ದರು. ಆ ಚಿಕ್ಕ ಮಹಾರಾಜರು ಬಹಳ ನಯವಾಗಿಯೂ ಸ್ಪಷ್ಟವಾಗಿಯೂ ಮಾತನಾಡುತ್ತಿದ್ದರು. ಅವರು ಗಂಭೀರಭಾವದಿಂದಲೂ, ಕಸನು ಬಗೆಯಿಂದಲೂ ಒಪ್ಪುತ್ತಿದ್ದರು” ಎಂದು ಬುಕರ್ನ ಬರೆದಿಟ್ಟಿದ್ದಾನೆ.

ಮಹಾರಾಜರಿಗೆ ಐದು ವರ್ಷ ವಯಸ್ಸಾದಮೇಲೆ, ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಶುಭದಿನದಲ್ಲಿ ಓನಾಮ ಪೂಜೆಯನ್ನು ನೆರವೇರಿಸಿ ಅವರಿಗೆ ಅಕ್ಷರಾಭ್ಯಾಸವನ್ನು ಪ್ರಾರಂಭಿಸಿದರು. ಯೋಗ್ಯರೂ, ದಕ್ಷರೂ, ನೀತಿವಂತರೂ ಮತ್ತು ಉತ್ತಮ ವಂಶೀಯರೂ ಆದ ಉಪಾಧ್ಯಾಯರನ್ನು ನೇಮಿಸಿ ಮಹಾರಾಜರಿಗೆ ಪಾಠಪ್ರವಚನಗಳು ಸರಿಯಾಗಿ ನಡೆಯುವಂತೆ ಏರ್ಪಾಟುಮಾಡಿದರು. ಮಹಾರಾಜರನ್ನು ಸುಶಿಕ್ಷಿತರನ್ನಾಗಿ ಮಾಡಲು ತಕ್ಕ ಪ್ರಯತ್ನಗಳನ್ನು ಪೂರ್ಣಯ್ಯನವರು ಬಹಳ ಎಚ್ಚರಿಕೆಯಿಂದ ಮಾಡುತ್ತಿದ್ದರು. ರಾಜಕುಮಾರರು ದಿನದಿನಕ್ಕೆ ಪ್ರವರ್ಧಮಾನರಾಗುತ್ತಾ, ಹೇಳಿ ಕೊಟ್ಟ ಪಾಠಗಳನ್ನೆಲ್ಲಾ ಬಹು ಜಾಣ್ಮೆಯಿಂದ ಗ್ರಹಿಸುತ್ತಾ ತಮ್ಮ ಪ್ರತಿಭೆಯನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ವ್ಯಕ್ತಪಡಿಸುತ್ತಿದ್ದರು. ಅವರ ಅಸಾಧಾರಣವಾದ ಪ್ರಜ್ಞೆ, ಅನುಪಮವಾದ ಬುದ್ಧಿಶಕ್ತಿ, ಅಸದೃಶವಾದ ಶ್ರದ್ಧಾಸಕ್ತಿ—ಮುಂತಾದ ಗುಣಗಳನ್ನು ನೋಡಿ ಉಪಾಧ್ಯಾಯರು ವಿಸ್ಮಯಪಡುತ್ತಿದ್ದರು; ಮಹಾಮಾತೃಶ್ರೀಯವರು ಹರ್ಷಿಸುತ್ತಿದ್ದರು. ಲಕ್ಷ್ಮಮ್ಮಣ್ಣಿಯವರು ಆಗಾಗ ಪುಟ್ಟ ಮಹಾರಾಜರಿಂದ ರಾಮಾಯಣ ಕಥೆಯನ್ನಾಗಲಿ ಅಥವಾ ಮಹಾಭಾರತ ಕಥೆಯನ್ನಾಗಲಿ ಹೇಳಿಸಿ, ಕೇಳಿ ಆನಂದಪಡುತ್ತಿದ್ದರು.

ಮಹಾರಾಜರಿಗೆ ಸಂಸ್ಕೃತ ವಿದ್ಯಾಭ್ಯಾಸವೂ ನಡೆಯುತ್ತಿದ್ದಿತು. ಸಂಗೀತ ಮತ್ತು ಸಾಹಿತ್ಯಗಳೆಂದರೆ ಅವರಿಗೆ ಪಂಚಪ್ರಾಣ. ಅದರಂತೆಯೇ, ರಾಜರಿಗೆ ಅತ್ಯಾವಶ್ಯಕವಾದ ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ಧರ್ಮಶಾಸ್ತ್ರ ಮತ್ತು ಪೌರ ನೀತಿಶಾಸ್ತ್ರ–ಇವುಗಳಲ್ಲಿ ಅವರು ನಿಷ್ಣಾತರಾದರು. ಮರಾಟಿ ಮತ್ತು ಉರ್ದು ಭಾಷೆಗಳಲ್ಲಿಯೂ ಪಾಂಡಿತ್ಯವನ್ನು ಗಳಿಸಿದರು. ಅವರಿಗೆ ತಮಿಳು ಭಾಷೆಯೂ ಬಹಳ ಚೆನ್ನಾಗಿ ಬರುತ್ತಿದ್ದಿತೆಂದು ತಿಳಿದು ಬರುತ್ತದೆ. ಅವರು ಜ್ಯೋತಿಷ್ಯ ಮತ್ತು ಗಣಿತ ವಿದ್ಯೆಗಳಲ್ಲಿಯೂ ಯುದ್ಧ ವಿದ್ಯೆಯಲ್ಲಿಯೂ ಅಸಾಧಾರಣವಾದ ಜ್ಞಾನವನ್ನು ಸಂಪಾದಿಸಿದರು. ಗಜಾರೋಹಣ, ಅಶ್ವಾರೋಹಣ, ಮಲ್ಲಯುದ್ಧ, ಕತ್ತಿವರಸೆ–ಮುಂತಾದ ಕ್ಷತ್ರಿಯ ಯೋಗ್ಯವಾದ ವಿದ್ಯೆಗಳಲ್ಲಿಯೂ ಅವರು ಬಹಳ ಗಟ್ಟಿಗರೆನಿಸಿಕೊಂಡರು.

'ಬೆಳೆಯುವ ಪೈರು ಮೊಳಕೆಯಲ್ಲಿಯೇ ಗೊತ್ತಾಗುತ್ತದೆ' ಎಂಬ ಲೋಕೋಕ್ತಿಯಂತೆ ಮಹಾರಾಜರು ಚಿಕ್ಕ ವಯಸ್ಸಿನಿಂದಲೂ ಬಹಳ

ಚಟುವಟಿಕೆಯುಳ್ಳವರಾಗಿದ್ದರು ಅವರು ಇನ್ನೂ ೧೧ ವರ್ಷ ವಯಸ್ಸಿನವರಾಗಿದ್ದಾಗ, ಲಾರ್ಡ್ ವೆರ್ಲೆಷಿಯಾ ಎಂಬ ಶ್ರೀಮಂತರೊಬ್ಬರು ಮೈಸೂರಿಗೆ ಬಂದಿದ್ದರು. ಅವರು ಇಂಗ್ಲೆಂಡಿನಿಂದ ಹೊರಟು ದೇಶಪರ್ಯಟನಕ್ಕಾಗಿ ಬಂದಿದ್ದ ಒಬ್ಬ ಮಾನ್ಯಗೃಹಸ್ಥರು. ಲಾರ್ಡ್ ವೆರ್ಲೆಷಿಯಾರವರು ಮಹಾರಾಜರನ್ನು ಅರಮನೆಯಲ್ಲಿ ಭೇಟಿಮಾಡಿ, ಅವರೊಂದಿಗೆ ನಡೆಯಿಸಿದ ಸಂಭಾಷಣೆಯನ್ನು ಬರೆದಿಟ್ಟಿದ್ದಾರೆ. "ನಾನು ಮಹಾರಾಜರನ್ನು ಕುರಿತು ಮೈಸೂರು ನಗರದ ವಿಷಯವಾಗಿಯೂ, ಮತ್ತು ರಾಜ್ಯಾಡಳಿತ ಕಾರ್ಯಗಳಿಗೆ ಸಂಬಂಧಪಟ್ಟ ಇತರ ಅನೇಕ ಸಂಗತಿಗಳ ವಿಷಯವಾಗಿಯೂ ಕೇಳಿದ ಪ್ರಶ್ನೆಗಳಿಗೆಲ್ಲಾ ಅವರು ಸ್ವಲ್ಪವೂ ತಡವರಿಸದೆ ಸದುತ್ತರಗಳನ್ನು ಹೇಳಿದರು. ಮಹಾರಾಜರು ಹಸನ್ಮುಖಿಗಳಾಗಿದ್ದರು. ಅವರ ಮುಖದಲ್ಲಿ ಗಾಂಭೀರ್ಯವು ತುಂಬಿದ್ದಿತು. ಅವರಿಗೆ ಕುದುರೆ ಸವಾರಿಮಾಡುವುದರಲ್ಲಿಯೂ, ವ್ಯಾಯಾಮ ಮಾಡುವುದರಲ್ಲಿಯೂ ಹೆಚ್ಚು ಆಸಕ್ತಿಯಿದ್ದಿತೆಂದು ಗೊತ್ತಾಯಿತು. ಅವರು ಇಂಗ್ಲಿಷ್ ಭಾಷೆಯನ್ನು ಕಲಿಯಬೇಕಾದುದು ಆವಶ್ಯಕವೆಂದು ನಾನು ಹೇಳಿದೆನು. ಅವರಿಗೆ ನನ್ನ ವಿಶ್ವಾಸದ ಸವಿನೆನಪಾಗಿರುವಂತೆ ಒಂದು ರಣಖಡ್ಗವನ್ನು ಕೊಟ್ಟು ಅದನ್ನು ಪರಿಗ್ರಹಿಸಬೇಕೆಂದು ಕೇಳಿದೆನು. ಅವರು ಅದನ್ನು ಸಂತೋಷದಿಂದ ಸ್ವೀಕರಿಸಿದುದಲ್ಲದೆ ಅದನ್ನು ಯಾವಾಗಲೂ ತಮ್ಮ ಸಮೀಪದಲ್ಲಿಯೇ ಇಟ್ಟುಕೊಂಡಿರುವುದಾಗಿ ತಿಳಿಸಿದರು. ಕ್ಷತ್ರಿಯರಾದ ತಮಗೆ ಅದು ಯೋಗ್ಯವಾದ ಒಂದು ಭೂಷಣವೆಂದು ಹೇಳಿ, ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ನನಗೆ ಅನರ್ಘ್ಯವಾದ ಒಂದು ರತ್ನಹಾರವನ್ನು ಕೊಟ್ಟು ಸತ್ಕರಿಸಿದರು" ಎಂದು ಲಾರ್ಡ್ ವೆರ್ಲೆಷಿಯಾರವರು ಹೇಳಿದ್ದಾರೆ.

ಮಹಾರಾಜರಿಗೆ ಹನ್ನೊಂದನೆಯ ವರ್ಷ ತುಂಬಿತು. ಮಹಾಮಾತೃಶ್ರೀಯವರು ಕುಮಾರರನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚೆಂದು ನೋಡಿಕೊಳ್ಳುತ್ತಾ, ಅವರ ಶ್ರೇಯೋಭಿವೃದ್ಧಿಗಾಗಿ ಸದಾ ದೇವರನ್ನು ಧ್ಯಾನಿಸುತ್ತಿದ್ದರು. ಮಹಾರಾಜರಿಗೂ ದೇವರಲ್ಲಿ ಅತ್ಯಂತ ಭಕ್ತಿಯಿದ್ದಿತು. ಗುರುಹಿರಿಯರಲ್ಲಿ ಪೂಜ್ಯಭಾವವನ್ನಿಟ್ಟಿದ್ದರು! ದೇವರೂ ಸಹ ಮಹಾರಾಜರಿಂದ ಪೂಜೆಯನ್ನು ಕೈಗೊಳ್ಳಲು ತವಕಪಡುತ್ತಿದ್ದನು! ಮಹಾರಾಜರ ಭಕ್ತಿಯೆಂದರೆ ಅಂಥದು! ಅವರಿಗೆ ಪಟ್ಟಾಭಿಷೇಕವಾಗಿ ಆರು ವರ್ಷಗಳು

ಕಳೆದು ಹೋಗಿದ್ದುವು. ಅವರು ನಂಜನಗೂಡು ಶ್ರೀಕಂಠೇಶ್ವರನ ಅನುಗ್ರಹ ದಿಂದ ಜನಿಸಿದವರಾದುದರಿಂದ, ಲಕ್ಷ್ಮಮ್ಮಣ್ಣಿಯವರು ಅವರನ್ನು ಕರೆದು ಕೊಂಡು ದೇವರ ದರ್ಶನಕ್ಕೆ ಹೋಗಿಬರಬೇಕೆಂದು ಆಲೋಚಿಸಿದರು. ದೇವತಾಕಾರ್ಯಗಳಿಗೆ ಬೇಕಾದ ಎಲ್ಲ ಸಿದ್ಧತೆಗಳೂ ಜರುಗಿದವು. ಗೊತ್ತಾದ ಒಂದು ಶುಭ ದಿನದಲ್ಲಿ ಮಹಾರಾಜರು ಆನೆಯಮೇಲೆ ಅಂಬಾರಿಯಲ್ಲಿ ಮಂಡಿಸಿ, ನಂಜನಗೂಡಿಗೆ ಪ್ರಯಾಣ ಬೆಳೆಸಿದರು. ಅವರ ಜೊತೆಯಲ್ಲಿ ಲಕ್ಷ್ಮಮ್ಮಣ್ಣಿಯವರೂ, ಅರಮನೆಯ ಸ್ತ್ರೀಯರೂ ಮತ್ತು ಪೂರ್ಣಯ್ಯನವರೇ ಮುಂತಾದ ಇತರ ಪರಿವಾರದ ಜನರೂ ಇದ್ದರು. ಯಾತ್ರಾರ್ಥಿಗಳಾಗಿ ಹೊರಟ ಪ್ರಭುಗಳೂ ಸಕಲಪರಿವಾರವೂ ನಂಜನಗೂಡಿಗೆ ಸೇರಿದಮೇಲೆ, ಅವರ ಮೆರವಣಿಗೆಯು ರಾಜವೈಭವದಿಂದ ನಂಜನಗೂಡು ಅರಮನೆಯ ಬಾಗಿಲಿಗೆ ಬಂದಿತು. ಇನ್ನೇನು, ದೊರೆಗಳು ಆನೆಯಿಂದ ಇಳಿಯಬೇಕೆನ್ನು ವಷ್ಟರಲ್ಲಿಯೇ, ಆನೆಯು ಇದ್ದಕ್ಕಿದ್ದಹಾಗೆ ರೇಗಿ ಕಪಿಲಾನದಿಯ ಕಡೆಗೆ ಓಡಲಾರಂಭಿಸಿತು. ಮಾವುತನು ಎಷ್ಟೆಷ್ಟು ಸಾಹಸಪಟ್ಟರೂ ಆ ರೇಗಿದ ಆನೆಯು ಅವನ ಹತೋಟಿಗೆ ಬರಲಿಲ್ಲ. ಏನು ಅನರ್ಥವಾಗುವುದೋ ಎಂದು ದಿವಾನ್ ಪೂರ್ಣಯ್ಯನವರು ಭಯಭ್ರಾಂತರಾದರು. ಈ ವರ್ತಮಾನವು ಅಂತಃಪುರಕ್ಕೂ ತಿಳಿಯಿತು. ಆಗ ಮಹಾಮಾತೃಶ್ರೀಯವರು ಗಾಬರಿಯಾದರು; ದಿಕ್ಕುತೋಚದೆ ನಿಂತುಬಿಟ್ಟರು. ಆದರೂ, ಪುಣ್ಯವತಿಯರಾದ ಲಕ್ಷ್ಮಮ್ಮಣ್ಣಿ ಯವರು ಬಹು ಭಕ್ತಿಯಿಂದ ನಂಜುಂಡೇಶ್ವರನನ್ನು ಪ್ರಾರ್ಥಿಸಿ, ಮಾಸಲು ಕಟ್ಟಿಕೊಂಡು "ದೇವರೇ, ಪರಮಾತ್ಮಾ! ಆ ರೇಗಿದ ಆನೆಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟು ಮಹಾರಾಜರಿಗೆ ಯಾವುದೊಂದು ಅಪಾಯವೂ ಸಂಭವಿಸದಂತೆ ಕಾಪಾಡು, ನೀನೇ ಶರಣ್ಯನು." ಎಂದು ಶ್ರೀಕಂಠೇಶ್ವರನನ್ನು ಪ್ರಾರ್ಥಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ, ಆನೆಯು ದೇವರ ಪ್ರೇರಣೆಯಿಂದ ಗಂಭೀರವಾಗಿ ತನ್ನಷ್ಟಕ್ಕೆ ತಾನೇ ಅರಮನೆಯ ಬಾಗಿಲಿಗೆ ಬಂದು ನಿಂತಿತು! ಎಲ್ಲರಿಗೂ ಆಶ್ಚರ್ಯವಾಯಿತು. ತರುವಾಯ ಒಡೆಯರು ಆನೆಯಿಂದ ಇಳಿದು, ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ದೇವಸ್ಥಾನಕ್ಕೆ ದಯಮಾಡಿಸಿ, ಪೂಜಾಕಾರ್ಯಗಳನ್ನು ಸಾಂಗವಾಗಿ ನೆರವೇರಿಸಿದರು. ಮಹಾರಾಜರಿಗೆ ಒದಗಿದ್ದ ಗಂಡಾಂತರವು ಭಗವದನುಗ್ರಹದಿಂದ ನಿವಾರಣೆಯಾಯಿತು! ಕೆಲವು

ದಿನಗಳ ತರುವಾಯ, ಅವರು ಪರಿವಾರದೊಡನೆ ರಾಜಧಾನಿಗೆ ಬಂದು ಸೇರಿದರು.

ಮಹಾರಾಜರು ಇನ್ನೂ ಚಿಕ್ಕ ವಯಸ್ಸಿನವರಾಗಿದ್ದಾಗಲೇ, ಅವರಿಗೆ ವಿವಾಹ ಮಾಡಬೇಕೆಂದು ನಿಶ್ಚಯವಾಯಿತು. ರಾಜವಂಶದವರಿಗೆ ಸಮೀಪ ಬಂಧುಗಳಾದ ಬೆಟ್ಟದಕೋಟೆ ಗೋಪಾಲರಾಜೇ ಅರಸಿನವರ ಹಿರಿಯ ಕುಮಾರಿಯವರಾದ ಶ್ರೀ ದೇವಾಜಮ್ಮಣ್ಣಿಯವರೊಂದಿಗೆ ಅವರ ವಿವಾಹ ಮಹೋತ್ಸವವು ಬೆಳೆಯಿತು. ದೇವಾಜಮ್ಮಣ್ಣಿಯವರು ಪಟ್ಟಮಹಿಷಿಯರಾದರು. ಕೆಲವು ವರ್ಷಗಳ ತರುವಾಯ, ಮಹಾರಾಜರು ಬಾಗಳೀದೇಶೇಅರಸಿನವರ ಕುಮಾರಿಯವರಾದ ಲಕ್ಷ್ಮೀವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರನ್ನೂ ಮದುವೆಯಾದರು. ಮಹಾ ಮಾತೃಶ್ರೀಯವರು ಅರಮನೆಯಲ್ಲಿ ಮಹಾರಾಜರನ್ನೂ, ಮಹಾರಾಜರ ಪತ್ನಿಯರನ್ನೂ ನೋಡಿಕೊಂಡು, ರಾಜನೀತಿಕುಶಲರಾದ ಪೂರ್ಣಯ್ಯನವರ ಸಹಾಯದಿಂದ ರಾಜಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಮೂರನೆಯ ಅಧ್ಯಾಯ

ಪೂರ್ಣಯ್ಯನವರ ದಿವಾನಗಿರಿ - ಮಹಾರಾಜರಿಗೆ ರಾಜಕೀಯ ಶಿಕ್ಷಣ

ಅತಿಗಂಭೀರನುದಾರಧೀರನು ಮಹಾಸಂಪನ್ನ ಸರ್ವಾತ್ಮನೂ ।
ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೆಟ್ಟಾಡದ ॥
ಪ್ರತಿಸದ್ಧರ್ಮನು ಯುಕ್ತಿಶಾಲಿ ಚತುರೋಪಾಯಂಗಳಂ ಬಲ್ಲವಂ ।
ಪತಿಕಾರ್ಯಂ ಹಿತಮಂತ್ರಿಯೈ ಹರಹರ ಶ್ರೀ ಚೆನ್ನಸೋಮೇಶ್ವರಾ ॥

ಪೂರ್ಣಯ್ಯನವರು ಬಹಳ ದಕ್ಷರಾದ ದಿವಾನರವರಾಗಿದ್ದರು. ಅವರು ತಿರುಚನಾಪಳ್ಳಿ ಡಿಸ್ಟ್ರಿಕ್ಟಿಗೆ ಸೇರಿದ ತಿರುಕಂಬೂರು ಎಂಬ ಗ್ರಾಮದಲ್ಲಿ ಹುಟ್ಟಿದರೆಂದು ತಿಳಿದುಬರುತ್ತದೆ. ಅವರ ತಾಯಿತಂದೆಗಳು ಬಹಳ ಬಡವರಾದ ವೈದಿಕ ಬ್ರಾಹ್ಮಣರು; ಮಾಧ್ವಮತಾನುಯಾಯಿಗಳು. ಅವರ ತಂದೆ ಕೃಷ್ಣಾಚಾರ್ಯರೆಂಬುವರು ಸಂಸ್ಕೃತದಲ್ಲಿ ಘನಪಂಡಿತರಾಗಿದ್ದರು. ಪೂರ್ಣಯ್ಯನವರಿಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ, ಅವರ ತಂದೆಯವರು ಕಾಲವಾದುದರಿಂದ, ತಾಯಿ ಲಕ್ಷ್ಮಮ್ಮನವರೇ ಆಗ ಚಿಕ್ಕ ಮಕ್ಕಳಾಗಿದ್ದ ಪೂರ್ಣಯ್ಯನವರನ್ನೂ, ಅವರ ತಮ್ಮ ವೆಂಕಟರಾಯನನ್ನೂ ಸಲಹಬೇಕಾಯಿತು. ಪೂರ್ಣಯ್ಯನವರಿಗೆ ಆಗಿನ ಕಾಲಕ್ಕೆ ತಕ್ಕಂತೆ ವಿದ್ಯಾಭ್ಯಾಸವೂ ನಡೆಯುತ್ತಿದ್ದಿತು. ಅವರು ತಮ್ಮ ತಾಯಿಯನ್ನೂ, ತಮ್ಮನನ್ನೂ ಕರೆದುಕೊಂಡು ಜೀವನೋಪಾಯವನ್ನು ಹುಡುಕುತ್ತಾ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು. ಆಗ ಪೂರ್ಣಯ್ಯನವರಿಗೆ ಹದಿನಾಲ್ಕು ವರ್ಷ ವಯಸ್ಸು. ರಾಜಧಾನಿಯಲ್ಲಿ ಪ್ರಸಿದ್ಧ ವರ್ತಕನಾಗಿದ್ದ ಅನ್ನದಾನಶೆಟ್ಟಿಯೆಂಬುವನ ಅಂಗಡಿಯಲ್ಲಿ ಪೂರ್ಣಯ್ಯನವರು ಗುಮಾಸ್ತೆಯ ಕೆಲಸವನ್ನು ಸಂಪಾದಿಸಿದರು. ಅನ್ನದಾನಶೆಟ್ಟಿಯು ಅರಮನೆಗೂ, ಹೈದರನ ಸೈನ್ಯಕ್ಕೂ ಬೇಕಾದ ಸಕಲ ಸಾಮಗ್ರಿಗಳನ್ನೂ ಒದಗಿಸುತ್ತಿದ್ದುದರಿಂದ, ಪೂರ್ಣಯ್ಯನವರು ಆಗಾಗ ಲೆಕ್ಕಾಚಾರ ಮಾಡಿಕೊಂಡು ಬರಲು ಹೈದರನ ಬಳಿಗೆ ಹೋಗಿ ಬರುತ್ತಿದ್ದುದುಂಟು. ಲೆಕ್ಕಗಳನ್ನು ಸರಿಯಾದ ರೀತಿಯಲ್ಲಿಟ್ಟು, ಪ್ರತಿಯೊಂದು

ಅಂಶವನ್ನೂ ಪರಿಷ್ಕಾರವಾಗಿ ವಿವರಿಸುತ್ತಿದ್ದ ಪೂರ್ಣಯ್ಯನವರ ಚಟುವಟಿಕೆ, ಜಾಣ್ಮೆ, ವಿನಯ, ವಿಧೇಯತೆಗಳನ್ನು ಕಂಡು ಹೈದರನು ಬಹಳ ಸಂತೋಷ ಪಡುತ್ತಿದ್ದನು. ಜಾಗರೂಕರಾದ ಪೂರ್ಣಯ್ಯನವರನ್ನು ಹೈದರನು ತನ್ನ ಬಳಿ ಕೆಲಸಕ್ಕೆ ಇಟ್ಟುಕೊಳ್ಳಬೇಕೆಂದು ಆಲೋಚಿಸುತ್ತಿದ್ದನು. ಸ್ವಲ್ಪ ದಿನಗಳಲ್ಲಿಯೇ, ಹೈದರನು ಪೂರ್ಣಯ್ಯನವರನ್ನು ತನ್ನ ಖಜಾನೆಯಲ್ಲಿ ಒಬ್ಬ ಗುಮಾಸ್ತೆಯ ಕೆಲಸಕ್ಕೆ ನೇಮಕಮಾಡಿದನು. ಪೂರ್ಣಯ್ಯನವರು ತಮ್ಮ ಬುದ್ಧಿಸಾಮರ್ಥ್ಯದಿಂದ ಎಲ್ಲ ಕೆಲಸಗಳನ್ನೂ ತೃಪ್ತಿಕರವಾಗಿ ನಿರ್ವಹಿಸುತ್ತಾ ಹೈದರನ ಪ್ರೇಮಕ್ಕೆ ಪಾತ್ರರಾದರು. ಕೆಲವು ಕಾಲದಲ್ಲಿಯೇ, ಅವರು ಮುಲ್ಕಿ ಮತ್ತು ಫೌಜು, ಈ ಎರಡು ಇಲಾಖೆಗಳ ಮುಖ್ಯಾಧಿಕಾರಿಗಳಾದರು. ಹೈದರನು ಅವರ ಕಾರ್ಯಚತುರತೆ, ಶ್ರದ್ಧಾಭಕ್ತಿಗಳಿಗೆ ಮೆಚ್ಚಿ, ಅವರಿಗೆ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಮಾರಹಳ್ಳಿ ಎಂಬ ಗ್ರಾಮವನ್ನು ಜಹಗೀರಾಗಿ ಕೊಟ್ಟನು. ಹೈದರನ ಕಾಲಾನಂತರ, ಪೂರ್ಣಯ್ಯನವರು ಟೀಪುವಿನ ಪ್ರೀತಿವಿಶ್ವಾಸಗಳಿಗೂ ಪಾತ್ರರಾಗಿ, ಸುಲ್ತಾನನಿಗೆ ಬಲಭುಜ ದಂತಿದ್ದರು. ಹೀಗೆ, ಪೂರ್ಣಯ್ಯನವರು ಸುಮಾರು ನಲವತ್ತು ವರ್ಷಗಳ ಕಾಲ ನವಾಬರ ದೌಲತ್ತಿನಲ್ಲಿ ನಾನಾ ಇಲಾಖೆಗಳಲ್ಲಿಯೂ ಕೆಲಸಮಾಡಿ ರಾಜ್ಯಾಡಳಿತಗಳಲ್ಲಿ ಸಂಪೂರ್ಣ ಅನುಭವವನ್ನು ಪಡೆದಿದ್ದರು.

ಸರ್ವಸಮರ್ಥರಾದ ಪೂರ್ಣಯ್ಯನವರು ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ ಬಾಲ್ಯವಯಸ್ಸಿನಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದುದ ರಿಂದ, ಅವರ ಬುದ್ಧಿಶಕ್ತಿ, ಕಾರ್ಯದಕ್ಷತೆ, ರಾಜತಂತ್ರಜ್ಞತೆ, ಮುಂತಾದ ಗುಣಗಳಿಂದ ರಾಜ್ಯದಲ್ಲಿ ಶಾಂತಿಸಮಾಧಾನಗಳೇರ್ಪಡಲು ಅನುಕೂಲ ವಾಯಿತು. ಪೂರ್ಣಯ್ಯನವರು ಅರಮನೆಯಲ್ಲಿ ಸಂಪ್ರದಾಯಾನುಸಾರವಾಗಿ ನಡೆಯಬೇಕಾಗಿದ್ದ ಕಾರ್ಯಗಳನ್ನೆಲ್ಲಾ ಮುಂದೆಯೂ ನಡೆಯಿಸಿಕೊಂಡು ಬರಬೇಕೆಂಬುದಾಗಿ ಕಟ್ಟಳೆಮಾಡಿ, ಒಡೆಯರ ಸೇವಾವೃತ್ತಿಗಾಗಿ ಅನುಭವಸ್ಥ ರಾದ ಆಪ್ತರನ್ನು ನೇಮಿಸಿ, ರಾಜಬಂಧುಗಳಿಗೂ ಆಶ್ರಿತರಿಗೂ ಜೀವನೋಪಾಯ ಗಳನ್ನು ಕಲ್ಪಿಸಿಕೊಟ್ಟರು. ಮಹಾರಾಜರ ಶ್ರೇಯೋಭಿವೃದ್ಧಿಗಾಗಿ ಅರಮನೆ ಯಲ್ಲಿ ಪ್ರತಿನಿತ್ಯವೂ ದೇವರ ಪೂಜೆಯೂ, ಜಪತಪಗಳೂ, ದಾನಧರ್ಮಗಳೂ ನಡೆಯುವಂತೆ ಏರ್ಪಾಟುಮಾಡಿದರು. ಮೈಸೂರು ಪಟ್ಟಣದ ಕೋಟೆ

ಕೊತ್ತಲುಗಳನ್ನು ಭದ್ರಪಡಿಸಿ, ಕೋಟೆಯ ಒಳ ಆವರಣದ ಮಧ್ಯಭಾಗದಲ್ಲಿ, ನಯನಮನೋಹರವಾದ ಅರಮನೆಯನ್ನು ನಿರ್ಮಿಸಿದರು. ಅರಮನೆಯ ಉಭಯಪಾರ್ಶ್ವಗಳಲ್ಲಿಯೂ ಹದಿನೆಂಟು ಕಚೇರಿಗಗಳನ್ನೂ, ಮುಂಭಾಗದಲ್ಲಿ ನವಪತ್ತುಖಾನೆಯನ್ನೂ ನಿರ್ಮಿಸಿ, ಆ ಸ್ಥಳದಲ್ಲಿ ಸದಾ ಎಚ್ಚರಿಕೆಯಿಂದ ಕಾವಲಿರಲು ಪಹರೆಯವರನ್ನು ನೇಮಕಮಾಡಿದರು.

ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರಿಗೆ ಹದಿನಾರನೆಯ ವರ್ಷ ತುಂಬುವ ವೇಳೆಗೆ, ಅವರು ಸರ್ವತೋಮುಖವಾದ ಅನುಭವವನ್ನು ಪಡೆದಿದ್ದರು. ಅವರ ಬುದ್ಧಿಶಕ್ತಿಯು ಬಹಳ ಸೂಕ್ಷ್ಮ. ಅವರ ಅಚ್ಚುಕಟ್ಟಾದ ಮೈಕಟ್ಟು, ಸುದೃಢವಾದ ಅಂಗಗಳು, ಗರಡಿಯ ಸಾಧಕದಿಂದ ಪರಿಪುಷ್ಟವಾಗಿ ಬೆಳೆದಿದ್ದ ಅವರ ಅಗಲವಾದ ಎದೆ, ಹೊಳಪಾದ ಕಣ್ಣುಗಳು, ಮಹಾರಾಜ ಪದವಿಗೆ ತಕ್ಕಂತೆ ಒಪ್ಪುತ್ತಿದ್ದುವು. ದಿವಾನ್ ಪೂರ್ಣಯ್ಯನವರು ಗುರುತರವಾದ ರಾಜಕಾರ್ಯಗಳನ್ನು ನಡೆಯಿಸುತ್ತಿದ್ದರೂ, ಬಾಲ ಮಹಾರಾಜರ ವಿದ್ಯಾಭ್ಯಾಸ ವಿಷಯದಲ್ಲಿ ತುಂಬ ಆಸಕ್ತರಾಗಿದ್ದರು. ಮುಂದೆ, ಮಹಾರಾಜರು ತಾವೇ ಸ್ವತಂತ್ರರಾಗಿ ರಾಜಕಾರ್ಯಗಳನ್ನು ನಡೆಯಿಸಬೇಕಾಗಿದ್ದುದರಿಂದ, ಪೂರ್ಣಯ್ಯನವರು ಅವರಿಗೆ ಆಡಳಿತ ನಿರ್ವಹಣ ಕಾರ್ಯದಲ್ಲಿ ಪ್ರತ್ಯಕ್ಷ ಅನುಭವವನ್ನುಂಟುಮಾಡಿಕೊಡುತ್ತಿದ್ದರು. ಮಹಾರಾಜರಿಗೆ ಎಲ್ಲ ಇಲಾಖೆಗಳಲ್ಲಿಯೂ ರಾಜಕೀಯ ಶಿಕ್ಷಣವು ದೊರೆಯುವಂತೆ ಏರ್ಪಾಟು ಮಾಡಿದ್ದರು. ಆ ವೃದ್ಧ ಮಂತ್ರಿಯ ಲೋಕಾನುಭವ, ಕಾರ್ಯಚತುರತೆ, ನಿಸ್ಪೃಹತೆ, ಕರ್ತವ್ಯಜ್ಞಾನ, ಪ್ರಭುಭಕ್ತಿ, ಪ್ರಜಾಪ್ರೇಮ ಮುಂತಾದ ಸದ್ಗುಣಗಳನ್ನು ತರುಣ ಮಹಾರಾಜರು ಗ್ರಹಿಸಿ, ತಾವೂ ಆ ಸದ್ಗುಣಗಳನ್ನು ತಮ್ಮಲ್ಲಿ ಅಭಿವೃದ್ಧಿಪಡಿಸಿಕೊಳ್ಳುತ್ತಿದ್ದರು.

ಹಿಂದೆ ಸುಲ್ತಾನರ ಆಡಳಿತದಲ್ಲಿ ಹೀನಸ್ಥಿತಿಗೆ ಬಂದಿದ್ದ ರಾಜ್ಯವನ್ನು ತಹಬಂದಿಗೆ ತರಲು ಪೂರ್ಣಯ್ಯನವರು ವಿಶೇಷ ಶ್ರಮವಹಿಸಿದರು. ಹೈದರನ ಕಾಲದಲ್ಲಿಯೂ ಮತ್ತು ಟೀಪೂಸುಲ್ತಾನನ ಆಡಳಿತದಲ್ಲಿಯೂ ಅನೇಕ ಪಾಳೆಯಪಟ್ಟುಗಳು ಹಾಳಾಗಿ ಹೋಗಿದ್ದುದರಿಂದ, ಆ ಪಾಳೆಯಗಾರರ ವಂಶದವರು ಪುನಃ ತಮ್ಮ ಪಾಳೆಯಪಟ್ಟುಗಳನ್ನು ಸಾಧಿಸಿಕೊಳ್ಳಬೇಕೆಂಬ

ಆಕಾಂಕ್ಷೆಯಿಂದ ಸಮಯ ಕಾಯುತ್ತಿದ್ದರು. ದೇಶಾಂತರಗತರಾಗಿದ್ದ ಕೆಲವು ಪಾಳೆಯಗಾರರು ಪ್ರಬಲರಾದ ಪಟೇಲರನ್ನೂ, ರೈತರನ್ನೂ ಕಟ್ಟಿಕೊಂಡು ತಾವೇ ಪಾಳೆಯಗಾರರೆಂದು ಹೇಳಿಕೊಳ್ಳುತ್ತಾ ಜನರ ಪ್ರಾಣ, ಮಾನ, ಧನಗಳಿಗೆ ಸಂಚಕಾರ ತರುತ್ತಿದ್ದರು. ಇಂಥ ಪುಂಡಾಟಗಳು ಅಲ್ಲಲ್ಲಿ ನಡೆಯುತ್ತಲೇ ಇದ್ದುವು. ಮಂಜರಾಬಾದು ಪ್ರಾಂತದ ಐಗೂರು ಪಾಳೆಯಗಾರ ವೆಂಕಟಾದ್ರಿ ನಾಯಕನೆಂಬುವನು ದೇಶದಲ್ಲಿ ಬಹಳ ಹಾವಳಿ ಮಾಡುತ್ತಿದ್ದನು. ಪೂರ್ಣಯ್ಯನವರು ರೆಸಿಡೆಂಟರಾದ ಕ್ಲೋಸ್ ಮತ್ತು ಬ್ರಿಟಿಷ್ ದಂಡನಾಯಕರಾದ ಕರ್ನಲ್ ವೆಲ್ಲೆಸ್ಲಿ ಇವರ ಸಹಾಯದಿಂದ ಪುಂಡರನ್ನೂ, ತುಂಟರನ್ನೂ ಅಡಗಿಸಿ ಪ್ರಜಾಪೀಡೆಯನ್ನು ತಪ್ಪಿಸಿದರು. ಪ್ರಬಲನಾಗಿದ್ದ ವೆಂಕಟಾದ್ರಿನಾಯಕನನ್ನು ಹಿಡಿಸಿ ಅವನನ್ನು ಗಲ್ಲಿಗೇರಿಸಿದರು.

ಅದೇ ಕಾಲದಲ್ಲಿ, ಶ್ರೀರಂಗಪಟ್ಟಣದ ಸೆರೆಮನೆಯಿಂದ ಬಿಡುಗಡೆಯಾಗಿದ್ದ ಧೋಂಡೋಜಿವಾಗ್ ಎಂಬ ಮರಾಟಿ ದರೋಡೆಕೋರನು ಅಲ್ಲಲ್ಲಿ ಕೊಳ್ಳೆಹೊಡೆಯುತ್ತಾ ಹಾವಳಿಮಾಡುತ್ತಿದ್ದನು. ಅವನು ಬಹಳ ಬಲಶಾಲಿಯಾಗಿಯೂ, ಮುಖಂಡನಾಗಿಯೂ ಇದ್ದುದರಿಂದ ಅನೇಕರು ಅವನ ಅನುಯಾಯಿಗಳಾಗಿದ್ದರು. ಅವನು ಉಪಯೋಗಿಸುತ್ತಿದ್ದ ಎರಡಂಚಿನ ಕತ್ತಿಯನ್ನು ಈಗಲೂ ಶಿಕಾರಿಪುರದಲ್ಲಿರುವ ಹುಚ್ಚರಾಯಸ್ವಾಮಿ ದೇವಸ್ಥಾನದಲ್ಲಿ ನಾವು ಕಾಣಬಹುದು. ಅವನ ಸೊಕ್ಕು ಮುರಿಯಲು ಪೂರ್ಣಯ್ಯನವರು ನಿರ್ಧರಿಸಿ, ಕರ್ನಲ್ ವೆಲ್ಲೆಸ್ಲಿಯವರ ಸಹಾಯದಿಂದ ಆ ತುಂಟನನ್ನು ಹಿಡಿದು ನಿಗ್ರಹಿಸಿದರು. ಅವನ ಅನುಯಾಯಿಗಳಿಗೂ ತಕ್ಕ ಶಿಕ್ಷೆಯಾಯಿತು. ಪೂರ್ಣಯ್ಯನವರು ತುಂಟ ಪಾಳೆಯಗಾರರನ್ನೂ, ದಂಗೆಕೋರರನ್ನೂ ನಿಗ್ರಹಿಸಿ ದೇಶವನ್ನು ಸಮಾಧಾನಸ್ಥಿತಿಗೆ ತಂದರು.

ಪೂರ್ಣಯ್ಯನವರು ಸರ್ಕಾರದ ಆಡಳಿತವನ್ನು ಹಣಕಾಸುಗಳ ಇಲಾಖೆ, ರೆವೆನ್ಯೂ ಇಲಾಖೆ, ವಿವಿಧ ಬಾಬುಗಳ ಇಲಾಖೆ, ಅಶ್ವಸೈನ್ಯದ ಇಲಾಖೆ, ಕಾಲ್ಬಲದ ಇಲಾಖೆ ಮತ್ತು ಕಂದಾಚಾರ ಅಥವಾ ಪೋಲೀಸ್ ಇಲಾಖೆ, ಎಂಬ ಆರು ಇಲಾಖೆಗಳಾಗಿ ವಿಂಗಡಿಸಿ, ತಾವೇ ಆ ಇಲಾಖೆಗಳ ಮೇಲ್ವಿಚಾರಣೆಯನ್ನು ಸ್ವತಃ ನೋಡಿಕೊಳ್ಳುತ್ತಿದ್ದರು. ದೇಶವನ್ನು

೧೨೨ ತಾಲ್ಲೂಕುಗಳಾಗಿ ವಿಂಗಡಿಸಿ, ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಆಮಿಲ ಅಥವಾ ಅಮಲ್ದಾರನೆಂಬ ಅಧಿಕಾರಿಯನ್ನು ನೇಮಿಸಿದರು. ಬೆಂಗಳೂರು, ಚಿತ್ರದುರ್ಗ ಮತ್ತು ನಗರ ಅಥವಾ ಬಿದನೂರು—ಈ ಮೂರು ಡಿವಿಜನುಗಳಲ್ಲಿ ಸುಬೇದಾರರೆಂಬ ಅಧಿಕಾರಿಗಳಿದ್ದರು. ಅವರು ದೊಡ್ಡ ದೊಡ್ಡ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ನ್ಯಾಯಾಧೀಶರಾಗಿ ವರ್ತಿಸಿ ತೀರ್ಪು ಕೊಡುತ್ತಿದ್ದರು. ಪೂರ್ಣಯ್ಯನವರು ಅದಾಲತ್ ಕೋರ್ಟ್ ಎಂಬುದಾಗಿ ಪ್ರತ್ಯೇಕವಾದ ಒಂದು ಕೋರ್ಟನ್ನು ಸ್ಥಾಪಿಸಿ, ಆ ಕೋರ್ಟಿಗೆ ಇಬ್ಬರು ನ್ಯಾಯಾಧೀಶರನ್ನೂ, ಆರು ಜನಗಳುಳ್ಳ ಒಂದು ಪಂಚಾಯಿತಿಯನ್ನೂ ನೇಮಕಮಾಡಿದರು. ಅದಾಲತ್ ಕೋರ್ಟ್ ಎಂದರೆ, ಈಗಿನ ಹೈಕೋರ್ಟಿಗೆ ಸರಿಯಾದುದೆಂದು ಹೇಳಬಹುದು.

ಪ್ರಜೆಗಳು ಸುರಕ್ಷಿತವಾಗಿ ವ್ಯವಸಾಯ, ವ್ಯಾಪಾರ ಮುಂತಾದ ಕಸಬುಗಳನ್ನು ಮಾಡಿಕೊಂಡು ನೆಮ್ಮದಿಯಾಗಿ ಬಾಳುತ್ತಿದ್ದರು. ಸಂಸ್ಥಾನದ ಆದಾಯವು ಹೆಚ್ಚಿ, ಖಜಾನೆಯಲ್ಲಿ ಹಣ ಶೇಖರವಾಯಿತು. ಪ್ರತಿ ತಿಂಗಳಿನಲ್ಲಿಯೂ ಕೊಡುತ್ತಿದ್ದ ಪ್ರೋಗದಿಯು ಸಲೀಸಾಗಿ ಒಂದು ದಿನವೂ ತಡವಾಗದಂತೆ ಸಂದಾಯವಾಗುತ್ತಿತ್ತು. ಹಿಂದೆ ಸ್ವಸ್ಥಾನಗಳನ್ನು ಬಿಟ್ಟುಹೋಗಿದ್ದ ಅನೇಕ ರೈತಾಪಿ ಜನಗಳೂ, ವರ್ತಕರೂ ಪುನಃ ಸ್ವದೇಶಕ್ಕೆ ಬಂದು ನೆಲಸುತ್ತಿದ್ದರು. ಪೂರ್ಣಯ್ಯನವರು ಅನೇಕ ಊರುಗಳನ್ನೂ, ಕೋಟೆ ಕೊತ್ತಲುಗಳನ್ನೂ, ಸೇತುವೆಗಳನ್ನೂ ಕಟ್ಟಿಸಿ, ರಾಜಮಾರ್ಗಗಳನ್ನು ಏರ್ಪಡಿಸಿ, ಸಾಲುಮರಗಳನ್ನು ನೆಡಿಸಿ ಜನರು ಒಂದೆಡೆಯಿಂದ ಮತ್ತೊಂದೆಡೆಗೆ ನಿರ್ಭಯವಾಗಿ ಪ್ರಯಾಣ ಮಾಡುವಂತೆ ಅನುಕೂಲಪಡಿಸಿದರು. ಆಗ ರೆಸಿಡೆಂಟರಾಗಿದ್ದ ಕ್ಲೋಸ್‌ರವರ ಜ್ಞಾಪಕಾರ್ಥವಾಗಿ, ಕ್ಲೋಸ್‌ಪೇಟೆ ಎಂಬ ಊರನ್ನು ಬೆಂಗಳೂರು-ಮೈಸೂರು ಮಾರ್ಗಮಧ್ಯದಲ್ಲಿ ಕಟ್ಟಿಸಿದರು. ಶ್ರೀರಂಗಪಟ್ಟಣದ ಬಳಿಯಲ್ಲಿ ಕಾವೇರೀ ನದಿಗೆ ಸೇತುವೆಯನ್ನು ಕಟ್ಟಿಸಿ, ಅದಕ್ಕೆ ವೆಲ್ಲೆಸ್ಲಿ ಸೇತುವೆಯೆಂದು ಹೆಸರಿಟ್ಟರು. ಅನೇಕ ಕೆರೆ, ಕುಂಟೆ, ನಾಲೆಗಳನ್ನು ಸರಿಪಡಿಸಿ ವ್ಯವಸಾಯಗಾರರಿಗೆ ಸಹಾಯಮಾಡಿದರು. ಅವರು ಪ್ರಭುಸೇವೆಯನ್ನು ನಿರ್ವಂಚನೆಯಿಂದ ಮಾಡಿ, ಸಂಸ್ಥಾನದ ಪ್ರಜೆಗಳ ಕೃತಜ್ಞತೆಗೂ, ಮನ್ನಣೆಗೂ ಪಾತ್ರರಾಗಿ, ಕಂಪೆನಿ ಸರ್ಕಾರದವರ ಮೆಚ್ಚುಗೆಯನ್ನು ಸಂಪಾದಿಸಿ,

ಸುಮಾರು ೧೨ ವರ್ಷಗಳ ಕಾಲ ಮೈಸೂರು ಸಂಸ್ಥಾನದ ದಿವಾನ್ ಪದವಿಯಲ್ಲಿದ್ದುಕೊಂಡು, ದಕ್ಷತೆಯಿಂದ ಆಡಳಿತಗಳನ್ನು ನಿರ್ವಹಿಸಿ ಕೃತಕೃತ್ಯರೆನ್ನಿಸಿಕೊಂಡರು.

ಪೂರ್ಣಯ್ಯನವರ ಆಡಳಿತಕ್ರಮದಿಂದ ತರುಣ ಮಹಾರಾಜರ ಮನಸ್ಸಿನ ಮೇಲೆ ಸತ್ಪರಿಣಾಮವುಂಟಾಯಿತು. ರಾಜಕೀಯ ಆಡಳಿತಗಳಲ್ಲಿ ಮಹಾರಾಜರಿಗೆ ಉತ್ತಮ ಶಿಕ್ಷಣ ದೊರೆಯಿತು. "ದೊರೆಯೆಂಬ ವೃಕ್ಷಕ್ಕೆ ಪ್ರಜೆಗಳೇ ಬೇರುಗಳು" ಎಂದು ಪೂರ್ಣಯ್ಯನವರು ಆಗಾಗ ಮಹಾರಾಜರಿಗೆ ತಿಳಿಸುತ್ತಿದ್ದರು. ಅವರು ದೇಶಮಧ್ಯದಲ್ಲಿ ಸಂಚರಿಸಿ ಪ್ರಜೆಗಳ ಕಷ್ಟಸುಖಗಳನ್ನು ಸ್ವತಃ ತಿಳಿದುಕೊಳ್ಳುವಂತೆ, ಪೂರ್ಣಯ್ಯನವರು ಅವರನ್ನು ದೇಶಸಂಚಾರ ಮಾಡಿಸಿಕೊಂಡು ಬರುತ್ತಿದ್ದರು. ವಯಸ್ಕರಾದ ಮಹಾರಾಜರ ಮನಸ್ಸಿನಲ್ಲಿ ಸಕಲ ಸದ್ಗುಣಗಳೂ ಮೂಡುವಂತೆ ರಾಜನೀತಿಗಳನ್ನು ತಿಳಿಸುತ್ತಿದ್ದರು. "ರಾಜರಾದವರಿಗೆ ಯಾವಾಗಲೂ ಮುಂದಾಲೋಚನೆಯಿರಬೇಕು. ಯಾವ ವಿಚಾರವನ್ನೂ ಚೆನ್ನಾಗಿ ಪರ್ಯಾಲೋಚಿಸದೆ ಆತುರದಲ್ಲಿ ಯಾವ ಕಾರ್ಯವನ್ನೂ ಮಾಡಬಾರದು. ಆಪ್ತರೂ, ಸದ್ವಂಶೀಯರೂ, ಸ್ನೇಹಪರರೂ, ಜ್ಞಾನವಂತರೂ ಆದ ಅಧಿಕಾರಿಗಳನ್ನು ನೇಮಿಸಿಕೊಳ್ಳಬೇಕು. ಒಳ್ಳೆಯ ಮನೆತನದಲ್ಲಿ ಹುಟ್ಟಿದ್ದರೂ ದುಷ್ಟರನ್ನು ನಂಬಬಾರದು. ಮಲಯಗಿರಿಯ ಚಂದನದಿಂದ ಹುಟ್ಟಿದ ಬೆಂಕಿಯಾದರೂ ಸುಟ್ಟೇಸುಡುವುದು. ಮಂತ್ರಿಗಳನ್ನು ನೇಮಿಸಿಕೊಳ್ಳುವುದರಲ್ಲಿ ಬಹಳ ಜಾಣ್ಮೆಯಿಂದಲೂ, ದೀರ್ಘಾಲೋಚನೆಯಿಂದಲೂ ವರ್ತಿಸಬೇಕು. ಬೆಕ್ಕುಗಳ ಗುಂಪಿಗೆ ಹಾಲನ್ನು ಕೊಟ್ಟಂತೆ ಅನರ್ಹರಾದ ಅಧಿಕಾರಿಗಳ ಕೈಗೆ ರಾಜ್ಯಭಾರವನ್ನು ಕೊಟ್ಟು ಸ್ವೇಚ್ಛಾವಿಹಾರಿಯಾಗಿ ಮೈಮರೆತಿರುವ ರಾಜನು ಅವಿವೇಕಿಯಾಗುತ್ತಾನೆ. ಯಾವ ಕೆಲಸವನ್ನಾದರೂ ಸ್ವತಃ ಪರಾಂಬರಿಸಿ ನೋಡಬೇಕು. ಎಲ್ಲರನ್ನೂ ತನ್ನ ಅಂತರಂಗಕ್ಕೆ ತೆಗೆದುಕೊಳ್ಳಬಾರದು. ಆರಿಸಿದ ಅಣಿಮುತ್ತುಗಳಂಥ ಕೆಲವರನ್ನು ಮಾತ್ರ ತನ್ನ ಆಪ್ತವರ್ಗಕ್ಕೆ ಸೇರಿಸಿಕೊಳ್ಳಬೇಕು" ಎಂದು ಪೂರ್ಣಯ್ಯನವರು ಹೇಳುತ್ತಿದ್ದ ಮಾತುಗಳು ಮಹಾರಾಜರ ಮನಸ್ಸಿಗೆ ಹಿಡಿದಿದ್ದುವು. ಮಹಾರಾಜರು ಒಬ್ಬ ಆದರ್ಶ ಪ್ರಭುವಿಗೆ ತಕ್ಕ ರಾಜಕೀಯ ಶಿಕ್ಷಣವನ್ನು ಪಡೆದಿದ್ದರು.

ಪೂರ್ಣಯ್ಯನವರು ಅವಿಶ್ರಾಂತರಾಗಿ ಸಂಸ್ಥಾನಕ್ಕೆ ಮಾಡಿದ ಮಹೋಪಕಾರಗಳನ್ನು ಪರಿಗಣಿಸಿ, ಕಂಪೆನಿ ಸರ್ಕಾರದವರ ಅನುಮತಿಯಂತೆ ಮಹಾರಾಜರು ಪೂರ್ಣಯ್ಯನವರಿಗೆ ಯಳಂದೂರು ತಾಲ್ಲೂಕನ್ನು ಜಹಗೀರಾಗಿ ಕೊಟ್ಟರು. ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರಿಗೆ ಹದಿನಾರು ವರ್ಷ ವಯಸ್ಸಾದಮೇಲೆ ಅವರು ತಾವೇ ರಾಜಕಾರ್ಯಗಳನ್ನು ಸ್ವತಃ ನಡೆಯಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದುದರಿಂದಲೂ ಮತ್ತು ಯಾವುದೋ ಒಂದು ಕಾರಣದಿಂದ ಮಹಾರಾಜರಿಗೂ ಪೂರ್ಣಯ್ಯನವರಿಗೂ ಭಿನ್ನಾಭಿಪ್ರಾಯವುಂಟಾದುದರಿಂದಲೂ, ಪೂರ್ಣಯ್ಯನವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ವಿಶ್ರಾಂತಿ ಸುಖವನ್ನು ಅನುಭವಿಸಲು ಶ್ರೀರಂಗಪಟ್ಟಣಕ್ಕೆ ತೆರಳಿದರು. ಮಹಾರಾಜರು ಅವರಿಗೆ ತಿಂಗಳಿಗೆ ೫೦೦ ವರಹ ವಿಶ್ರಾಂತಿ ವೇತನವನ್ನು ಕೊಡುವಂತೆ ಅಪ್ಪಣೆಮಾಡಿದರು. ಆದರೇನು! ಆ ವೃದ್ಧ ಮಂತ್ರಿಯು ಬಹಳ ಕಾಲ ಬದುಕಿರಲಿಲ್ಲ; ಮೂರು ತಿಂಗಳೊಳಗಾಗಿಯೇ ವಿಧಿವಶರಾದರು. ಅವಸಾನಕಾಲದಲ್ಲಿ ಅವರಿಗೆ ೬೫ ವರ್ಷ ವಯಸ್ಸು. ಒಡೆಯರು ಪೂರ್ಣಯ್ಯನವರ ಮರಣಕ್ಕಾಗಿ ವ್ಯಥೆಪಟ್ಟರು; ಅವರ ಕುಟುಂಬದವರಿಗೆ ತಮ್ಮ ಸಂತಾಪವನ್ನು ಸೂಚಿಸಿ, ಶ್ರೀರಂಗಪಟ್ಟಣದ ಕೋಟೆಯಲ್ಲಿದ್ದ ತಮ್ಮ ಅರಮನೆಯನ್ನು ಮೃತರ ಉತ್ತರ ಕ್ರಿಯೆಗಳು ನಡೆಯುವ ಕಾಲದಲ್ಲಿ ಆ ಕುಟುಂಬದವರಿಗೆ ಬಿಟ್ಟುಕೊಟ್ಟು ಸಹಾಯ ಮಾಡಿದರು. ಪೂರ್ಣಯ್ಯನವರಿಗೆ ಸಲ್ಲುತ್ತಿದ್ದ ವಿರಾಮ ವೇತನವನ್ನು ಅವರ ಮಗ ಆನಂದರಾಯರೆಂಬುವರಿಗೆ ಕೊಡಬೇಕೆಂದು ಅಪ್ಪಣೆಮಾಡಿದರು. ಅಲ್ಲಿಂದ ಮುಂದೆ (೧೮೧೧ನೆಯ ಇಸವಿಯಲ್ಲಿ) ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ಸ್ವತಃ ರಾಜಕಾರ್ಯಗಳನ್ನು ನಡೆಯಿಸಲು ಪ್ರಾರಂಭಿಸಿದರು.

ನಾಲ್ಕನೆಯ ಅಧ್ಯಾಯ

ವಿಷಮ ಸನ್ನಿವೇಶಗಳು, ಮಹಾರಾಜರ ಆಡಳಿತ ವಿಚಕ್ಷಣೆ

ಮಂತ್ರಿಯುಳ್ಳಾ ರಾಜ್ಯವೆಂತಿರಿಸಿದಂತಕ್ಕು ।
ಮಂತ್ರಿಯಿಲ್ಲದನ ಸಾಮ್ರಾಜ್ಯ ಕೀಲ್ಗಳೆದ ।
ಜಂತ್ರದಂತಕ್ಕು ಸರ್ವಜ್ಞ ॥

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ಸ್ವತಃ ರಾಜ್ಯಾಡಳಿತಗಳನ್ನು ನಡೆಯಿಸಲು ಪ್ರಾರಂಭಿಸಿದಾಗ ಅವರಿಗೆ ಹದಿನಾರು ವರ್ಷ ವಯಸ್ಸು. ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರ ಯಾಜಮಾನ್ಯದಲ್ಲಿ ಮಹಾರಾಜರಿಗೆ ತಕ್ಕ ವಿದ್ಯಾಭ್ಯಾಸವೂ ನಡೆದಿದ್ದಿತು. ಮಹಾ ಮೇಧಾವಿಗಳೂ, ರಾಜತಂತ್ರಜ್ಞರೂ ಆದ ದಿವಾನ್ ಪೂರ್ಣಯ್ಯನವರ ನೇತೃತ್ವದಲ್ಲಿ ಅವರಿಗೆ ರಾಜ್ಯಾಡಳಿತಗಳಲ್ಲಿ ಸಾಕಾದಷ್ಟು ಪರಿಶ್ರಮವುಂಟಾಗಿದ್ದಿತು. ದಿವಾನ್ ಪೂರ್ಣಯ್ಯನವರು ದೇಶದಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನೂ, ದಂಗೆಗಳನ್ನೂ ದರ್ಪದಿಂದ ಅಡಗಿಸಿ, ಶಾಂತಿ ಸಮಾಧಾನಗಳನ್ನು ನೆಲೆಗೊಳಿಸಿ, ರಾಜ್ಯದ ಹುಟ್ಟುವಳಿಯು ಹೆಚ್ಚುವಂತೆ ಮಾಡಿ, ಸಂಸ್ಥಾನವನ್ನು ಒಂದು ನಿರ್ದಿಷ್ಟ ವ್ಯವಸ್ಥೆಗೆ ತಂದಿದ್ದರು. ಮಹಾರಾಜರು ರಾಜ್ಯಾಡಳಿತಗಳನ್ನು ನಡೆಯಿಸಲು ಪರಿಸ್ಥಿತಿಯು ನಿರಾತಂಕವಾಗಿದ್ದಿತು. ಆದರೂ, ತಾನು ಪ್ರ್ಯಾವಸ್ಥೆಯಲ್ಲಿದ್ದ ಮಹಾರಾಜರಿಗೆ ಕಾಲಕಾಲಕ್ಕೆ ತಕ್ಕ ಹಿತವಚನಗಳನ್ನು ಹೇಳಿಕೊಂಡು, ಪ್ರಭು ಪ್ರಜಾಭ್ಯುದಯಕ್ಕಾಗಿ, ಸೂಕ್ತವಾದ ಸಲಹೆಗಳನ್ನು ಕೊಡುತ್ತಿದ್ದ ಮಹಾಮಾತೃಶ್ರೀಯವರಾದ ಲಕ್ಷ್ಮಮ್ಮಣ್ಣಿಯವರು ವಿಧಿವಶರಾಗಿ ಒಂದು ವರ್ಷವಾಗಿದ್ದಿತು. ಲಕ್ಷ್ಮಮ್ಮಣ್ಣಿಯವರು ಕಾಲವಾದಮೇಲೆ, ಪ್ರಭುಗಳಿಗೆ ಮಾರ್ಗದರ್ಶಕರೂ ಹಿತೈಷಿಗಳೂ ಆಗಿದ್ದವರೆಂದರೆ ಪೂರ್ಣಯ್ಯನವರೊಬ್ಬರೇ. ಸರ್ವಸಮರ್ಥರೂ, ರಾಜನೀತಿಕುಶಲರೂ ಆದ ಪೂರ್ಣಯ್ಯನವರು ಮರು ವರ್ಷವೇ ತಮ್ಮ ಮಂತ್ರಿಪದವಿಯನ್ನು ಬಿಟ್ಟುಬಿಟ್ಟರು. ಅರಮನೆಯ ಅಂತಃಪುರದಲ್ಲಿ ಕುಳಿತು ಸಂಸ್ಥಾನದ ರಾಜ್ಯಾಡಳಿತ ಸೂತ್ರಗಳನ್ನು ನಡೆಯಿಸುತ್ತಾ

ಮಹಾರಾಜರಿಗೆ ಬೆಂಬಲರಾಗಿದ್ದ ಲಕ್ಷ್ಮಮ್ಮಣ್ಣಿಯವರ ನೆರವೂ, ಹೊರಗಡೆಯಲ್ಲಿ ರಾಜಕಾರ್ಯಗಳನ್ನು ಅತ್ಯಂತ ವಿಚಕ್ಷಣೆಯಿಂದ ನಡೆಯಿಸುತ್ತಾ ಪ್ರಭುಗಳಿಗೆ ಮುಂಬಲರಾಗಿದ್ದ ರಾಜಕಾರಣಪಟು ದಿವಾನ್ ಪೂರ್ಣಯ್ಯನವರ ಸಹಾಯವೂ ತಪ್ಪಿಹೋಗಿ, ಮಹಾರಾಜರೇ ಸರ್ವಕಾರ್ಯಗಳನ್ನೂ ನಡೆಯಿಸಬೇಕಾಗಿದ್ದಿತು.

ಪೂರ್ಣಯ್ಯನವರು ಕಾಲವಾದಮೇಲೆ, ರೆಸಿಡೆಂಟರ ಸಲಹೆಯಂತೆ ಮಹಾರಾಜರು ರಾಮರಾವ್ ಎಂಬುವರನ್ನು ದಿವಾನ್ ಪದವಿಗೆ ನೇಮಕಮಾಡಿದರು. ರಾಮರಾಯರು ಮೊದಲು ನಗರ ಡಿವಿಜನ್ ಫೌಜುದಾರರಾಗಿದ್ದರು. ಅವರು ಪೂರ್ಣಯ್ಯನವರಷ್ಟು ಸಮರ್ಥರಾಗಿರಲಿಲ್ಲ. ರಾಮರಾಯರು ಕೇವಲ ಒಬ್ಬ ಸೈನ್ಯಾಧಿಕಾರಿಯಾಗಿದ್ದವರೇ ಹೊರತು, ರಾಜ್ಯಾಡಳಿತದಲ್ಲಿ ಅವರಿಗೆ ಅನುಭವವಿರಲಿಲ್ಲ. ಮಹಾರಾಜರು ವಿದ್ಯಾಪರಿಪೂರ್ಣರಾಗಿದ್ದರೂ ಆ ತಾರುಣ್ಯಾವಸ್ಥೆಯಲ್ಲಿ ಅವರಿಗೆ ಲೋಕಾನುಭವವು ಸಾಕಾದಷ್ಟಿರಲಿಲ್ಲ. ನಿಸ್ಪೃಹತಾಬುದ್ಧಿಯಿಂದ ಪ್ರಭುಗಳಿಗೆ ಮಂತ್ರಾಲೋಚನೆಯನ್ನು ಹೇಳತಕ್ಕ ಹಿತೈಷಿಗಳೇ ಇಲ್ಲದಂತಾಯಿತು. ತುಂಬುಹರೆಯದಲ್ಲಿ ಮಹಾರಾಜ ಪದವಿಯನ್ನು ಅನುಭವಿಸುತ್ತಾ, ಭೋಗಭಾಗ್ಯಗಳಲ್ಲಿ ನಲಿಯುತ್ತಿದ್ದ ಪ್ರಭುಗಳಿಗೆ ಹಿತಾಹಿತಗಳನ್ನು ಅರಿಕೆಮಾಡುವ ಸ್ವಜನರಾಗಲಿ, ಹಿತವಂತರಾಗಲಿ, ಚತುರರಾದ ಮಂತ್ರಿಗಳಾಗಲಿ ಇರಲಿಲ್ಲ. ಕಲ್ಕತ್ತಾ ಸರ್ಕಾರದವರಾದರೂ ಅಂಥ ಸಮಯದಲ್ಲಿ ಕುಶಲರಾದ ಅಧಿಕಾರಿಗಳನ್ನು ನೇಮಿಸಿ, ಮಹಾರಾಜರ ಸಮೀಪವರ್ತಿಗಳಾಗಿದ್ದುಕೊಂಡು ರಾಜಕಾರ್ಯಗಳಲ್ಲಿ ಸಲಹೆಕೊಡುವಂತೆ ಯಾವುದೊಂದು ಏರ್ಪಾಟನ್ನೂ ಮಾಡಲಿಲ್ಲ. ಪಿತ್ರಾರ್ಜಿತವಾದ ಆಸ್ತಿಯ ಅಧಿಕಾರವನ್ನು ಕೈಗೊಳ್ಳುವಂತೆ ಮಹಾರಾಜರು ಸಾಮಾನ್ಯ ರೀತಿಯಲ್ಲಿಯೇ ರಾಜ್ಯಾಡಳಿತಗಳನ್ನು ವಹಿಸಿಕೊಂಡರು. ರೆಸಿಡೆಂಟರು ಬಹಳಮಟ್ಟಿಗೆ ತಮ್ಮ ಸ್ವಂತ ಜವಾಬ್ದಾರಿಯಿಂದಲೇ ರಾಜ್ಯಸೂತ್ರಗಳನ್ನು ಒಡೆಯರಿಗೆ ವಹಿಸಿಕೊಟ್ಟರೆಂದು ಹೇಳಬಹುದು. ಪೂರ್ಣಯ್ಯನವರು ಅಮಾತ್ಯಪದವಿಯಿಂದ ನಿವೃತ್ತರಾದ ಮೇಲೆ ಸ್ವಲ್ಪ ಕಾಲದಲ್ಲಿಯೇ ಸ್ವರ್ಗಸ್ಥರಾದುದರಿಂದ, ರಾಜಕಾರ್ಯಗಳಲ್ಲಿ ಸಲಹೆ ಹೇಳಬಹುದಾಗಿದ್ದ ಮೇಧಾವಿಗಳೊಬ್ಬರನ್ನು ಮಹಾರಾಜರು ಕಳೆದುಕೊಂಡಂತಾಗಿದ್ದಿತು. ಅಲ್ಲದೆ, ಪೂರ್ಣಯ್ಯನವರಿಗೆ ನಾನಾ

ರೀತಿಯಲ್ಲಿ ಸಹಾಯಕರಾಗಿದ್ದುಕೊಂಡು ಸಂಸ್ಥಾನದ ಪ್ರಗತಿಗೆ ನೆರವಾಗಿದ್ದ ಉದಾರಹೃದಯರಾದ ಮಾರ್ಕ್ವಿಸ್ ವೆಲ್ಲೆಸ್ಲಿಯವರೂ, ಅವರ ತಮ್ಮಂದಿರಾದ ಜನರಲ್ ವೆಲ್ಲೆಸ್ಲಿಯವರೂ ಮತ್ತು ಬ್ರಿಟಿಷ್ ರೆಸಿಡೆಂಟರಾದ ಕ್ಲೋಸ್‌ರಂಥ ಅಭಿಮಾನಶಾಲಿಗಳೂ ಪ್ರಶಾಂತಮನಸ್ಕರೂ ಆದ ಅನೇಕ ಇಂಗ್ಲಿಷ್ ಅಧಿಕಾರಿಗಳು ಭರತಖಂಡವನ್ನು ಬಿಟ್ಟುಹೋಗಿದ್ದರು. ಅವರ ಸ್ಥಾನಗಳಿಗೆ ಬಂದಿದ್ದ ಅಧಿಕಾರಿಗಳ ಚಿತ್ತವೃತ್ತಿಯೇ ಬೇರೆ ರೀತಿಯಾಗಿತ್ತು.

ಮಹಾರಾಜರು ರಾಜ್ಯಾಡಳಿತಗಳನ್ನು ವಹಿಸಿಕೊಂಡಾಗ (ಕ್ರಿ.ಶ.೧೮೧೧ನೆಯ ಇಸವಿ) ಸರ್ ಜಾರ್ಜ್ ಬಾರ್ಲೊ ಎಂಬುವರು ಮದ್ರಾಸ್ ಗವರ್ನರ್ ಆಗಿದ್ದರು. ಒಡೆಯರು ರಾಜ್ಯಭಾರವನ್ನು ವಹಿಸಿಕೊಂಡ ಸಂಗತಿಯನ್ನು ಆಗ ರೆಸಿಡೆಂಟರಾಗಿದ್ದ ಕೋಲ್‌ರವರು ಮದ್ರಾಸ್ ಗವರ್ನರ್‌ರವರಿಗೆ ವರದಿ ಮಾಡಿದರು. ಅವರು ರಾಜ್ಯಭಾರ ವಹಿಸಿಕೊಂಡದ್ದನ್ನು ಬಂಗಾಳಾ ಸರ್ಕಾರದವರು ಕೇವಲ ಒಂದು ವೈಯಕ್ತಿಕ ಸಂದರ್ಭವೆಂಬುದಾಗಿ ಪರಿಗಣಿಸಿ, ಮದ್ರಾಸ್ ಸರ್ಕಾರದವರು ಕ್ರಮಬದ್ಧವಾದ ರೀತಿಯಲ್ಲಿ ಆಡಳಿತಗಳನ್ನು ಮಹಾರಾಜರಿಗೆ ವಹಿಸಿಕೊಡಲಿಲ್ಲವೆಂದೂ ರೆಸಿಡೆಂಟರು ತಮ್ಮ ಸ್ವಂತ ಜವಾಬ್ದಾರಿಯಮೇಲೆ ವರ್ತಿಸಿರುವರೆಂದೂ ಆಕ್ಷೇಪಿಸಿದರು.

ಪೂರ್ಣಯ್ಯನವರಂಥ ಅಧಿಕಾರಿಗಳಿಲ್ಲದಿದ್ದುದರಿಂದ ತರುಣ ಮಹಾರಾಜರ ಮನಸ್ಸನ್ನು ಸುಲಭವಾಗಿ ಒಲಿಸಿಕೊಂಡು, ತನ್ಮೂಲಕ ಬ್ರಿಟಿಷರ ಆಶೋತ್ತರಗಳನ್ನು ನಿರಾಯಾಸವಾಗಿ ಸಾಧಿಸಿಕೊಳ್ಳಬಹುದೆಂದು ಆಗಿನ ರೆಸಿಡೆಂಟರಾದ ಕೋಲ್‌ರವರು ಆಲೋಚಿಸಿದರು. ಆಗ ಮಹಾರಾಜರ ದರ್ಬಾರಿನಲ್ಲಿ ಅಧಿಕಾರಿಗಳಾಗಿದ್ದ ಬಾರ್‌ಗಿರ್ ಬಕ್ಷಿಬಾಲಾಜೀರಾವ್, ರಾಮರಾವ್, ಗೋವಿಂದರಾವ್, ಹಿಮ್ಮಾತ್ಯರ್‌ಖಾನ್ ಮುಂತಾದವರುಗಳು ಮಹಾರಾಜರಿಗೆ ಸಲಹೆ ಹೇಳುವಷ್ಟು ಸಮರ್ಥರಾಗಿರಲಿಲ್ಲ. ಮಹಾರಾಜರು ಬಾಲಕರಾಗಿದ್ದಾಗ ಪೂರ್ಣಯ್ಯನವರ ಮಂತ್ರಿಪದವಿಯಲ್ಲಿ ಇಂಗ್ಲಿಷ್ ಅಧಿಕಾರಿಗಳ ಸಹಾಯದಿಂದ ನಡೆಯುತ್ತಿದ್ದ ರಾಜ್ಯಾಡಳಿತಗಳಿಗೂ ಮತ್ತು ಮಹಾರಾಜರು ತಾವೇ ಸ್ವತಃ ನಡೆಯಿಸುವ ರಾಜ್ಯಭಾರ ವಿಚಾರಗಳಿಗೂ ಸ್ಪಷ್ಟವಾದ ವ್ಯತ್ಯಾಸಗಳೇನೆಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿರಬೇಕೆಂದು ಮದ್ರಾಸ್ ಸರ್ಕಾರ

ದವರು ಮೈಸೂರಿನಲ್ಲಿದ್ದ ರೆಸಿಡೆಂಟರಿಗೆ ತಿಳಿಸಿದ್ದರು. ರೆಸಿಡೆಂಟರು ಅರಮನೆಯಲ್ಲಿ ಆಪ್ತರಾದ ಜನರನ್ನು ನೇಮಿಸಿ, ಅಲ್ಲಿ ನಡೆಯುತ್ತಿದ್ದ ಎಲ್ಲ ಸಮಾಚಾರಗಳನ್ನೂ ತಿಳಿದುಕೊಳ್ಳುತ್ತಿದ್ದರು. ತಮ್ಮ ಕಚೇರಿಯ ನೌಕರರು ಹೇಳುತ್ತಿದ್ದ ಕೊಂಡೆಯಗಳನ್ನು ಆದರದಿಂದ ಕೇಳುತ್ತಿದ್ದರು. ಸ್ವಾರ್ಥಪರರಾದ ಜನರು ಇಂಥ ಸಂದರ್ಭದಲ್ಲಿ ದಿನದಿನಕ್ಕೆ ಹೆಚ್ಚಾಗುತ್ತಲೇ ಬಂದರು. ಈ ವಿಚಾರಗಳೆಲ್ಲ ಮಹಾರಾಜರಿಗೆ ತಿಳಿದು, ಬಹಳ ಪ್ರಕ್ಷುಬ್ಧಮನಸ್ಕರಾದರೂ ಕೋಲ್‌ರವರಲ್ಲಿ ಅವರಿಗಿದ್ದ ಗೌರವವು ಕಡಮೆಯಾಗಲಿಲ್ಲ. ಉದಾರ ಹೃದಯರ ನಡತೆಯೇ ಅಂಥದು !

ಮಹಾರಾಜರು ಇಷ್ಟೊಂದು ಅಡ್ಡಿ ಆತಂಕಗಳಿಂದ ಕೂಡಿದ ವಿಷಮ ಸನ್ನಿವೇಶಗಳಲ್ಲಿ ರಾಜ್ಯಭಾರವನ್ನು ನಡೆಯಿಸುತ್ತಿದ್ದರೂ ಅವರು ಎದೆಗುಂದದೆ ಕರ್ತವ್ಯತಾಬುದ್ಧಿಯಿಂದ ರಾಜಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಅವರು ತಮ್ಮ ಪ್ರಭುತ್ವವನ್ನು ಪ್ರಾರಂಭಿಸಿದ ಮೂರು ವರ್ಷಗಳೊಳಗಾಗಿಯೇ ದೇಶವು ನಾನಾ ಮುಖವಾಗಿ ಅಭಿವೃದ್ಧಿಯಾಗಲು ತಕ್ಕ ಸೌಕರ್ಯಗಳನ್ನೆಲ್ಲಾ ಒದಗಿಸಿ, ತಮ್ಮ ದಕ್ಷತೆಯನ್ನು ವ್ಯಕ್ತಪಡಿಸಿದರು. ಆಗ ಇಂಗ್ಲೆಂಡಿನ ಕೋರ್ಟ್ ಆಫ್ ಡೈರೆಕ್ಟರುಗಳೆಂಬ ಅಧಿಕಾರಿಗಳು ಮಹಾರಾಜರ ಆಡಳಿತ ವಿಚಕ್ಷಣೆಯನ್ನು ಬಹಳವಾಗಿ ಪ್ರಶಂಸಿಸಿ, ತಮ್ಮ ಮೆಚ್ಚುಗೆಯನ್ನು ಸೂಚಿಸಿ, ಕಲ್ಕತ್ತಾ ಸರ್ಕಾರದವರಿಗೆ ಒಂದು ಖರೀತವನ್ನು ಬರೆದಿದ್ದರು.

'ಸಿಹಿ ಮಾವಿನ ಮರಕ್ಕೆ ಸೀಗೆಬೇಲಿಯು ಹಬ್ಬಿಕೊಂಡಂತೆ' ಮಹಾರಾಜರ ಸುತ್ತಮುತ್ತಲೂ ಸ್ವಾರ್ಥಿಗಳು ಸೇರಿಕೊಂಡು ಪ್ರಭುಗಳನ್ನು ಒಂದು ಇಕ್ಕಟ್ಟಿಗೆ ಒಳಗು ಮಾಡಿದ್ದರು. ಆದರೂ ಮಹಾರಾಜರು ಬಹಳ ಜಾಗರೂಕತೆಯಿಂದ ರಾಜ್ಯಾಡಳಿತಗಳನ್ನು ನಡೆಯಿಸುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದೆಂದರೆ, ಮಹಾರಾಜರು ತಮ್ಮ ಅಭ್ಯುದಯದೆಶೆಯಲ್ಲಿಯೂ ಮತ್ತು ಆಪತ್ಕಾಲದಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯದವರಲ್ಲಿ ಅಚಲವಾದ ರಾಜನಿಷ್ಠೆಯನ್ನಿಟ್ಟುಕೊಂಡು, ವಂಶಪಾರಂಪರ್ಯವಾಗಿ ಬಂದ ತಮ್ಮ ಹಿರಿಯರ ಸಿಂಹಾಸನದಮೇಲೆ ಪುನಃ ತಮ್ಮನ್ನು ಸಂಸ್ಥಾಪಿಸಿದ ಕಂಪೆನಿ ಸರ್ಕಾರದವರಿಗೆ ಯಾವಜ್ಜೀವವೂ ಕೃತಜ್ಞರಾಗಿದ್ದರು.

ಮಹಾರಾಜರು ತಮ್ಮ ಆಡಳಿತ ವಿಚಕ್ಷಣೆಯಿಂದ ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅವರು ರಾಜ್ಯಾಡಳಿತಗಳನ್ನು ವಹಿಸಿಕೊಂಡ ವರ್ಷವೇ, ಬ್ರಿಟಿಷ್ ರೆಸಿಡೆಂಟರೊಂದಿಗೆ ರಾಜಕಾರ್ಯ ನಿಮಿತ್ತವಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಅವರ ಸಂಗಡ ತಕ್ಕಷ್ಟು ಅಶ್ವಸೈನ್ಯವೂ, ಪದಾತಿದಳವೂ ಹೊರಟಿದ್ದಿತು. ಪ್ರಭುಗಳ ಸವಾರಿಯು ಬರುವುದೆಂದು ಮೊದಲೇ ಗೊತ್ತಾಗಿದ್ದುದರಿಂದ ದಾರಿಯುದ್ದಕ್ಕೂ ಪ್ರಜೆಗಳು ಕಾದಿದ್ದು ಮಹಾರಾಜರನ್ನು ಗೌರವಪುರಸ್ಸರವಾಗಿ ಇದಿರುಗೊಂಡು ತಮ್ಮ ರಾಜಭಕ್ತಿಯನ್ನು ವ್ಯಕ್ತಪಡಿಸಿದರು. ಅವರು ಬೆಂಗಳೂರನ್ನು ಸೇರಿದಾಗ ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳು ಸೈನ್ಯ ಮರ್ಯಾದೆಗಳೊಡನೆ ಅವರನ್ನು ಸ್ವಾಗತಿಸಿ, ಬಿಡಾರಕ್ಕೆ ಕರೆದೊಯ್ದರು. ಮಾರನೆಯ ದಿನ ಮಹಾರಾಜರು ಆಗ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಕುದುರೆಯ ಜೂಜನ್ನು ನೋಡುವುದಕ್ಕಾಗಿ ಹೋಗಿದ್ದಾಗ, ಪ್ರಭುಗಳ ಆಗಮನಕ್ಕಾಗಿಯೇ ಸಿದ್ಧಪಡಿಸಿದ್ದ ಅಲಂಕಾರಯುಕ್ತವಾದ ಹಸುರುವಾಣಿ ಚಪ್ಪರದಲ್ಲಿ ಯೂರೋಪು ದೇಶೀಯರೂ ಮತ್ತು ಇತರರೂ ಕಾದಿದ್ದು ಅವರನ್ನು ಅಟ್ಟಹಾಸದಿಂದ ಇದಿರುಗೊಂಡರು. ಮಾರನೆಯ ದಿನ ಮಹಾರಾಜರು ಟೀಪೂಸುಲ್ತಾನನ ಅರಮನೆಯಲ್ಲಿ ವಿಶೇಷ ರೀತಿಯ ದರ್ಬಾರನ್ನು ನಡೆಯಿಸಿದರು. ಆ ದರ್ಬಾರಿಗೆ ಪ್ರಮುಖರಾದ ಇಂಗ್ಲಿಷ್ ದೊಡ್ಡ ಮನುಷ್ಯರುಗಳೂ ಮತ್ತು ದೊರೆಸಾನಿಯರುಗಳೂ ಬಂದಿದ್ದರು. ಪ್ರಭುಗಳು ಸರ್ವಸಮದರ್ಶಿಗಳಾಗಿದ್ದುಕೊಂಡು ಎಲ್ಲರ ಭಕ್ತಿ ಗೌರವಗಳನ್ನೂ ಗಳಿಸಿದ್ದರು.

ಮೈಸೂರಿನಲ್ಲಿ ರಾಜಒಡೆಯರ ಕಾಲದಿಂದಲೂ ನಡೆದುಕೊಂಡುಬಂದಿದ್ದ ನವರಾತ್ರಿ ಮಹೋತ್ಸವವನ್ನು ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಪ್ರಾರಂಭವಾಯಿತು. ಮಹಾರಾಜರ ಪ್ರಜೆಗಳು ತಂಡೋಪತಂಡವಾಗಿ ಅರಮನೆಯ ಮುಂದುಗಡೆಯಲ್ಲಿ ಕಿಕ್ಕಿರಿದು ನಿಂತು, ದೊರೆಗಳು ಇತಿಹಾಸಪ್ರಸಿದ್ಧವಾದ ರತ್ನಸಿಂಹಾಸನಾರೋಹಣ ಮಾಡುವುದನ್ನೂ ದರ್ಬಾರು ನಡೆಯಿಸುವುದನ್ನೂ ನೋಡಿ ಅತ್ಯಾನಂದ ಪಡುತ್ತಿದ್ದರು. ವಿಜಯದಶಮಿಯ ದಿನ ಮಹಾರಾಜರು ಪಟ್ಟದ ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತು ಸಕಲ ಸೇನಾಮರ್ಯಾದೆ



ಯೊಡನೆ ಬನ್ನಿಯ ಮಂಟಪಕ್ಕೆ ಬಿಜಯಮಾಡುತ್ತಿರುವಾಗ, ವಾದ್ಯವಿಶೇಷಗಳು ಮೊರೆಯುತ್ತಿರಲು ಪ್ರಜೆಗಳು ಆ ಉತ್ಸವವನ್ನು ಕಣ್ಣಾರೆ ಕಂಡು ಆನಂದಿಸುತ್ತಿದ್ದರು. ಮುಂದೆ ತಮಗೆ ಸುಖಶಾಂತಿಗಳು ಶಾಶ್ವತವಾಗಿ ಲಭಿಸುವುವೆಂದು, ಜನರು ತಮ್ಮ ಹಿಂದಿನ ಕಷ್ಟಗಳನ್ನೆಲ್ಲಾ ಮರೆತು ಅವರನ್ನು ಕೊಂಡಾಡುತ್ತಿದ್ದರು. ಪ್ರತಿ ವರ್ಷವೂ ದಸರಾ ಮಹೋತ್ಸವವು ಹೆಚ್ಚು ಹೆಚ್ಚು ವೈಭವದಿಂದ ನಡೆಯುತ್ತಿತ್ತು. ಮಹಾರಾಜರ ಆಳಿಕೆಯು ಪ್ರಾರಂಭವಾಗಿ ಎಂಟು ವರ್ಷಗಳಾಗುತ್ತಾ ಬಂದುವು. ದೇಶದ ಆಡಳಿತಕ್ರಮವು ತೃಪ್ತಿಕರವಾಗಿ ನಡೆಯುತ್ತಿದ್ದಿತು.

ಐದನೆಯ ಅಧ್ಯಾಯ

ಮೈಸೂರು ಸೈನಿಕರ ಸಾಹಸ, ಮಹಾರಾಜರ ಔದಾರ್ಯ

"ರಾಜಾ ಕಾಲಸ್ಯ ಕಾರಣಂ" "ರಾಜಾ ರಾಷ್ಟ್ರಸ್ಯ ಕಾರಣಂ"

[ಋಷಿ ವಾಣಿ.

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ರಾಜ್ಯಪರಿಪಾಲನೆ ಮಾಡುತ್ತಿದ್ದ ಕಾಲವಲ್ಲಿ ಭರತಖಂಡದ ಪರಿಸ್ಥಿತಿಯೂ ಹದಗೆಟ್ಟುಹೋಗಿದ್ದಿತು. ಆ ಕಾಲದಲ್ಲಿ ಅಲ್ಲಲ್ಲಿ ದಂಗೆಕೋರರೂ, ತುಂಟರೂ, ಪುಂಡರೂ, ದರೋಡೆಗಾರರೂ ಗುಂಪು ಕೂಡಿಕೊಂಡು ಸಭ್ಯರಾದ ಪ್ರಜೆಗಳನ್ನು ಹಿಂಸಿಸಿ, ಅವರನ್ನು ಸುಲಿಗೆ ಮಾಡುತ್ತಾ ಕೈಗೆ ಸಿಕ್ಕಿದ ಒಡವೆ ವಸ್ತುಗಳನ್ನೂ, ಧನ ಧಾನ್ಯಗಳನ್ನೂ ಹೊತ್ತುಕೊಂಡು ಹೋಗುತ್ತಿದ್ದರು. ಭರತಖಂಡದ ಅನೇಕ ಭಾಗಗಳಲ್ಲಿ ಇಂಥ ಅನಾಂತರಗಳು ದಿನಬೆಳಗಾದರೆ ನಡೆಯುತ್ತಲೇ ಇದ್ದುವು. ಪಿಂಡಾರೆಯವರೆಂಬ ಒಂದು ಜಾತಿಯ ಜನಗಳು ಯಾವಾಗಲೂ ದರೋಡೆಗಳಲ್ಲಿಯೇ ಕಾಲ ಕಳೆಯುತ್ತಿದ್ದರು. ಅವರು ಗುಂಪು ಗುಂಪಾಗಿ ದೇಶದಮೇಲೆ ನುಗ್ಗಿ ಬರುತ್ತಿದ್ದರು. ಒಂದೊಂದು ಗುಂಪಿನಲ್ಲಿಯೂ ಒಂದು ಸಾವಿರ ಮೊದಲುಗೊಂಡು ನಾಲ್ಕು ಸಾವಿರದವರೆಗೆ ಜನಗಳಿರುತ್ತಿದ್ದರು. ಅವರು ದರೋಡೆ ಮಾಡಬೇಕೆಂದಿರುವ ಪ್ರದೇಶಗಳಿಗೆ ಬರುತ್ತಲೇ, ಇನ್ನೂರು ಅಥವಾ ಮುನ್ನೂರು ಜನರು ಒಂದೊಂದು ಗುಂಪಾಗಿ ಬೇರೆ ಬೇರೆ ಕಡೆಗಳಿಂದ ಹಳ್ಳಿಗಳಿಗೆ ನುಗ್ಗುತ್ತಿದ್ದರು; ಕುದುರೆಗಳಮೇಲೆ ಕುಳಿತುಕೊಂಡು ನಿರಾಯಾಸವಾಗಿ ಎಷ್ಟು ದೂರ ಬೇಕಾದರೂ ಹೋಗುವಷ್ಟು ದೃಢಕಾಯರಾಗಿದ್ದರು; ಹಳ್ಳಿಗಳಲ್ಲಿ ಸಿಕ್ಕಿದ ಆಹಾರ ಸಾಮಗ್ರಿಗಳನ್ನು ತಿಂದುಕೊಂಡು, ರಾತ್ರಿಯಾದ ಕೂಡಲೇ, ಕಲ್ಲುಗಳಮೇಲೆಯೋ ನೆಲದಮೇಲೆಯೋ ಮಲಗಿ ನಿದ್ರಿಸುತ್ತಿದ್ದರು. ಅವರು ಬಹಳ ನಿಷ್ಕರುಣಿಗಳಾಗಿದ್ದುದರಿಂದ ಹಳ್ಳಿಗಳಿಗೆ ನುಗ್ಗಿ ಕೈಗೆ ಸಿಕ್ಕಿದ ಪದಾರ್ಥಗಳನ್ನು ದೋಚಿಕೊಂಡು ಹೋಗುತ್ತಿದ್ದುದಲ್ಲದೆ, ಹಳ್ಳಿಗಳಿಗೂ ಹುಲ್ಲು ಬಣವೆಗಳಿಗೂ ಬೆಂಕಿಯಿಟ್ಟು ಹಾವಳಿ

ಮಾಡುತ್ತಿದ್ದರು. ಇಷ್ಟಲ್ಲದೆ ಆ ದುರಾತ್ಮರು ಸ್ತ್ರೀಯರ ಮಾನಾಪಹರಣ ಮಾಡುತ್ತಾ ನಿಂತಕಡೆ ನಿಲ್ಲದೆ ಊರಿಂದೂರಿಗೆ ಅಲೆದಾಡುತ್ತಿದ್ದರು.

ಇಂಥ ಪುಂಡಾಟಗಳನ್ನು ಅಡಗಿಸುವುದಕ್ಕಾಗಿ ಮಹಾರಾಜರು ತಮ್ಮ ಸೈನ್ಯವನ್ನು ಕಂಪೆನಿ ಸರ್ಕಾರದವರ ನೆರವಿಗೆ ಕಳುಹಿಸಿಕೊಡಬೇಕೆಂದು ಗವರ್ನರ್ ಜನರಲ್‌ರವರು ಅಪೇಕ್ಷಿಸಿದರು. ಆಗ, ಅವರು ಸಮರ್ಥನಾದ ಅಣ್ಣಾಜಿರಾಯನೆಂಬುವನ ಕೈಕೆಳಗೆ, ಮೈಸೂರು ಸೈನ್ಯವನ್ನು ಇಂಗ್ಲಿಷಿನವರ ಸಹಾಯಕ್ಕಾಗಿ ದಕ್ಷಿಣ ಪ್ರಾಂತಗಳಿಗೆ ಕಳುಹಿಸಿದರು. ಆ ಸೈನ್ಯವು ನಿಜಾಂ ರಾಜ್ಯದಲ್ಲಿರುವ ಬಿದರೆಯ ಪ್ರಾಂತಕ್ಕೆ ಹೋಯಿತು. ಮೇಜರ್ ರಾಬರ್ಟ್ ಮ್ಯಾಕ್‌ಡೋನಾಲ್ಡ್ ಎಂಬುವನು ಕಂಪೆನಿ ದಂಡಿನ ದಳಪತಿಯಾಗಿದ್ದನು. ಮೈಸೂರು ಸೈನ್ಯವೂ ಆವನ ಆಜ್ಞೆಯಂತೆ ಕೆಲಸಮಾಡಬೇಕಾಗಿತ್ತು. ಆ ಸೈನ್ಯದಲ್ಲಿ ಕೆಲವರು ಮಾತ್ರ ವಿಲಾಯಿತಿ ಸೈನಿಕರಿದ್ದರು. ಉಳಿದವರು ೧,೦೦೦ ಮಂದಿ ಮೈಸೂರು ರಾಹುತರಿದ್ದರು. ಆ ಇಂಗ್ಲಿಷ್ ದಳಪತಿಯು ಮೈಸೂರು ಸೈನ್ಯದ ಸಹಾಯದಿಂದ ಪಿಂಡಾರಿಯವರನ್ನು ಬೇಟೆಯಾಡುತ್ತಾ, ಬಹಳ ಕಷ್ಟಪಟ್ಟು ಆ ಪ್ರಾಂತದಲ್ಲಿ ಅವರ ಹಾವಳಿಯನ್ನು ಅಡಗಿಸಿದನು. ಇದರಂತೆಯೇ, ಹೋಳ್ಕರ್ ರಾಜ್ಯದಲ್ಲಿ ಪಿಂಡಾರಿಯವರ ಕಾಟವನ್ನು ತಪ್ಪಿಸಲು ಮೈಸೂರು ಸೈನ್ಯವು ಬಕ್ಷಿ ಭೀಮರಾಯನ ಕೈಕೆಳಗೆ ಹೋಗಿದ್ದಿತು. ಭೀಮರಾಯನು ಬಹಳ ಸಾಹಸದಿಂದ ಆ ಕಿರಾತರನ್ನು ಸೋಲಿಸಿ, ಅನೇಕರನ್ನು ಕೊಂದು, ಅವರ ವಶದಲ್ಲಿದ್ದ ಆನೆಗಳನ್ನೂ, ಒಂಟೆಗಳನ್ನೂ ಕುದುರೆಗಳನ್ನೂ ವಸ್ತ್ರಾಭರಣಗಳನ್ನೂ, ಇಪ್ಪತ್ತಾರು ಲಕ್ಷ ವರಹ ದ್ರವ್ಯವನ್ನೂ ತೆಗೆದುಕೊಂಡು ಬಂದನು. ಇಷ್ಟಲ್ಲದೆ, ಮಹಾರಾಜರಿಗೆ ಎರಡು ಲಕ್ಷ ವರಹ ದ್ರವ್ಯವನ್ನು ಗೌರವ ಕಾಣಿಕೆಯಾಗಿ ಒಪ್ಪಿಸಿದನು. ಹೋಳ್ಕರನ ನಿಶಿತ ಕರವಾಲವೂ, ರತ್ನಖಚಿತವಾದ ಸೊಂಟಪಟ್ಟಿಯೂ ಆ ಕೊಳ್ಳೆಯಲ್ಲಿ ಬಂದಿದ್ದವು. ಹೋಳ್ಕರ್ ರಾಜ್ಯದಲ್ಲಿ ಪುಂಡಾಟಮಾಡುತ್ತಿದ್ದ ಪಿಂಡಾರಿಯವರನ್ನು ಅಡಗಿಸುವುದರಲ್ಲಿ ಮೈಸೂರು ಸೈನ್ಯಗಳು ಸರ್ ಜಾನ್ ಮ್ಯಾಲ್ ಕೊಲಂ ಎಂಬ ದಂಡನಾಯಕನ ಕೈಕೆಳಗೆ ಹೋರಾಡಿದ್ದುದರಿಂದ, ಮಹಾರಾಜರು ಹೋಳ್ಕರನ ಖಡ್ಗವನ್ನೂ ಸೊಂಟಪಟ್ಟಿಯನ್ನೂ ಆ ಇಂಗ್ಲಿಷ್ ದಳಪತಿಗೆ ಬಹುಮಾನವಾಗಿ ಕೊಟ್ಟರು. ಮೈಸೂರು ಸೈನ್ಯವನ್ನು ಪ್ರೀತ್ಯಾದರ

ಗಳಿಂದ ಗೌರವಸಿದ್ದುದಕ್ಕಾಗಿ, ಮಹಾರಾಜರು ಉಡುಗೊರೆಯನ್ನು ಕೊಟ್ಟಿರುವುದಾಗಿ ಹೇಳಿ ಅವನನ್ನು ಸಂಭಾವಿಸಿದರು.

ಮೈಸೂರು ಸೈನ್ಯದವರು ಎಲ್ಲೆಲ್ಲಿಯೂ ಜಯಶೀಲರಾಗುತ್ತಿದ್ದರು. ಇದೇ ಸಮಯದಲ್ಲಿ, ಪೇಷ್ವೆ ಬಾಜೀರಾಯನಿಗೂ ಇಂಗ್ಲಿಷಿನವರಿಗೂ ಯುದ್ಧ ಕೈಗಟ್ಟಿತು. ಆಗ ಮೈಸೂರು ಸೈನಿಕರು ಬಕ್ಷಿ ರಾಮರಾಯ ಮತ್ತು ಬಕ್ಷಿ ಭೀಮರಾಯ ಎಂಬುವರ ಮುಂದಾಳುತನದಲ್ಲಿ ಇಂಗ್ಲಿಷಿನವರ ಸಹಾಯಕ್ಕೆ ಹೊರಟರು. ಸರ್ ಜಾರ್ಜ್ ವ್ಯಾಲ್‌ಕೊಲಂ ಸೇನಾನಾಯಕನು ಇಂಗ್ಲಿಷ್ ಸೈನ್ಯವನ್ನು ನಡೆಯಿಸುತ್ತಿದ್ದನು. ಮೈಸೂರು ಸೈನ್ಯವು ಧುರಧೀರ ರಾಮರಾಯನ ಕೈಕೆಳಗೆ ಬಹಳ ಪರಾಕ್ರಮದಿಂದ ಯುದ್ಧಮಾಡಿತು. ಭೀಮರಾಯನ ಏಟೂ ಬಲವಾಯಿತು. ಮೈಸೂರು ಸೈನ್ಯದ ಪೆಟ್ಟಿಗೆ ತಾಳಲಾರದೆ ಮರಾಟೆಯ ಸೈನಿಕರು ಹಿಮ್ಮೆಟ್ಟಿದರು. ಪೇಷ್ವೆಯು ತಲೆತಪ್ಪಿಸಿಕೊಂಡು ಓಡಿಹೋದನು. ಯುದ್ಧದಲ್ಲಿ ಇಂಗ್ಲಿಷಿನವರಿಗೆ ಜಯವಾಯಿತು. ಸಮರ ಪರಿಸಮಾಪ್ತಿಯಾದ ಮೇಲೆ, ಬಕ್ಷಿ ರಾಮರಾಯನೂ, ಬಕ್ಷಿ ಭೀಮರಾಯನೂ ತಮ್ಮ ತಮ್ಮ ಸೈನ್ಯದೊಂದಿಗೆ ರಾಜಧಾನಿಗೆ ಹಿಂದಿರುಗಿದರು. ಗುಣೈಕಪಕ್ಷಪಾತಿಗಳಾದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ಅದನ್ನು ಕೇಳಿ, ಆ ಯುದ್ಧವೀರರನ್ನು ಮರ್ಯಾದೆಯಿಂದ ಇದಿರುಗೊಂಡು ಕರೆತರುವಂತೆ ಅಪ್ಪಣೆಮಾಡಿದರು.

ಮಹಾರಾಜರು ಮರುದಿನ ಶಿವಪೂಜೆಯನ್ನು ನೆರವೇರಿಸಿಕೊಂಡು ಅಂಬಾವಿಲಾಸಕ್ಕೆ ಎಂದಿನಂತೆ ಚಿತ್ತೈಸಿದರು. ಆ ಸಮಯಕ್ಕೆ ಸರಿಯಾಗಿ, ಬಕ್ಷಿ ರಾಮರಾಯನೂ, ಬಕ್ಷಿ ಭೀಮರಾಯನೂ ರತ್ನಖಚಿತವಾದ ಪೂಜೋಪಕರಣಗಳನ್ನೂ ಅಮೌಲ್ಯವಾದ ಆಭರಣಗಳನ್ನೂ ದೊಡ್ಡ ದೊಡ್ಡ ಪರಾತುಗಳಲ್ಲಿರಿಸಿಕೊಂಡು, ಅಂಬಾವಿಲಾಸಕ್ಕೆ ಬಂದು, ಮಹಾಸ್ವಾಮಿಯವರ ಮುಂಗಡೆಯಲ್ಲಿರಿಸಿ, ರಾಜಭಕ್ತಿಯುತರಾಗಿ ಮುಜರೆ ಮಾಡಿದರು. ಮಹಾರಾಜರು ಹಸನ್ಮುಖದಿಂದಲೂ ಕುತೂಹಲ ದೃಷ್ಟಿಯಿಂದಲೂ ನೋಡುತ್ತ ನಿಂತುಬಿಟ್ಟರು. ಆ ಸಮಯದಲ್ಲಿ,

ಬಕ್ಷಿ ರಾಮರಾಯ :—ಮಹಾಸ್ವಾಮಿ, ನಾವು ಪೇಷ್ವೆ ಬಾಜೀರಾಯನಮೇಲೆ ಯುದ್ಧ ಮಾಡಿದ ಕಾಲದಲ್ಲಿ ಪೂಜಾಸಾಮಗ್ರಿಗಳೂ, ರತ್ನಾಭರಣಗಳೂ

ನಮಗೆ ಸಿಕ್ಕಿದುವು. ಇವುಗಳನ್ನು ಮಹಾಸ್ವಾಮಿಯವರ ಸನ್ನಿಧಿಯಲ್ಲಿ ಸಮರ್ಪಿಸಿರುವೆವು.

ಮಹಾರಾಜರು :—ಮಹಾಪರಾಕ್ರಮಿಗಳಾದ ನೀವು ಮರಾಟಿಯವರ ಬಲವನ್ನು ಮುರಿದು, ಪೇಷ್ವೆಯನ್ನು ಜಯಿಸಿರುವುದರಿಂದ ನಮಗೂ ನಮ್ಮ ಸಂಸ್ಥಾನಕ್ಕೂ ಯಶಸ್ಸು ಲಭಿಸಿದಂತಾಯಿತು. ರತ್ನಖಚಿತವಾದ ಈ ಅನರ್ಘ್ಯಾಭರಣಗಳೆಲ್ಲಾ ನಿಮಗೆ ಯುದ್ಧದಲ್ಲಿ ಸಿಕ್ಕಿರುವುದರಿಂದ ನಿಮ್ಮ ಸಾಹಸಕ್ಕೆ ತಕ್ಕ ಬಹುಮಾನ ದೊರೆತಂತಾಯಿತು. ಇದನ್ನು ನೀವೇ ತೆಗೆದುಕೊಳ್ಳಬಹುದು.

ಬಕ್ಷಿ ರಾಮರಾಯ :—ಮಹಾಪ್ರಭೂ, ತಮ್ಮ ಕ್ರಿಯಾಸಿದ್ಧಿಯ ಬಲದಿಂದ ನಾವು ಶತ್ರುಗಳನ್ನು ಜಯಿಸಿದೆವು. ತಮ್ಮ ಪುಣ್ಯಪ್ರಭಾವದಿಂದ ಮೈಸೂರು ನಾಡಿಗೆ ಕೀರ್ತಿ ಬಂದಿತು. ಅಲ್ಪರಾದ ನಮ್ಮಿಂದ ಏನೇನೂ ನಡೆಯಲಾರದು! ಮಹಾಸ್ವಾಮಿಯವರ ಸೇವೆಯಲ್ಲಿ ನಿರತರಾಗಿರುವ ನಮಗೆ ಇವು ಸಲ್ಲತಕ್ಕುವುಗಳಲ್ಲ. ಪ್ರಭುವರ್ಯರು ಸ್ವೀಕರಿಸಿ, ಅನುಗ್ರಹಿಸಬೇಕಾಗಿ ಪ್ರಾರ್ಥನೆ.

ಮಹಾರಾಜರು :—ನಿಮ್ಮಿಂದ ನಮ್ಮ ಸಂಸ್ಥಾನಕ್ಕೂ, ಕಂಪೆನಿ ಸರ್ಕಾರದವರಿಗೂ ಅಕಳಂಕವಾದ ಕೀರ್ತಿ ದೊರೆಯಿತು. ಈ ಆಭರಣಗಳಿಗಿಂತಲೂ ಆ ಕೀರ್ತಿಯೇ ನೂರ್ಮಡಿ ಮಿಗಿಲಾದುದೆಂದು ಭಾವಿಸುತ್ತೇವೆ. ಆದುದರಿಂದ ಇವೆಲ್ಲವನ್ನೂ ನೀವೇ ತೆಗೆದುಕೊಳ್ಳಬಹುದು. ಇದರಿಂದ ನಮ್ಮ ಮನಸ್ಸಿಗೆ ಬಹಳ ಹರ್ಷವುಂಟಾಗುತ್ತದೆ.

ಬಕ್ಷಿ ಭೀಮರಾಯ :—ಮಹಾಸ್ವಾಮಿ, ಸೇವಕರು ತಮ್ಮ ಕರ್ತವ್ಯವನ್ನು ಮಾತ್ರ ನೆರವೇರಿಸಿರುತ್ತಾರೆ. ಮಹಾಸ್ವಾಮಿಯವರ ಕೃಪಾಬಲದಿಂದ ನಾವು ಜಯಪ್ರದರಾದೆವೇ ಹೊರತು ಬಡಪ್ರಾಣಿಗಳಾದ ನಾವೇನು ಮಾಡಬಲ್ಲೆವು!

ಮಹಾರಾಜರು :—(ಮುಗುಳ್ನಗೆಯಿಂದ) ಎಷ್ಟೇ ಆಗಲಿ, ಅಸಹಾಯ ಶೂರರು ನೀವು! ಹಠತೊಟ್ಟಮೇಲೆ ಬಿಡುವವರಲ್ಲ! ಶಪಥ ಮಾಡಿದಮೇಲೆ

ಹಿಂತೆಗೆಯುವವರಲ್ಲ! ಒಳ್ಳೆಯದು, ನಾವು ಈ ಪೂಜೋಪಕರಣಗಳನ್ನೂ ಸಕಲಾಭರಣಗಳನ್ನು ಕಾಣಿಕೆಯಾಗಿ ಅಂಗೀಕರಿಸಿದ್ದೇವೆ.

ಬಕ್ಷಿಗಳಿಬ್ಬರೂ:—(ಅಡ್ಡ ಬಿದ್ದು) ಕೃತಾರ್ಥರಾದೆವು. ನಮ್ಮ ಶೌರ್ಯ ಪ್ರತಾಪಗಳು ಇಂದು ಶೋಭಿಸಿದುವು!

ಮಹಾರಾಜರು :—(ನಸುನಗುತ್ತಾ) ಹಾಗಾದರೆ, ಈ ಸಮಸ್ತ ಆಭರಣಗಳೂ, ಪೂಜೋಪಕರಣಗಳೂ ನಮಗೆ ಸೇರಿದಂತಾಯಿತಷ್ಟೆ!

ಬಕ್ಷಿ ರಾಮರಾಯ :—ಎಲ್ಲವೂ ಪ್ರಭು ಸನ್ನಿಧಾನಕ್ಕೆ ಸೇರಿದವುಗಳೇ ಸರಿ!

ಮಹಾರಾಜರು :—ನಾವು ಇದನ್ನು ನಮ್ಮ ಇಷ್ಟಬಂದಂತೆ ವಿನಿಯೋಗಿಸಿಕೊಳ್ಳಬಹುದಷ್ಟೆ!

ಬಕ್ಷಿರಾಮರಾಯ :—ಪ್ರಭು ಚಿತ್ತ!

ಮಹಾರಾಜರು:—ಬಕ್ಷಿಗಳೇ; ಹಾಗಾದರೆ, ದೇಶಪ್ರೇಮಿಗಳೂ, ಸ್ವಾಮಿನಿಷ್ಠರೂ ಆದ ನಿಮ್ಮ ಸಾಹಸಕ್ಕೆ ಮೆಚ್ಚಿ, ಇವೆಲ್ಲವನ್ನೂ ನಿಮಗೇ ಪಾರಿತೋಷಿಕವಾಗಿ ಕೊಟ್ಟಿರುತ್ತೇವೆ. ಎಲ್ಲವನ್ನೂ ನೀವೇ ಅನುಭವಿಸಬಹುದು.

ಬಕ್ಷಿರಾಮರಾಯ :—ಉದಾರಹೃದಯರಾದ ಮಹಾಪ್ರಭುಗಳ ಘನತೆಗೆ ತಕ್ಕ ಔದಾರ್ಯ! ಆದರೆ, ನಾವು ಇದನ್ನು ಪುನಃ ಸ್ವೀಕರಿಸಿದರೆ ದತ್ತಾಪಹಾರದೋಷಕ್ಕೆ ಪಾತ್ರರಾಗುತ್ತೇವೆ. ಅಲ್ಲದೆ, ಅನರ್ಘ್ಯವಾದ ರತ್ನಾಭರಣಗಳು ನಮ್ಮಂಥ ದೀನಸೇವಕರಿಗೆ ಅರ್ಹವಾದವುಗಳಲ್ಲ; ಮಹಾಸ್ವಾಮಿಯವರಿಗೆ ಭೂಷಣಪ್ರದವಾದವುಗಳು. ಪ್ರಭುವರ್ಯರು ಕಿಂಕರರನ್ನು ಕ್ಷಮಿಸಬೇಕು. ರಾಜಯೋಗ್ಯವಾದ ಈ ಆಭರಣಗಳನ್ನು ಸ್ವೀಕರಿಸಿ, ಅನುಗ್ರಹಿಸಬೇಕಾಗಿ ಬೇಡುತ್ತೇವೆ.

ಮಹಾರಾಜರು :—ಆಜನ್ಮಶೂರರಾದ ನೀವು ನಿಮ್ಮ ಭುಜಪರಾಕ್ರಮದಿಂದ ಶತ್ರು ಸೈನ್ಯವನ್ನು ಜಯಿಸಿದಿರಿ; ವಾಗ್ಬಲದಿಂದ ನಮ್ಮನ್ನು ಗೆದ್ದಿರಿ! ನಾವು ನಿಮ್ಮ ಸೌಜನ್ಯಕ್ಕೆ ಕಟ್ಟುಬಿದ್ದೆವು. ನಿಮ್ಮಿಷ್ಟದಂತೆ ನಾವು ಇವುಗಳನ್ನು ಸ್ವೀಕರಿಸಿರುತ್ತೇವೆ.

ಎಂದು ಹೇಳಿ ಒಡೆಯರು ಆ ವೀರರಿಬ್ಬರನ್ನೂ ಯಥೋಚಿತವಾಗಿ ಮನ್ನಿಸಿ ಬೀಳ್ಕೊಟ್ಟರು.

ಅದೇ ದಿನ ರಾತ್ರಿ ಅರಮನೆಯಲ್ಲಿ ಮಹಾರಾಜರು ದರ್ಬಾರು ನಡೆಯಿಸಿದರು. ತುಂಬಿದ ಸಭೆಯಲ್ಲಿ, ಆ ಬಕ್ಷಿಗಳಿಬ್ಬರಿಗೂ ವೀರಯೋಗ್ಯವಾದ ಉಡುಗೊರೆಗಳನ್ನು ಕೊಟ್ಟು ಗೌರವಿಸಿದರು. ರಾಮರಾಯನಿಗೆ ೬,೦೦೦ ವರಹ ಉತ್ಪತ್ತಿಯುಳ್ಳ ಜಹಗೀರನ್ನೂ, ಭೀಮರಾಯನಿಗೆ ೪,೦೦೦ ವರಹ ವರಮಾನ ಬರುವ ಜಹಗೀರನ್ನೂ ದಯೆಪಾಲಿಸಿರುವುದಾಗಿ ತಿಳಿಸಿ, ರಾಮರಾಯನಿಗೆ ಒಂದು ಆನೆಯನ್ನೂ ಬಹುಮಾನವಾಗಿ ಕೊಟ್ಟರು. ರಾಮರಾಯನು ಆನೆಯಮೇಲೆ ಅಂಬಾರಿಯಲ್ಲಿ ಕುಳಿತುಕೊಂಡು ಸಂಚರಿಸ ಬಹುದೆಂಬುದಾಗಿ ಅನುಮತಿಯಿತ್ತರು. ಅವರದು ಎಂಥ ಔದಾರ್ಯ!

ಆಗ ಗವರ್ನರ್ ಜನರಲ್‌ರವರಾಗಿದ್ದ ಹೇಸ್ಟಿಂಗ್ಸ್‌ರವರು ಮೈಸೂರು ಸೈನಿಕರು ಸಲ್ಲಿಸಿದ ಅಮೋಘವಾದ ಸೇವೆಯನ್ನು ಪ್ರಶಂಸಿಸಿ ಮಹಾರಾಜರಿಗೆ ಒಂದು ಖರೀತವನ್ನು ಬರೆದಿದ್ದರು. "ನಿಮ್ಮ ಸೈನಿಕರು ಮ್ಯಾಲ್‌ಕೊಲಂ ದಳಪತಿಯ ಕೈಕೆಳಗೆ ಈಗ ದಖ್ಖ ಪ್ರಾಂತದಲ್ಲಿದ್ದಾರೆ. ಅನೇಕರು ಸ್ವಸ್ಥಾನ ಗಳಿಗೆ ಹಿಂದಿರುಗಿ ಬರಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಅವರು ಸಲ್ಲಿಸಿದ ಅಸಾಧಾರಣವಾದ ಸೇವೆಯನ್ನೂ, ತಾವು ಬ್ರಿಟಿಷ್ ಸರ್ಕಾರದವರಿಗೆ ತೋರಿಸಿರುವ ಪ್ರೀತ್ಯಾದರಗಳನ್ನೂ ಕೇಳಿ ನಾನು ಬಹಳ ಸಂತೋಷ ಪಡುತ್ತೇನೆ. ಇಂಗ್ಲಿಷ್ ಸೈನ್ಯದವರೊಂದಿಗೆ ನಿಮ್ಮ ದೇಶೀಯ ಸೈನಿಕರು ಸಹಕರಿಸಿ ಯುದ್ಧದಲ್ಲಿ ಜಯಪ್ರದರಾಗಿದ್ದಾರೆಂಬ ಸಂಗತಿಯು ಇದುವರೆ ಗಾಗಲೇ ನಿಮಗೆ ತಿಳಿದುಬಂದಿರಬಹುದು. ನಿಮ್ಮ ಸೈನಿಕರು ಅವರ ಕರ್ತವ್ಯ ಗಳನ್ನು ನೆರವೇರಿಸುವುದರಲ್ಲಿ ತೋರಿಸಿದ ಧೈರ್ಯ, ಪರಾಕ್ರಮ ಮತ್ತು ಚಾತುರ್ಯ — ಇವುಗಳ ವಿಚಾರವನ್ನು ನಾನು ಬ್ರಿಟಿಷ್ ಅಧಿಕಾರಿಗಳ ಮೂಲಕ ತಿಳಿದುಕೊಂಡಿರುತ್ತೇನೆ. ಈ ಸಂಗತಿಯನ್ನು ತಮಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಬಕ್ಷಿ ರಾಮರಾಯನೂ ಮತ್ತು ಬಕ್ಷಿ ಭೀಮ ರಾಯನೂ ಸಲ್ಲಿಸಿದ ಸೇವೆಯನ್ನು ಮೆಚ್ಚಿ, ತಾವು ಈಗಾಗಲೇ ಅವರಿಗೆ ರಾಜ ಗೌರವೋಚಿತವಾಗಿ ಸನ್ಮಾನಮಾಡಿದುದರಿಂದ ಅವರಿಬ್ಬರೂ ಜನಾದರಣೀಯ

ರಾಗಿರುತ್ತಾರೆ. ಬ್ರಿಟಿಷ್ ಸರ್ಕಾರದವರು ನಿಮ್ಮ ದೇಶದ ಮತ್ತು ಪ್ರಜೆಗಳ ಅಭ್ಯುದಯವನ್ನೂ, ಯೋಗಕ್ಷೇಮವನ್ನೂ ಸದಾ ತಮ್ಮ ಗಮನದಲ್ಲಿಟ್ಟುಕೊಂಡಿರುತ್ತಾರೆಂದು ನಾನು ತಮಗೆ ವಿಶ್ವಾಸಪೂರ್ವಕವಾಗಿ ಹೇಳಬಯಸುತ್ತೇನೆ. ಇದರಿಂದ ಉಭಯ ಸರ್ಕಾರಗಳಿಗೂ ಅತ್ಯಂತ ಸ್ನೇಹಸೌಹಾರ್ದ್ರಗಳುಂಟಾಗುವುವೆಂಬುದರಲ್ಲಿ ಯಾವ ಸಂಶಯವೂ ಇಲ್ಲ" ಎಂದು ಆ ಖರೀತದಲ್ಲಿ ಹೇಸ್ಟಿಂಗ್ಸ್‌ರವರು ತಿಳಿಸಿದ್ದರು.

ಮಹಾರಾಜರು ರಾಜಕಾರ್ಯಗಳನ್ನು ವಹಿಸಿಕೊಂಡು ಹತ್ತು ವರ್ಷಗಳಾದವು. ದೇಶದ ಸ್ಥಿತಿಗತಿಗಳನ್ನು ಕಣ್ಣಾರೆಕಂಡು ಮನದಟ್ಟುಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ರಾಜ್ಯದಲ್ಲಿ ಸಂಚರಿಸಿಕೊಂಡು ಬರಬೇಕೆಂದು ನಿರ್ಧರಿಸಿದರು. ದೇಶಪರ್ಯಟನದಿಂದ ರಾಜ್ಯದ ನಿಜವಾದ ವಿದ್ಯಮಾನಗಳನ್ನು ಸ್ವತಃ ತಿಳಿದುಕೊಳ್ಳಲು ಅವಕಾಶವಾಗುತ್ತದೆಯೆಂತಲೂ ಅವರು ಭಾವಿಸಿದರು. ಪ್ರಜೆಗಳ ಕಷ್ಟನಿಷ್ಠುರಗಳನ್ನೂ ಸುಖದುಃಖಗಳನ್ನೂ ವಿಚಾರಿಸಿ, ಆವಶ್ಯಕವಾದ ಸಹಾಯಗಳನ್ನೂ ಸೌಕರ್ಯಗಳನ್ನೂ ಒದಗಿಸಲು ಅನುಕೂಲವಾಯಿತು. ಪ್ರಭುಪ್ರಜಾನುರಾಗವು ಪರಸ್ಪರ ವೃದ್ಧಿಯಾಗಲು ಅವಕಾಶವಾಯಿತು. ಅವರು ಮೂರು ತಿಂಗಳ ಕಾಲ ರಾಜಧಾನಿಯನ್ನು ಬಿಟ್ಟು, ದೇಶಪರ್ಯಟನಮಾಡಿಕೊಂಡುಬಂದರು. ಅವರ ಜೊತೆಯಲ್ಲಿ ರಾಣಿವಾಸದವರೂ, ಇತರ ಪರಿವಾರದವರೂ, ಸುಸಜ್ಜಿತರಾದ ಬೆಂಗಾವಲು ಸೈನಿಕರೂ ಇದ್ದರು.

ಮಹಾರಾಜರು ರಾಜಧಾನಿಯಿಂದ ಹೊರಟು ಎಡತೊರೆ, ಚುಂಚನಕಟ್ಟೆ, ರಾಮನಾಥಪುರ, ಅರಕಲಗೂಡು, ಕೆಂಚಮ್ಮನ ಹೊಸಕೋಟೆ, ಇವುಗಳ ಮಾರ್ಗವಾಗಿ ಬಿಸಲೆಘಾಟಿಗೆ ಬಂದುಸೇರಿದರು. ಅಲ್ಲಿ ಐಗೂರು ಶ್ರೀನಿವಾಸಯ್ಯನೆಂಬುವನು ಮಹಾರಾಜರನ್ನು ಸತ್ಕರಿಸಿ ಬೀಳ್ಕೊಟ್ಟನು. ಆಮೇಲೆ, ಅವರು ಸುಬ್ರಹ್ಮಣ್ಯಕ್ಕೆ ಹೋಗಿ, ಅಲ್ಲಿಂದ ಉಡುಪಿ, ಕುಂದಾಪುರ ಇವುಗಳ ಮಾರ್ಗವಾಗಿ ನಗರ (ಬಿದನೂರು) ಎಂಬ ಸ್ಥಳವನ್ನು ತಲುಪಿದರು. ಮುಂದೆ, ಶಿವಮೊಗ್ಗಿ, ಬೆಂಕಿಪುರ (ಭದ್ರಾವತಿ), ತರೀಕೆರೆ, ಕಡೂರು, ಇವುಗಳನ್ನು ನೋಡಿಕೊಂಡು, ಚಂದ್ರದ್ರೋಣ ಪರ್ವತದಲ್ಲಿ ಬೀಡು

ಬಿಟ್ಟಿದ್ದರು. ಅಲ್ಲಿಂದ ಹೊರಟು, ಚಿಕ್ಕಮಗಳೂರು, ಹಾಸನ, ಶ್ರವಣ ಬೆಳಗೊಳ, ಮೇಲುಕೋಟೆ ಮತ್ತು ದರಸಕುಪ್ಪೆ ಗ್ರಾಮಗಳ ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ಸೇರಿದರು.

ಮಹಾರಾಜರು ತಮ್ಮ ಸಂಚಾರ ಕಾಲದಲ್ಲಿ, ಪ್ರಜೋಪಯುಕ್ತವಾದ ಅನೇಕ ಕಾರ್ಯಗಳನ್ನು ನೆರವೇರಿಸಿದರು. ಜನರ ಕಷ್ಟ ನಿಷ್ಠುರಗಳನ್ನು ಕೇಳಿ ತಕ್ಕ ಪರಿಹಾರಗಳನ್ನು ಕಲ್ಪಿಸಿದರು. ಎಲ್ಲ ಸ್ಥಳಗಳಲ್ಲಿಯೂ, ಪ್ರಜೆಗಳು ರಾಜಭಕ್ತಿ ಪೂರ್ವಕವಾದ ಸ್ವಾಗತವನ್ನು ಬಯಸಿದರು. ಅವರು ಶಿವಮೊಗ್ಗಿಗೆ ಹೋಗಿದ್ದುದರ ಜ್ಞಾಪಕಾರ್ಥವಾಗಿ, ಆ ಊರಿನ ಒಂದು ಬೀದಿಗೆ ಕೃಷ್ಣರಾಜಪೇಟೆಯೆಂಬುದಾಗಿ ಹೆಸರಿಟ್ಟು ಪುರನಿವಾಸಿಗಳು ತಮ್ಮ ಗಾಢವಾದ ಸ್ವಾಮಿಭಕ್ತಿಯನ್ನು ಪ್ರದರ್ಶಿಸಿದರು. ಈಗಲೂ ಶಿವಮೊಗ್ಗಿಯಲ್ಲಿ ಕೃಷ್ಣರಾಜಪೇಟೆ ಎಂಬ ಬೀದಿಯಿರುತ್ತದೆ. ಮಹಾರಾಜರು ತುಂಗಾನದಿಯನ್ನು ಹರಿಗೋಲಿನಲ್ಲಿ ದಾಟಿದಾಗ, ಅಂಬಿಗರು ಖಾಸಾ ಆನೆಗಳನ್ನು ಅತ್ಯಂತ ಸಾಹಸದಿಂದಲೂ ಚಮತ್ಕಾರದಿಂದಲೂ ನದಿ ದಾಟಿಸಿದುದನ್ನು ಕಂಡು ಅವರಿಗೆ ಆ ಕಾಲದಲ್ಲಿ ವಿಧಾಯಕವಾಗಿದ್ದ ತೆರಿಗೆಯನ್ನು ಬಹಳಮಟ್ಟಿಗೆ ಕಡಿಮೆಮಾಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅನೇಕ ದೇವಸ್ಥಾನ ಗಳಿಗೆ ಮಾನ್ಯಗಳನ್ನು ಬಿಟ್ಟುಕೊಟ್ಟು ಪೂಜಾ ಕಾರ್ಯಗಳು ಶಾಶ್ವತವಾಗಿ ನಡೆಯುವಂತೆ ಏರ್ಪಾಟು ಮಾಡಿದರು. ಮಹಾರಾಜರು ದೇಶಪರ್ಯಟನ ದಿಂದ ರಾಜ್ಯದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಂಡರು. ಆದರಿಂದ ರಾಜ್ಯಾಡಳಿತಗಳಲ್ಲಿ ಅವರಿಗಿದ್ದ ಅನುಭವವು ಇನ್ನೂ ಹೆಚ್ಚಾಯಿತು. ಅವರು ರಾಜ್ಯಭಾರವನ್ನು ಬಹಳ ದಕ್ಷತೆಯಿಂದ ನಡೆಯಿಸುತ್ತಿದ್ದರು. ಬ್ರಿಟಿಷ್ ಸರ್ಕಾರದವರು ಅವರ ಕಾರ್ಯದಕ್ಷತೆಯನ್ನು ಕಂಡು ತಲೆದೂಗಿದರು; ಅವರ ಕರ್ತವ್ಯತಾ ಬುದ್ಧಿಯನ್ನು ಕೊಂಡಾಡಿದರು.

ಹಿಂದೆ, ಪೂರ್ಣಯ್ಯನವರು ದಿವಾನರವರಾಗಿದ್ದ ಕಾಲದಿಂದಲೂ ಬ್ರಿಟಿಷ್ ಅಧಿಕಾರಿಗಳು ಮೈಸೂರು ಸಂಸ್ಥಾನವನ್ನು ಗವರ್ನರ್ ಜನರಲ್ ರವರ ಆಡಳಿತಕ್ಕೆ ನೇರವಾಗಿ ವಹಿಸಿಕೊಡಬೇಕೆಂದು ಸನ್ನಾಹ ಮಾಡುತ್ತಲೇ ಇದ್ದರು. ಜನರಲ್ ವೆಲ್ಲೆಸ್ಲಿಯವರು ಮೈಸೂರು ದೇಶವನ್ನು ಕಂಪೆನಿಯ

ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ಗವರ್ನರ್ ಜನರಲ್‌ರವರಿಗೆ ಆಗಾಗ ಖರೀತಗಳನ್ನು ಬರೆಯುತ್ತಲೇ ಇದ್ದರು. ಶ್ರೀರಂಗ ಪಟ್ಟಣದ ತಹನಾಮೆಯು ಹುಟ್ಟಿದ ಕಾಲದಲ್ಲಿ ಮೈಸೂರು ಸಂಸ್ಥಾನವು ಮದ್ರಾಸ್ ಗವರ್ನರ್‌ರವರ ಮೇಲ್ವಿಚಾರಣೆಯಲ್ಲಿರತಕ್ಕುದೆಂದೂ, ಸಾಮ್ರಾಜ್ಯ ಸರ್ಕಾರದವರು ಯಾವಾಗಬೇಕಾದರೂ ಖುದ್ದಾಗಿ ಮೈಸೂರು ರೆಸಿಡೆಂಟ ರೊಂದಿಗೆ ಪತ್ರವ್ಯವಹಾರ ನಡೆಯಿಸಬಹುದೆಂದೂ ಗೊತ್ತಾಗಿದ್ದಿತು. ಆದರೆ, ಮಾರ್ಕ್ವಿಸ್ ವೆಲ್ಲೆಸ್ಲಿಯವರು ರಾಜಕೀಯ ಪರಿಸ್ಥಿತಿಗಳನ್ನು ಪರಿಗಣಿಸಿ, ಮೈಸೂರು ಸಂಸ್ಥಾನವನ್ನು ಸಾಮ್ರಾಜ್ಯ ಸರ್ಕಾರದವರ ಮೇಲ್ವಿಚಾರಣೆಗೆ ಒಳಪಡಿಸುವುದು ಸೂಕ್ತವೆಂದು ಸಲಹೆ ಮಾಡಿದ್ದರು. ಆಗ ಕೋರ್ಟ್ ಆಫ್ ಡೈರೆಕ್ಟರುಗಳು ಆ ಸಲಹೆಯನ್ನು ಅನುಮೋದಿಸಿರಲಿಲ್ಲ. ಮೈಸೂರು ಎಂದಿ ನಂತೆಯೇ ಮದ್ರಾಸ್ ಸರ್ಕಾರದವರ ಮೇಲ್ವಿಚಾರಣೆಯಲ್ಲಿ ನಿಂತಿತು.

ಮಹಾರಾಜರು ರಾಜ್ಯಾಡಳಿತಗಳನ್ನು ಬಹಳ ಜಾಗರೂಕರಾಗಿಯೇ ನಡೆಯಿಸುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅವರಿಗೆ ಅಸೀಮ ಭಕ್ತಿಯೂ, ಅನನ್ಯಸಾಧಾರಣವಾದ ವಿಶ್ವಾಸವೂ ಇದ್ದುವು. ಇಷ್ಟಾದರೂ, ರೆಸಿಡೆಂಟರು ಮೈಸೂರು ದೇಶದ ರಾಜ್ಯಾಡಳಿತ ವಿಚಾರಗಳಲ್ಲಿ ಕೈಹಾಕಕೂಡದೆಂಬುದಾಗಿ ಮದ್ರಾಸ್ ಸರ್ಕಾರದವರು ತಿಳಿಸಿದ್ದರು. ಇದರಿಂದ ಮಹಾರಾಜರಿಗೆ ಸಮಯೋಚಿತವಾದ ಯಾವುದೊಂದು ಸಲಹೆಯಾಗಲಿ, ಸಹಾಯವಾಗಲಿ ರೆಸಿಡೆಂಟರಿಂದ ದೊರೆಯುವುದೇ ದುಸ್ತರವಾಯಿತು. ರೆಸಿಡೆಂಟರು ಮಹಾರಾಜರ ವಿಚಾರದಲ್ಲಿ ದೋಷೈಕದೃಷ್ಟಿಯಿಂದ ವರ್ತಿಸುತ್ತಿದ್ದರು. ಅಲ್ಲದೆ, ಮಹಾರಾಜರು ಸಂಸ್ಥಾನದ ಹಣವನ್ನು ದುರ್ವ್ಯಯಮಾಡುತ್ತಿದ್ದಾರೆಂದೂ, ರಾಜಕಾರ್ಯಗಳಲ್ಲಿ ಅಲಸರಾಗಿದ್ದಾರೆಂದೂ ಮದ್ರಾಸ್ ಸರ್ಕಾರದವರಿಗೆ ತಿಳಿಸುತ್ತಿದ್ದರು. ಆಗ ಮದ್ರಾಸ್ ಗವರ್ನರ್‌ರವರಾಗಿದ್ದ ಸರ್ ಥಾಮಸ್ ಮನ್ರೋರವರು ಇದನ್ನೆಲ್ಲಾ ನಿಜವೆಂದೇ ನಂಬಿ, ಗವರ್ನರ್ ಜನರಲ್‌ರವರಿಗೆ ಬರೆದ ಒಂದು ಕಾಗದದಲ್ಲಿ "ಮೈಸೂರು ಮಹಾರಾಜರು ರಾಜ್ಯಾಡಳಿತ ವಿಚಾರಗಳಲ್ಲಿ ಬಹಳ ಉದಾಸೀನಭಾವದಿಂದಿದ್ದಾರೆ. ಸಂಸ್ಥಾನದ ಹಣವನ್ನು ದುಂದುಗಾರಿಕೆಯಿಂದ ವ್ಯಯಮಾಡುತ್ತಿದ್ದಾರೆ. ಸಂಸ್ಥಾನದ ಹುಟ್ಟುವಳಿಯ ಜೊತೆಗೆ ಖಜಾನೆಯಲ್ಲಿ ಶೇಖರವಾಗಿದ್ದ ಹಣದಲ್ಲಿ ೬೦ ಲಕ್ಷ ವರಹಗಳನ್ನು

ನೀರಿನಂತೆ ಧಾರಾಳವಾಗಿ ಖರ್ಚುಮಾಡಿಬಿಟ್ಟಿದ್ದಾರೆ" ಎಂದು ತಿಳಿಸಿದ್ದರು. ಇಷ್ಟೊಂದು ಹಣವು ಖಜಾನೆಯಲ್ಲಿದ್ದಿತೇ—ಎಂಬ ವಿಚಾರದಲ್ಲಿ ಮನ್ರೋರವರಿಗೆ ನಿರ್ದಿಷ್ಟವಾದ ತಿಳಿವಳಿಕೆಯೇ ಇರಲಿಲ್ಲ. ಹುಳುಕು ಹುಡುಕುತ್ತಿದ್ದ ರೆಸಿಡೆಂಟರು ಮಹಾರಾಜರ ಆಡಳಿತದಲ್ಲಿ ಪ್ರಶಂಸನೀಯವಾದ ಅಂಶಗಳೇನಿದ್ದರೂ, ಅವುಗಳನ್ನು ಬಿಟ್ಟು, ಕೇವಲ ಲೋಪದೋಷಗಳನ್ನೇ ಗಮನಿಸುತ್ತಾ "ತೃಣವೇ ಪರ್ಬತವೈ" ಎಂಬಂತೆ ಮದ್ರಾಸ್ ಸರ್ಕಾರದವರಿಗೆ ತಿಳಿಸುತ್ತಿದ್ದರು. ಅವರು ತ್ರಿಕರಣಶುದ್ಧಿಯಿಂದ ವರ್ತಿಸುತ್ತಿದ್ದುದರಿಂದ, ಅವರಿಗೆ ಯಾವುದೊಂದು ಭಯವಾಗಲಿ, ಸಂಶಯವಾಗಲಿ ಇರಲೇಇಲ್ಲ. ಬ್ರಿಟಿಷ್ ಸರ್ಕಾರದವರಲ್ಲಿ ಅವರಿಗೆ ಅವ್ಯಾಜಪ್ರೇಮವಿದ್ದಿತು. "ಮಡಲಿನಲ್ಲಿ ಭಾರವಿದ್ದರೆ ಭಯ"! ಎಂದು ತಿಳಿದು ನಿಸ್ಪೃಹರಾಗಿದ್ದ ಮಹಾರಾಜರು ಒಂದೇ ರೀತಿಯಾಗಿ ಕೋಲ್‌ರವರಲ್ಲಿ ಸ್ನೇಹಭಾವವನ್ನಿಟ್ಟಿದ್ದರು ; ಸಂಸ್ಥಾನದ ಯೋಗಕ್ಷೇಮ ಚಿಂತನೆಯಲ್ಲಿ ಮಗ್ನರಾಗಿದ್ದರು.

ಆರನೆಯ ಅಧ್ಯಾಯ

ರಾಜ್ಯಭಾರಕ್ರಮ, ಸಂಸ್ಥಾನದ ಆಯವ್ಯಯಗಳು, ನ್ಯಾಯಾಂಗ ವಿಧಾನ

In the work of man, as in those of nature, it is
Really the motives which chiefly merit attention.

—*Goethe.*

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ರಾಜನೀತಿಕುಶಲರಾಗಿದ್ದುದರಿಂದ ರಾಜ್ಯಭಾರ ಕ್ರಮವನ್ನು ಸರ್ವ ಸಮರ್ಪಕವಾಗಿ ಏರ್ಪಡಿಸಿದರು: ದೇಶಾಭ್ಯುದಯ ಸಾಧನೆಗೆ ಅನುಗುಣವಾಗಿ ರಾಜ್ಯಪರಿಪಾಲನೆ ಮಾಡುತ್ತಿದ್ದರು. ಪ್ರಜೆಗಳ ಅನುಕೂಲ ಪ್ರತಿಕೂಲಗಳನ್ನು ಗಮನಿಸಿ ರಾಜ್ಯವನ್ನು ೧೨೫ ಗಡಿ (ತಾಲ್ಲೂಕು)ಗಳಾಗಿ ವಿಂಗಡಿಸಿ, ೬ ತುಕಡಿ (ಡಿಸ್ಟ್ರಿಕ್ಟ್)ಗಳಾಗಿ ವಿಭಾಗಿಸಿದರು. ಅಷ್ಟಗ್ರಾಮ ತುಕಡಿಗೆ ೨೮ ಗಡಿಗಳೂ, ಬೆಂಗಳೂರು ತುಕಡಿಗೆ ೨೮ ಗಡಿಗಳೂ, ಚಿತ್ರದುರ್ಗ ತುಕಡಿಗೆ ೧೩ ಗಡಿಗಳೂ, ಮಂಜರಾಬಾದು ತುಕಡಿಗೆ ೧೩ ಗಡಿಗಳೂ, ನಗರ ತುಕಡಿಗೆ ೨೪ ಗಡಿಗಳೂ, ಮಧುಗಿರಿ ತುಕಡಿಗೆ ೧೯ ಗಡಿಗಳೂ ಸೇರಿದ್ದುವು. ಪ್ರತಿಯೊಂದು ಗಡಿಗೂ ಸುಬೇದಾರ ಎಂ[ಬ] ಅಧಿಕಾರಿಯನ್ನು ನೇಮಿಸಿ, ಪ್ರತಿಯೊಂದು ತುಕಡಿಗೂ ಫೌಜುದಾರ ಎಂ[ಬ] ಅಧಿಕಾರಿಯನ್ನು ನೇಮಕ ಮಾಡಿದರು. ಸಂಸ್ಥಾನದ ಆಡಳಿತಗಳನ್ನು ನಡೆಯಿಸಲು ಹಿಂದಿನಿಂದಲೂ ಬಂದಿದ್ದಂತೆ ಅಠಾರಾ ಕಚೇರಿಗಳಿದ್ದುವು. ಪ್ರತಿಯೊಂದು ಗಡಿಯಲ್ಲಿಯೂ ಕಿಲ್ಲೇದಾರ ಎಂಬ ಅಧಿಕಾರಿಯಿರುತ್ತಿದ್ದನು. ಆಯಾ ಪ್ರಾಂತಗಳಲ್ಲಿ ಕಂಡು ಕೇಳಿದ ವರ್ತಮಾನಗಳನ್ನು ಬರೆದು ಕಳುಹಿಸಲು ಅಂಚೆ ಮುತ್ಸದ್ದಿಗಳೆಂಬ ನೌಕರರಿದ್ದರು. ಪ್ರತಿಯೊಂದು ಗಡಿಯಲ್ಲಿಯೂ ಶಿರಸ್ತೆದಾರ, ಶೇಕದಾರ ಎಂಬ ಅಧಿಕಾರಿಗಳಿದ್ದುಕೊಂಡು ಸುಬೇದಾರರಿಗೆ ಸಹಾಯಮಾಡುತ್ತಿದ್ದರು. ಪ್ರತಿಯೊಂದು ಗ್ರಾಮಕ್ಕೂ ಗೌಡ ಮತ್ತು ಶ್ಯಾನುಭೋಗ ಎಂಬ ಮುಖಂಡರನ್ನು ಗೊತ್ತುಮಾಡಿ ಗ್ರಾಮಗಳ ಆಡಳಿತಗಳನ್ನು

ನೋಡಿಕೊಳ್ಳುವಂತೆಯೂ, ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯ, ತೆರಿಗೆ ಮುಂತಾದುವುಗಳನ್ನು ಸರಿಯಾಗಿ ವಸೂಲು ಮಾಡುವಂತೆಯೂ ಏರ್ಪಡಿಸಿದರು. ಪ್ರಜೆಗಳ ಕ್ಷೇಮಕ್ಕಾಗಿ ಪ್ರತಿಯೊಂದು ತುಕಡಿಯ ಕಸಬೆ (District Headquarters) ಯಲ್ಲಿಯೂ, ದೇಶದ ಮುಖ್ಯ ಮುಖ್ಯ ಸ್ಥಳಗಳಲ್ಲಿಯೂ ತಕ್ಕಷ್ಟು ಸೈನ್ಯವನ್ನಿಟ್ಟಿದ್ದರು.

ಮೈಸೂರು ಸಂಸ್ಥಾನದ ಫೌಜನ್ನೆಲ್ಲಾ ಇಬ್ಬರು ಬಕ್ಷಿಗಳ ಅಧಿಕಾರಕ್ಕೆ ಒಳಪಡಿಸಿದರು. ಆ ಫೌಜನ್ನು ಏಳು ತಂಡಗಳಾಗಿ ವಿಂಗಡಿಸಿ ಪ್ರತಿಯೊಂದು ತಂಡಕ್ಕೂ ತುಕಡಿದಾರನೆಂಬ ಒಬ್ಬ ಅಧಿಕಾರಿಯನ್ನು ಗೊತ್ತುಮಾಡಿದರು. ಆ ತಂಡಗಳು ಸಿಂದಘಟ್ಟ, ಕಟ್ಟೆ, ಹುಲಿಯೂರು ದುರ್ಗ, ನಾಗಮಂಗಲ, ಚನ್ನರಾಯಪಟ್ಟಣ, ಕುಣಿಗಲು, ಚನ್ನಪಟ್ಟಣ ಈ ಸ್ಥಳಗಳಲ್ಲಿದ್ದುವು. ಅಲ್ಲದೆ ಬಾರ್ಗಿರ್ ಎಂಬ ಹೆಸರಿನ ಸೈನ್ಯವೊಂದು ಕ್ಲೋಸ್‌ಪೇಟೆಯಲ್ಲಿದ್ದಿತು. ಆ ಸೈನ್ಯದಲ್ಲಿ ಆರಿಸಿದ ೫೦೦ ಮಂದಿ ಸವಾರರಿದ್ದರು. ಅದು ಮುಖ್ಯವಾಗಿ ಮಹಾರಾಜರ ಅಂಗರಕ್ಷಕ ಸೈನ್ಯವಾಗಿದ್ದರೂ, ಸಮಯ ಬಂದಾಗ ರಾಷ್ಟ್ರ ರಕ್ಷಣೆಯ ಕೆಲಸಕ್ಕೂ ಒದಗುತ್ತಿದ್ದಿತು. ಈ ಸೈನ್ಯಗಳಿಗೆಲ್ಲಾ ಸರಿಯಾಗಿ ಸಂಬಳಗಳು ಸಲ್ಲುತ್ತಿದ್ದುವು. ಯುದ್ಧಪ್ರಸಕ್ತಿಯಿಲ್ಲದ ಕಾಲದಲ್ಲಿ ಸೈನಿಕರು ನಿರುದ್ಯೋಗಿಗಳಾಗಿ ದರೋಡೆ ಮುಂತಾದ ಹೀನಕೃತ್ಯಗಳಿಗೆ ಮನಸ್ಸು ಕೊಡದಂತೆ ಮಾಡಲು ಅವರಿಗೆಲ್ಲಾ ಜಮೀನುಗಳನ್ನು ಕೊಟ್ಟು ವ್ಯವಸಾಯ ವೃತ್ತಿಯನ್ನು ಅವಲಂಬಿಸಿರುವಂತೆ ಮಾಡಿದ್ದರು. ಸೈನಿಕರು ರಾಜಭಕ್ತಿಯಿಂದಲೂ, ದೇಶಭಕ್ತಿಯಿಂದಲೂ ಕೂಡಿ ಜೀವನೋಪಾಯವನ್ನು ಸಾಗಿಸುತ್ತಿದ್ದರು.

ಸರ್ಕಾರಿ ಅಧಿಕಾರಿಗಳಲ್ಲಿ ಸುಬೇದಾರ, ಫೌಜುದಾರ ಮತ್ತು ದಿವಾನ್ ಎಂಬ ಮುಖ್ಯವಾದ ಮೂರು ಅಂತಸ್ತುಗಳಿದ್ದುವು. ಯಾವ ರೀತಿಯಿಂದಲೂ ಸಂಸ್ಥಾನದ ಹುಟ್ಟುವಳಿಗೆ ಲೋಪ ಬಾರದಂತೆ ತಕ್ಕ ಎಚ್ಚರಿಕೆಯಿಂದ ನೋಡಿಕೊಂಡು ಜಮೀನುಗಳನ್ನು ವ್ಯವಸಾಯಕ್ಕೆ ಕೊಡಿಸಿ, ಸರ್ವ ಪ್ರಯತ್ನಗಳಿಂದಲೂ ಆ ಜಮೀನುಗಳಲ್ಲಿ ಉತ್ತಮವಾದ ಫಸಲು ಬರುವಂತೆ ಏರ್ಪಡಿಸಬೇಕಾದುದು ಸುಬೇದಾರರ ಮುಖ್ಯ ಕರ್ತವ್ಯವಾಗಿದ್ದಿತು. ಕಂದಾಯ ಕೌಳಿಗೆಗಳನ್ನು ಸರಿಯಾಗಿ ವಸೂಲು ಮಾಡುವುದರಲ್ಲಿಯೂ, ಸಾಗುವಳಿ

ಯಾಗಿರುವ ಜಮಿಾನುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದ ರಲ್ಲಿಯೂ ಶಿರಸ್ತೆದಾರ ಮತ್ತು ಶೇಕದಾರ ಇವರಿಬ್ಬರೂ ಸುಬೇದಾರರಿಗೆ ಸಹಾಯಕರಾಗಿ ಕೆಲಸ ಮಾಡಬೇಕಾಗಿದ್ದಿತು. ಕಂದಾಯದ ಹುಟ್ಟುವಳಿ ಕಡಮೆ ಬಿದ್ದ ಸಂದರ್ಭಗಳಲ್ಲಿ ಫೌಜುದಾರರು ಲೆಕ್ಕಪತ್ರಗಳನ್ನು ತನಿಖೆಮಾಡಿ ನ್ಯೂನಾತಿರಿಕ್ತಗಳನ್ನು ಸರಿಪಡಿಸಬೇಕಾಗಿದ್ದಿತು; ಕಂದಾಯಗಳಲ್ಲಿ ರಿಯಾ ಯಿತಿಗಳನ್ನೂ ಮಾಡಬಹುದಾಗಿದ್ದಿತು. ಆಯಾ ಡಿಸ್ಟ್ರಿಕ್ಟುಗಳಲ್ಲಿ ದಂಗೆ ಗಳಾಗಲಿ, ದರೋಡೆಗಳಾಗಲಿ ನಡೆದರೆ, ಫೌಜುದಾರರು ತಮ್ಮ ಸೈನ್ಯದೊಂದಿಗೆ ಆ ಸ್ಥಳಗಳಿಗೆ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾಗಿದ್ದಿತು. ರಾಜ್ಯಭಾರ ನಿರ್ವಹಣಕ್ಕೆ ಸಂಬಂಧಪಟ್ಟ ಸಾಮಾನ್ಯಾಡಳಿತಗಳಲ್ಲಿ ದಿವಾ ರವರೇ ಪ್ರಧಾನ ಅಧಿಕಾರಿಯಾಗಿದ್ದರು. ಅವರು ಆಗಾಗ ದೇಶ ಮಧ್ಯದಲ್ಲಿ ಸಂಚರಿಸುತ್ತಾ ರಾಜ್ಯಾಡಳಿತಗಳಲ್ಲಿ ಕಂಡುಬಂದ ಕುಂದುಕೊರತೆಗಳನ್ನು ಮಹಾರಾಜರಿಗೆ ಬಿನ್ನವಿಸಿ, ತಕ್ಕ ಪರಿಹಾರೋಪಾಯಗಳನ್ನು ಕಲ್ಪಿಸುತ್ತಿದ್ದರು.

ಮಹಾರಾಜರ ದಿನಚರಿಯ ರಾಜಕಾರ್ಯಗಳು ಬಹಳ ಕ್ರಮವಾಗಿ ನಡೆಯುತ್ತಿದ್ದುವು. ಪ್ರತಿದಿನವೂ ಪ್ರಾತಃಕಾಲದಲ್ಲಿ ಅವರು ಸ್ನಾನಾಹ್ನಿಕ ಗಳನ್ನು ತೀರಿಸಿಕೊಂಡು ದೇವರ ಪೂಜೆಯನ್ನು ಬಹು ಭಕ್ತಿಯಿಂದ ನೆರವೇರಿಸಿ, ತರುವಾಯ ರಾಜಕಾರ್ಯಗಳನ್ನು ಗಮನಿಸುತ್ತಿದ್ದರು. ಅಂಚೆಬಕ್ಷಿಯು ತಂದೊಪ್ಪಿಸುತ್ತಿದ್ದ ರಾಜ್ಯಾಡಳಿತ ಸಂಬಂಧವಾದ ಎಲ್ಲ ಕಾಗದಪತ್ರಗಳನ್ನೂ ಪರಾಂಬರಿಸಿ, ಅನೇಕ ವಿಚಾರಗಳಲ್ಲಿ ಅಗಿಂದಾಗಲೇ ಹುಕುಮುಗಳನ್ನು ಸಾದರುಮಾಡುತ್ತಿದ್ದರು. ಬಹಳ ತೊಡಕಾದ ವಿಚಾರಗಳಲ್ಲಿ ಮಂತ್ರಿಗಳೊಂದಿಗೆ ಪರ್ಯಾಲೋಚಿಸಿ ಸಲಹೆಗಳನ್ನು ಪಡೆಯುತ್ತಿದ್ದರು. ತಾಲ್ಲೂಕುಗಳಲ್ಲಿದ್ದ ಅಂಚೆ ಮುತ್ಸದ್ದಿಗಳಿಂದ ಸಮಾಚಾರಗಳನ್ನು ತರಿಸಿಕೊಂಡು, ಅಂಚೆಬಕ್ಷಿಯು ಮಹಾರಾಜರಿಗೆ ಶ್ರುತಪಡಿಸುತ್ತಿದ್ದನು. ಅಂಚೆಯ ಓಲೆಕಾರರು ಊರಿಂ ದೂರಿಗೆ ಅಂಚೆಯನ್ನು ತಲುಪಿಸುತ್ತಿದ್ದರು. ಸಂಸ್ಥಾನದ ಯಾವುದೊಂದು ಮೂಲೆಯಲ್ಲಿಯೇ ಆಗಲಿ ನಡೆದ ಸಂಗತಿಗಳು ಮಹಾರಾಜರಿಗೆ ಬಹಳ ಶೀಘ್ರ ವಾಗಿಯೇ ಅರಿಕೆಯಾಗುತ್ತಿದ್ದುವು.

ಮಹಾರಾಜರು ರಾಜ್ಯಭಾರವನ್ನು ವಹಿಸಿಕೊಂಡ ವರ್ಷವಲ್ಲಿ ಜಮಿಾನು ಕಂದಾಯದ ಹುಟ್ಟುವಳಿಯು ೬೦,೫೫,೦೦೦ ರೂಪಾಯಿ ಇದ್ದುದು

ನಾಲ್ಕೈದು ವರ್ಷಗಳಲ್ಲಿಯೇ ಅದು ೭೧,೨೫,೦೦೦ ರೂಪಾಯಿಗಳವರೆಗೆ ಹೆಚ್ಚಿತು. ಅವರ ಆಳಿಕೆಯ ಹತ್ತು ವರ್ಷದ, ಸರಾಸರಿ ವರಮಾನ ೫೭,೨೫,೦೦೦ ರೂಪಾಯಿಗಳಷ್ಟಿದ್ದಿತು. ೧೮೨೩-೨೪ನೆಯ ವರ್ಷದಲ್ಲಿ ದೇಶವೆಲ್ಲೆಲ್ಲಾ ವಿರಕ್ಷಾಮ ತಲೆದೋರಿದುದರಿಂದ, ಸಂಸ್ಥಾನದ ಹುಟ್ಟುವಳಿಯು ಕಡಮೆಯಾಯಿತು. ಕ್ಷಾಮಪೀಡಿತರಾಗಿದ್ದ ಪ್ರಜೆಗಳನ್ನು ಸಂರಕ್ಷಿಸುವುದಕ್ಕಾಗಿ, ಮಹಾರಾಜರು ಉದಾರಹೃದಯದಿಂದ ಅನೇಕ ಸೌಲಭ್ಯಗಳನ್ನು ಕಲ್ಪಿಸಿದರು. ಹಿಂದೆ ಪೂರ್ಣಯ್ಯನವರು ಗಳಿಸಿ, ಉಳಿಸಿದ್ದ ೭,೮೩,೭೪೯ ಕಂಠೀರಾಯ ವರಹಗಳೂ ವೆಚ್ಚವಾದುವು. ಪ್ರತಿವರ್ಷವೂ ಜಮೀನು ಕಂದಾಯದ ಉತ್ಪತ್ತಿಯು ಕಡಮೆಯಾಗುತ್ತಲೇ ಬಂದಿತು. ಸಂಸ್ಥಾನದ ವರಮಾನವನ್ನು ಹೆಚ್ಚಿಸಲು ಬೇರೆ ಬೇರೆ ಸಾಧನೋಪಾಯಗಳನ್ನು ಹುಡುಕಬೇಕಾಯಿತು. ಪ್ರತಿ ತಿಂಗಳಿನಲ್ಲಿಯೂ ಕಂಪೆನಿ ಸರ್ಕಾರದವರಿಗೆ ಕೊಡಬೇಕಾಗಿದ್ದ ಪ್ರೊಗದಿಯ ಕಂತುಗಳನ್ನು ತಪ್ಪದೆ ಸಲೀಸಾಗಿ ಕೊಡುವುದಕ್ಕೂ ಮತ್ತು ಹೊಸದಾಗಿ ಕಂಪೆನಿ ಸರ್ಕಾರದವರೊಂದಿಗೆ ಮಾಡಿಕೊಂಡಿದ್ದ ಕರಾರಿನ ಮೇರೆಗೆ, ಯಾವಾಗಲೂ ೪,೦೦೦ ಕುದುರೆ ಸೈನ್ಯವನ್ನು ಸಿದ್ಧವಾಗಿಟ್ಟುಕೊಂಡಿರಬೇಕಾಗಿದ್ದ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೂ ಮಹಾರಾಜರು ಹಣವನ್ನು ಒದಗಿಸಲೇ ಬೇಕಾಗಿದ್ದಿತು.

ಮುಖ್ಯವಾಗಿ, ಸಂಸ್ಥಾನಕ್ಕೆ ಭೂಕಂದಾಯವಲ್ಲದೆ ಉಪ್ಪಿನಮೋಳೆ ತೆರಿಗೆ, ಈಚಲಮರ ತೆರಿಗೆ, ಅರಣ್ಯಗಳ ಉತ್ಪನ್ನ—ಈ ಬಾಬುಗಳಿಂದಲೂ ವರಮಾನ ಬರುತ್ತಿತ್ತು. ಸ್ಟಾಂಪುಗಳನ್ನು ಛಾಪಿಸುವ ಏರ್ಪಾಟನ್ನು ಮಹಾರಾಜರು ಹೊಸದಾಗಿ ಜಾರಿಗೆ ತಂದರು. ಇದರಿಂದಲೂ ರಾಜ್ಯಕ್ಕೆ ವರಮಾನ ಬರುವಂತಾಯಿತು. ತೊಂಡು ದನಗಳನ್ನು ಮಾರಾಟಮಾಡುವುದರಿಂದ ಬರುತ್ತಿದ್ದ ಮೊಬಲಗೂ, ಅಧಿಕಾರಿಗಳಿಗೂ ಬರುತ್ತಿದ್ದ ಪಾರಿತೋಷಿಕಗಳೂ, ದಂಡದ್ರವ್ಯಗಳೂ, ವಾರಸುದಾರರಿಲ್ಲದ ಸ್ವತ್ತುಗಳೂ ಸಂಸ್ಥಾನದ ಆದಾಯಕ್ಕೆ ಸೇರುತ್ತಿದ್ದುವು. ಪ್ರೊಗದಿ, ಸೈನ್ಯ, ನ್ಯಾಯಇಲಾಖೆ, ಅರಮನೆ, ಆಟ್ಟಾವಣೆ(ರೆವೆನ್ಯೂ) ಇಲಾಖೆ, ಕಂದಾಚಾರ ಇಲಾಖೆ, ಅಂಚೆ ಇಲಾಖೆ, ಅಮೃತಮಹಲ್ ಇಲಾಖೆ, ಪಾಳೆಯಗಾರರಿಗೆ ಜೀವನಾಂಶ, ಮುಜರಾಯಿ ಮತ್ತು ಮುರಮತ್ ಇಲಾಖೆ—ಈ ಮುಂತಾದ ಬಾಬುಗಳಿಗೆ ಹಣ ಖರ್ಚಾಗುತ್ತಿದ್ದಿತು.

ಮಹಾರಾಜರು ರಾಜ್ಯಭಾರವನ್ನು ವಹಿಸಿಕೊಂಡಮೇಲೆ, ರಾಜವಂಶದ ಗೌರವ, ಕೀರ್ತಿ, ಪ್ರತಿಷ್ಠೆಗಳಿಗನುಗುಣವಾಗಿ ಅರಮನೆಯ ಇಲಾಖೆಗಳನ್ನು ಹೆಚ್ಚಿಸಿ, ರಾಜಬಂಧುವರ್ಗದವರಿಗೂ, ಸರದಾರರುಗಳಿಗೂ ಜೀವನೋಪಾಯ ಗಳನ್ನು ಕಲ್ಪಿಸಿದರು. ಅರಮನೆಯಲ್ಲಿ ರಾಜಯೋಗ್ಯವಾದ ರೀತಿಯಲ್ಲಿ ಅತಿಥಿ ಸತ್ಕಾರವೂ, ಪಂಡಿತಮಂಡಲಿಗೆ ಸನ್ಮಾನವೂ ನಡೆಯುತ್ತಿದ್ದುವು. ಸಂಗೀತ, ಸಾಹಿತ್ಯ, ಕುಶಲಕಲೆಗಳಿಗೆ ಮಹಾರಾಜರು ಮುಕ್ತಹಸ್ತರಾಗಿ ಸಹಾಯ ಮಾಡುತ್ತಿದ್ದರು. ಅನೇಕ ಬ್ರಾಹ್ಮಣರಿಗೂ, ವಿದ್ವಾಂಸರಿಗೂ ಅಗ್ರಹಾರ ಗಳನ್ನು ಕಟ್ಟಿಸಿಕೊಟ್ಟರು. ಅಲ್ಲಲ್ಲಿ ಚತ್ರಗಳನ್ನೂ, ದೇವಾಲಯಗಳನ್ನೂ ಕಟ್ಟಿಸಿ, ಮಠಗಳಿಗೆ ದ್ರವ್ಯಾಭರಣಗಳನ್ನು ಕೊಟ್ಟು, ಧರ್ಮಕಾರ್ಯಗಳನ್ನು ಮಾಡಿಸುತ್ತಿದ್ದರು. ಇದರಿಂದ ಸಂಸ್ಥಾನದ ಆದಾಯದಲ್ಲಿ ಸಮಯೋಚಿತವಾಗಿ ಹಣ ವಿನಿಯೋಗವಾಗುತ್ತಿತ್ತು.

ಪ್ರಜೆಗಳ ನೆಮ್ಮದಿಗೆ ಭಂಗಬಾರದಂತೆ ಮಹಾರಾಜರು ರಾಜ್ಯಪರಿಪಾಲನೆ ಮಾಡುತ್ತಿದ್ದರು. ಪ್ರಜಾಪೀಡೆಗೆ ಕಾರಣರಾದ ಕೇಡಿಗಳನ್ನೂ, ಕಳ್ಳಕಾಕ ರನ್ನೂ, ದುರಾತ್ಮರನ್ನೂ, ಧೂರ್ತರನ್ನೂ, ಕಠಿಣವಾಗಿ ದಂಡಿಸುತ್ತಿದ್ದರು. ದುಷ್ಕೃತ್ಯಗಳಿಗೆ ಸಂಬಂಧಪಟ್ಟ ಅಪರಾಧಿಗಳನ್ನು ಸುಬೇದಾರರು ವಿಚಾರಣೆ ಮಾಡಿ, ತಮ್ಮ ವಿಚಾರಣೆಯ ವರದಿಯನ್ನು ಹುಜೂರು ಸನ್ನಿಧಿಗೆ ಕಳುಹಿಸಿ ಕೊಡುತ್ತಿದ್ದರು. ಮಹಾರಾಜರು ಆ ವರದಿಯನ್ನು ಪರಾಂಬರಿಸಿ ಸಂದರ್ಭಾನು ಸಾರವಾಗಿ ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದರು. ಅಪರಾಧಿಗಳನ್ನು ಕೆಲವು ವೇಳೆಗಳಲ್ಲಿ ಅದಾಲತ್ ಕೋರ್ಟಿನ ವಿಚಾರಣೆಗೆ ಗುರಿಮಾಡುತ್ತಿದ್ದುದೂ ಉಂಟು; ಅಥವಾ ಬಂದೀವಾನರನ್ನು ಕಬ್ಬಾಳದುರ್ಗಕ್ಕೆ ಕಳುಹಿಸಿಕೊಡು ತ್ತಿದ್ದುದೂ ಉಂಟು. ಕೊಲೆಪಾತಕರನ್ನು ಕೆಲವು ಸಂದರ್ಭಗಳಲ್ಲಿ ಗಲ್ಲಿಗೇರಿ ಸುತ್ತಿದ್ದರು ಮತ್ತೆ ಕೆಲವು ಸಂದರ್ಭಗಳಲ್ಲಿ ಅವರಿಗೆ ಜೀವಾವಧಿ ಕಾರಾಗೃಹ ವಾಸ ಶಿಕ್ಷೆಯನ್ನು ವಿಧಿಸುತ್ತಿದ್ದರು. ಬ್ರಾಹ್ಮಣರನ್ನೂ, ಸ್ತ್ರೀಯರನ್ನೂ ಗಲ್ಲಿಗೇರಿಸುತ್ತಿರಲಿಲ್ಲ; ಅವರನ್ನು ಒಂದು ವರ್ಷ ಅಥವಾ ಹೆಚ್ಚೆಂದರೆ, ಮೂರು ವರ್ಷಕಾಲ ಸೆರೆಯಿಟ್ಟು ತರುವಾಯ ಬಿಟ್ಟುಬಿಡುತ್ತಿದ್ದರು. ದಸರಾ ಮಹೋತ್ಸವದ ಮೊದಲನೆಯ ದಿನ ಮಹಾರಾಜರು ಒಡ್ಡೋಲಗದಲ್ಲಿ ಕುಳಿತಿದ್ದಾಗ, ಖೈದಿಗಳ ಸಂಬಂಧಿಗಳು ಬಂದು ದೊರೆಗಳಿಗೆ ಅಡ್ಡಬಿದ್ದು

ತಮ್ಮ ಕಡೆಯ ಪ್ರೈದಿಗಳ ತಪ್ಪನ್ನು ಮನ್ನಿಸಿ ಸೆರೆಯಿಂದ ಬಿಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದು ವಾಡಿಕೆಯಾಗಿದ್ದಿತು. ಆಗ ಮಹಾರಾಜರು ಮನ ಮರುಗಿ ಆ ತಪ್ಪಿತಸ್ಥರ ಶಿಕ್ಷೆಯನ್ನು ಕಡಮೆಮಾಡುವಂತೆ ಅಥವಾ ಅವರನ್ನು ಸೆರೆಯಿಂದ ಬಿಟ್ಟುಬಿಡುವಂತೆ ಅಪ್ಪಣೆ ಮಾಡುತ್ತಿದ್ದರು.

ಕನ್ನ, ಕಳ್ಳತನ ಮತ್ತು ದರೋಡೆಗಳಿಗೆ ಸಂಬಂಧಪಟ್ಟ ಅಪರಾಧಿಗಳನ್ನು ಮಹಾರಾಜರ ಅಪ್ಪಣೆಯಂತೆ ಗಿರಿದುರ್ಗಗಳಲ್ಲಿ ಸೆರೆಯಿಡುತ್ತಿದ್ದರು. ಅಥವಾ ರಾಜಮಾರ್ಗಗಳಲ್ಲಿ ಅವರನ್ನು ಕೆಲಸಗಳಿಗೆ ನೇಮಕಮಾಡುತ್ತಿದ್ದರು. ಮಹಾರಾಜರ ವಿನಾ ಯಾವ ಅಧಿಕಾರಿಯೂ ಮತ್ತು ಅದಾಲತ್ ಕೋರ್ಟಿನವರೂ ಅಪರಾಧಿಗಳಿಗೆ ಮರಣ ಶಿಕ್ಷೆಯನ್ನಾಗಲಿ ಅಥವಾ ಜೀವಾವಧಿ ಕಾರಾಗೃಹವಾಸ ಶಿಕ್ಷೆಯನ್ನಾಗಲಿ ವಿಧಿಸುವಂತಿರಲಿಲ್ಲ.

ವ್ಯವಹಾರ ಸಂಬಂಧವಾದ ಮೊಕದ್ದಮೆಗಳನ್ನು ಗ್ರಾಮದ ಪಟೇಲನಾಗಲಿ, ಶೇಕದಾರನಾಗಲಿ, ಬ್ರಾಹ್ಮಣರ ಅಥವಾ ವರ್ತಕರ ಒಂದು ಪಂಚಾಯಿತಿಯಾಗಲಿ, ಪುರೋಹಿತರಾಗಲಿ ವಿಚಾರಣೆಮಾಡಿ ತೀರ್ಪು ಕೊಡುತ್ತಿದ್ದರು. ಸುಬೇದಾರ, ಫೌಜುದಾರ, ಅದಾಲತ್ ಕೋರ್ಟಿನವರು ಮತ್ತು ಕೊತ್ವಾಲ-ಇವರೂ ಸಹ ವ್ಯವಹಾರ ಸಂಬಂಧವಾದ ವಿವಾದಗಳನ್ನು ಬಗೆಹರಿಸಿ ತೀರ್ಪು ಕೊಡುತ್ತಿದ್ದರು. ಇಂಥ ವಿವಾದಗಳನ್ನು ವಿಚಾರಣೆಮಾಡಿ, ತೀರ್ಪು ಕೊಡಬೇಕಾದರೆ ಯಾವುದೊಂದು ರುಸುಮನ್ನೂ ಕೊಡಬೇಕಾಗಿರಲಿಲ್ಲ. ಆದರೆ ಅನುಕೂಲವಾದ ತೀರ್ಪು ದೊರೆತಾಗ, ವಿವಾದದಲ್ಲಿ ಗೆದ್ದವರು ಗ್ರಾಮದೇವತೆಗೆ ಬಲಿಯನ್ನು ಅರ್ಪಿಸಿ ನಂಟರಿಷ್ಟರಿಗೆ ಔತನಮಾಡಿಸುತ್ತಿದ್ದರು. ಒಂದುವೇಳೆ ತಮಗೆ ಸರಿಯಾದ ನ್ಯಾಯ ದೊರೆಯಲಿಲ್ಲವೆಂದು ಕಂಡುಬಂದರೆ ವಾದಿಯಾಗಲಿ, ಪ್ರತಿವಾದಿಯಾಗಲಿ, ತನ್ನ ವಿವಾದವನ್ನು ಮಹಾರಾಜರ ಕಟ್ಟಕಡೆಯ ನಿರ್ಣಯಕ್ಕೆ ಒಪ್ಪಿಸಬಹುದಾಗಿದ್ದಿತು. ಮಹಾರಾಜರು ಅದಾಲತ್ ಕೋರ್ಟಿಗೆ ಬಾಕರ್ ಆಲಿಖಾನ್ ಎಂಬುವರನ್ನು ಬಕ್ಷಿಯಾಗಿ ನೇಮಕಮಾಡಿ, ಕಂಪೆನಿ ಸರ್ಕಾರದ ರೆಗ್ಯುಲೇಷನುಗಳನ್ನು ಸಂದರ್ಭಾನುಸಾರವಾಗಿ ಅನ್ವಯಿಸಿಕೊಳ್ಳಬೇಕೆಂದು ಕಟ್ಟುಮಾಡಿದರು.

ಬಹಳ ಹಿಂದಿನ ಕಾಲದಿಂದಲೂ ನಮ್ಮ ದೇಶದಲ್ಲಿ ಪಾಠಶಾಲೆಗಳಿದ್ದುವು. ಮಠದ ಅಯ್ಯನವರು ಹುಡುಗರಿಗೆ ಪಾಠ ಹೇಳಿಕೊಂಡು ಆ ಹುಡುಗರ

ಪ್ರೋಷಕರಿಂದ ದವಸಧಾನ್ಯಗಳನ್ನೂ, ಹಣವನ್ನೂ ತೆಗೆದುಕೊಳ್ಳುತ್ತಿದ್ದರು. ಸರ್ಕಾರದವರು ಸ್ವತಃ ಯಾವುದೊಂದು ಸೌಕರ್ಯವನ್ನೂ ಕಲ್ಪಿಸಿರಲಿಲ್ಲ. ಮಂಟಪ, ಛತ್ರ, ದೇವಸ್ಥಾನ, ಚಾವಡಿ ಅಥವಾ ಗ್ರಾಮದ ಮುಖಂಡರ ಮನೆಯ ಕೈಸಾಲೆಗಳೇ ಆಗಿನ ಪಾಠಶಾಲೆಗಳು. ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕೆಂಬ ಇಚ್ಛೆಯಿದ್ದವರು ಪಟ್ಟಣಗಳಿಗಾಗಲಿ ಅಥವಾ ಇತರ ಮುಖ್ಯ ಸ್ಥಳಗಳಿಗಾಗಲಿ ಹೋಗಿ ವಿದ್ವಾಂಸರ ಬಳಿಯಲ್ಲಿ ವಿದ್ಯಾರ್ಜನಮಾಡುತ್ತಿದ್ದರು. ಇಂಥ ಪುರಾತನ ಪದ್ಧತಿಯು ಸಾರ್ವೋದ್ಧಾರವಾಗಿ ನಡೆದುಕೊಂಡುಬರುವಂತೆ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರು ಬಹಳಮಟ್ಟಿಗೆ ಸೌಕರ್ಯಗಳನ್ನು ಕಲ್ಪಿಸಿ ವಿದ್ವಾಂಸರಿಗೆ ಪ್ರೋತ್ಸಾಹ ಕೊಟ್ಟರು. ಕನ್ನಡ, ಸಂಸ್ಕೃತ ಭಾಷೆಗಳಿಗೆ ಉತ್ತೇಜನವನ್ನೂ, ರಾಜಾಶ್ರಯವನ್ನೂ ಕೊಡುತ್ತಿದ್ದಂತೆಯೇ ಉರ್ದು ಮತ್ತು ಇಂಗ್ಲಿಷ್ ಭಾಷೆಗಳಿಗೂ ವಿಶೇಷ ಸಹಾಯಮಾಡಿದರು.

ಮೈಸೂರು ಪಟ್ಟಣದಲ್ಲಿ ಮಹಾರಾಜರು ಅನೇಕ ದಿವ್ಯ ಭವನಗಳನ್ನು ಕಟ್ಟಿಸಿದರು. ಉದ್ಯಾನವನಗಳನ್ನು ನಿರ್ಮಿಸಿದರು. ಅವರು ಒದಗಿಸಿದ ಪ್ರೋತ್ಸಾಹಕರವಾದ ಸೌಕರ್ಯಗಳಿಂದ ಅನೇಕ ಜನರು ಮೈಸೂರಿಗೆ ಬಂದು ನೆಲೆಸಿದರು. ಶ್ರೀರಂಗಪಟ್ಟಣದಲ್ಲಿದ್ದ ಬ್ರಿಟಿಷ್ ಸೈನ್ಯವು ಕೆಲವು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಹೋಗಿದ್ದಿತು. ಶ್ರೀರಂಗಪಟ್ಟಣ ಅನಾರೋಗ್ಯಕರ ವಾದ ಸ್ಥಳವೆಂದು ಆ ದಂಡನ್ನು ಬೆಂಗಳೂರಲ್ಲಿಟ್ಟಿದ್ದರು. ಇದರಿಂದ ಅನೇಕ ವರ್ತಕರೂ, ಕಸಬುದಾರರೂ ಮತ್ತು ಶ್ರಮಜೀವಿಗಳೂ ಮೈಸೂರಿಗೆ ಬಂದು ಸೇರಿದರು. ರಾಜಧಾನಿಯು ದಿನದಿನಕ್ಕೆ ಅಭಿವೃದ್ಧಿಯಾಯಿತು. ವ್ಯಾಪಾರ ವಾಣಿಜ್ಯಗಳು ಹೆಚ್ಚಿ ಪ್ರಜೆಗಳು ನೆಮ್ಮದಿಯಾಗಿದ್ದರು. ರಾಜಧಾನಿಯ ವೈಭವಕ್ಕೆ ತಕ್ಕ ಬೀದಿಗಳೂ, ಭವನಗಳೂ, ಧರ್ಮಶಾಲೆಗಳೂ ಕಂಗೊಳಿಸು ತ್ತಿದ್ದುವು. ಮಹಾರಾಜರು ಮೈಸೂರು ಕೋಟೆಯ ಪೂರ್ವ ದಿಕ್ಕಿನಲ್ಲಿ ಕಾರಂಜಿ ಕೆರೆಯ ಸಮೀಪದಲ್ಲಿ ನಯನಮನೋಹರವಾದ ಲೋಕರಂಜನ ಮಹಲ್ ಎಂಬ ದಿವ್ಯಹರ್ಮ್ಯವನ್ನೂ, ಅರಮನೆಯ ಪಶ್ಚಿಮ ಭಾಗದಲ್ಲಿ ಚಿತ್ತಾಕರ್ಷಕವಾದ "ಜಗನ್ಮೋಹನ ಭವನ" ಎಂಬ ಅರಮನೆಯನ್ನೂ ಕಟ್ಟಿಸಿದರು. ವಂಶಪಾರಂಪರ್ಯವಾಗಿ ಬಂದಿರುವ ಮೈಸೂರು ರತ್ನ ಸಿಂಹಾಸನಕ್ಕೆ ಅವರು ಚಿನ್ನದ ತಗಡನ್ನು ಹಾಕಿಸಿ, ಅಮೂಲ್ಯವಾದ

ನವರತ್ನಗಳಿಂದ ಕೆತ್ತನೆಯ ಕೆಲಸವನ್ನು ಮಾಡಿಸಿದುದಲ್ಲದೆ, ಆ ಸಿಂಹಾಸನಕ್ಕೆ ಚಿನ್ನದ ಶಿರಾಣಿಯನ್ನೂ ಇಡಿಸಿದರು.

ಮಹಾರಾಜರ ಕೃಪಾಪರಿಪೂರ್ಣವಾದ ಆಳಿಕೆಗೆ ೪೫ ಲಕ್ಷ ಪ್ರಜೆಗಳು ಸೇರಿದ್ದರು ; ೩೨,೪೨೫ ಗ್ರಾಮಗಳಿದ್ದುವು. ಆಗ ದೇಶದಲ್ಲಿ ೯೨ ಕೋಟೆಗಳೂ, ೩೧ ಗಿರಿದುರ್ಗಗಳೂ ಇದ್ದುವು. ಈ ಕೋಟೆಗಳೂ, ಗಿರಿದುರ್ಗಗಳೂ ಈಗಲೂ ಭಗ್ನಾವಶೇಷವಾಗಿ ಉಳಿದುಕೊಂಡಿವೆ. ಮಹಾರಾಜರ ಪ್ರಭುತ್ವವು ಪ್ರಜೆಗಳಿಗೆ ಸುಖಪ್ರದವಾಗಿಯೇ ಇತ್ತು. ಕಂಪೆನಿಯ ಸರ್ಕಾರದವರೂ, ಸಾಮ್ರಾಜ್ಯ ಸರ್ಕಾರದವರೂ ಮಹಾರಾಜರ ರಾಜ್ಯಾಡಳಿತ ಕ್ರಮವನ್ನು ಕಂಡು ಪ್ರಶಂಸಿಸುತ್ತಿದ್ದರು. ಅವರು ಸ್ವತಃ ರಾಜ್ಯವಾಳಿದ ೨೦ ವರ್ಷಗಳಲ್ಲಿ ಕಡೆಯ ೧೦ ವರ್ಷಗಳ ಕಾಲಗತಿಯು ತೀರ ಕ್ರೂರವಾದುದೆಂದು ಹೇಳಬಹುದು. ಈ ಸಂಗತಿಯು ಮುಂದಿನ ಅಧ್ಯಾಯಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಏಳನೆಯ ಅಧ್ಯಾಯ

ಮಹಾರಾಜರ ಆಳ್ವಿಕೆಯಲ್ಲಿ ಕಡೆಯ ಹತ್ತು ವರ್ಷಗಳು

"ಧರ್ಮೋ ಹಿ ಯತ್ನೈಃ ಪುರುಷೇಣ ಸಾಧ್ಯೋ
ಭುಜಂಗಜಿಹ್ವಾಚಪಲಾ ನೃಪಶ್ರಿಯಃ ।
ತಸ್ಮಾತ್ ಪ್ರಜಾಪಾಲನಮಾತ್ರ ಬುದ್ಧ್ಯಾ
ಹತೇಷು ದೇಹೇಷು ಗುಣಾಧರಂತೇ ॥"

[ಭಾಸ ಮಹಾಕವಿ.

ಪೂರ್ಣಯ್ಯನವರು ಮಂತ್ರಿಪದವಿಯನ್ನು ಬಿಟ್ಟಮೇಲೆ, ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರು ರಾಜ್ಯಾಡಳಿತಗಳನ್ನು ೨೦ ವರ್ಷಕಾಲ ಸ್ವತಃ ನಿರ್ವಹಿಸಿದರು. ಈ ಅವಧಿಯಲ್ಲಿ ಬಾಲಾಜೀರಾವ್, ರಾಮರಾವ್, ಬಾಬುರಾವ್, ಸಿದ್ಧರಾಜೇ ಅರಸು, ಲಿಂಗರಾಜೇ ಅರಸು ಮತ್ತು ವೆಂಕಟರಾಜೇ ಅರಸು ಎಂಬುವರು ಕ್ರಮವಾಗಿ ಒಬ್ಬರಾದಮೇಲೊಬ್ಬರು ದಿವಾನ್ ಪದವಿಯಲ್ಲಿದ್ದರು. ಬಾಲಾಜೀರಾಯರು ಕೆಲವು ದಿನಗಳು ಮಾತ್ರ ದಿವಾನ್ ಹುದ್ದೆಯಲ್ಲಿದ್ದು ತರುವಾಯ ರಾಮರಾಯರಿಗೆ ದಿವಾನ್ ಅಧಿಕಾರವನ್ನು ವಹಿಸಿಕೊಟ್ಟರು. ರಾಮರಾಯರು ಮೂರು ವರ್ಷಗಳ ಕಾಲ ದಿವಾನ್‌ಗಿರಿಯಲ್ಲಿದ್ದರು. ಅವರು ಪೂರ್ಣಯ್ಯನವರು ಏರ್ಪಡಿಸಿದ್ದ ಆಡಳಿತ ವ್ಯವಸ್ಥೆಯಲ್ಲಿ ಯಾವುದೊಂದು ಬದಲಾವಣೆಯನ್ನೂ ಮಾಡದೆ ಒಂದೇ ರೀತಿಯಾಗಿ ಆಡಳಿತಗಳನ್ನು ನಡೆಯಿಸಿಕೊಂಡು ಬಂದರು. ರಾಮರಾಯರು ಮಹಾರಾಷ್ಟ್ರ ಪ್ರಾಂತದಲ್ಲಿರುವ ಬಾದಾಮಿ ಎಂಬ ಊರಿನಿಂದ, ಅವರ ಸಂಬಂಧಿಗಳಾದ ಅಣ್ಣಿಗೆರೆ ಭೀಮರಾಯ ಮತ್ತು ಹಾನಗಲ್ಲು ಕೃಷ್ಣರಾಯ ಎಂಬುವರೊಡನೆ ಮೈಸೂರು ದೇಶಕ್ಕೆ ಬಂದು, ಆಗ ಪೂರ್ಣಯ್ಯನವರ ಕಾಲದಲ್ಲಿ ನಗರ ಡಿವಿಜನ್ ಫೌಜುದಾರಿ ಹುದ್ದೆಯನ್ನು ಸಂಪಾದಿಸಿಕೊಂಡರು. ಅವರು ಫೌಜುದಾರರಾದಮೇಲೆ, ತಮ್ಮ ಸಂಬಂಧಿಗಳನ್ನೂ ಮತ್ತು ತಮ್ಮ ಕಡೆಯ ಇತರ ಜನಗಳನ್ನೂ ಅಧಿಕಾರಗಳಿಗೆ ಸೇರಿಸಿಕೊಂಡಿದ್ದರು. ನಗರ ಪ್ರಾಂತದ ಅಧಿಕಾರಿಗಳಲ್ಲಿ ರಾಮರಾಯರ ಅನುಯಾಯಿಗಳೇ ತುಂಬಿಹೋಗಿದ್ದರು.

ಅವರು ದಿವಾನಪದವಿಗೆ ಬಂದಮೇಲೆ, ನಗರ ಫೌಜುದಾರರಾಗಿ ಬಂದವರೆಲ್ಲರೂ ಬಹುಮಟ್ಟಿಗೆ ಅವರ ಸಮೀಪ ಬಂಧುಗಳೇ ಆಗಿದ್ದರು. ಸುಮಾರು ೨೦ ವರ್ಷ ಕಾಲ ರಾಮರಾಯರ ಕಡೆಯವರು ನಗರ ಫೌಜುದಾರರಾಗಿ ಕೆಲಸಮಾಡಿದರು. ಈ ಮಧ್ಯೆ ಕೆಲವು ತಿಂಗಳು ಕಾಲ ಮಾತ್ರ ಬೇರೆಯವರು ನೇಮಕವಾಗಿದ್ದರು. ರಾಮರಾಯರು ದಿವಾನ್ ಹುದ್ದೆಯನ್ನು ಬಿಟ್ಟಮೇಲೆ, ಬಾಬುರಾಯರು ಮೊದಲನೆಯ ಸಲ ಏಳು ತಿಂಗಳೂ, ಎರಡನೆಯ ಸಲ ಸುಮಾರು ಒಂದು ವರ್ಷವೂ, ಮೂರನೆಯ ಸಲ ಒಂದು ವರ್ಷವೂ ದಿವಾನ್ ಪದವಿಯಲ್ಲಿದ್ದರು. ಈ ಮಧ್ಯೆ ಸಿದ್ಧರಾಜೇ ಅರಸಿನವರೂ ಮತ್ತು ಲಿಂಗರಾಜೇ ಅರಸಿನವರೂ ಕ್ರಮವಾಗಿ ದಿವಾನರುಗಳಾಗಿದ್ದರು. ಮಹಾರಾಜರು ಸ್ವತಂತ್ರರಾಗಿ ರಾಜ್ಯ ಪರಿಪಾಲನೆಮಾಡುತ್ತಿದ್ದ ಅವಧಿಯಲ್ಲಿ ವೆಂಕಟರಾಜೇ ಅರಸಿನವರು ಕೊನೆಯ ದಿವಾನರವರಾಗಿದ್ದರು.

ಮಹಾರಾಜರಿಗೆ ಸದಾ ಪರಮ ಆಪ್ತರಂತಿದ್ದವರೆಲ್ಲರೂ ಗೋಮುಖ ವ್ಯಾಘ್ರಗಳಂತೆ ವರ್ತಿಸುತ್ತಿದ್ದರು. ಅವರು ರಾಜಭೋಗದಲ್ಲಿ ಮಗ್ನರಾಗಿ ವಿಷಯಸುಖಾನುಭವಿಗಳಾಗಿರುವಂತೆ ಬೇಕಾದ ಅನುಕೂಲಗಳನ್ನು ಕಲ್ಪಿಸುತ್ತಾ ಸ್ವಾರ್ಥಸಾಧಕರಾಗಿದ್ದ ಜನಗಳು ಅವರ ಸಮ್ಮುಖದಲ್ಲಿ ಹೆಚ್ಚುತ್ತಾ ಬರುತ್ತಿದ್ದರು. ಅವರು ಇಂಗಿತಜ್ಞರಾದರೂ ಇಂಥ ಜನಗಳ ಕುಟಿಲ ವನ್ನು ಅರಿತುಕೊಳ್ಳಲು ಬಹಳಕಾಲ ಹಿಡಿಯಿತು. ಜನರ ಶೀಲಸ್ವಭಾವ ಗಳನ್ನು ಜಾಗರೂಕತೆಯಿಂದ ಪರಿಶೀಲಿಸುವಷ್ಟು ಲೋಕಾನುಭವವು ತರುಣ ಮಹಾರಾಜರಿಗೆ ಸಾಕಾದಷ್ಟಿರಲಿಲ್ಲ. ವಿಶ್ವಾಸದ್ರೋಹಿಗಳ ತಂಡವು ಜೇಡರ ಹುಳುವಿನ ಬಲೆಯಂತೆ ಹೆಣೆದುಕೊಂಡಿದ್ದಿತು. ಮಹಾರಾಜರ ಅಂತರಂಗ ಸಚಿವರಾಗಿದ್ದವರಲ್ಲಿ ವೀಣೆ ವೆಂಕಟಸುಬ್ಬಯ್ಯನೆಂಬುವನು ಬಹಳ ಪ್ರಮುಖ ನಾಗಿದ್ದನು. ಅವನು ತೀಕ್ಷ್ಣಬುದ್ಧಿಯುಳ್ಳವನೂ ಸಮರ್ಥನೂ ಆಗಿದ್ದನು. ಆದರೆ ನೀತಿಬಾಹಿರನು. ಅವನ ಸಂಬಂಧಿಗಳಲ್ಲಿ ಏಳು ಜನರು ನಗರ ಪ್ರಾಂತದಲ್ಲಿ ಸುಬೇದಾರರಾಗಿದ್ದರು; ಒಬ್ಬನು ಕವಲೇದುರ್ಗದಲ್ಲಿ ಸುಂಕ ಸಾರಿಗೆಗಳ ಮೇಲ್ವಿಚಾರಕನಾಗಿದ್ದನು. ಆ ಏಳು ತಾಲ್ಲೂಕುಗಳಲ್ಲಿಯೂ ವೆಂಕಟಸುಬ್ಬಯ್ಯನು ತನಗೆ ಬೇಕಾದವರನ್ನು ಸರ್ಕಾರಿ ಕೆಲಸಗಳಿಗೆ ಸೇರಿ ಸುತ್ತಲೂ, ಬೇಡವಾದವರನ್ನು ಕೆಲಸದಿಂದ ತಪ್ಪಿಸುತ್ತಲೂ ತಾನೇತಾನಾಗಿ

ವರ್ತಿಸುತ್ತಿದ್ದನು. ವೆಂಕಟಸುಬ್ಬಯ್ಯನು ಮಹಾರಾಜರಿಗೆ ಒಬ್ಬ ದುರ್ಮಂತ್ರಿ ಯೆಂಬುದು ರೆಸಿಡೆಂಟರಾದ ಕೋಲ್‌ರವರಿಗೆ ತಿಳಿದುಬಂದಮೇಲೆ, ಅವನನ್ನು ಮಹಾರಾಜರ ಸಮೀಪದಿಂದ ತಪ್ಪಿಸಿಬಿಟ್ಟರು. ಆದರೂ ವೆಂಕಟಸುಬ್ಬಯ್ಯನು ಕಾರ್ಯಚತುರನಾದುದರಿಂದ ಆಗ ಶಿಸನಸಮುದ್ರದ ಜಹಗೀರುದಾರನಾಗಿದ್ದ, ಮತ್ತು ಕೋಲ್‌ರವರಿಗೆ ಸನ್ಮಿತ್ರನಾಗಿದ್ದ ರಾಮಸ್ವಾಮಿ ಮೊದಲಿಯಾರ್ ಎಂಬುವನ ಮೂಲಕ ರೆಸಿಡೆಂಟರ ಅನುಗ್ರಹಕ್ಕೆ ಪಾತ್ರನಾಗಿ, ಪುನಃ ಮಹಾ ರಾಜರ ಮಂತ್ರಾಲೋಚನೆಯ ಸಭೆಗೆ ಸೇರಿಕೊಂಡನು.

ಆಗ ಮಹಾರಾಜರ ಸಮೀಪದಲ್ಲಿ ಚೌಡಯ್ಯನೆಂಬ ಇನ್ನೊಬ್ಬ ಹಿತ ಶತ್ರುವೂ ಇದ್ದನು. ಅವನು ರೆಸಿಡೆಂಟರ ಕಚೇರಿಯಲ್ಲಿ ಶಿರಸ್ತೆದಾರನಾಗಿದ್ದು ಕೊಂಡು, ಅರಮನೆಯಲ್ಲಿ ನಡೆಯುತ್ತಿದ್ದ ಸಂಗತಿಗಳನ್ನು ರೆಸಿಡೆಂಟರಿಗೆ ತಿಳಿಸುತ್ತಿದ್ದನು. ಕೋಲ್‌ರವರ ತರುವಾಯ ರೆಸಿಡೆಂಟರಾಗಿ ಬಂದ ಜೇಮ್ಸ್ ಕಸಾಮೇಜರ್ ಎಂಬುವರೂ ಈ ಕುಟಿಲರಿಗೆ ಆಶ್ರಯ ಕೊಟ್ಟಿದ್ದರು. ವೆಂಕಟ ಸುಬ್ಬಯ್ಯನೂ, ಚೌಡಯ್ಯನೂ ಮಹಾರಾಜರ ಹಿತೈಷಿಗಳಂತೆ ವರ್ತಿಸುತ್ತಾ ತಮ್ಮ ಕಡೆಯ ಜನರಿಗೆ ಬೇಕಾದಹಾಗೆ ನೌಕರಿಗಳನ್ನು ಕೊಡಿಸುತ್ತಿದ್ದರು. ರಾಮಸ್ವಾಮಿ ಮೊದಲಿಯಾರ್ ಸಹ ಮಹಾರಾಜರ ಕೃಪೆಗೆ ಪಾತ್ರನಾಗಿ, ತನ್ನ ಕಡೆಯ ಅನೇಕ ಜನರಿಗೆ ಸುಬೇದಾರಿ ಕೆಲಸಗಳನ್ನು ಕೊಡಿಸುತ್ತಾ ಸ್ವಾರ್ಥಸಾಧಕನಾಗಿದ್ದನು. ಇವರಲ್ಲದೆ ತೋಶಿಖಾನೆ ನರಸಿಂಗರಾವ್, ತೋಷಖಾನೆ ಗಂಗಾಧರರಾವ್, ತೋಷಖಾನೆ ನಂಜಪ್ಪ, ವ್ಯಾಸರಾವ್, ಆನೂ ರಾಮರಾವ್ ಮುಂತಾದ ಇತರರೂ ಅರಮನೆಯ ಅಧಿಕಾರಗಳಲ್ಲಿ ಸೇರಿಕೊಂಡು ಸ್ವಾರ್ಥೈಕ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದರು. ವೀಣೆ ವೆಂಕಟಸುಬ್ಬಯ್ಯನೂ, ಚೌಡಯ್ಯನೂ ತಮ್ಮ ಉದ್ದೇಶಗಳನು ಸಾಧಿಸಿಕೊಳ್ಳಬೇಕಾದ ಸಂದರ್ಭಗಳಲ್ಲಿ ಧರ್ಮಾಧರ್ಮಗಳನ್ನೂ ಲಕ್ಷ್ಯ ಮಾಡದೆ ಆಕಡೆ ಮಹಾರಾಜರಿಗೂ, ಈಕಡೆ ರೆಸಿಡೆಂಟರಿಗೂ ಪರಸ್ಪರ ಸಂಗತಿಗಳನ್ನು ತಿಳಿಸುತ್ತಾ ದಮನಕ, ಕರಟಕರಂತೆ ವರ್ತಿಸುತ್ತಿದ್ದರು. ಅನೇಕ ಸಮಯಗಳಲ್ಲಿ ನಿಜವಾದ ಸಂಗತಿಗಳು ಮಹಾರಾಜರಿಗಾಗಲಿ ಅಥವಾ ರೆಸಿಡೆಂಟರಿಗಾಗಲಿ ತಿಳಿಯದಂತೆ ಅಲ್ಲಲ್ಲೇ ಅಡಗಿಸಿಬಿಡುತ್ತಿದ್ದರು.

ದಿವಾನ್ ಪದವಿಗೆ ಬರುತ್ತಿದ್ದವರಾದರೂ ಕಾರ್ಯದಕ್ಷರಾಗಿರಲಿಲ್ಲ. ಸೂಕ್ತವಾದ ಸಲಹೆಗಳನ್ನು ಕೊಡಬಲ್ಲ ಚತುರರಾದ ಮಂತ್ರಿಗಳು ದೊರೆಯದೇ

ಇದ್ದುದೂ ಒಂದು ದುರದೃಷ್ಟವೆಂದೇ ಹೇಳಬಹುದು. ಮಹಾರಾಜರು ಸ್ವತಃ ರಾಜ್ಯಪರಿಪಾಲನೆ ಮಾಡುತ್ತಿದ್ದ ಕಾಲದಲ್ಲಿ ಕಡೆಯ ದಿವಾನರವರಾಗಿದ್ದ ವೆಂಕಟರಾಜೇ ಅರಸಿನವರೂ ಅಷ್ಟೇನೂ ಕಾರ್ಯಚತುರರಾಗಿರಲಿಲ್ಲ. ಅವರಿಗೆ ಇಂಗಿತಜ್ಞತೆಯಾಗಲಿ ಪ್ರಪಂಚಾನುಭವವಾಗಲಿ ತಕ್ಕಷ್ಟು ಇರಲಿಲ್ಲ. ರಾಜ ಕಾರ್ಯ ಸಂಬಂಧವಾದ ತೊಡಕುಗಳನ್ನು ಬಗೆಹರಿಸುವುದರಲ್ಲಿ, ಮಹಾರಾಜರಿಗೆ ದಿವಾನರಿಂದ ಏನೊಂದೂ ಸಹಾಯವಾಗುತ್ತಿರಲಿಲ್ಲ. ವೆಂಕಟರಾಜೇ ಅರಸಿನವರು ವೆಂಕಟಸುಬ್ಬಯ್ಯನ ಕೈಗೊಂಬೆಯಾಗಿದ್ದರು. ರೆಸಿಡೆಂಟರಿಗೆ ಇದೊಂದೂ ತಿಳಿಯದೆ ಅನೇಕ ಸಂದರ್ಭಗಳಲ್ಲಿ ವೆಂಕಟರಾಜೇ ಅರಸಿನವರ ಬೆನ್ನು ಕಾಯುತ್ತಿದ್ದರು. ಮಹಾರಾಜರಿಗೆ ಕಾಲಾನುಗುಣವಾದ ಸಲಹೆಗಳನ್ನು ಕೊಟ್ಟು, ರಾಜಕಾರ್ಯಗಳಲ್ಲಿ ನೆರವಾಗಲು ಸಮರ್ಥರಾದ ಮಂತ್ರಿಗಳ ಸಹಾಯವಿಲ್ಲದೆ, ಸ್ವಕಾರ್ಯಧುರಂಧರರೂ, ಸ್ವಾಮಿದ್ರೋಹಿಗಳೂ, ವಿಶ್ವಾಸಘಾತುಕರೂ ಸೇರಿಕೊಂಡು ಸಂಸ್ಥಾನದ ಕೀರ್ತಿ ಪ್ರತಿಷ್ಠೆಗಳಿಗೆ ಕಳಂಕ ತರುತ್ತಿದ್ದರು.

ಬ್ರಿಟಿಷ್ ರೆಸಿಡೆಂಟರಾದರೂ ಮದ್ರಾಸ್ ಸರ್ಕಾರದವರ ಆಜ್ಞೆಯ ಮೇರೆಗೆ, ಮಹಾರಾಜರಿಗೆ ಯಾವುದೊಂದು ರೀತಿಯಾಗಿಯೂ ಸಲಹೆಕೊಡದೆ ತಟಸ್ಥರಾಗಿದ್ದರಲ್ಲದೆ, ಆಗಾಗ ಅರಮನೆಯ ವಿಚಾರಗಳನ್ನೂ ಬಣ್ಣಗಾಣಿಸಿ ಮದ್ರಾಸ್ ಸರ್ಕಾರಕ್ಕೆ ತಿಳಿಸುತ್ತಿದ್ದರು. ಮಹಾರಾಜರು ಇಂಥ ವಿಷಮ ಪರಿಸ್ಥಿತಿಗೆ ಒಳಗಾದುದು ಅವರ ದುರ್ಯೋಗವೆಂದು ಹೇಳಬಹುದು. ಅವರು ಸ್ವತಃ ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ, ಎ. ಎಚ್. ಕೋಲ್‌ರವರು ಸುಮಾರು ಹದಿನಾಲ್ಕು ವರ್ಷಗಳಿಗಿಂತಲೂ ಹೆಚ್ಚು ಕಾಲ ರೆಸಿಡೆಂಟರಾಗಿದ್ದರು. ಅವರ ತರುವಾಯ ಕಸಾಮೇಜರ್‌ರವರು ರೆಸಿಡೆಂಟರಾದರು. ಮಹಾರಾಜರ ಆಡಳಿತ ವಿಚಾರದಲ್ಲಿ ಯಾವುದೊಂದು ಸಲಹೆಯನ್ನೂ ಕೊಡಕೂಡದೆಂಬುದಾಗಿ, ಮದ್ರಾಸ್ ಸರ್ಕಾರದವರು ನಿರೋಧಿಸಿದ್ದರೂ ಸಹ, ಆಗ ೧೯ ವರ್ಷ ವಯಸ್ಸಿನವರಾಗಿದ್ದ ಮಹಾರಾಜರಿಗೆ ಕೋಲ್‌ರವರು ಪರಮಾಪ್ತರಾಗಿದ್ದುಕೊಂಡು ಯಾವಾಗಲೂ ಅವರಿಗೆ ಸಮೀಚೀನವಾದ ಸಲಹೆಗಳನ್ನು ಕೊಡುತ್ತಲೇ ಇದ್ದರು. ಸುಬೇದಾರರುಗಳಿಂದಲೂ, ಕಿಲ್ಲೇದಾರರುಗಳಿಂದಲೂ ಮತ್ತು ಇತರರಿಂದಲೂ ಏನಾದರೂ ಮನವಿಗಳು ಬಂದರೆ

ಕೋಲ್‌ರವರು ಅವುಗಳನ್ನು ಕೂಲಂಕಷವಾಗಿ ವಿಚಾರಿಸಿ ಮಹಾರಾಜರಿಗೆ ಎಷ್ಟೋ ಸಹಾಯಮಾಡುತ್ತಿದ್ದರು. ಕಸಾಮೇಜರ್‌ರವರು ರೆಸಿಡೆಂಟರಾದ ಮೇಲೆ ಯಾವುದಾದರೂ ಅರ್ಜಿಗಳು ಬಂದರೆ, ಅವುಗಳನ್ನು ವಿಚಾರಣೆ ಮಾಡದೆ, ಅವುಗಳ ವಿಚಾರವೇನಿದ್ದರೂ ಮಹಾರಾಜರಿಗೆ ಸೇರಿದುದೆಂದು ಹೇಳಿ ಕಳುಹಿಸಿಬಿಡುತ್ತಿದ್ದರು.

ಮಹಾರಾಜರ ಆಳಿಕೆಯಲ್ಲಿ ವೀರಕ್ಷಾಮ ತಲೆದೋರಿದುದರಿಂದಲೂ, ಮೈಸೂರು ಸೈನ್ಯವು ಉತ್ತರ ಹಿಂದೂಸ್ಥಾನದಿಂದ ಹಿಂದಿರುಗಿ ಬಂದಮೇಲೆ ದೇಶದಲ್ಲಿ ವಾಂತಿಭೇದಿ ರೋಗ ವ್ಯಾಪಿಸಿ ಅನೇಕ ಪ್ರಜೆಗಳು ಸತ್ತುಹೋದುದ ರಿಂದಲೂ, ಮಳೆ ಕಾಲಕಾಲಕ್ಕೆ ಆಗದೆ ವ್ಯವಸಾಯವು ಸರಿಯಾಗಿ ನಡೆಯದೇ ಹೋದುದರಿಂದಲೂ ರಾಜ್ಯದ ಹುಟ್ಟುವಳಿಯು ಕಡಮೆಯಾಯಿತು. ಸರ್ಕಾರಿ ಅಧಿಕಾರಿಗಳಿಗೆ ಕೊಡುತ್ತಿದ್ದ ಸಂಬಳಗಳಿಗಾಗಿ ಎಷ್ಟು ಹಣವು ವೆಚ್ಚವಾಗು ತ್ತಿದ್ದಿತೆಂಬುದನ್ನು ನಿಷ್ಕರ್ಷೆಯಾಗಿ ತೋರಿಸಲು ಯಾವುದೊಂದು ಲೆಕ್ಕವೂ ಇರಲಿಲ್ಲ. ಅರಮನೆಯ ಸಿಬ್ಬಂದಿಯು ವಿಶೇಷ ಹೆಚ್ಚಾಗಿದ್ದುದರಿಂದ, ಆ ಸಿಬ್ಬಂದಿಯ ತಲಬೂ ಬಹಳ ಹೆಚ್ಚಾಗಿಯೇ ಇದ್ದಿತು. ಯುದ್ಧದಲ್ಲಿ ಗೆದ್ದು ಬಂದ ಸೈನಿಕರಿಗೆ ಬಹುಮಾನಗಳನ್ನು ಕೊಟ್ಟುದರಿಂದಲೂ ಮಹಾರಾಜರು ಧರ್ಮಕಾರ್ಯಗಳಿಗಾಗಿ ಅನೇಕ ಭೂಮಿಗಳನ್ನೂ, ಗ್ರಾಮಗಳನ್ನೂ, ಅಗ್ರಹಾರ ಗಳನ್ನೂ ಮತ್ತು ನಗನಾಣ್ಯಗಳನ್ನೂ ವಿಶೇಷವಾಗಿ ಕೊಟ್ಟುದರಿಂದಲೂ ಸಂಸ್ಥಾನದ ವರಮಾನವು ಕಡಮೆಯಾಯಿತು ; ಹುಟ್ಟುವಳಿಯಲ್ಲಿ ಬಹಳ ಹಣ ವೆಚ್ಚವಾಯಿತು. ಇದರ ಜೊತೆಗೆ ಇನ್ನೂ ಕೆಲವು ಕಾರಣಗಳಿದ್ದುವು.

ಹೈದರ್‌ಆಲಿಯು ಮತ್ತು ಟೀಪೂಸುಲ್ತಾನನು ದೌಲತ್ತುಮಾಡಿದ ಕಾಲದಲ್ಲಿ ಮೈಸೂರು ದೇಶದಲ್ಲಿ ದೊಡ್ಡ ದೊಡ್ಡ ಸೈನ್ಯಗಳೂ, ಅನೇಕಮಂದಿ ಊಳಿಗದವರೂ ಇದ್ದುದರಿಂದ ಅಷ್ಟು ಜನರಿಗೂ ಆಹಾರ ಸಾಮಗ್ರಿಗಳನ್ನು ಒದಗಿಸಲು ರೈತರು ಬೆಳೆದ ದಿನಸುಗಳೆಲ್ಲಾ ವಿಕ್ರಯವಾಗುತ್ತಿದ್ದುವು. ಅನೇಕ ಕಸಬುದಾರರುಗಳಿಗೆ ಕೈತುಂಬ ಕೆಲಸವಿತ್ತು. ಆಗ ದೇಶದಲ್ಲಿ ಎಷ್ಟೇ ಗಲಭೆಗಳಿದ್ದರೂ, ಶಾಂತಿಸಮಾಧಾನಗಳಿಲ್ಲದಿದ್ದರೂ ಜನರಲ್ಲಿ ನಿರುದ್ಯೋಗ ವೆಂಬುದೇ ಇರಲಿಲ್ಲ. ಎಲ್ಲ ಕಸಬುದಾರರಲ್ಲಿಯೂ, ವರ್ತಕರಲ್ಲಿಯೂ, ರೈತ

ರಲ್ಲಿಯೂ ಮತ್ತು ಸಾಮಾನ್ಯ ಜನಗಳಲ್ಲಿಯೂ ದುಡ್ಡು ಕಾಸು ಓಡಾಡುತ್ತಿತ್ತು. ಪೂರ್ಣಯ್ಯನವರ ದಿನಗಳಲ್ಲಿಯೂ ಸಹ ದೇಶದ ಬೇರೆ ಬೇರೆ ಭಾಗಗಳಲ್ಲಿ ಇಂಗ್ಲಿಷ್ ಸೈನ್ಯಗಳೂ, ದೇಶೀಯ ಸೈನ್ಯಗಳೂ ಇದ್ದುದರಿಂದ ಆಗಲೂ ರೈತರಿಗೂ, ವ್ಯಾಪಾರಗಾರರಿಗೂ, ಕಸಬುದಾರರಿಗೂ, ಕೂಲಿಗಾರರಿಗೂ ಯಾವುದೊಂದು ಮುಗ್ಗಟ್ಟೂ ಕಾಣುತ್ತಿರಲಿಲ್ಲ. ಮಹಾರಾಜರ ಕಾಲದಲ್ಲಿ ಬ್ರಿಟಿಷ್ ಸೈನ್ಯಗಳ ಸಂಖ್ಯೆಯೂ, ದೇಶೀಯ ಸೈನ್ಯಗಳ ಸಂಖ್ಯೆಯೂ ಕಡಮೆಯಾಯಿತು. ಬೆಳೆದ ದಿನಸು ಮಾರಾಟವಾಗದೆ, ಅಗ್ಗವಾಗುತ್ತಾ ಬಂದಿತು. ಬೆಳೆಸು ಹೆಚ್ಚಾಯಿತೇ ಹೊರತು ಕೊಳ್ಳುವವರು ಕಡಮೆಯಾಗಿ ಹಣದ ಚಲಾವಣೆಯೇ ಮಂದವಾಯಿತು. ತಯಾರಾದ ವಸ್ತುಗಳು ವಿಕ್ರಯವಾಗದೆ ಕಸಬುದಾರರಿಗೂ ತೊಂದರೆಯಾಯಿತು. ಹೀಗೆ ದೇಶದಲ್ಲಿ ಆರ್ಥಿಕ ದುಸ್ಥಿತಿಯುಂಟಾದುದರಿಂದ, ಪ್ರತಿ ತಿಂಗಳೂ ಬ್ರಿಟಿಷ್ ಸೈನ್ಯಕ್ಕೆ ಹಣದ ರೂಪವಾಗಿ ಪೊಗದಿಯನ್ನು ಕೊಡಲು ಕಷ್ಟವಾಯಿತು.

ಮಹಾರಾಜರ ಆಡಳಿತ ಕಾಲದಲ್ಲಿ ದಿವಾನರವರಾಗಿದ್ದವರೂ, ಇತರ ದೊಡ್ಡ ದೊಡ್ಡ ಅಧಿಕಾರಿಗಳೂ, ಬಹಳಮಟ್ಟಿಗೆ ಸೇನಾಜನಗಳಾಗಿದ್ದರೇ ಹೊರತು ರಾಜ್ಯಾಡಳಿತಗಳಲ್ಲಿ ನಿಪುಣರಾಗಿರಲಿಲ್ಲ. ದೇಶದಲ್ಲಿ ಆರ್ಥಿಕ ದುಸ್ಥಿತಿಯು ಪ್ರಾಪ್ತವಾಗಲು ಕಾರಣವೇನೆಂಬುದನ್ನು ಕಂಡುಹಿಡಿಯಲು ಮತ್ತು ಅದರ ನಿವಾರಣೆಗೆ ತಕ್ಕ ಪರಿಹಾರೋಪಾಯಗಳೇನೆಂಬುದನ್ನು ಗೊತ್ತುಮಾಡಲು ಅವರು ಯಾರೂ ಶಕ್ತರಾಗಿರಲಿಲ್ಲ. ಆ ಕಾಲದಲ್ಲಿ ರೆಸಿಡೆಂಟರುಗಳಾಗಿದ್ದವರಿಗೂ ಈ ವಿಷಯದಲ್ಲಿ ಸಾಕಾದಷ್ಟು ಪರಿಶ್ರಮವಿದ್ದಂತೆ ಕಾಣುವುದಿಲ್ಲ. ಪೊಗದಿಯು ಕಾಲಕಾಲಕ್ಕೆ ಸರಿಯಾಗಿ ತಪ್ಪದೆ ಸಂದಾಯವಾಗುತ್ತಿದೆಯೇ, ಇಲ್ಲವೇ ಎಂಬುದನ್ನು ಮಾತ್ರ ನೋಡುವುದೇ ಆ ರೆಸಿಡೆಂಟರುಗಳು ತಮ್ಮ ಕರ್ತವ್ಯವೆಂದು ಭಾವಿಸಿದ್ದರು.

ಈ ಆರ್ಥಿಕ ದುರ್ದೆಶೆಯು ಒಂದೆರಡು ವರ್ಷಗಳಲ್ಲಿಯೇ ಉಂಟಾಗಲಿಲ್ಲ. ಇದು ಕ್ರಮಕ್ರಮವಾಗಿ ಬೆಳೆಯುತ್ತಾ ಬಂದು ಸುಮಾರು ೨೦ ವರ್ಷಗಳ ತರುವಾಯ ತನ್ನ ಕರಾಳರೂಪವನ್ನು ತೋರಿಸಿತು. ಮೊದಲಿನಿಂದಲೂ ಒಳಗೊಳಗೇ ಬೆಳೆದುಕೊಂಡುಬಂದ ವ್ಯಾಧಿಯು ಕೊನೆಗೆ ಅಪಾಯಕರವಾಗಿ ಪರಿಣಮಿಸುವಂತೆ, ದೇಶದ ಈ ಆರ್ಥಿಕ ದುಸ್ಥಿತಿಯು ಬಹಳ ಹಿಂದಿನಿಂದಲೂ

ನಾನಾ ಕಾರಣಗಳಿಂದ ಬೆಳೆದುಬಂದು, ಕೊನೆಗೆ ಪರಿಹರಿಸಲು ಅಸಾಧ್ಯವಾದ ಸಮಸ್ಯೆಯಾಗಿ ನಿಂತುಬಿಟ್ಟಿತು.

ದೇಶದಲ್ಲಿ ವ್ಯಾಪಾರ, ಕೈಗಾರಿಕೆ, ವಾಣಿಜ್ಯಗಳು ಬಹಳಮಟ್ಟಿಗೆ ಕಡಮೆಯಾದುದರಿಂದ ಸುಂಕ, ಸಾರಿಗೆಗಳ ಮೂಲಕ ಬರುತ್ತಿದ್ದ ಹುಟ್ಟುವಳಿಯೂ ಕಡಮೆಯಾಯಿತು ವ್ಯವಸಾಯದಿಂದ ಮಾತ್ರ ರಾಜ್ಯದ ಹುಟ್ಟುವಳಿಯು ಬರಬೇಕಾಗಿದ್ದಿತು. ಸಂಸ್ಥಾನದ ಆದಾಯವನ್ನು ಹೆಚ್ಚಿಸಲು ಮಹಾರಾಜರು ಹೊಸ ಹೊಸ ಯೋಜನೆಗಳನ್ನು ಹುಡುಕಿದರು. ಜಮೀನುಗಳನ್ನು ಕಟ್ಟುಗುತ್ತಿಗೆಯ ಪದ್ಧತಿಯ ಮೇರೆಗೆ ಸಾಗುವಳಿಗೆ ಕೊಡುವ ಏರ್ಪಾಟನ್ನು ಜಾರಿಗೆ ತಂದರು. ಇದರಿಂದ ಆಯಾ ತಾಲ್ಲೂಕಿನ ಸುಬೇದಾರರು "ಪ್ರತಿವರ್ಷವೂ ಒಂದು ಗೊತ್ತಾದ ಮೊಬಲಗನ್ನು ಸರ್ಕಾರಕ್ಕೆ ಕೊಡಬೇಕು; ಆ ಮೊಬಲಗಿಗೆ ಕಡಮೆಯಾದರೆ ಸುಬೇದಾರರೇ ಜವಾಬ್ದಾರರಾಗಿರಬೇಕು; ಹೆಚ್ಚು ಹುಟ್ಟುವಳಿಯಾದರೆ ದರ್ಬಾರಿಗೆ ಸೇರಬೇಕು; ಸುಬೇದಾರರು ರೈತರಿಗೆ ಯಾವುದೊಂದು ತೊಂದರೆಯನ್ನೂ ಉಂಟುಮಾಡಕೂಡದು; ಯಾವ ವಿಧವಾದ ಹೊಸ ತೆರಿಗೆಯನ್ನೂ ವಿಧಿಸಕೂಡದು; ಬಟಾಯಿ ಜಮೀನಿನಲ್ಲಿ ಬರತಕ್ಕ ಸರ್ಕಾರದ ಪಾಲಿನ ದವಸವನ್ನು ಕೊಂಡುಕೊಳ್ಳುವಂತೆ ರೈತರನ್ನು ನಿರ್ಬಂಧಿಸಕೂಡದು" ಎಂಬ ನಿಯಮಗಳು ವಿಧಾಯಕವಾದುವು. ಕಟ್ಟುಗುತ್ತಿಗೆಯಮೇರೆಗೆ ಜಮೀನುಗಳನ್ನು ಸಾಗುವಳಿಗೆ ಕೊಡುತ್ತಿದ್ದ ಪದ್ಧತಿಯು ಪೂರ್ಣಯ್ಯನವರ ಕಾಲಕ್ಕಿಂತಲೂ ಹಿಂದಿನಿಂದ ಆಚರಣೆಯಲ್ಲಿತ್ತು. ಆದರೆ ಪೂರ್ಣಯ್ಯನವರು ದಿವಾನರವರಾಗಿದ್ದಾಗ ಈ ಪದ್ಧತಿಯನ್ನು ಕೇವಲ ಹೊಸ ಸುಬೇದಾರರ ವಿಚಾರದಲ್ಲಿ ಅನ್ವಯಿಸುತ್ತಿದ್ದರು. ಒಂದುವೇಳೆ ಸಾಗುವಳಿಯು ಸರಿಯಾಗಿ ಆಗದೆ ಹೋದಾಗ ಸುಬೇದಾರರ ಕೈಯಿಂದ ದಂಡ ತೆರಿಸುತ್ತಿರಲಿಲ್ಲ. ಸುಬೇದಾರರು ದುಂಡಾವರ್ತಿಯಿಂದ ಹೆಚ್ಚು ಗುತ್ತಿಗೆಯನ್ನು ವಸೂಲು ಮಾಡಿರುವುದಾಗಿ ರೈತರಿಂದ ದೂರು ಬಂದರೆ, ಪೂರ್ಣಯ್ಯನವರು ಅದನ್ನು ವಿಚಾರಿಸಿ, ಅದು ನಿಜವಾಗಿದ್ದರೆ ಸುಬೇದಾರರನ್ನು ಶಿಕ್ಷಿಸಿ ಹೆಚ್ಚಾಗಿ ವಸೂಲು ಮಾಡಿದ್ದ ಹಣವನ್ನು ವಾಪಸು ಕೊಡಿಸುತ್ತಿದ್ದರು.

ಕಟ್ಟುಗುತ್ತಿಗೆಯ ಪದ್ಧತಿಯಿಂದ ಆ ಮುಗ್ಗಟ್ಟಿನ ಕಾಲದಲ್ಲಿ ಹೆಚ್ಚು ಪ್ರಯೋಜನವಾಗುವುದೆಂಬ ನಿರೀಕ್ಷಣೆಯಿದ್ದಿತು. ಸುಬೇದಾರರು ಕಂದಾಯ

ಗಳನ್ನು ಸರಿಯಾಗಿ ವಸೂಲು ಮಾಡುವರೆಂದೂ, ಜಮಿಾನು ಸಾಗುವಳಿಯು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವರೆಂದೂ ಮಹಾರಾಜರು ಯೋಚಿಸಿದರು. ಆಗ ದಿವಾನ್ ಪದವಿಯಲ್ಲಿದ್ದ ಬಾಬೂರಾಯರು ವೀಣೆ ವೆಂಕಟಸುಬ್ಬಯ್ಯ, ಆನೂ ರಾಮರಾವ್ ಮುಂತಾದವರ ಪ್ರೋತ್ಸಾಹದಿಂದ ಈ ಹಳೆಯ ಪದ್ಧತಿಯನ್ನು ಜಾರಿಗೆ ತಂದರು. ಈ ಪದ್ಧತಿಯು ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಜಾರಿಯಲ್ಲಿತ್ತು. ಇದರಿಂದ ನಿರೀಕ್ಷಿಸಿದಷ್ಟು ಫಲವೇನೂ ಬರಲಿಲ್ಲ. ಗುತ್ತಿಗೆ ಹಣವು ಕಡಮೆಯಾದಾಗ ಸುಬೇದಾರರು ಆ ಹಣವನ್ನು ರೈತರಿಂದ ನಾನಾ ರೂಪವಾಗಿ ವಸೂಲು ಮಾಡುತ್ತಿದ್ದರು. ತಮಗೆ ಬೇಕಾದವರಿಗೆ ಜಮಿಾನುಗಳನ್ನು ಸಾಗುವಳಿಗೆ ಕೊಡುತ್ತಿದ್ದರು; ಅವರಿಗೆ ಬೇಡವಾದವರನ್ನು ವಿಶೇಷವಾಗಿ ತೊಂದರೆಪಡಿಸುತ್ತಿದ್ದರು. ಮಹಾರಾಜರ ಮೂಸಾಹೇಬರುಗಳು (ಸಲಹೆ ಹೇಳುವವರು) ತಮಗೆ ಇಷ್ಟಬಂದವರಿಗೆ ಜಮೀನುಗಳನ್ನು ಸಾಗುವಳಿಗೆ ಕೊಡಿಸುತ್ತಿದ್ದರು. ಸುಬೇದಾರರು ಯಾವಾಗಲೂ ಮಹಾರಾಜರ ದುರ್ಮಂತ್ರಿಗಳಿಗೆ ಹೆದರಿಕೊಂಡು ನಡೆಯಬೇಕಾಯಿತು. ಮೋತಿಖಾನೆ ನರಸಿಂಗರಾಯನು ಪ್ರಬಲನಾಗುತ್ತಿದ್ದನು. ಅವನ ಏಳು ಜನ ಸಹೋದರರು ಸರ್ಕಾರಿ ಕೆಲಸದಲ್ಲಿದ್ದರು. ನಗರ ಪ್ರಾಂತದಲ್ಲಿ ವೀಣೆ ವೆಂಕಟಸುಬ್ಬಯ್ಯನ ಮಾತೇ ಮಾತಾಯಿತು. ಈ ಪದ್ಧತಿಯಿಂದ ರೈತರಿಗೂ ಸುಖವಿರಲಿಲ್ಲ; ಸುಬೇದಾರರಿಗೂ ತೊಂದರೆ ತಪ್ಪಲಿಲ್ಲ; ರಾಜ್ಯಾದಾಯವಂತೂ ಯಥಾಸ್ಥಿತಿಯಾಗಿಯೇ ಇತ್ತು. ಮುಖ್ಯವಾಗಿ ಸ್ವಾರ್ಥಸಾಧಕರಿಗೆ ಮಾತ್ರ ಅನುಕೂಲವಾಯಿತು. ಸುಬೇದಾರರು ಕಟ್ಟುಗುತ್ತಿಗೆಯ ಹಣವು ಕಡಮೆಯಾಗದಂತೆ ನೋಡಿಕೊಳ್ಳುವುದಕ್ಕಾಗಿ, ವಿಶ್ವಾಮಿತ್ರ ಪ್ರಯತ್ನಗಳನ್ನೆಲ್ಲಾ ಮಾಡುತ್ತಿದ್ದರು. ರೈತರನ್ನು ಮಕ್ಕಳಂತೆ ಪರಿಪಾಲಿಸುತ್ತಿದ್ದ ಮಹಾರಾಜರಿಗೆ ಸರಿಯಾದ ಸಂಗತಿಗಳು ತಿಳಿಯದಂತೆ ಸುಬೇದಾರರು ಎಚ್ಚರಿಕೆಯಿಂದ ಕಾರ್ಯ ನಡೆಯಿಸುತ್ತಿದ್ದರು.

ಮಹಾರಾಜರು ಸ್ವತಃ ರಾಜ್ಯಾಡಳಿತವನ್ನು ವಹಿಸಿಕೊಂಡಂದಿನಿಂದಲೂ ರೆಸಿಡೆಂಟ್ ಕೋಲ್‌ರವರು ಮೈಸೂರು ಸಂಸ್ಥಾನದ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿಲ್ಲವೆಂದು ಮದ್ರಾಸ್ ಸರ್ಕಾರದವರಿಗೆ ಭಯಾವಹವಾದ ಕಾಗದಗಳನ್ನು ಬರೆಯುತ್ತಲೇ ಇದ್ದರು; ಯಾವಾಗಲೂ ರಹಸ್ಯವಾಗಿ

ಸಂಗತಿಗಳನ್ನು ತಿಳಿದುಕೊಂಡು ಚಾಡಿಕೋರರು ಹೇಳುತ್ತಿದ್ದ ಕೊಂಡೆಯಗಳ ಆಧಾರದಮೇಲೆ ಮದ್ರಾಸ್ ಸರ್ಕಾರಕ್ಕೆ ಆಗಾಗ ವರದಿ ಮಾಡುತ್ತಿದ್ದರು. "ಸಂಸ್ಥಾನದ ಆರ್ಥಿಕ ಸ್ಥಿತಿಯು ಬಹಳಮಟ್ಟಿಗೆ ಹದಗೆಟ್ಟಿರುತ್ತದೆ. ಸರ್ಕಾರಿ ಅಧಿಕಾರಿಗಳಿಗೂ, ಸೇನಾಜನಗಳಿಗೂ ಸರಿಯಾಗಿ ಸಂಬಳಗಳನ್ನು ಕೊಡುತ್ತಿಲ್ಲ. ಅವರ ಸಂಬಳಗಳೆಲ್ಲಾ ಬಾಕಿ ನಿಂತಿವೆ. ಪೊಗದಿ ಹಣವನ್ನು ಕೊಡುವುದು ಸಹ ಸ್ವಲ್ಪಮಟ್ಟಿಗೆ ದುಸ್ತರವಾಗಿದೆ. ಕಂಪೆನಿ ಸರ್ಕಾರದವರು ಮಹಾರಾಜರ ಆಡಳಿತಗಳಲ್ಲಿ ಪ್ರವೇಶಿಸಿ ಸರಿಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ" ಎಂದು ಕೋಲ್‌ರವರು ೧೮೨೫ನೆಯ ಇಸವಿ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಬರೆದ ಕಾಗದಗಳಲ್ಲಿ ತಿಳಿಸಿದ್ದರು. ಮಹಾರಾಜರು ರಾಜ್ಯಭಾರವನ್ನು ವಹಿಸಿ ಕೊಂಡು ಅಲ್ಲಿಗೆ ಹದಿನೈದು ವರ್ಷಗಳಾಗಿದ್ದುವು.

ಆಗ ಮದ್ರಾಸ್ ಗವರ್ನರ್ ಆಗಿದ್ದ ಸರ್ ಥಾಮಸ್ ಮನ್ರೋರವರು, ಸಂಸ್ಥಾನದ ವಿದ್ಯಮಾನಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಬೇಕೆಂದು ಮೈಸೂರಿಗೆ ಬಂದರು. ಅವರು ಮಹಾರಾಜರನ್ನು ಅರಮನೆಯಲ್ಲಿ ಭೇಟಿ ಮಾಡಿ, ಸಂಸ್ಥಾನದ ಸ್ಥಿತಿಗತಿಗಳನ್ನು ಅವರಿಂದ ತಿಳಿದುಕೊಂಡರು. ಆ ಸಮಯದಲ್ಲಿ ಕೋಲ್‌ರವರೂ ಗವರ್ನರ್‌ರವರ ಜೊತೆಯಲ್ಲಿದ್ದರು. ರೆಸಿಡೆಂಟರು ಊಹಿಸಿದ್ದ ಯಾವುದೊಂದು ಉತ್ಪ್ರೇಕ್ಷೆಗೂ ಆಧಾರವಿಲ್ಲವೆಂದು ಮನ್ರೋರವರು ಮನಗಂಡು, ಪ್ರತಿ ವರ್ಷವೂ ಸಂಸ್ಥಾನದ ಆಯವ್ಯಯಗಳ ತಖ್ತೆಯನ್ನು ತಯಾರಿಸಿ, ರೆಸಿಡೆಂಟರ ಮೂಲಕ ಮದ್ರಾಸ್ ಸರ್ಕಾರದವರಿಗೆ ಕಳುಹಿಸಿಕೊಡಬೇಕೆಂದು ಮಹಾರಾಜರಿಗೆ ತಿಳಿಸಿದರು.

"ಶ್ರೀರಂಗಪಟ್ಟಣದ ತಹನಾಮೆಯ ಮೇರೆಗೆ ಕಂಪೆನಿ ಸರ್ಕಾರದವರು ಕಾಲಕಾಲಕ್ಕೆ ಮಹಾರಾಜರಿಗೆ ತಕ್ಕ ಸಲಹೆಗಳನ್ನು ಕೊಟ್ಟು, ದೇಶದ ಅಭ್ಯುದಯಕ್ಕೂ, ಪ್ರಜೆಗಳ ಸಂರಕ್ಷಣೆಗೂ ಸಾಧಕವಾದ ರೀತಿಯಲ್ಲಿ ನೆರವಾಗ ಬೇಕಾದುದು ಆವಶ್ಯಕ. ಮಹಾರಾಜರು ರಾಜ್ಯದ ಏಳಿಗೆಗೆ ಬೇಕಾದ ಅನುಕೂಲ ಗಳನ್ನು ಕಲ್ಪಿಸಿ, ಪೊಗದಿಯನ್ನು ಸಕಾಲದಲ್ಲಿ ತಪ್ಪದೆ ಪಾವತಿಮಾಡಿ ಸೈನಿಕರಿಗೂ, ಅಧಿಕಾರಿಗಳಿಗೂ ಸಂಬಳಗಳನ್ನು ಸಲ್ಲಿಸಬೇಕು. ಕಂದಾಯದ ಹುಟ್ಟುವಳಿಯು ತಗ್ಗಿ, ಆದಾಯಕ್ಕಿಂತಲೂ ವೆಚ್ಚವೇ ಮಿಗಿಲಾದರೆ ಮತ್ತು

ಸೈನಿಕರಿಗೆ ಅತೃಪ್ತಿಯುಂಟಾದರೆ ಮಹಾರಾಜರು ತಹನಾಮೆಯ ನಿಯಮಗಳಂತೆ ನಡೆಯಲು ಅಸಾಧ್ಯವಾಗುವುದು. ಕಂಪೆನಿಯ ಸರ್ಕಾರದವರು ತಮ್ಮ ಸ್ವಂತ ಹಿತದೃಷ್ಟಿಯಿಂದ * ತಹನಾಮೆಯ ನಾಲ್ಕನೆಯ ನಿಯಮದಂತೆ ನಡೆದುಕೊಳ್ಳಬೇಕಾದುದು ಅತ್ಯಾವಶ್ಯಕ. ಬ್ರಿಟಿಷ್ ರೆಸಿಡೆಂಟರು ಸಂಸ್ಥಾನದ ವಿದ್ಯಮಾನಗಳನ್ನು ರಹಸ್ಯವಾಗಿ ತಿಳಿದುಕೊಳ್ಳುತ್ತಿರುವರೆಂಬ ಭಾವನೆಯಿಂದ ಜನತೆಯಲ್ಲಿ ಅನಾವಶ್ಯಕವಾದ ಅನುಮಾನಗಳುಂಟಾಗಲು ಅವಕಾಶವಾಗಿದೆ" ಎಂದು ಗವರ್ನರ್‌ರವರು ಮುಚ್ಚುಮರೆಯಿಲ್ಲದೆ ತಿಳಿಸಿಬಿಟ್ಟರು. ಸರ್ ಥಾಮಸ್ ಮನ್ರೋರವರು ಬಹಳ ಉದಾರಹೃದಯರು; ದೂರದೃಷ್ಟಿಯುಳ್ಳವರು; ರಾಜನೀತಿಜ್ಞರು. ಅವರು ಮದ್ರಾಸ್ ಗವರ್ನರ್ ಆಗಿದ್ದ ಪರ್ಯಂತವೂ ಮಹಾರಾಜರು ರಾಜ್ಯದಲ್ಲಿ ಅನೇಕ ಅಭಿವೃದ್ಧಿಕಾರ್ಯಗಳನ್ನು ಮಾಡಿ ದೇಶದ ಪ್ರಗತಿಯನ್ನು ಒಂದೇ ಸಮನಾಗಿ ಸಾಧಿಸುತ್ತಿದ್ದರು.

---

* [illegible] ಅನುಬಂಧವನ್ನು ನೋಡಿ.

ಎಂಟನೆಯ ಅಧ್ಯಾಯ

ಹೈಗಮಲ್ಲನ ದಂಗೆ, ಒಡೆಯರ ರಾಜನೀತಿ ನೈಪುಣ್ಯ

"ಧರ್ಮೋವಿಶ್ವಸ್ಯ ಜಗತಃ ಪ್ರತಿಷ್ಠಾ"

[ನಾರಾಯಣೋಪನಿಷತ್ತು.

ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರು ರಾಜಕಾರ್ಯಗಳನ್ನು ಸರ್ವಸಮರ್ಪಕವಾಗಿ ನಡೆಯಿಸುತ್ತಿದ್ದರೂ ಅನಿರೀಕ್ಷಿತವಾದ ಕೆಲವು ವಿದ್ಯಮಾನಗಳು ನಗರಪ್ರಾಂತದಲ್ಲಿ ಜರುಗಿದುವು. ಸಂಸ್ಥಾನದ ವರಮಾನವನ್ನು ಹೆಚ್ಚಿಸಲು ಅವರು ಆಚರಣೆಗೆ ತಂದ ಜಮೀನು ಕಟ್ಟುಗುತ್ತಿಗೆಯ ಪದ್ಧತಿಯಿಂದ ಯಾವುದೊಂದು ಪ್ರಯೋಜನವೂ ಆಗಲಿಲ್ಲ. ನಾವು ಹಿಂದೆಯೇ ಹೇಳಿದಂತೆ ನಗರ ಡಿವಿಜನಿನಲ್ಲಿ ಫೌಜುದಾರರಾಗಿ ಕೆಲಸಮಾಡಿದವರೆಲ್ಲರೂ ಬಾದಾಮಿ ರಾಮರಾಯರ ಸಂಬಂಧಿಗಳೇ ಆಗಿದ್ದುದರಿಂದ, ಆ ಪ್ರಾಂತದಲ್ಲಿ ಅವರ ಕಡೆಯ ನಂಟರಿಷ್ಟರನೇಕರು ಸರ್ಕಾರಿ ಹುದ್ದೆಗಳಲ್ಲಿ ಸೇರಿಕೊಂಡು, ರೈತರಿಂದ ವಸೂಲಾದ ಕಂದಾಯ, ತೆರಿಗೆ ಮುಂತಾದುವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ದರೋಡೆಕೋರರಿಗೆ ಸಹಾಯಕರಾಗಿದ್ದುಕೊಂಡು ಕೊಳ್ಳೆ ಹೊಡೆಯುತ್ತಲೂ ಇದ್ದರು. ಆಗ ಹೊನ್ನಾಳಿ ತಾಲ್ಲೂಕಿನ ಚಿಟ್ಟನಹಳ್ಳಿ ಗ್ರಾಮದಲ್ಲಿಯೂ, ಅದರ ಸುತ್ತಮುತ್ತಲೂ ತುಗ್ಗರು ಅಥವಾ ಫಾಸೇಗಾರರೆಂಬ ಒಂದು ಜಾತಿಯ ಜನರು ಬಹಳ ಕಾಲದಿಂದಲೂ ವಾಸಮಾಡುತ್ತಿದ್ದರು. ಕೆಲವುಕಾಲದ ತರುವಾಯ ದಕ್ಷಿಣ ಮಹಾರಾಷ್ಟ್ರ ಸೀಮೆಯಿಂದ ಇನ್ನೂ ಕೆಲವು ಸಂಸಾರಗಳು ಬಂದು ಆ ಗ್ರಾಮದ ಸಮೀಪದಲ್ಲಿ ನೆಲೆಸಿದುವು. ಇದರಂತೆಯೇ ಉತ್ತರ ಆರ್ಕಾಟು ಪ್ರಾಂತದಿಂದಲೂ ಬೆಂಗಳೂರು ಕಡೆಯಿಂದಲೂ ಈ ಜಾತಿಯ ಅನೇಕ ಕುಟುಂಬಗಳು ಬಂದು ತರೀಕೆರೆಯ ಸಮೀಪದಲ್ಲಿರುವ ಲಕ್ಕವಳ್ಳಿಯಲ್ಲಿ ಒಕ್ಕಲಿದ್ದುವು. ಈ ಜನರು ಯಾವುದೊಂದು ಉದ್ಯೋಗವನ್ನೂ ಮಾಡುತ್ತಿರಲಿಲ್ಲ; ವ್ಯವಸಾಯಗಾರರೂ ಆಗಿರಲಿಲ್ಲ. ದರೋಡೆಯೇ ಇವರ ಮುಖ್ಯ

ವೃತ್ತಿಯಾಗಿತ್ತು. ಇಂಥ ದರೋಡೆಕೋರರ ಗುಂಪಿನವರಿಗೆ ನಗರಪ್ರಾಂತದಲ್ಲಿ ನೌಕರರಾಗಿದ್ದ ರಾಮರಾಯರ ಸಂಬಂಧಿಗಳು ಪ್ರೋತ್ಸಾಹಕೊಡುತ್ತಾ ಅಲ್ಲಲ್ಲಿ ಜನಗಳನ್ನು ಸುಲಿಗೆಮಾಡಿಸುತ್ತಿದ್ದರು. ಆಗ ನಗರ ಫೌಜುದಾರನಾಗಿದ್ದ ಹಾನಗಲ್ಲು ಕೃಷ್ಣರಾಯನೂ, ಚನ್ನಗಿರಿಯ ಸುಬೇದಾರನಾಗಿದ್ದ ಅಣ್ಣೆಗೆರೆ ವೆಂಕಟರಾಯನೂ ಈ ಹಗಲು ಕಳ್ಳರ ಗುಂಪಿಗೆ ಬಹಳಮಟ್ಟಿಗೆ ಸಹಾಯಕರಾಗಿದ್ದರೆಂಬ ಪ್ರತೀತಿಯಿತ್ತು. ಆ ಪ್ರಾಂತದಲ್ಲಿ ಅನೇಕ ದರೋಡೆಗಳು ಆಗಾಗ ನಡೆಯುತ್ತಿದ್ದುವು. ಸಭ್ಯರಾದ ಸಂಸಾರಿಗಳು ಮಾನವಾಗಿ ಬಾಳುವುದೇ ಕಷ್ಟವಾಗಿತ್ತು.

ಅದೇ ಸಮಯದಲ್ಲಿ ನಗರ ಪ್ರಾಂತದ ರೈತರಿಂದ ಸುಮಾರು ೧೩ ಲಕ್ಷ ರೂಪಾಯಿಗಳಷ್ಟು ಕಂದಾಯವು ಬಾಕಿ ಬರಬೇಕಾಗಿತ್ತು. ಮಹಾರಾಜರು ಆ ಮೊಬಲಗಿನಲ್ಲಿ ಅರ್ಧ ಕಂದಾಯವನ್ನು ಮುಫತ್ತಾಗಿ ಬಿಟ್ಟು ಉಳಿದುದನ್ನು ವಸೂಲು ಮಾಡಬೇಕೆಂದು ಅಪ್ಪಣೆ ಮಾಡಿದರು. ಫೌಜುದಾರ ಕೃಷ್ಣರಾಯನು ಆ ಕಂದಾಯದ ಬಾಕಿಯನ್ನು ವಸೂಲುಮಾಡದೆ ಉದಾಸೀನನಾಗಿದ್ದನು. ಆಗ ಮಹಾರಾಜರು ವೀರರಾಜೇ ಅರಸು ಎಂಬುವನನ್ನು ನಗರ ಫೌಜುದಾರಿ ಕೆಲಸಕ್ಕೆ ನೇಮಿಸಿದರು. ವೀರರಾಜೇ ಅರಸು ರೈತರಿಂದ ಬರಬೇಕಾಗಿದ್ದ ಕಂದಾಯವನ್ನೂ ಮತ್ತು ಕಟ್ಟು ಗುತ್ತಿಗೆಯ ಪದ್ಧತಿಯ ಮೇರೆಗೆ ಅನೇಕ ಸುಬೇದಾರರುಗಳಿಂದ ಬರಬೇಕಾಗಿದ್ದ ಗುತ್ತಿಗೆಯ ಹಣವನ್ನೂ ಬಹಳ ಕಟ್ಟುನಿಟ್ಟಾಗಿ ವಸೂಲುಮಾಡಲು ಪ್ರಾರಂಭಿಸಿದನು. ರಾಮರಾಯರ ಸಂಬಂಧಿಗಳಾದ ಅನೇಕ ಸುಬೇದಾರರುಗಳೂ, ಇತರ ಅಧಿಕಾರಿಗಳೂ ಒಂದಾಗಿ ವೀರರಾಜೇ ಅರಸಿಗೆ ಇಲ್ಲದ ಸಲ್ಲದ ಅನೇಕ ತೊಂದರೆಗಳನ್ನು ತಂದೊಡ್ಡುತ್ತಿದ್ದರು. ಅಲ್ಲದೆ, ಏನಾದರೂ ಮಾಡಿ ವೀರರಾಜೇ ಅರಸನನ್ನು ಫೌಜುದಾರಿಯಿಂದ ತಪ್ಪಿಸಿಬಿಡಬೇಕೆಂದು ಒಳಸಂಚು ಮಾಡುತ್ತಿದ್ದರು. ಅವರು ರೈತರನ್ನು ವೀರರಾಜೇ ಅರಸಿನಮೇಲೆ ಎತ್ತಿಗಟ್ಟುತ್ತಿದ್ದರು. ರೈತರಿಗೆಲ್ಲಾ ಫೌಜುದಾರನಮೇಲೆ ಅಸಮಾಧಾನವಿದ್ದೇ ಇತ್ತು.

ಆಗ ನಗರ ಪ್ರಾಂತದಲ್ಲಿ ಹೈಗಮಲ್ಲನೆಂಬ ಒಬ್ಬ ಪುಂಡುಗಾರನು ತಲೆಯೆತ್ತಿ, ಅರಿಯುವ ಜನರನ್ನು ಉದ್ರೇಕಗೊಳಿಸಿ, ಎಲ್ಲೆಲ್ಲೂ ಗುಲ್ಲೆಬ್ಬಿಸು

ತ್ತಿದ್ದನು. ಅವನು ಜನರಲ್ಲಿ ತಪ್ಪು ಅಭಿಪ್ರಾಯಗಳನ್ನು ಬಿತ್ತಿ ರಾಜದ್ರೋಹ ಕರವಾದ ಕಾರ್ಯಗಳಿಗೆ ಜನರನ್ನು ಪುಸಲಾಯಿಸುತ್ತಿದ್ದನು. ಹೈಗಮಲ್ಲನು ಒಬ್ಬ ಸಾಮಾನ್ಯ ವ್ಯವಸಾಯಗಾರನ ಮಗನಾಗಿದ್ದರೂ, ಒಳ್ಳೆಯ ಎದೆಗಾರ ನಾಗಿಯೂ, ಚಾಕಚಕ್ಯವುಳ್ಳವನಾಗಿಯೂ ಇದ್ದನು. "ಗಾಳದ ಕೊಕ್ಕೆಯಿಂದ ಮೀನುಹಿಡಿಯುವಂತೆ" ಅವನು ತನ್ನ ಮಾತಿನ ಸೆಳವಿನಿಂದ ಜನರನ್ನು ಒಲಿಸಿಕೊಳ್ಳುತ್ತಿದ್ದನು. ಅವನು ಬೂದಿ ಬಸವಪ್ಪನೆಂದು ಹೆಸರಿಟ್ಟುಕೊಂಡು "ನಾನು ನಗರ ಸಂಸ್ಥಾನದ ರಾಜನ ದತ್ತಪುತ್ರನು; ಆ ಸಂಸ್ಥಾನದ ಗಾದಿ ಯನ್ನು ಏರಲು ನಾನು ಹಕ್ಕುದಾರನು" ಎಂದು ಜನರಿಗೆ ತಿಳಿಸುತ್ತಾ ರೈತರ ನೆರವನ್ನು ಸಂಪಾದಿಸುತ್ತಿದ್ದನು.

ಹೈಗಮಲ್ಲನು ಹೊನ್ನಾಳಿಯ ಸಮೀಪದಲ್ಲಿರುವ ಚಿನ್ನಿಕಟ್ಟೆ ಎಂಬ ಗ್ರಾಮದವನು. ಅವನ ತಾಯಿಯೂ ಮತ್ತು ಅವನ ಅಣ್ಣನೂ ಆ ಹಳ್ಳಿಯಲ್ಲಿಯೇ ವಾಸವಾಗಿದ್ದರು. ಹೈಗಮಲ್ಲನು ಚಿಕ್ಕಂದಿನಿಂದಲೂ ಸಿಕ್ಕಿದ ಕಡೆಗಳಲ್ಲಿ ಅಲೆಯುತ್ತಾ, ತನ್ನ ಗ್ರಾಮಕ್ಕೆ ಹತ್ತಿರವಾಗಿದ್ದ ಚಿಟ್ಟೆನಹಳ್ಳಿಯ ಫಾಸೇಗಾರ ಜಾತಿಯ ಜನಗಳ ಮುಖಂಡನಾಗಿದ್ದನು. ಅವನಿಗೆ ೨೦ ವರ್ಷ ವಯಸ್ಸಾಗುವುದಕ್ಕಿಂತ ಮೊದಲೇ, ನಾನಾ ಕಡೆಗಳಲ್ಲಿ ದರೋಡೆಗಳನ್ನು ಮಾಡಿಸಿ, ಸಿಕ್ಕಿಬಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ವರ್ಷ ಕಾಲ ಸೆರೆಯಲ್ಲಿದ್ದನು ಅವನ ಶಿಕ್ಷೆಯ ಅವಧಿಯು ಮುಗಿದಮೇಲೆ, ಅಲ್ಲಿಂದ ಬಿಡುಗಡೆಯಾಗಿ ಬರುವಾಗ ಜಿಲ್ಲಾ ಕೋರ್ಟಿನವರು ಕೊಟ್ಟಿದ್ದ ರಹದಾರಿ (Passport) ಯಲ್ಲಿ ತನ್ನ ಹೆಸರನ್ನು "ಬೂದಿಬಸವಪ್ಪ, ನಗರ ಖಾವಿಂದ್" ಎಂದು ಬರೆಯಿಸಿಕೊಂಡು ತನ್ನ ಗ್ರಾಮದ ಕಡೆಗೆ ಹೊರಟುಬಂದನು.

ನಗರ ಸಂಸ್ಥಾನದ ಕಡೆಯರಾಜನು ಸತ್ತುಹೋದಾಗ ಆ ದೊರೆಯ ಗುರುವಾಗಿದ್ದ ವಸಂತಯ್ಯನೆಂಬ ಜಂಗಮನು ಆ ರಾಜನ ಮುದ್ರೆಯುಂಗುರ ವನ್ನು ತೆಗೆದುಕೊಂಡು ಬಂದು ಆಗ ಕುಂಸಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ವಾಸವಾಗಿದ್ದನು. ಹೈಗಮಲ್ಲನು ಆ ಜಂಗಮನ ಶಿಷ್ಯನಾಗಿದ್ದುಕೊಂಡು ಕಾಲಕಳೆಯುತ್ತಾ, ಕೆಲವು ದಿನಗಳ ತರುವಾಯ ಆ ವಸಂತಯ್ಯನು ಕಾಲ ವಾಗಲು ಅವನ ಬಳಿಯಿದ್ದ ರಾಜ ಮುದ್ರೆಯುಂಗುರವನ್ನೂ ಇತರ ಪದಾರ್ಥ

ಗಳನ್ನೂ ತೆಗೆದುಕೊಂಡು ಹೊರಟುಬಿಟ್ಟನು. ಹೈಗಮಲ್ಲನು ಕೋರ್ಟಿನ ನೊಹರಿದ್ದ ರಹದಾರಿಯನ್ನೂ ರಾಜ ಮುದ್ರೆಯುಂಗುರವನ್ನೂ ಜನಗಳಿಗೆ ತೋರಿಸುತ್ತಾ "ಕಂಪೆನಿಯ ಸರ್ಕಾರದವರು ನನ್ನನ್ನು ನಗರ ಸಂಸ್ಥಾನದ ಗಾದಿಗೆ ಹಕ್ಕುದಾರನೆಂದು ಒಪ್ಪಿಕೊಂಡಿದ್ದಾರೆ. ನಾನು ನಗರ ಸಂಸ್ಥಾನದ ದೊರೆಯಾಗುತ್ತೇನೆ. ನನಗೆ ಈಗ ಸಹಾಯಕರಾಗಿ ನಿಲ್ಲುವವರಿಗೆಲ್ಲಾ ಜಮೀನು ಕಂದಾಯವನ್ನು ಬಹಳ ಕಡಮೆಮಾಡಿ ಅವರು ಕೊಡಬೇಕಾಗಿರುವ ಕಂದಾಯದ ಬಾಕಿಯನ್ನೆಲ್ಲಾ ಬಿಟ್ಟುಬಿಡುತ್ತೇನೆ" ಎಂದು ಹೇಳಿಕೊಂಡು ನಗರ ಡಿವಿಜನಿನಲ್ಲಿಯೂ ಸುತ್ತುಮುತ್ತಣ ಕಂಪೆನಿ ರಾಜ್ಯಗಳಲ್ಲಿಯೂ ಅನುಯಾಯಿಗಳನ್ನು ಜೊತೆಗೂಡಿಸುತ್ತಿದ್ದನು. ಲೋಕ ವ್ಯವಹಾರವನ್ನೇ ಅರಿಯದ ಬಹುಮಂದಿ ರೈತರೂ, ತಿಳಿಗೇಡಿಗಳಾದ ಜನರೂ, ಫಾಸೇಗಾರರೂ ಹೈಗಮಲ್ಲನ ಮಾತನ್ನು ನಿಜವೆಂದೇ ನಂಬಿ ಅವನ ಅನುಚರರಾದರು.

ಇದರ ಜೊತೆಗೆ ಫೌಜುದಾರ ವೀರರಾಜೇ ಅರಸಿನ ಮೇಲಿದ್ದ ಅಸಮಾಧಾನವೂ ಸೇರಿ, ರಾಮರಾಯರ ಸಂಬಂಧಿಗಳಾದ ಕೆಲವರು ಸುಬೇದಾರರುಗಳೂ ಜನಗಳನ್ನು ಉದ್ರೇಕಗೊಳಿಸಿ ದಂಗೆಯೆಬ್ಬಿಸಲು ಸಹಾಯ ಮಾಡಿದರು. ಈ ಬೂದಿಬಸವಪ್ಪನಿಗೆ ರಾಮರಾಯರ ಭಾವಮೈದುನನಾದ ಆನವಟ್ಟಿ ಸುಬೇದಾರ ಲಕ್ಷ್ಮಣರಾಯನು ಬಹಳ ಪ್ರೋತ್ಸಾಹಕೊಟ್ಟನು. ಆ ಸುಬೇದಾರನು ಅರೆಹಳ್ಳಿ ಗ್ರಾಮದ ಪಟೇಲನಿಗೆ ಒಂದು ಕಾಗದವನ್ನು ಬರೆದು "ಶ್ರೀಮಂತರಾದ ನಗರ ಖಾವಿಂದರೂ, ನಗರ ಸಂಸ್ಥಾನದ ರಾಜರೂ ಆದ ಹೈಗಮಲ್ಲನಾಯಕರು ನಿಮ್ಮ ಗ್ರಾಮದಲ್ಲಿ ಅವರ ವಿವಾಹಮಹೋತ್ಸವವನ್ನು ನಡೆಯಿಸುತ್ತಾರೆ. ಆಗ ನೀನು ಆ ವಿವಾಹ ಕಾರ್ಯಕ್ಕೆ ಬೇಕಾದ ಎಲ್ಲ ಸಾಮಗ್ರಿಗಳನ್ನೂ ಮುಫತ್ತಾಗಿ ಒದಗಿಸಬೇಕು. ಅಲ್ಲದೆ ನೀನು ಖುದ್ದಂ ಹಾಜರಿದ್ದು ಆ ಕಾರ್ಯವನ್ನು ನೆರವೇರಿಸಲು ಸಹಾಯಮಾಡಬೇಕು" ಎಂದು ತಿಳಿಸಿದ್ದನು. ಅದರಂತೆಯೇ, ನಗರ ಖಾವಿಂದನಿಗೆ ಮದುವೆಯೂ ಆಯಿತು; ಅದೇ ತಿಂಗಳಿನಲ್ಲಿ ಅವನಿಗೆ ಆ ಹಳ್ಳಿಯಲ್ಲಿಯೇ ಪಟ್ಟಾಭಿಷೇಕವೂ ನಡೆಯಿತು. ಆ ಸಮಯದಲ್ಲಿ ಅನೇಕ ಗ್ರಾಮಗಳ ಪಟೇಲರೂ, ರೈತರೂ, ಸರ್ಕಾರಿ ಅಧಿಕಾರಿಗಳೂ ಸೇರಿದ್ದರು. ಬೂದಿಬಸವಪ್ಪನನ್ನು ನಗರ ಸಂಸ್ಥಾನದ ರಾಜನೆಂಬುದಾಗಿ ಉದ್ಘೋಷಿಸಿದರು. ಹೈಗಮಲ್ಲನು ಆ ಪ್ರಾಂತದ ಮುಖಂಡರ

ಗೆಲ್ಲಾ ರಹಸ್ಯವಾಗಿ ಕಾಗದಗಳನ್ನು ಬರೆದು, ತನ್ನ ಹಿರಿಯರ ರಾಜ್ಯದಲ್ಲಿ ನನ್ನನ್ನು ನೆಲೆಗೊಳಿಸಿ ಸಹಾಯಮಾಡಬೇಕೆಂಬುದಾಗಿ ಚಳುವಳಿಯನ್ನು ನಡೆಯಿಸುತ್ತಿದ್ದನು.

ಇದೇ ಸಮಯದಲ್ಲಿ ತರೀಕೆರೆಯ ಪಾಳೆಯಗಾರರ ವಂಶದವನಾದ ರಂಗಪ್ಪನಾಯಕನೆಂಬುವನು ರೈತರನ್ನು ಕಟ್ಟಿಕೊಂಡು ದಂಗೆಯೇಳಲು ಹವಣಿಸುತ್ತಿದ್ದನು. ಆ ಕಾಲದಲ್ಲಿ ಪದಚ್ಯುತರಾಗಿದ್ದ ಪಾಳೆಯಗಾರರು ಮೈಸೂರಿನಲ್ಲಿಯೇ ವಾಸಮಾಡಬೇಕಾಗಿದ್ದಿತು. ಮೈಸೂರು ದರ್ಬಾರಿನಿಂದ ಅವರಿಗೆಲ್ಲಾ ಜೀವನಾಂಶ ಸಲ್ಲುತಿತ್ತು. ಅದರಂತೆಯೇ ತರೀಕೆರೆ ಪಾಳೆಯಗಾರ ರಂಗಪ್ಪನಾಯಕನು ಮೈಸೂರಿನಲ್ಲಿದ್ದನು. ನಗರ ಪ್ರಾಂತದಲ್ಲಿ ಜನರು ದಂಗೆಯೇಳುವ ಸಂಭವವಿದೆಯೆಂದು ತಿಳಿದು, ತಾನೂ ಆ ದೊಂಬಿಗೆ ಸೇರಿ ಪುನಃ ತನ್ನ ಪಾಳೆಯಪಟ್ಟನ್ನು ಸ್ಥಾಪಿಸಬೇಕೆಂದು ಅವನು ಯೋಚಿಸಿದ್ದನು. ಕಡೆಗೆ ಅವನು ರಾಜಧಾನಿಯಿಂದ ತಲೆತಪ್ಪಿಸಿಕೊಂಡು ಹೊರಟು ತರೀಕೆರೆಯನ್ನು ಸೇರಿದನು. "ಮಹಾರಾಜರು ನನ್ನನ್ನು ಕಂಪೆನಿಯ ಸರ್ಕಾರದವರ ಒಪ್ಪಿಗೆಯಿಂದ ಕಳುಹಿಸಿರುತ್ತಾರೆ. ನೀವೆಲ್ಲರೂ ನನಗೆ ಸಹಾಯಮಾಡುವುದಾದರೆ ನಿಮ್ಮಿಂದ ಬರಬೇಕಾದ ಕಂದಾಯದಲ್ಲಿ ಬಹಳ ಹಣವನ್ನು ಬಿಟ್ಟುಬಿಡುತ್ತೇನೆ" ಎಂದು ಹೇಳಿಕೊಂಡು ಅವನು ಅನೇಕರನ್ನು ತನ್ನ ಕಡೆಗೆ ಒಲಿಸಿಕೊಳ್ಳುತ್ತಿದ್ದನು. ಬಹಳ ಮಂದಿ ಪಟೇಲರೂ ರೈತರೂ ಅವನ ಅನುಯಾಯಿಗಳಾದರು. ಸುತ್ತಮುತ್ತಣ ಬ್ರಿಟಿಷ್ ಪ್ರಾಂತಗಳ ಜನರೂ ಅವನಿಗೆ ಸಹಾಯಕರಾದರು. ಅವನ ಮಾತಿಗೆ ಒಪ್ಪದೆ ಇದ್ದವರ ಮನೆಮಠಗಳನ್ನೂ ಪೈರುಪಚ್ಚೆಗಳನ್ನೂ ನಾಶಪಡಿಸುತ್ತಾ ಅವನು ಜನಕಂಟಕನಾಗಿ ದಿನದಿನಕ್ಕೆ ತನ್ನ ಬಲವನ್ನು ಹೆಚ್ಚಿಸಿಕೊಳ್ಳುತ್ತಾ ಬಂದನು.

ಹೀಗೆ, ಒಂದು ಕಡೆ ಹೈಗಮಲ್ಲನೂ ಇನ್ನೊಂದು ಕಡೆ ರಂಗಪ್ಪನಾಯಕನೂ ಅರಿಯದ ಜನಗಳನ್ನು ಉದ್ರೇಕಗೊಳಿಸುತ್ತಾ ದೇಶದಲ್ಲೆಲ್ಲಾ ಅಸಮಾಧಾನವನ್ನು ಬಿತ್ತಿದರು. ಫೌಜುದಾರ ವೀರರಾಜೇ ಅರಸಿನ ವಿಚಾರದಲ್ಲಿ ಜನರಿಗೆ ಅತೃಪ್ತಿಯಿದ್ದೇ ಇತ್ತು. ೧೮೩೦ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ನಗರ ಫೌಜುದಾರನ ಅನುಯಾಯಿಯಾದ ಮಾನಪ್ಪನೆಂಬುವನು

ತಾನು ಜನರೊಂದಿಗೆ ಹೊರಟು ಹಳ್ಳಿಹಳ್ಳಿಗಳಲ್ಲಿಯೂ ಜನರನ್ನು ಪುಂಡೆಬ್ಬಿಸಿ ಅಧಿಕಾರಿಗಳ ಮೇಲೆ ಎತ್ತಿಕಟ್ಟಲಾರಂಭಿಸಿದನು. ಹೊನ್ನಾಳಿ, ಚನ್ನಗಿರಿ, ಬಸವ ಪಟ್ಟಣ, ಉಡುಗಣಿ, ಶಿಕಾರಿಪುರ, ಕುಂಸಿ—ಈ ಪ್ರಾಂತದ ಜನಗಳೆಲ್ಲಾ ದಂಗೆಯೆದ್ದು ನಿರಪರಾಧಿಗಳಾದ ಜನರ ನೆಮ್ಮದಿಗೆ ಭಂಗತಂದರು. ಈ ದಂಗೆಯ ಸೋಂಕು ಎಲ್ಲೆಲ್ಲೂ ಹರಡುತ್ತಾ ಚಿತ್ರದುರ್ಗ, ದೊಡ್ಡಬಳ್ಳಾಪುರ, ಅರಕಲಗೂಡು, ಕೃಷ್ಣರಾಜಕಟ್ಟೆ, ಹುಳಿಯಾರು ಮುಂತಾದ ಕಡೆಗಳಲ್ಲೆಲ್ಲಾ ವ್ಯಾಪಿಸಿತು. ನಿಸ್ಪೃಹರಾದ ಅಧಿಕಾರಿಗಳು ನಿರ್ವಂಚನೆಯಿಂದ ಸಾಹಸ ಪಟ್ಟು ಆ ದೊಂಬಿಗಳನ್ನು ಅಡಗಿಸುತ್ತಾ ಬಂದರು; ಆ ಸಮಾಚಾರಗಳನ್ನು ಮಹಾರಾಜರಿಗೆ ವರದಿ ಮಾಡುತ್ತಿದ್ದರು. ಮಹಾರಾಜರು ಕೂಡಲೆ ಬಕ್ಷಿ ಅಣ್ಣಾಜಿರಾಯನನ್ನೂ, ಅಂಚೆ ರಾಮಯ್ಯನನ್ನೂ ವೀರರಾಜೇ ಅರಸಿನ ಸಹಾಯಕ್ಕೆ ಸೈನ್ಯದೊಂದಿಗೆ ಕಳುಹಿಸಿದರು.

ದೇಶದ ನಾನಾ ಭಾಗಗಳಲ್ಲಿ ಏಳುತ್ತಿದ್ದ ದಂಗೆಯನ್ನು ಅಡಗಿಸಲು ಕಂಪೆನಿಯ ಸೈನ್ಯವನ್ನು ಸಹಾಯಕ್ಕೆ ಕಳುಹಿಸಿಕೊಡಬೇಕೆಂದೂ, ಅದರಿಂದ ಸಕಾಲದಲ್ಲಿ ಮುಂಜಾಗ್ರತೆಯಾಗಿ ವರ್ತಿಸಿದಂತಾಗಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಅನುಕೂಲವಾಗುವುದೆಂದೂ ಮಹಾರಾಜರು ರೆಸಿಡೆಂಟರಿಗೆ ತಿಳಿಸಿದರು. ರೆಸಿಡೆಂಟರು ರಾಜನೀತಿಜ್ಞರಾದ ಮಹಾರಾಜರ ಸಲಹೆಯನ್ನು ಮನ್ನಿಸದೆ, ಆ ಸಮಯದಲ್ಲಿ ಅವರು ತಮ್ಮ ಸ್ವಂತ ಸೈನ್ಯದ ಸಹಾಯದಿಂದ ಕಾರ್ಯ ಮಾಡಬೇಕೇ ಹೊರತು ಕಂಪೆನಿ ಸೈನ್ಯದ ನೆರವು ದೊರೆಯಲಾರ ದೆಂದು ತಿಪ್ಪಗಿದ್ದರು. ದಂಗೆಯಂತೂ ಅಂಟುರೋಗದಂತೆ ಹಬ್ಬುತ್ತಲೇ ಬಂತು. ಮಹಾರಾಜರು ರೆಸಿಡೆಂಟರ ಸಲಹೆಯಮೇರೆಗೆ ದಂಗೆಯನ್ನು ತಹಬಂದಿಗೆ ತರಲು ದಿವಾನ್ ವೆಂಕಟರಾಜೇ ಅರಸಿನವರನ್ನು ಚಿಕ್ಕನಾಯಕನಹಳ್ಳಿಯ ಪ್ರಾಂತಕ್ಕೆ ಕಳುಹಿಸಿದರು. ಸಕಾಲದಲ್ಲಿ ಕಂಪೆನಿ ಸೈನ್ಯದ ಸಹಾಯ ದೊರೆತಿದ್ದರೆ ದಂಗೆಯನ್ನು ಹುಟ್ಟಡಗಿಸಿಬಿಡಬಹುದಾಗಿತ್ತು. ತಹನಾಮೆಯ ಕರಾರಿನಂತೆ ಮಹಾರಾಜರಿಗೆ ಆವಶ್ಯಕತೆ ಬಿದ್ದಾಗ ಸೈನ್ಯ ಸಹಾಯ ಮಾಡ ದಿದ್ದುದು ಶೋಚನೀಯವಾದುದೇ ಸರಿ!

ಮಹಾರಾಜರೇ ಸ್ವತಃ ದೇಶ ಮಧ್ಯದಲ್ಲಿ ಹೊರಟು ಜನರ ಕಷ್ಟನಿಷ್ಠುರ ಗಳನ್ನು ವಿಚಾರಿಸಬೇಕೆಂದು ನಿರ್ಧರಿಸಿದರು. ಅದರಂತೆಯೇ ೧೮೩೦ನೆಯ

ಇಸವಿ ಡಿಸಂಬರ್ ೧೪ನೆಯ ತಾರೀಖಿನದಿನ ಮಹಾರಾಜರು ಮಂದಿಮಾರ್ಬಲ ದೊಡನೆ ಮೈಸೂರು ಪಟ್ಟಣದಿಂದ ಹೊರಟು ಅದೇ ದಿನ ದರಸಕುಪ್ಪೆ ಗ್ರಾಮವನ್ನು ಸೇರಿದರು. ರೆಸಿಡೆಂಟರಾದ ಕಸಾಮೇಜರ್‌ರವರೂ, ಚೌಡಯ್ಯನೂ ಒಂದು ದಿನ ಮುಂಚಿತವಾಗಿಯೇ ಹೊರಟಿದ್ದರು. ಮಹಾರಾಜರ ಸಂಗಡ ಸವಾರ್ ಕಚೇರಿ ಬಕ್ಷಿ ರಾಮರಾಯ, ಬಕ್ಷಿ ಪುಟ್ಟಬಸಪ್ಪಾಜಿ, ಬಕ್ಷಿದಾಸಪ್ಪಾಜಿ, ಬಾಬುರಾಯ, ಬಕ್ಷಿ ಭೀಮರಾಯ ಮುಂತಾದ ಮುಖಂಡರಾದ ಅಧಿಕಾರಿಗಳೂ ಇದ್ದರು ದರಸಕುಪ್ಪೆಯಲ್ಲಿ ಸಾವಿರಾರು ಮಂದಿ ರೈತರು ಮಹಾರಾಜರನ್ನು ಸಂದರ್ಶನಮಾಡಿ, ಪ್ರಭುಗಳಲ್ಲಿ ತಮಗಿದ್ದ ರಾಜಭಕ್ತಿಯನ್ನು ವ್ಯಕ್ತಪಡಿಸಿದರು. ಒಡೆಯರು ಅವರಿಗಿದ್ದ ತೊಂದರೆಗಳನ್ನು ಪರಿಹರಿಸಿ, ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಮುಂದೆ ಅತ್ತಿಗುಪ್ಪೆ ಮಾರ್ಗವಾಗಿ ಚನ್ನರಾಯಪಟ್ಟಣಕ್ಕೆ ಬಂದರು. ಮಹಾರಾಜರು ಮುಖ್ಯಮುಖ್ಯ ಸ್ಥಳಗಳಲ್ಲಿ ಬಿಡಾರ ಮಾಡುತ್ತಾ, ಅಲ್ಲಿನ ರೈತರನ್ನೂ ಪ್ರಮುಖರನ್ನೂ ಕಂಡು ಮಾತನಾಡಿ, ಅವರಿಗಿದ್ದ ಕಷ್ಟಗಳನ್ನು ಪ್ರತ್ಯಕ್ಷವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು. ಅನೇಕ ಸುಬೇದಾರರುಗಳೂ, ಶಿರಸ್ತೆದಾರರುಗಳೂ ಪ್ರಜೆಗಳಿಗೆ ತೊಂದರೆ ಕೊಡುತ್ತಿದ್ದ ರೆಂಬುದು ಖಚಿತವಾಗಿ ಗೊತ್ತಾದ ಸಂದರ್ಭಗಳಲ್ಲಿ ಅಂಥವರನ್ನು ಕೆಲಸದಿಂದ ತಪ್ಪಿಸುತ್ತಲೂ ಕೆಲವರಿಗೆ ಕ್ರೂರವಾದ ಶಿಕ್ಷೆಯನ್ನು ವಿಧಿಸುತ್ತಲೂ, ರೈತರ ತೊಂದರೆಗಳನ್ನು ನಿವಾರಿಸಿದರು. ರೈತರಿಗೆ ವಿಶೇಷ ಹೊರೆಯಾಗಿದ್ದ ಅನೇಕ ತೆರಿಗೆಗಳನ್ನು ವಜಾಮಾಡಿ, ಕಂದಾಯದ ದರಗಳನ್ನು ತಗ್ಗಿಸಿದರು. ಗ್ರಾಮಾಂತರಗಳಿಂದ ಜನರು ತಂಡತಂಡವಾಗಿ ಬಂದು ಪ್ರಭುಗಳ ದರ್ಶನ ಮಾಡಿ ತಮ್ಮ ಅಚಲವಾದ ಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸುತ್ತಿದ್ದರು. ಅವರು ಬಂದಿದ್ದ ರೈತರಿಗೆಲ್ಲಾ ಭೋಜನ ಮಾಡಿಸಿ ಸಂತೃಪ್ತಿಪಡಿಸಿದರು. ರಾಜಭಕ್ತಿಯುತರಾದ ಆ ರೈತರೆಲ್ಲಾ ಪ್ರಭುಗಳಿಗೆ ಅಡ್ಡಬಿದ್ದು ಅವರ ಅಪ್ಪಣೆಯನ್ನು ಪಡೆದು ಸ್ವಗ್ರಾಮಗಳಿಗೆ ಹಿಂತಿರುಗುತ್ತಿದ್ದರು. ಪ್ರಜಾವತ್ಸಲ ರಾದ ಮಹಾರಾಜರನ್ನು ಜನರು ಕೊಂಡಾಡಿದರು?

ಮರುದಿನ ಚಿಕ್ಕನಾಯಕನಹಳ್ಳಿಯಿಂದ ಬಂದ ದಿವಾನ್ ವೆಂಕಟರಾಜೇ ಅರಸಿನವರೂ, ವೀಣೆ ವೆಂಕಟಸುಬ್ಬಯ್ಯ, ಚೌಡಯ್ಯ, ದಾಸಪ್ಪಾಜಿ ಅರಸು ಮುಂತಾದ ಮರ್ಮಮಂತ್ರಿಗಳೂ ಸೇರಿ ರೆಸಿಡೆಂಟರೊಂದಿಗೆ ಆಲೋಚಿಸಿ ಮುಂದು

ಜನರ ಮುಖಂಡರನ್ನು ಹಿಡಿದು ಗಲ್ಲಿಗೇರಿಸಬೇಕೆಂದು ನಿರ್ಧರಿಸಿದರು. ದಯಾರ್ದ್ರಹೃದಯರಾದ ಮಹಾರಾಜರು ತಮ್ಮ ಮಕ್ಕಳಿಗೆ ಸಮಾನರಾದ ಪ್ರಜೆಗಳನ್ನು ಹಾಗೆ ಕೊಲ್ಲಿಸಲು ಒಪ್ಪಲಿಲ್ಲ. ಮಹಾರಾಜರ ಸಂದರ್ಶನ ಲಾಭದಿಂದ ಸಂತೃಪ್ತರಾದ ಪ್ರಜೆಗಳು ಪುಂಡುಗಾರರ ಮಾತಿಗೆ ಮರುಳಾಗದೆ ಎಂದಿನಂತೆ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾದರು. ರಾಜ್ಯವು ಸಮಾಧಾನ ಸ್ಥಿತಿಗೆ ಬರುವಂತಾಯಿತು. ಅವರು ಚನ್ನರಾಯಪಟ್ಟಣದಿಂದ ಹೊರಟು ನುಗ್ಗೆಹಳ್ಳಿ, ಮಲ್ಲಘಟ್ಟ, ಸಂಪಿಗೆ, ಕಡಬ, ಗುಬ್ಬಿ, ತುಮಕೂರು ಮಾರ್ಗವಾಗಿ ಹೆಬ್ಬೂರಿಗೆ ಬಂದು ಸೇರಿದರು. ಅಲ್ಲಿಂದ ರೆಸಿಡೆಂಟರು ಮದ್ರಾಸಿಗೂ, ದಿವಾನ್ ವೆಂಕಟರಾಜೇ ಅರಸಿನವರು ಚಿತ್ರದುರ್ಗ ಮತ್ತು ನಗರ ಪ್ರಾಂತ್ಯಗಳಿಗೂ ಹೋದರು. ಮಹಾರಾಜರು ಹೆಬ್ಬೂರಿನಿಂದ ಎಡೆಯೂರು, ನಾಗಮಂಗಲ ಮಾರ್ಗವಾಗಿ ಹೊರಟು ರಾಜಧಾನಿಯನ್ನು ಸೇರಿದರು.

ಆದರೆ ತರೀಕೆರೆ ಪಾಳೆಯಗಾರನೂ, ಬೂದಿ ಬಸವಪ್ಪನಾಯಕನೂ ಒಂದಾಗಿ ದಂಗೆಯನ್ನು ಬೆಳೆಯಿಸುತ್ತಿದ್ದರು. ಕಂಪೆನಿ ಸರ್ಕಾರದ ಪ್ರಾಂತಗಳಿಂದಲೂ ಜನರು ಗುಂಪುಗುಂಪಾಗಿ ಬಂದು ಈ ಮುಖಂಡರಿಗೆ ನೆರವಾಗುತ್ತಿದ್ದರು. ಈ ಗುಂಪಿನವರು ಕಾಮನದುರ್ಗ ಮತ್ತು ಕವಲೇದುರ್ಗ ಇವುಗಳನ್ನು ಆಕ್ರಮಿಸಿಕೊಂಡು ಅಲ್ಲಿ ಒಟ್ಟುಗೂಡುತ್ತಿದ್ದರು. ಮೊದಲೇ ಮಹಾರಾಜರು ಕೇಳಿದ್ದ ಮೇರೆಗೆ ಕಂಪೆನಿ ಸೈನ್ಯದ ಸಹಾಯವನ್ನು ಒದಗಿಸಬೇಕೆಂದು ಆಗ ರೆಸಿಡೆಂಟರಿಗೆ ಹೊಳೆಯಿತು. ಕೂಡಲೇ ರೆಸಿಡೆಂಟರು ರಾಕ್‌ಫ್ರೋರ್ಟ್ ಎಂಬುವನ ಕೈಕೆಳಗೆ ತಮ್ಮ ಬೆಂಗಾಲು ಸೈನ್ಯವನ್ನು ತರೀಕೆರೆ ಪ್ರಾಂತಕ್ಕೆ ಕಳುಹಿಸಿದರು. ಮೈಸೂರು ಸೈನಿಕರು ಆ ವೇಳೆಗೆ ಕಾಮನದುರ್ಗವನ್ನು ಹಿಡಿದು ಅನೇಕ ದಂಗೆಕೋರರನ್ನು ಶಿಕ್ಷಿಸಿ ಆ ಗುಂಪಿನವರನ್ನು ದಿಕ್ಕಾಪಾಲಾಗಿ ಓಡಿಸಿಬಿಟ್ಟಿದ್ದರು. ರಂಗಪ್ಪನಾಯಕನೂ, ನಗರ ಖಾವಿಂದನೂ ತಲೆತಪ್ಪಿಸಿಕೊಂಡು ಓಡಿಹೋದರು. ಇನ್ನೂ ಅಲ್ಲಲ್ಲಿ ದಂಗೆಗಳಾಗುತ್ತಲೇ ಇದ್ದುವು. ಮಹಾರಾಜರು ವೆಂಕಟರಾಜೇ ಅರಸಿನವರನ್ನು ಅಸಮರ್ಥರೆಂದು ತಿಳಿದು ದಿವಾನ್ ಪದವಿಯಿಂದ ತಪ್ಪಿಸಿ ಬಾಲಾಜೀರಾವ್ ಎಂಬುವರನ್ನು ದಿವಾನಗಿರಿಗೆ ನೇಮಿಸಿದರು.

ಮೈಸೂರು ಸಂಸ್ಥಾನದ ಪರಿಸ್ಥಿತಿಯನ್ನು ಕುರಿತು ರೆಸಿಡೆಂಟರು ಮದ್ರಾಸ್ ಸರ್ಕಾರದವರಿಗೆ ವರದಿ ಮಾಡಿದರು. ಆಗಿನ ಗವರ್ನರ್‌ರವರಾದ ಎಸ್. ಆರ್. ಲೂಷಿಂಗ್‌ಟನ್‌ರವರು ಮೈಸೂರಿಗೆ ಬಂದು ಎಲ್ಲ ವಿದ್ಯಮಾನ ಗಳನ್ನೂ ಮಹಾರಾಜರಿಂದ ತಿಳಿದುಕೊಂಡು ಹಿಂದಿರುಗಿ ಹೋದರು. ರೆಸಿಡೆಂಟರೂ, ದಿವಾನ್ ಬಾಲಾಜಿರಾಯರೂ ಬಹಳ ಸಾಹಸದಿಂದಲೂ, ಚತುರೋಪಾಯಗಳಿಂದಲೂ ದಂಗೆಯನ್ನು ಒಂದು ಕಡೆಯಿಂದ ಅಡಗಿಸುತ್ತಾ ಬಂದರು. ದಂಗೆಯ ಬಿಸಿಯು ತಣ್ಣಗಾಗುತ್ತಾ ಬಂದಿತು. ಇಲ್ಲಿಂದ ಓಡಿಹೋದ ಬೂದಿ ಬಸವಪ್ಪನು ನಿಜಾಂ ರಾಜ್ಯದ ಯಾವುದೋ ಒಂದು ಹಳ್ಳಿಯಲ್ಲಿದ್ದನೆಂದು ಬಹಳ ಕಾಲದಮೇಲೆ ಗೊತ್ತಾಯಿತು. ತರೀಕೆರೆಯ ಪಾಳೆಯಗಾರ ರಂಗಪ್ಪನಾಯಕನು 'ಗರಿ ಮುರಿದ ಕಾಡು ಹಕ್ಕಿಯಂತೆ' ಕೆಲವು ದಿನಗಳಲ್ಲಿ ತಾನಾಗಿಯೇ ಬಂದು ಶರಣಾಗತನಾದನು. ಶಿವಮೊಗ್ಗೆಯಲ್ಲಿ ಮಹಾರಾಜರು ೩೦೦ ಜನ ಮೈಸೂರು ಸೈನಿಕರ ತುಕಡಿಯನ್ನು ಸದಾ ಸಿದ್ಧನಾಗಿಟ್ಟಿರುವಂತೆ ಏರ್ಪಾಟು ಮಾಡಿದರು.

ನಗರ ಪ್ರಾಂತದಲ್ಲಿ ಇಂಥ ದಂಗೆಯು ನಡೆಯಲು ವಿಶ್ವಾಸದ್ರೋಹಿ ಗಳಾದ ಕೆಲವು ಅಧಿಕಾರಿಗಳೇ ಮುಖ್ಯ ಕಾರಣ. ಸ್ವಾರ್ಥಪರರಾದ ಕೆಲವು ಜನಗಳು ದೇಶದ ಶುಭ್ರ ಕೀರ್ತಿಗೆ ಕಳಂಕ ತರಲು ಯತ್ನಿಸಿದರು. ಬ್ರಿಟಿಷ್ ಅಧಿಕಾರಿಗಳಾದರೂ ಸಕಾಲದಲ್ಲಿ ಮಹಾರಾಜರ ಅಭಿಮತದಂತೆ ಕಂಪೆನಿಯ ಸೈನ್ಯವನ್ನು ಕಳುಹಿಸಿಕೊಡದೆ ಕಾಲಹರಣಮಾಡಿ ಪರಿಸ್ಥಿತಿಯು ವಿರಾಡ್ರೂಪ ವನ್ನು ಹೊಂದಲು ಅವಕಾಶಕೊಟ್ಟರು. ಮಹಾರಾಜರ ದೂರದೃಷ್ಟಿ, ಕರ್ತವ್ಯಜ್ಞಾನ ಮತ್ತು ಬುದ್ಧಿಶಕ್ತಿ ಇವು ಯಾವುವೂ ಫಲಕಾರಿಯಾಗಲು ಇಂಬು ದೊರೆಯಲಿಲ್ಲ! ಈಜು ಬರುವವರನ್ನು ಕೈಕಾಲು ಕಟ್ಟಿ ನೀರಿಗೆ ಬಿಟ್ಟಂತಾಯಿತು! ದೇಶದ ಒಂದು ಅಭುಕ್ತ ಮೂಲೆಯಲ್ಲಿ ಅನಾಮಧೇಯ ನೊಬ್ಬನು ನಡೆಯಿಸಿದ ಪುಂಡಾಟವನ್ನು ಒಂದು ಮಹಾ ಪ್ರಮಾದವೆಂದು ಪರಿಗಣಿಸಿ ಮುಂದೆ ಕಂಪೆನಿಯ ಸರ್ಕಾರದವರು ಮಹಾರಾಜರನ್ನು ಕಾರ್ಯ ದಕ್ಷರಲ್ಲನೆಂದು ಹೇಳುವಷ್ಟು ಸಾಹಸ ಮಾಡಿದರು!

ಒಂಬತ್ತನೆಯ ಅಧ್ಯಾಯ

ದಂಗೆಯ ಪರಿಣಾಮ, ಮಹಾರಾಜರ ಚಿತ್ತಸ್ಥೈರ್ಯ

ನಗರ ಪ್ರಾಂತದಲ್ಲಿ ಹೈಗಮಲ್ಲನು ನಡೆಯಿಸಿದ ದಂಗೆಯ ವಿದ್ಯಮಾನಗಳೇ ನೆಂಬುದನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡು ಕಲ್ಕತ್ತಾ ಸರ್ಕಾರದವರಿಗೆ ವರದಿ ಮಾಡಲು ಬಂದಿದ್ದ ಎಸ್. ಆರ್. ಲೂಷಿಂಗ್‌ಟರ್‌ರವರು ಮದ್ರಾಸಿಗೆ ಹೋಗಿ ಸೇರಿದ ಮೇಲೆ, ಮೈಸೂರು ಸಂಸ್ಥಾನವನ್ನು ಕಂಪೆನಿ ಸರ್ಕಾರದ ಆಡಳಿತಕ್ಕೆ ಸೇರಿಸಿಕೊಂಡುಬಿಡುತ್ತಾರೆಂಬ ಗುಜುಗುಂಪುಲು ಎಲ್ಲೆಲ್ಲಿಯೂ ಹೆಚ್ಚಾಯಿತು. ಲೂಷಿಂಗ್‌ಟರ್‌ರವರು "ಮಹಾರಾಜರಿಂದ ಕಂಪೆನಿಯ ಸೈನ್ಯಕ್ಕೆ ಪೊಗದಿಯ ರೂಪವಾಗಿ ಸಂದಾಯವಾಗುತ್ತಿರುವ ಹಣವು ಕಾಲಕಾಲಕ್ಕೆ ಸರಿಯಾಗಿ ಬರುತ್ತಿಲ್ಲ. ಸೈನಿಕರೂ, ಸಿಬ್ಬಂದಿಯವರೂ ಮುಷ್ಕರಹಿಡಿಯಲು ಸಿದ್ಧರಾಗಿ ದ್ದಾರೆ" ಎಂದು ಅವರು ಮೈಸೂರಿಗೆ ಬರುವುದಕ್ಕೆ ಮುಂಚೆಯೇ, ಗವರ್ನರ್ ಜನರಲ್‌ರವರಿಗೆ ಒಂದು ಕಾಗದವನ್ನು ಬರೆದಿದ್ದರು. ಅಕೌಂಟೆಂಟ್ ಜನರಲ್ ರವರ ಲೆಕ್ಕದ ಪುಸ್ತಕಗಳನ್ನು ಪರಿಶೀಲಿಸಿದರೆ, ಯಾವುದೊಂದು ತಿಂಗಳ ನಲ್ಲಿಯೇ ಆಗಲಿ ಪೊಗದಿಯು ತಡವಾಗಿ ಸಂದಾಯವಾಗಿದೆಯೆಂಬ ಅಂಶವೇ ಕಂಡು ಬರದಿದ್ದರೂ, ಮದ್ರಾಸ್ ಗವರ್ನರ್‌ರವರು ಆ ರೀತಿಯಾಗಿ ಬರೆದಿದ್ದುದು ವಿಸ್ಮಯಕರವಾಗಿದೆ.

ಗವರ್ನರ್ ಜನರಲ್‌ರವರಾದ ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಮದ್ರಾಸ್ ಗವರ್ನರ್‌ರವರು ಬರೆದ ಕಾಗದವನ್ನು ನೋಡಿ, ಮಹಾರಾಜರ ರಾಜ್ಯವನ್ನು ಬ್ರಿಟಿಷರ ಆಡಳಿತಕ್ಕೆ ಒಳಪಡಿಸಿಕೊಂಡು, 'ಬ್ರಿಟಿಷ್ ಕಮಿಷನ್' ಎಂಬ ಒಂದು ಅಧಿಕಾರವರ್ಗದ ಮೂಲಕ ರಾಜ್ಯಾಡಳಿತಗಳನ್ನು ನಡೆಯಿಸ ಬೇಕೆಂದು ಆಲೋಚಿಸಿದರು. ಲೂಷಿಂಗ್‌ಟರ್‌ರವರು ಮೈಸೂರಿನಿಂದ ಹಿಂದಿರುಗಿ ಹೋದಮೇಲೆ ಅವರು ಕಳುಹಿಸಬಹುದಾಗಿದ್ದ ವರದಿಯನ್ನು ನೋಡಿಕೊಂಡು ಬೆಂಟಿಂಕ್‌ರವರು ಮುಂದಿನ ವಿಚಾರವನ್ನು ಪರ್ಯಾಲೋಚಿಸಲು ಅವಕಾಶ ವಿತ್ತು; ಸೂಕ್ತವಾಗಿಯೂ ಇರುತ್ತಿತ್ತು. ಆದರೆ, ಅವರು ಹಾಗೆಮಾಡದೆ

ಆತುರಪಟ್ಟು, ಮುಂದೆ ಅವರೇ ಪಶ್ಚಾತ್ತಾಪಪಡುವಂಥ ರೀತಿಯಲ್ಲಿ ವರ್ತಿಸಿದರು. ಅಷ್ಟೊಂದು ತ್ವರಿತದಿಂದ ಕಾರ್ಯ ನಡೆಯಿಸಬೇಕಾದ ಪ್ರಮೇಯವೇ ಅವರಿಗಿರಲಿಲ್ಲ. ಮೊದಲಿನಿಂದಲೂ ಮಹಾರಾಜರಿಗೆ ಯಾವು ದೊಂದು ಸಲಹೆಯನ್ನೂ ಕೊಡದೆ, ಸಮಯದಲ್ಲಿ ಸೈನ್ಯ ಸಹಾಯವನ್ನೂ ಒದಗಿಸದೆ ತಟಸ್ಥರಾಗಿದ್ದು ಪರಿಸ್ಥಿತಿಯು ಉಗ್ರರೂಪಕ್ಕೆ ಬರಲು ಅವಕಾಶ ಕೊಟ್ಟು, ತರುವಾಯ ದುಡುಕಿ ನಡೆದುದು ಸರ್ವಥಾ ಸಾಧುವಾಗಿರಲಿಲ್ಲ.

ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ೧೮೩೧ನೆಯ ಇಸವಿ ಸೆಪ್ಟೆಂಬರ್ ೭ನೆಯ ತಾರೀಖಿನಲ್ಲಿ ಒಂದು ಖರೀತವನ್ನು ಬರೆದು ಅದನ್ನು ಮದ್ರಾಸ್ ಗವರ್ನರ್‌ರವರ ಮೂಲಕ ಮೈಸೂರು ದರ್ಬಾರಿಗೆ ಕಳುಹಿಸಿದರು. "ಬ್ರಿಟಿಷ್ ಸರ್ಕಾರದವರಿಗೆ ಪ್ರತಿ ತಿಂಗಳೂ ಕೊಡಬೇಕಾಗಿರುವ ಪೊಗದಿಯನ್ನು ಮಹಾ ರಾಜರು ಸರಿಯಾಗಿ ಸಲ್ಲಿಸುತ್ತಿಲ್ಲ. ಸಂಸ್ಥಾನದ ಸೈನಿಕರಿಗೆ ಸಂಬಳಗಳೇ ಇಲ್ಲದೆ ತಿಂಗಳುಗಟ್ಟಲೆ ತಡವಾಗುತ್ತಿದೆ. ಮೈಸೂರು ಸಂಸ್ಥಾನಕ್ಕೆ ಸಾಲದ ಹೊರೆ ಬಹಳ ಹೆಚ್ಚಾಗಿದೆ. ಸಂಸ್ಥಾನದ ಫೌಜುದಾರರೂ, ಸುಬೇದಾರರೂ ಸಮರ್ಥರಾಗಿಲ್ಲದೆ, ಕಂದಾಯದ ವಸೂಲಿಯು ಮಿತಿಮೀರಿ ಉಳಿದುಹೋಗಿದೆ. ಹಿಂದಿನ ವರ್ಷ ದೇಶದಲ್ಲಿ ಬಲವಾದ ದಂಗೆಯುಂಟಾಗಿ ಪ್ರಜಾಕ್ಷೋಭೆ ಯಾಯಿತು. ಆ ದಂಗೆಯನ್ನು ಅಡಗಿಸಲು ಮೈಸೂರು ಸೈನ್ಯದಿಂದ ಸಾಧ್ಯವಾಗ ಲಿಲ್ಲ. ಕಂಪೆನಿಯ ಸೈನಿಕರು ಆ ದಂಗೆಯನ್ನು ಹತೋಟಿಗೆ ತರಬೇಕಾಯಿತು. ಈಗ ಸಂಸ್ಥಾನದಲ್ಲಿ ಬಹಳಮಟ್ಟಿಗೆ ಶಾಂತಿಯೇನೋ ನೆಲೆಸಿದೆಯಾದರೂ, ಇನ್ನು ಮುಂದೆಯೂ ಶಾಂತಿಸಮಾಧಾನಗಳು ಶಾಶ್ವತವಾಗಿರುವಂತೆ ಮಾಡ ಬೇಕಾದರೆ ಮೈಸೂರು ರಾಜ್ಯವನ್ನು ಬ್ರಿಟಿಷ್ ಅಧಿಕಾರಿಗಳ ಆಡಳಿತಕ್ಕೆ ವಹಿಸಿ ಕೊಡುವುದು ಸೂಕ್ತವಾಗಿದೆ. ತತ್ಪ್ರಯುಕ್ತ, ಕಮಿಷನರುಗಳೆಂಬ ಇಬ್ಬರು ಅಧಿಕಾರಿಗಳನ್ನು ನೇಮಕಮಾಡಲಾಗಿದೆ. ಆ ಅಧಿಕಾರಿಗಳು ಇಷ್ಟರಲ್ಲಿಯೇ ಮೈಸೂರಿಗೆ ಬರುತ್ತಾರೆ. ಮಹಾರಾಜರು ರಾಜ್ಯಾಡಳಿತಗಳನ್ನು ಆ ಅಧಿಕಾರಿ ಗಳಿಗೆ ವಹಿಸಿಕೊಡಬೇಕೆಂದು ಕೋರಲಾಗಿದೆ" ಎಂಬುದಾಗಿ ಅರ್ಥ ಬರುವಂಥ ಒಕ್ಕಣೆಯು ಆ ಖರೀತದಲ್ಲಿತ್ತು.

ಮಹಾರಾಜರು ನವರಾತ್ರಿ ಮಹೋತ್ಸವವನ್ನು ನಡೆಯಿಸುತ್ತಿದ್ದ ಕಾಲ ದಲ್ಲಿ ಗವರ್ನರ್ ಜನರಲ್‌ರವರ ಖರೀತವು ಅವರ ಕೈ ಸೇರಿತು. ಪ್ರಭುಗಳು

ಸಂಗತಿಯನ್ನು ಗ್ರಹಿಸಿ, ಸ್ವಲ್ಪವೂ ಅಳುಕದೆ ಪ್ರಶಾಂತ ಮನಸ್ಕರಾಗಿಯೇ ಇದ್ದರು. ಅವರ ಚಿತ್ತಸ್ಥೈರ್ಯವು ಪ್ರಶಂಸನೀಯವಾದುದು! ಯಾವ ರೀತಿಯಾಗಿಯೂ ಪ್ರತಿಭಟಿಸದೆ, ಕ್ರಿ. ಶ. ೧೮೩೧ನೆಯ ಇಸವಿ ಅಕ್ಟೋಬರ್ ೧೯ನೆಯ ತಾರೀಖಿನ ದಿನ ರಾಜ್ಯಾಡಳಿತ ಸೂತ್ರಗಳನ್ನು 'ಬ್ರಿಟಿಷ್ ಕಮಿಷನರ್' ಅಧಿಕಾರಿಗಳಿಗೆ ವಹಿಸಿಕೊಟ್ಟರು. ಕರ್ನಲ್ ಜಾರ್ಜ್ ಬ್ರಿಗ್ಸ್ ಎಂಬುವರು ಸೀನಿಯರ್ ಕಮಿಷನರರವರಾಗಿಯೂ, ಸಿ. ಎಂ. ಲೂಷಿಂಗ್ಟನ್ ಎಂಬುವರು ಜೂನಿಯರ್ ಕಮಿಷನರರವರಾಗಿಯೂ ನೇಮಕವಾಗಿದ್ದರು. ಈ ಜೂನಿಯರ್ ಕಮಿಷನರರವರು ಆಗ ಮದ್ರಾಸ್ ಗವರ್ನರ್ ಆಗಿದ್ದ ಲೂಷಿಂಗ್ಟನ್‌ರವರ ತಮ್ಮಂದಿರು. ಮೈಸೂರು ಸಂಸ್ಥಾನದ ಒಟ್ಟು ಹುಟ್ಟುವಳಿಯಲ್ಲಿ ಕಂಪೆನಿಯ ಸರ್ಕಾರಕ್ಕೆ ಸಲ್ಲುತ್ತಿದ್ದ ಪೊಗದಿಯೂ ಮತ್ತು ಸಂಸ್ಥಾನದ ಸಿಬ್ಬಂದಿಯ ಖರ್ಚೂ ಕಳೆದು ಉಳಿದ ಮೊಬಲಗಿನಲ್ಲಿ ಮಹಾರಾಜರ ಸ್ವಂತ ವೆಚ್ಚಕ್ಕಾಗಿ ಐದನೆಯ ಒಂದು ಭಾಗವೂ ಮತ್ತು ಪ್ರತಿ ವರ್ಷವೂ ೩,೫೦,೦೦೦ ರೂಪಾಯಿ ಮೊಬಲಗೂ ಸಂದಾಯವಾಗಬೇಕೆಂದು ತೀರ್ಮಾನವಾಯಿತು. ಬ್ರಿಟಿಷ್ ಕಮಿಷನರವರು ರೆಸಿಡೆಂಟರ ಮೂಲಕ ಮಹಾರಾಜರಿಗೆ ಪತ್ರವ್ಯವಹಾರ ನಡೆಯಿಸತಕ್ಕುದೆಂದು ವ್ಯವಸ್ಥೆಯಾಯಿತು. ಮದ್ರಾಸ್ ಗವರ್ನರ್‌ರವರೇ ಮೇಲ್ವಿಚಾರಕರಾಗಿರುವಂತಾಯಿತು.

ಮೈಸೂರು ಸಂಸ್ಥಾನದ ಆಡಳಿತಗಳನ್ನು ಕಂಪೆನಿ ಸರ್ಕಾರದವರು ವಹಿಸಿಕೊಂಡ ಸ್ವಲ್ಪ ದಿನಗಳ ತರುವಾಯ ಬೆಂಟಿಂಕ್‌ರವರು ಒಂದು ಸಮಿತಿಯನ್ನು ನೇಮಕಮಾಡಿ, ಮೈಸೂರು ದೇಶದ ದಂಗೆಗೆ ಕಾರಣಗಳೇನೆಂಬುದನ್ನು ಕಂಡುಹಿಡಿದು ವರದಿ ಮಾಡಬೇಕೆಂದು ಆಜ್ಞೆ ಮಾಡಿದರು. ಆ ಸಮಿತಿಯಲ್ಲಿ ಥಾಮಸ್ ಹಾಕರ್, ಡಬ್ಲ್ಯು. ಮಾರಿಸನ್, ಜೆ. ಎಂ. ಮ್ಯಾಕ್ಲಿಯಡ್ ಮತ್ತು ಮೇಜರ್ ಜನರಲ್ ಮಾರ್ಕ್ ಕಬ್ಬನ್—ಎಂಬ ನಾಲ್ಕುಮಂದಿ ಸದಸ್ಯರಿದ್ದರು. ಅವರು ಸಂಸ್ಥಾನದ ವಿದ್ಯಮಾನಗಳನ್ನೆಲ್ಲಾ ಸೂಕ್ಷ್ಮವಾಗಿಯೂ, ಕೂಲಂಕಷವಾಗಿಯೂ ವಿಮರ್ಶಿಸಿ ಬಹಳ ನಿಷ್ಪಕ್ಷಪಾತವಾದ ವರದಿಯನ್ನು ಗವರ್ನರ್ ಜನರಲ್‌ರವರಿಗೆ ಒಪ್ಪಿಸಿದರು. ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಆ ವರದಿಯನ್ನು ಓದಿಕೊಂಡು, ತಾವು ದುಡುಕಿ ವರ್ತಿಸಿ ಮೈಸೂರು ರಾಜ್ಯಾಡಳಿತಗಳನ್ನು ಮಹಾರಾಜರ ಕೈ ತಪ್ಪಿಸಿದುದು ಅನ್ಯಾಯ

ನೇಮ ಭಾವಿಸಿ ಬಹಳವಾಗಿ ಪಶ್ಚಾತ್ತಾಪಪಟ್ಟರು. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಪ್ರಯೋಜನವೇನು? ಬೆಂಟಿಂಕ್‌ರವರು ಮೈಸೂರಿಗೆ ಬಂದು ಮಹಾರಾಜರನ್ನು ಭೇಟಿಮಾಡಿ, ಅವರ ಶೀಲಸ್ವಭಾವಗಳನ್ನೂ, ರಾಜತಂತ್ರಜ್ಞತೆಯನ್ನೂ, ಪ್ರತಿಭಾ ಸಂಪನ್ನತೆಯನ್ನೂ, ನಿಶ್ಚಲ ಮನೋಭಾವವನ್ನೂ ಮತ್ತು ಅವರಿಗಿದ್ದ ಸಾಮ್ರಾಜ್ಯ ಭಕ್ತಿಗೌರವಗಳನ್ನೂ ಕಂಡು ತಲೆದೂಗಿದರು. ತಾವು ದುಡುಕಿ ಮಾಡಿದ ಕಾರ್ಯಕ್ಕಾಗಿ ಮನಮರುಗಿದರು. ಅಲ್ಲಿಗೆ ಮೂರು ವರ್ಷಗಳು ಕಳೆದುಹೋಗಿದ್ದುವು.

ಬೆಂಟಿಂಕ್‌ರವರು ಕಲ್ಕತ್ತಾ ನಗರಕ್ಕೆ ಹಿಂತಿರುಗಿ ಹೋದಮೇಲೆ, "ಮಹಾರಾಜರಿಗೆ ಮಂಜರಾಬಾದು ಮೈಸೂರು, ಮತ್ತು ಅಷ್ಟಗ್ರಾಮ ಡಿವಿಜನುಗಳನ್ನು ಬಿಟ್ಟುಕೊಡಬೇಕೆಂದು" ಸೂಚಿಸಿ ಕೋರ್ಟ್ ಆಫ್ ಡೈರೆಕ್ಟರುಗಳಿಗೆ ಒಂದು ಖರೀತವನ್ನು ಬರೆದರು. ಆದರೆ ಡೈರೆಕ್ಟರುಗಳು ಬೆಂಟಿಂಕ್‌ರವರ ಸಲಹೆಗಳನ್ನು ಒಪ್ಪದೆ, ರಾಜ್ಯವು ಬ್ರಿಟಿಷರ ಆಡಳಿತದಲ್ಲಿಯೇ ಇರಬೇಕೆಂದು ತಿಳಿಸಿದರು. ಆ ವೇಳೆಗೆ ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಗವರ್ನರ್ ಜನರಲ್ ಪದವಿಯಿಂದ ನಿವೃತ್ತರಾಗಿ ಹೋಗಿದ್ದರು.

ಕಮಿಷನರುಗಳು ಎಂದಿನಂತೆ ಆಡಳಿತಗಳನ್ನು ನಿರ್ವಹಿಸುತ್ತಿದ್ದರು. ಆದರೆ, ಇಬ್ಬರು ಕಮಿಷನರುಗಳು ರಾಜ್ಯಾಡಳಿತಗಳನ್ನು ನಡೆಯಿಸುವುದು ಹೊಂದಿಕೆಯಾಗಲಿಲ್ಲ. ಆದುದರಿಂದ ಮುಂದೆ ಒಬ್ಬರೇ ಕಮಿಷನರಿರಬೇಕೆಂಬುದಾಗಿ ತೀರ್ಮಾನಿಸಿ, ಸರ್ ಮಾರ್ಕ್ ಕಬ್ಬನ್ ಎಂಬುವರನ್ನು ಕಮಿಷನರ್ ಹುದ್ದೆಗೆ ನೇಮಕಮಾಡಿದರು. ಅವರು ಅವಿಚ್ಛಿನ್ನವಾಗಿ ೨೭ ವರ್ಷ ಕಾಲ ಅಧಿಕಾರ ಮಾಡಿದರು. ಕಬ್ಬನ್‌ರವರು ಬಹಳ ಸಮರ್ಥರಾದ ಅಧಿಕಾರಿಗಳೆಂದು ಕೀರ್ತಿ ಪಡೆದರು. ಅವರು ಮಹಾರಾಜರಿಗೆ ಅತ್ಯಂತ ಆಪ್ತಮಿತ್ರರಾಗಿದ್ದರು. ಅವರ ಅಧಿಕಾರದ ಅವಧಿಯಲ್ಲಿ ಮೈಸೂರು ದೇಶವು ಬಹಳ ಅಭಿವೃದ್ಧಿಸ್ಥಿತಿಗೆ ಬಂದಿತು. ಅವರ ಜ್ಞಾಪಕಾರ್ಥವಾಗಿ ಒಂದು ಲೋಹ ಪ್ರತಿಮೆಯನ್ನು ಬೆಂಗಳೂರಿನಲ್ಲಿರುವ ಅಠಾರಾಕಚೇರಿಯ ಮುಂಭಾಗದಲ್ಲಿ ನಿಲ್ಲಿಸಿದ್ದಾರೆ. ಅವರ ತರುವಾಯ, ಬೌರಿಂಗ್ ಎಂಬುವರು ಕಮಿಷನರಾಗಿ ಅಧಿಕಾರ ಮಾಡಿದರು. ಅವರೂ ದಕ್ಷರಾದ ಅಧಿಕಾರಿಗಳೆಂದು ಹೆಸರುಗೊಂಡರು.

ಮಹಾರಾಜರು ಸ್ವತಃ ರಾಜ್ಯಾಡಳಿತಗಳನ್ನು ನಡೆಯಿಸಿದ ೨೦ ವರ್ಷಗಳ ಕಾಲದಲ್ಲಿ ಮೈಸೂರು ದೇಶದ ಅಭಿವೃದ್ಧಿಗಾಗಿ ಸಂತತ ಪ್ರಯತ್ನಮಾಡಿದರು. ಅವರು ಪಟ್ಟಾಭಿಷಿಕ್ತರಾದಂದಿನಿಂದ, ರಾಜ್ಯಾಡಳಿತಗಳನ್ನು ಸ್ವತಃ ವಹಿಸಿಕೊಳ್ಳುವ ಕಾಲದವರೆಗೂ, ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಮತ್ತು ದಿವಾನ್ ಪೂರ್ಣಯ್ಯನವರು ಚಾತುರ್ಯದಿಂದಲೂ, ದಕ್ಷತೆಯಿಂದಲೂ ರಾಜ್ಯಭಾರ ನಿರ್ವಹಣಮಾಡಿದರು. ಮಹಾರಾಜರ ಆಳಿಕೆಯ ಕಾಲದಲ್ಲಿ, ಸ್ವಾರ್ಥಸಾಧಕರ ಕೈವಾಡವೂ, ಅಸಮರ್ಥರಾದ ಮಂತ್ರಿಗಳ ಆಡಳಿತವೂ, ಅನೀತಿಯುತರಾದ ಅಧಿಕಾರಿಗಳ ಒಳಸಂಚೂ ದಿನದಿನಕ್ಕೆ ಪ್ರಬಲಿಸಿ ಮಹಾರಾಜರನ್ನು ವಿಷಮ ಪರಿಸ್ಥಿತಿಗೆ ಗುರಿಮಾಡಿದುವು. ಬ್ರಿಟಿಷ್ ರೆಸಿಡೆಂಟರುಗಳ ಸಲಹೆಯೂ ದೊರೆಯದೆ, ಮಹಾರಾಜರು ಸ್ವಸಾಮರ್ಥ್ಯದಿಂದಲೇ ರಾಜ್ಯಾಡಳಿತಗಳನ್ನು ನಡೆಯಿಸುತ್ತಿದ್ದರು. ಅವರ ಆಳಿಕೆಯಲ್ಲಿ ಅನಿರೀಕ್ಷಿತವಾದ ಘಟನೆಗಳು ಒಂದಾದಮೇಲೊಂದು ಒದಗಿದುದು ದುರ್ದೈವದ ವ್ಯಾಪಾರವೆಂದು ಕಾಣುತ್ತದೆ. ದೇಶದಲ್ಲೆಲ್ಲಾ ವೀರ ಕ್ಷಾಮವು ತಲೆದೋರಿ, ಸಂಸ್ಥಾನವು ಆ ಭೀಕರ ಪರಿಸ್ಥಿತಿಯಿಂದ ಚೇತರಿಸಿಕೊಳ್ಳುವ ಸಮಯಕ್ಕೆ, ಮಾರಿಕೋಪದ್ರವ ಬಂದು ಪ್ರಳಯಸ್ನೃತ್ಯವಾಡಿತು. ಸಂಸ್ಥಾನದ ಹುಟ್ಟುವಳಿಯಿಂದ ಮಹಾರಾಜರು ಪ್ರಜೆಗಳ ಸಂರಕ್ಷಣೆಗಾಗಿ ಅಪಾರ ದ್ರವ್ಯವನ್ನು ವ್ಯಯಮಾಡಿದರು. ಖಜಾನೆಯು ಪ್ರಜೋಪಕಾರ ಕಾರ್ಯಗಳಿಗಾಗಿಯೇ ಬರಿಯದಾಯಿತು ಇಷ್ಟರಲ್ಲಿಯೇ, ಪುಂಡುಗಾರರು ವಿಶ್ವಾಸಘಾತುಕರಾದ ಅಧಿಕಾರಿಗಳ ಬೆಂಬಲದಿಂದ ದಂಗೆಯೆದ್ದರು.. ಕಂಪೆನಿ ಸರ್ಕಾರದವರು ಸಕಾಲದಲ್ಲಿ ಸೈನ್ಯ ಸಹಾಯಮಾಡದೆ ತಟಸ್ಥರಾದರು. ಲಾರ್ಡ್‌ವಿಲಿಯಂ ಬೆಂಟಿಂಕರವರೇ ಹೇಳುವಂತೆ, ಮಹಾರಾಜರ ಸ್ವಯಂಕೃತವಾದ ಯಾವುದೊಂದು ಲೋಪದಿಂದಲೂ ರಾಜ್ಯಾಡಳಿತಗಳನ್ನು ಬ್ರಿಟಿಷ್ ಸರ್ಕಾರದವರು ವಹಿಸಿಕೊಳ್ಳಲಿಲ್ಲ ದೇಶದಲ್ಲಿ ಶಾಂತಿಸಮಾಧಾನಗಳನ್ನು ನೆಲೆಗೊಳಿಸಿ ಪ್ರಜಾಭ್ಯುದಯವನ್ನು ಸಾಧಿಸುವುದಕ್ಕಾಗಿ ಮಾತ್ರ ಮೈಸೂರು ರಾಜ್ಯವನ್ನು ಕಂಪೆನಿ ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳಲಾಯಿತು.

ಹತ್ತನೆಯ ಅಧ್ಯಾಯ

ಮಹಾರಾಜರ ಧರ್ಮಯುದ್ಧ, ದೃಢಸಂಕಲ್ಪ.

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ ।
ದೈವೇನ ದೇಯಮಿತಿ ಕಾಪುರುಷಾ ವದಂತಿ ॥
ದೈವಂ ನಿಹತ್ಯ ಕುರು ಪೌರುಷಮಾತ್ಮ ಶಕ್ತ್ಯಾ ।
ಯತ್ನೇ ಕೃತೇ ಯದಿ ನ ಸಿಧ್ಯತಿ ಕೋತ್ರ ದೋಷಃ ॥

[ಹಿತೋಪದೇಶ.

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ತಮ್ಮ ಕೈಬಿಟ್ಟುಹೋದ ರಾಜ್ಯವನ್ನು ಮತ್ತೆ ಪಡೆಯಲು ಭಗೀರಥ ಪ್ರಯತ್ನಮಾಡಿದರು: ಧರ್ಮ ಯುದ್ಧವನ್ನು ಹೂಡಿದರು. ಲಾರ್ಡ್ ವಿಲಿಯಂ ಬೆಂಟೆಂಕ್‌ರವರು ಮಾಡಿದ ಸಲಹೆಯಂತೆ, ಲಂಡನ್ ಸರ್ಕಾರದವರು ಮಹಾರಾಜರಿಗೆ ರಾಜ್ಯದ ಕೆಲವು ಭಾಗಗಳನ್ನಾದರೂ ಬಿಟ್ಟುಕೊಡಲು ಒಪ್ಪಲಿಲ್ಲ. ರಾಜ್ಯದಲ್ಲಿ ಶಾಂತಿಸ್ಥಾಪನೆಯಾಗಿ ಒಂದು ತಹಬಂದಿಗೆ ಬಂದಮೇಲೆ, ಶೀಘ್ರಾವಕಾಶದಲ್ಲಿಯೇ, ರಾಜ್ಯವನ್ನು ಸಂಪೂರ್ಣವಾಗಿ ಬಿಟ್ಟುಕೊಡಬಹುದೆಂದು ಕೋರ್ಟ್ ಆಫ್ ಡೈರೆಕ್ಟರುಗಳು ಅಭಿಪ್ರಾಯಪಟ್ಟರು. ಆದರೆ, ನಿಷ್ಕರ್ಷೆಯಾದ ಯಾವುದೊಂದು ಅವಧಿಯನ್ನೂ ಅವರು ಗೊತ್ತುಮಾಡಲಿಲ್ಲ. ಇಂದು, ನಾಳೆಯೆಂದು ಮಹಾರಾಜರು ೮ ವರ್ಷಕಾಲ ನಿರೀಕ್ಷಿಸಿದರು. ರಾಜ್ಯವನ್ನು ಬ್ರಿಟಿಷ್ ಸರ್ಕಾರದವರು ಮಹಾರಾಜರಿಗೆ ಪುನಃ ವಹಿಸಿಕೊಡಬಹುದೆಂಬ ಕುರುಹೇ ತೋರಲಿಲ್ಲ ಅವರು ತಮ್ಮ ಅಭೀಷ್ಟವನ್ನು ನೆರವೇರಿಸಿಕೊಡಬೇಕೆಂದು ಸಾಮ್ರಾಜ್ಯ ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಬಂದರು.

ಲಾರ್ಡ್ ಹಾರ್ಡಿಂಗ್‌ರವರು ಗವರ್ನರ್ ಜನರಲ್‌ರವರಾಗಿ ಬಂದಮೇಲೆ, ಮಹಾರಾಜರು ತಮ್ಮ ಹಕ್ಕನ್ನು ಸಾಧಿಸಿ, ರಾಜ್ಯವನ್ನು ಹಿಂದಕ್ಕೆ ಕೊಡಬೇಕೆಂದು ಕೇಳಿದರು. ಅನೇಕ ತಿಂಗಳುಕಾಲ ಕಳೆದುಹೋದರೂ,

ಅವರಿಗೆ ಯಾವುದೊಂದು ಪ್ರತ್ಯುತ್ತರವೂ ಬರಲಿಲ್ಲ. ಅದುವರೆಗೆ ೧೩ ವರ್ಷಗಳು ಕಳೆದುಹೋಗಿದ್ದುವು. ಈ ಹದಿಮೂರು ವರ್ಷಗಳ ಅವಧಿಯಲ್ಲಿ ಸಂಸ್ಥಾನವು ಕಂಪೆನಿ ಸರ್ಕಾರದವರ ಆಡಳಿತದಲ್ಲಿ ಬಹಳಮಟ್ಟಿಗೆ ಅಭಿವೃದ್ಧಿಗೆ ಬಂದಿತ್ತು. ಮಹಾರಾಜರು ಸ್ವಲ್ಪವೂ ಧೈರ್ಯಗೆಡದೆ, ತಮ್ಮ ಹಕ್ಕನ್ನು ಉಳಿಸಿಕೊಡಬೇಕೆಂದು ಗವರ್ನರ್ ಜನರಲ್‌ರವರಿಗೆ ಖರೀತವನ್ನು ಬರೆದರು. ಆ ಸಮಯದಲ್ಲಿ, ಮಹಾರಾಜರ ವಿಷಯವಾಗಿ ಇಲ್ಲದ ಸಲ್ಲದ ವರ್ತಮಾನಗಳನ್ನು ಹರಡಿ, ಅವರ ಶೀಲಸ್ವಭಾವಗಳ ವಿಚಾರದಲ್ಲಿ ತಪ್ಪು ಭಾವನೆಗಳನ್ನು ಹರಡುತ್ತಿದ್ದ ಜನರು ಕೆಲವರಿದ್ದರು. ಮಹಾರಾಜರು ಅಂಥ ತಪ್ಪು ತಿಳಿವಳಿಕೆಗಳನ್ನೆಲ್ಲಾ ಪ್ರತಿಭಟಿಸಿ, ವಾಸ್ತವವಾದ ಸಂಗತಿಗಳನ್ನು ತಿಳಿಸಿ ಕಂಪೆನಿ ಸರ್ಕಾರದವರಿಗೆ ಬರೆಯುತ್ತಿದ್ದರು. "ನಮಗೆ ೫೦ ವರ್ಷ ವಯಸ್ಸಾಗಿದ್ದರೂ ದೃಢಕಾಯರಾಗಿರುವೆವು; ರಾಜ ಕಾರ್ಯಗಳನ್ನು ನಿರ್ವಹಿಸಲು ಶಕ್ತರಾಗಿರುವೆವು. ನಾವು ಶ್ರೀರಂಗಪಟ್ಟಣದ ತಹನಾಮೆಯ ನಿಯಮಗಳ ಮೇರೆಗೆ ಲವಲೇಶವೂ ತಪ್ಪದೆ ನಡೆದುಕೊಂಡಿರುವೆವು. ಇನ್ನು ಯಾವುದೊಂದು ಹೊಸ ಕಾರಣವನ್ನೂ ಸೂಚಿಸಿ ರಾಜ್ಯವನ್ನು ಕೊಡಲು ತಡಮಾಡಬಾರದು. ಕರಾರಿನ ಪ್ರಕಾರ ರಾಜ್ಯವನ್ನು ನಮಗೆ ವಹಿಸಿಕೊಡಬೇಕಾದುದು ನ್ಯಾಯವಾಗಿದೆ" ಎಂದು ಮಹಾರಾಜರವರು ಕಂಪೆನಿ ಸರ್ಕಾರದವರಿಗೆ ಬರೆದರು.

ಆಗ, ಇಂಗ್ಲೆಂಡಿನ ಕೋರ್ಟ್ ಆಫ್ ಡೈರೆಕ್ಟರುಗಳು ಈ ವಿಷಯವನ್ನು ಪರಿಶೀಲಿಸಿ, "ಮಹಾರಾಜರಿಗೆ ರಾಜ್ಯವನ್ನು ಪುನಃ ವಹಿಸಿಕೊಡುವುದರಿಂದ ದೇಶದಲ್ಲಿ ಪುಂಡಾಟಗಳು ನಡೆಯಲು ಅವಕಾಶವಾಗುತ್ತದೆ. ಅಲ್ಲದೆ, ಅವರು ರಾಜ್ಯಪರಿಪಾಲನೆಮಾಡಲು ಶಕ್ತರಾಗಿಲ್ಲ" ಎಂಬ ಕುಂಟು ನೆಪಗಳನ್ನು ಹೇಳಿ ಕಾಲವಿಳಂಬಮಾಡುತ್ತ ಬಂದರು. ಮೊದಲೇ ಬೇಕಾದಷ್ಟು ಅಸಮಾಧಾನ, ಅಶಾಂತಿಗಳಿಗೆ ಇಂಬಾಗಿದ್ದ ಮೈಸೂರು ಸಂಸ್ಥಾನವನ್ನು ಟೀಪುವಿನ ಮರಣಾನಂತರ ಕೇವಲ ಚಿಕ್ಕ ವಯಸ್ಸಿನ ಮಹಾರಾಜರು ವಹಿಸಿಕೊಂಡಾಗ, ಕಂಪೆನಿ ಸರ್ಕಾರದವರು ಅವರಿಗೆ ಯಾವುದೊಂದು ರಾಜಕೀಯ ಶಿಕ್ಷಣವನ್ನಾಗಲಿ ಬೆಂಬಲವನ್ನಾಗಲಿ ಕೊಡದೆ ಈಗ ಅವರನ್ನು ಅಸಮರ್ಥರೆಂದು ಹೇಳಿದುದು ಪರಮಾಶ್ಚರ್ಯಕರವಾಗಿದೆ.

ಇದಾದಮೇಲೆ, ಮೂರು ವರ್ಷಗಳು ಕಳೆದುಹೋದುವು. ಮಹಾರಾಜರು ಸುಮ್ಮನೆ ಕಾಲಯಾಪನೆಮಾಡುತ್ತಿರಲಿಲ್ಲ; ಹಿಡಿದ ಕೆಲಸವನ್ನು ಸಾಧಿಸತಕ್ಕುದೇ ಅವರ ಸ್ವಭಾವ. "ನಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ" ಎಂಬ ಲೋಕೋಕ್ತಿಯನ್ನು ಅರಿತಿದ್ದ ಮಹಾರಾಜರು ತಮ್ಮ ದೃಢ ಸಂಕಲ್ಪವನ್ನು ಬಿಡಲಿಲ್ಲ. ಆತ್ಮಶಕ್ತಿಯಲ್ಲಿ ಅವರಿಗೆ ಸಂಪೂರ್ಣವಾದ ಭರವಸೆಯಿತ್ತು; ಭಗವಂತನಲ್ಲಿ ನಂಬುಗೆಯಿತ್ತು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅವರಿಗೆ ಅಚಲವಾದ ಗೌರವಾದರಗಳು ತುಂಬಿದ್ದುವು. ರಾಜ್ಯವು ಮಹಾರಾಜರ ಕೈತಪ್ಪಿಹೋಗಿ ೧೭ ವರ್ಷಕಾಲವಾಗುತ್ತಾಬಂದಿತು. ಆಗ ಲಾರ್ಡ್ ಡಾಲ್‌ಹೌಸಿಯವರು ಇಂಡಿಯಾ ದೇಶದಲ್ಲಿ ಗವರ್ನರ್ ಜನರಲ್‌ರವರಾಗಿದ್ದರು. ಅವರು ದೇಶೀಯ ಸಂಸ್ಥಾನಗಳನ್ನು ಯಾವುದಾದರೊಂದು ನೆಪದಿಂದ ಕಂಪೆನಿಯ ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಯೋಚಿಸಿದ್ದರು. ಅಂಥ ಸಮಯದಲ್ಲಿ ಮಹಾರಾಜರು ತಮ್ಮ ಆಕಾಂಕ್ಷೆಯನ್ನು ಸೂಚಿಸಿ ಗವರ್ನರ್ ಜನರಲ್‌ರವರಿಗೆ ಒಂದು ಖರೀತವನ್ನು ಬರೆದರು. ಎಷ್ಟು ದಿನಗಳಾದರೂ ಅವರಿಗೆ ಪ್ರತ್ಯುತ್ತರವೇ ಬರಲಿಲ್ಲ.

ಔರಸ ಸಂತಾನವಿಲ್ಲದ ರಾಜ, ಮಹಾರಾಜರುಗಳ ರಾಜ್ಯಗಳನ್ನು ಡಾಲ್‌ಹೌಸಿಯವರು ಕಂಪೆನಿ ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಿದ್ದುದರಿಂದ ಭರತಖಂಡದ ರಾಜಮನೆತನಗಳವರಲ್ಲಿ ಅಸಮಾಧಾನವೂ, ರಾಜಭಕ್ತಿಯುತರಾದ ಪ್ರಜೆಗಳ ಮನಸ್ಸಿನಲ್ಲಿ ಅಶಾಂತಿಯೂ ಮೂಡಿದುವು. ಸತಾರ, ನಾಗಪುರ, ಝಾನ್ಸಿ—ಮುಂತಾದ ಚರಿತ್ರಾರ್ಹವಾದ ಅನೇಕ ರಾಜ್ಯಗಳು ಕಂಪೆನಿ ಸರ್ಕಾರದ ಆಡಳಿತಕ್ಕೆ ಒಳಗಾದುವು. ಇದರಿಂದ ಮಹಾರಾಜರ ಮನೋರಥವು ಈಡೇರಬಹುದೆಂಬ ಆಸೆಯು ದೂರವಾದಂತಾಯಿತು. ಹೀಗಿರಲಾಗಿ, ಲಾರ್ಡ್ ಡಾಲ್‌ಹೌಸಿಯವರು ಆರೋಗ್ಯಲಾಭಕ್ಕಾಗಿ ನೀಲಗಿರಿಗೆ ಬಂದಿದ್ದಾರೆಂದು ತಿಳಿದು ಮಹಾರಾಜರು ಅವರನ್ನು ಗೌರವಪೂರ್ವಕವಾಗಿ ಆಹ್ವಾನಿಸಿ, ಮೈಸೂರಿಗೆ ಬಂದು ಹೋಗಬೇಕೆಂದು ಕೇಳಿಕೊಂಡರು. ಡಾಲ್‌ಹೌಸಿಯವರು ಮಹಾರಾಜರ ಆಹ್ವಾನವನ್ನು ಪ್ರೀತಿಪೂರ್ವಕವಾಗಿ ಗೌರವಿಸಿ, ಮೈಸೂರಿಗೆ ಬಂದರು. ಆದರೇನು! ಅವರು ಬಂದುದರಿಂದ ಮೈಸೂರು ದೇಶದ ದುರದೃಷ್ಟವನ್ನೇನೂ ತೊಡೆದುಹಾಕಲಿಲ್ಲ: ಅವರಿಂದ ಯಾವುದೊಂದು

ಅನುಕೂಲವೂ ಆಗಲಿಲ್ಲ. ಮಹಾರಾಜರು ರಾಜವೈಭವ, ಗೌರವಗಳಿಗನುಗುಣವಾಗಿ ಲಾರ್ಡ್ ಡಾಲ್‌ಹೌಸಿಯವರನ್ನು ಸತ್ಕರಿಸಿ ಬೀಳ್ಕೊಟ್ಟರು.

“ಟೀಪೂಸುಲ್ತಾನನ ಮರಣಾನಂತರ ರಾಜ್ಯವನ್ನು ಮಹಾರಾಜರಿಗೆ ವಹಿಸಬಾರದಾಗಿತ್ತು. ಈಗ ಮಹಾರಾಜರಿಗೆ ೬೦ ವರ್ಷ ವಯಸ್ಸಾಗಿದೆ. ಅವರಿಗೆ ಔರಸಪುತ್ರ ಸಂತಾನವಿಲ್ಲ. ಅವರು ದತ್ತಪುತ್ರನನ್ನಾಗಲಿ ಸ್ವೀಕರಿಸಿಲ್ಲ, ಅಥವಾ ದತ್ತುಮಾಡಿಕೊಳ್ಳಬೇಕೆಂಬ ಮನೋಭಾವವನ್ನೂ ಅವರು ವ್ಯಕ್ತಪಡಿಸಿಲ್ಲ. ಹಿಂದೆ ಕಂಪೆನಿ ಸರ್ಕಾರದವರಿಗೂ ಮಹಾರಾಜರಿಗೂ ನಡೆದ ಕರಾರಿನಲ್ಲಿ ವಾರಸುದಾರರ ಅಥವಾ ಉತ್ತರಾಧಿಕಾರಿಗಳ ಪ್ರಸ್ತಾವವೇ ಇಲ್ಲ. ಮಹಾರಾಜರ ತರುವಾಯ ಮೈಸೂರು ದೇಶವನ್ನು ಬ್ರಿಟಿಷ್ ಪ್ರಾಂತಕ್ಕೆ ಸೇರಿಸಿಕೊಳ್ಳಬೇಕು” ಎಂದು ಡಾಲ್‌ಹೌಸಿಯವರು ತಮ್ಮ ಖಚಿತವಾದ ಅಭಿಪ್ರಾಯವನ್ನು ಬರೆದಿಟ್ಟರು.

ಮಹಾರಾಜರು ಡಾಲ್‌ಹೌಸಿಯವರ ಮನೋಗತವನ್ನು ಅರಿತು ಕೆಲವು ಕಾಲ ತಟಸ್ಥರಾಗಿಬಿಟ್ಟರು. ಆದರೂ, ಅವರು ತಮ್ಮ ರಾಜ್ಯವನ್ನು ಪುನಃ ಪಡೆಯಬೇಕೆಂಬ ದೃಢಸಂಕಲ್ಪವನ್ನು ಬಿಟ್ಟಿರಲಿಲ್ಲ. ದೈವಯೋಗದಿಂದ ಕಾಲಗತಿಯು ಅನುಕೂಲವಾಗುತ್ತಾ ಬಂದಿತು. ಮರು ವರ್ಷವೇ ಲಾರ್ಡ್ ಡಾಲ್‌ಹೌಸಿಯವರು ಇಂಗ್ಲೆಂಡಿಗೆ ಹೊರಟುಹೋದಮೇಲೆ, ಲಾರ್ಡ್ ಕ್ಯಾನಿಂಗ್‌ರವರು ಗವರ್ನರ್ ಜನರಲ್‌ರವರಾಗಿ ಬಂದರು. ಅವರು ಅಧಿಕಾರವನ್ನು ವಹಿಸಿಕೊಂಡ ಪ್ರಾರಂಭದಲ್ಲಿಯೇ, ಇಂಡಿಯಾ ದೇಶದಲ್ಲಿ ದೊಡ್ಡ ದಂಗೆಯೆದ್ದಿತು. ಅದಕ್ಕೆ ಸಿಪಾಯಿದಂಗೆಯೆಂದು ಹೆಸರು. ಆ ದಂಗೆಗೆ ನಾನಾರಾಯನೆಂಬುವನು ಮುಖಂಡನಾಗಿದ್ದನು. ಹಿಂದೂಸ್ಥಾನದಲ್ಲಿ ಎಲ್ಲಿ ನೋಡಿದರೂ ಅನೇಕ ಯುದ್ಧಗಳೂ, ದೊಂಬಿಗಳೂ, ಗಲಭೆಗಳೂ ನಡೆದು ಬ್ರಿಟಿಷ್ ಸರ್ಕಾರವನ್ನು ನಡುಗಿಸಿಬಿಟ್ಟುವು. ಇಂಡಿಯಾ ದೇಶವು ಇಂಗ್ಲಿಷರ ಕೈತಪ್ಪಿಹೋಗುವುದೆಂಬ ಸಂಶಯವುಂಟಾಯಿತು. ಆ ಸಮಯದಲ್ಲಿ ಮಹಾರಾಜರು ಮೈಸೂರು ದೇಶದಲ್ಲಿ ಯಾವ ವಿಧವಾದ ಅಸಮಾಧಾನಕ್ಕೂ ಅವಕಾಶ ಕೊಡಲಿಲ್ಲ ಮತ್ತು ತಮ್ಮ ದೇಶದ ಫೌಜನ್ನು ಬ್ರಿಟಿಷಿನವರ ಸಹಾಯಕ್ಕಾಗಿ ಕಳುಹಿಸಿದರು. ಆ ದಂಗೆಯ ಕಾಲದಲ್ಲಿ ನೀಲಗಿರಿಯಿಂದ

ಬಳ್ಳಾರಿಗೆ ಬಹು ತ್ವರಿತವಾಗಿ ಹೋಗಲು ಬಂದಿದ್ದ ಇಂಗ್ಲಿಷ್ ಸೈನ್ಯಕ್ಕೆ ಮಹಾರಾಜರು ತಮ್ಮ ಸ್ವಂತ ಸಿಬ್ಬಂದಿಯ ಸಹಾಯವನ್ನು ಕೊಟ್ಟು ಶತ್ರು ತಂತ್ರಗಳಿಗೆ ಸ್ವಲ್ಪವೂ ಆಸ್ಪದವಾಗದಂತೆ ಬ್ರಿಟಿಷ್ ಸರ್ಕಾರದವರಿಗೆ ತಮ್ಮಿಂದ ಸಾಧ್ಯವಾದ ಒತ್ತಾಸೆಯನ್ನೆಲ್ಲಾ ಮನಃಪೂರ್ವಕವಾಗಿ ಸಲ್ಲಿಸಿದರು. ಇಂಗ್ಲಿಷರು ಬಹಳ ಸಾಹಸಪಟ್ಟು ರಾಜ್ಯವನ್ನು ಸಮಾಧಾನಸ್ಥಿತಿಗೆ ತಂದರು. ಆಗ ಮೈಸೂರಿನಲ್ಲಿ ಕಮಿಷನರವರಾಗಿದ್ದ ಸರ್ ಮಾರ್ಕ್‌ಕಬ್ಬನ್‌ಅವರು ಮಹಾರಾಜರು ಮಾಡಿದ ಉಪಕಾರವನ್ನು ಪ್ರಶಂಸಿಸಿ ಗವರ್ನರ್ ಜನರಲ್‌ರವರಿಗೆ ಬರೆದರು. ಆಗ ಲಾರ್ಡ್ ಕ್ಯಾನಿಂಗ್‌ರವರು ಮಹಾರಾಜರು ವ್ಯಕ್ತಪಡಿಸಿದ ಸ್ನೇಹಸೌಹಾರ್ದತೆಗಳನ್ನೂ ಮಾಡಿದ ಉಪಕಾರಗಳನ್ನೂ ಶ್ಲಾಘಿಸಿ ಮಹಾರಾಜರಿಗೆ ಅಭಿನಂದನಾಪತ್ರವನ್ನು ಬರೆದುದಲ್ಲದ, ಆ ವಿಷಯವನ್ನು ಇಂಗ್ಲೆಂಡಿನಲ್ಲಿದ್ದ ಸೆಕ್ರಿಟರಿ ಆಫ್ ಸ್ಟೇಟ್‌ರವರಿಗೂ ಪತ್ರಮೂಲಕ ಶ್ರುತಪಡಿಸಿದರು.

ನಾನಾರಾಯನ ದಂಗೆಯು ಅಡಗಿಹೋದಮೇಲೆ ಇಂಡಿಯಾ ದೇಶದ ಆಡಳಿತಗಳು ಕಂಪೆನಿಯ ಸರ್ಕಾರದವರ ಕೈ ತಪ್ಪಿ, ಇಂಗ್ಲೆಂಡ್ ದೇಶದ ರಾಜರ ಅಧಿಕಾರಕ್ಕೆ ನೇರವಾಗಿ ಒಳಪಡುವಂತಾಯಿತು. ಆಗ ವಿಕ್ಟೋರಿಯಾ ಮಹಾರಾಜ್ಞಿಯವರು ಭರತಖಂಡದ ಚಕ್ರವರ್ತಿನಿಯವರಾದರು. ಚಕ್ರವರ್ತಿನಿಯವರು ಒಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿ, ದೇಶೀಯ ಸಂಸ್ಥಾನಗಳ ವಿಚಾರದಲ್ಲಿ ನಿರ್ದಿಷ್ಟವಾದ ರೀತಿನೀತಿಗಳನ್ನ ವ್ಯಕ್ತಪಡಿಸಿದರು. ವಂಶಪಾರಂಪರ್ಯವಾಗಿ ಬಂದ ದೇಶೀಯ ರಾಜ, ಮಹಾರಾಜರುಗಳು ತಮ್ಮ ತಮ್ಮ ಸಂಸ್ಥಾನಗಳನ್ನು ತಾವೇ ಪರಿಪಾಲನೆಮಾಡಿಕೊಂಡು ಬರಬಹುದೆಂದೂ ದತ್ತಪುತ್ರರ ಹಕ್ಕನ್ನು ಇಂಗ್ಲೆಂಡ್ ಸರ್ಕಾರದವರು ಅಂಗೀಕರಿಸುವರೆಂದೂ ಮಹಾರಾಜ್ಞಿಯವರು ಉದ್ಘೋಷಿಸಿದರು.

ಆಗ, ಮಹಾರಾಜರು ಮೈಸೂರು ಅರಮನೆಯಲ್ಲಿ ದರ್ಬಾರನ್ನು ನಡೆಯಿಸಿ ಮಹಾರಾಜ್ಞಿಯವರ ಪ್ರಸಿದ್ಧಪತ್ರಿಕೆಯನ್ನು ನೆರೆದಿದ್ದ ಸಾಮಾಜಿಕರ ಮುಂದೆ ಓದಿಸಿದರು. ಮಹಾರಾಜರ ಆಶಾಭರವಸೆಗಳು ನೆರವೇರುವ ಶುಭ ಸೂಚನೆಗಳು ಕಂಡುಬಂದವು. ಆದರೆ, ದತ್ತು ಸ್ವೀಕಾರಮಾಡಿ

ಕೊಳ್ಳುವುದಕ್ಕೆ ಸಂಬಂಧಪಟ್ಟ 'ಸರ್ಕ್ಯುಲರ್' ಇತರ ರಾಜ, ಮಹಾರಾಜರುಗಳಿಗೆ ಬಂದಿದ್ದರೂ ಮಹಾರಾಜರಿಗೆ ಮಾತ್ರ ಬಂದಿರಲಿಲ್ಲ. ಆಗ ರಾಜ್ಯಾಡಳಿತಗಳನ್ನು ಸ್ವತಃ ನಡೆಯಿಸುತ್ತಿದ್ದ ರಾಜ ಮಹಾರಾಜರುಗಳಿಗೆ ಮಾತ್ರ ಆ ಸರ್ಕ್ಯುಲರ್ ಅನ್ವಯಿಸತಕ್ಕುದೆಂಬ ಅಭಿಪ್ರಾಯವಿದ್ದಿತು. ಲಾರ್ಡ್ ಡಾಲ್‌ಹೌಸಿಯವರು ಬರೆದಿಟ್ಟಿದ್ದ ಅಭಿಪ್ರಾಯಕ್ಕನುಸಾರವಾಗಿ ಲಾರ್ಡ್ ಕ್ಯಾನಿಂಗ್‌ರವರು ಮಹಾರಾಜರಿಗೆ ಸರ್ಕ್ಯುಲರ್ ಕಳುಹಿಸಿರಲಿಲ್ಲವೆಂಬುದು ಸ್ಪಷ್ಟವಾಗಿದೆ. ಇದರ ಜೊತೆಗೆ ಲಾರ್ಡ್ ಕ್ಯಾನಿಂಗ್‌ರವರು ಮೈಸೂರು ಸಂಸ್ಥಾನವನ್ನು ಮದ್ರಾಸ್ ಆಧಿಪತ್ಯಕ್ಕೆ ಸೇರಿಸಿಕೊಳ್ಳುವುದು ವಿಹಿತವಾಗಿದೆಯೆಂದು ಸೂಚಿಸಿ ಸ್ಟೇಟ್ ಸೆಕ್ರೆಟೆರಿಯವರಿಗೆ ಪತ್ರ ಬರೆದರು. ಇಂಗ್ಲೆಂಡ್ ಸರ್ಕಾರದವರು ಆ ಸಲಹೆಯನ್ನು ಒಪ್ಪಲಿಲ್ಲ. ಇದನ್ನು ತಿಳಿದು ಮಹಾರಾಜರು ಪುನಃ ತಮ್ಮ ನ್ಯಾಯಸಮ್ಮತವಾದ ಹಕ್ಕನ್ನು ಸಾಧಿಸಿ, ರಾಜ್ಯವನ್ನು ತಮಗೆ ವಹಿಸಿಕೊಡಬೇಕೆಂದು ಲಾರ್ಡ್ ಕ್ಯಾನಿಂಗ್‌ರವರಿಗೆ ಖರೀತವನ್ನು ಬರೆದರು. ಹದಿಮೂರು ತಿಂಗಳಾದರೂ ಯಾವುದೊಂದು ಉತ್ತರವೂ ಬರಲಿಲ್ಲ. ಲಾರ್ಡ್ ಕ್ಯಾನಿಂಗ್‌ರವರು ತಮ್ಮ ಅಧಿಕಾರವನ್ನು ಬಿಟ್ಟು ಹೊರಡುವಾಗ ಮಹಾರಾಜರಿಗೆ ಉತ್ತರವನ್ನು ಬರೆದು ಅವರ ಇಷ್ಟವನ್ನು ಈಡೇರಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ತರುವಾಯ, ಲಾರ್ಡ್ ಎಲಿಗಿನ್‌ರವರು ಗವರ್ನರ್ ಜನರಲ್‌ರವರಾಗಿ ಬಂದರು.

ಮಹಾರಾಜರಿಗೆ ವಯಸ್ಸಾಗುತ್ತಾ ಬಂದಿತು. ಆದರೂ ಅವರಲ್ಲಿದ್ದ ಸ್ಫೂರ್ತಿ, ಅಸಾಧಾರಣವಾದ ಧೈರ್ಯ, ಅಸದೃಶವಾದ ಕಾರ್ಯಪಟುತ್ವ ಮತ್ತು ಸಾಮ್ರಾಜ್ಯ ಸರ್ಕಾರದವರಲ್ಲಿದ್ದ ಪ್ರೀತಿ ವಿಶ್ವಾಸಗಳು ಮಾತ್ರ ಎಳ್ಳಷ್ಟೂ ಕಡಮೆಯಾಗಿರಲಿಲ್ಲ. ಅವರು ತಮ್ಮ ನಿಶ್ಚಿತ ಕಾರ್ಯವನ್ನು ತ್ರಿಕರಣ ಶುದ್ಧಿಯಿಂದ ಸಾಧಿಸುತ್ತಲೇ ಬಂದರು; ಫಲಾಫಲಗಳು ದೈವಾನುಗ್ರಹವೆಂದು ಭಾವಿಸಿದರು. ಮೈಸೂರು ಸಂಸ್ಥಾನವು ಕಂಪೆನಿ ಸರ್ಕಾರದ ಆಡಳಿತಕ್ಕೆ ಸೇರಿ ೩೦ ವರ್ಷಗಳಾದುವು. ಮಹಾರಾಜರು ತಮ್ಮ ಧರ್ಮಯುದ್ಧವನ್ನು ಬಿಡದೆ ನಡೆಯಿಸುತ್ತಲೇ ಇದ್ದರು. ಆಗ ಇಂಡಿಯಾ ದೇಶದ ಸ್ಟೇಟ್ ಸೆಕ್ರೆಟೆರಿಯವರಾಗಿದ್ದ ಸರ್ ಚಾರ್ಲೆಸ್ ವುಡ್‌ರವರಿಗೆ ಮಹಾರಾಜರು ಲಾರ್ಡ್ ಎಲಿಗಿನ್‌ರವರ ಮೂಲಕ ಅಪೀಲು ಮಾಡಿದರು. ಮಹಾರಾಜರ

ಹಕ್ಕುಬಾಧ್ಯತೆಗಳ ವಿಚಾರವಾಗಿ ಇಂಡಿಯಾ ಕೌನ್ಸಿಲ್ ಸಭೆಯಲ್ಲಿ ದೊಡ್ಡ ಚರ್ಚೆಯಾಗಿ ಮಹಾರಾಜರ ಹಕ್ಕನ್ನು ಸಭೆಯವರು ಬಹುಮತದಿಂದ ನಿರಾಕರಿಸಿಬಿಟ್ಟರು. ಆದರೆ ಇಂಡಿಯಾ ಕೌನ್ಸಿಲ್ ಸಭೆಯ ಸದಸ್ಯರುಗಳ ಪೈಕಿ ಸರ್ ಹೆನ್ರಿಮಾಂಟ್ಗೊಮೆರಿಯವರೂ, ಸರ್ ಫ್ರೆಡರಿಕ್‌ಕರಿಯವರೂ ಮತ್ತು ಸರ್ ಜಾರ್ಜ್ ವಿಲ್‌ಫ್‌ಬಿಯವರೂ ಮಹಾರಾಜರ ಹಕ್ಕನ್ನು ಸಾಧಿಸಿ ಬಹಳ ಯುಕ್ತಿಯುಕ್ತವಾಗಿ ವಾದಿಸಿ ಬ್ರಿಟಿಷ್ ಅಧಿಕಾರಿಗಳ ಮನೋಧರ್ಮವು ಸರಿಯಾದುದಲ್ಲವೆಂದು ಬಹು ಸ್ಪಷ್ಟವಾಗಿ ಮಾತನಾಡಿದರು. ಅದರಿಂದ ಏನೊಂದೂ ಪ್ರಯೋಜನವಾಗಲಿಲ್ಲ. ಮಹಾರಾಜರಿಗೆ ವಿರುದ್ಧವಾದ ಫಲಿತಾಂಶವೇ ಲಭಿಸಿತು !

ಸ್ಟೇಟ್ ಸೆಕ್ರಿಟೆರಿಯವರು ಕೌನ್ಸಿಲಿನ ತೀರ್ಮಾನವನ್ನು ಸೂಚಿಸಿ ಬರೆದಿದ್ದ ಖರೀತವನ್ನು ಆಗ ಮೈಸೂರು ದೇಶದಲ್ಲಿ ಕಮಿಷನರವರಾಗಿದ್ದ ಬೌರಿಂಗ್‌ರವರು ಮಹಾರಾಜರಿಗೆ ತಲುಪಿಸಲು ಅರಮನೆಗೆ ಹೋದರು. ಆಗ ಮಧ್ಯಾಹ್ನ ಒಂದು ಘಂಟೆಯ ಸಮಯ. ಅರಮನೆಯಲ್ಲಿ ಮಹಾರಾಜರ ಜೊತೆಯಲ್ಲಿ ಬಕ್ಷಿ ನರಸಪ್ಪನೂ ಕಮಿಷನರವರ ಸೆಕ್ರೆಟರಿ ಎ. ಸಿ. ಹೇ ಅವರೂ ಇದ್ದರು. ಬೌರಿಂಗ್‌ರವರು ಖರೀತವನ್ನು ಮಹಾರಾಜರ ಕೈಗೆ ಕೊಟ್ಟು, ಅವರ ಸಮೀಪದಲ್ಲಿಯೇ ಕುಳಿತುಕೊಂಡರು. ಅವರು ಆ ಖರೀತವನ್ನು ಕೈಗೆ ತೆಗೆದುಕೊಂಡು ಕ್ಷಣಕಾಲ ಮೌನದಿಂದಿದ್ದರು. ಆಮೇಲೆ, ಆ ಖರೀತದ ದಾರಗಳನ್ನು ಬಿಚ್ಚಲು ತೊಡಗಿದಾಗ, ಆ ದಾರದ ಗಂಟುಗಳು ಸಲೀಸಾಗಿ ಬಿಚ್ಚಿಕೊಳ್ಳದಿರುವುದನ್ನು ನೋಡಿ, ಬೌರಿಂಗ್‌ರವರು ಎದ್ದುಬಂದು ಮಹಾರಾಜರ ಕೈಯಿಂದ ಖರೀತವನ್ನು ತೆಗೆದುಕೊಂಡು ತಮ್ಮ ಖಡ್ಗಧಾರೆಯಿಂದ ಕುಟ್ಟಿಹಾಕಿ, ಪುನಃ ಅದನ್ನು ಮಹಾರಾಜರ ಕೈಗೆ ಕೊಟ್ಟರು. ಅವರು ಅದನ್ನು ಬೌರಿಂಗ್‌ರವರ ಕೈಗೆ ಕೊಟ್ಟು ಆ ಖರೀತವನ್ನು ವಿವರಿಸಿ ತಿಳಿಸಬೇಕೆಂದು ಕೇಳಿದರು. ತಮಗೆ ವ್ಯತಿರಿಕ್ತವಾದ ತೀರ್ಮಾನವಾಗಿರುವುದನ್ನು ಕೇಳಿ ಮಹಾರಾಜರು ಸ್ತಬ್ಧರಾದರು. ಕೂಡಲೇ ಅವರು ಆ ಖರೀತವನ್ನು ತಮ್ಮ ತಲೆಯಮೇಲಿರಿಸಿಕೊಂಡು “ನಾವು ಈ ತೀರ್ಮಾನವನ್ನು ಶಿರಸಾವಹಿಸಿದ್ದೇವೆ. ಆದರೆ, ಇಂಡಿಯಾ ಕೌನ್ಸಿಲಿನವರು ನ್ಯಾಯವನ್ನು ಸಂಪೂರ್ಣವಾಗಿ ಕೈಬಿಟ್ಟಿರುತ್ತಾರೆ. ಬ್ರಿಟಿಷ್ ಸರ್ಕಾರದವರು ತಮ್ಮ

ಶಾಶ್ವತವಾದ ಕೀರ್ತಿಯನ್ನೂ, ಪ್ರಜಾವಿಶ್ವಾಸವನ್ನೂ ಉಳಿಸಿಕೊಳ್ಳುವ ದೃಷ್ಟಿಯಿಂದ ವಂಶಪಾರಂಪರ್ಯವಾಗಿ ಬಂದ ರಾಜ್ಯವನ್ನೂ, ಸಿಂಹಾಸನವನ್ನೂ ನಾವು ಐದು ವರ್ಷದ ಮಗುವಾಗಿದ್ದಾಗ ನಮಗೆ ವಹಿಸಿಕೊಟ್ಟರು. ಅಂಥ ನ್ಯಾಯಸ್ವರೂಪರಾದ ಬ್ರಿಟಿಷ್ ಸರ್ಕಾರದವರು ಈಗ ಪ್ರಜಾವಿಶ್ವಾಸಕ್ಕೆ ಭಂಗಬರುವಹಾಗೆಯೂ, ಅದರಿಂದ ಅಪವಾದ ಭಾಜನರಾಗುವಂತೆಯೂ ವರ್ತಿಸಿರುವುದನ್ನು ನೋಡಿ, ನಮಗೆ ಆಶ್ಚರ್ಯವಾಗುತ್ತದೆ. ನ್ಯಾಯವಿರುವದೇ ನಿಜವಾದರೆ ನಮ್ಮ ಹಕ್ಕುಬಾಧ್ಯತೆಗಳು ನಮಗೆ ತಪ್ಪಿಹೋಗುವುವೆಂಬ ಭಯಕ್ಕೆ ಲೇಶವೂ ಅವಕಾಶವಿಲ್ಲ. ನಮ್ಮ ಧರ್ಮಬದ್ಧವಾದ ಹಕ್ಕುಗಳನ್ನು ಒಂದು ಅಧಿಕಾರವರ್ಗದವರು ತಿರಸ್ಕರಿಸಿದರೂ ಆ ಹಕ್ಕುಗಳನ್ನು ಸ್ಥಾಪಿಸಿಕೊಳ್ಳುವ ಉದ್ದೇಶದಿಂದ ನಾವು ಇನ್ನೂ ಮೇಲ್ಪಟ್ಟ ಅಧಿಕಾರವರ್ಗದವರ ತೀರ್ಮಾನಕ್ಕೆ ನಮ್ಮ ವಿವಾದವನ್ನು ಒಪ್ಪಿಸಲು ಹಿಂದೆಗೆಯುವುದಿಲ್ಲ. ಅನೂಚಾನವಾಗಿ ನಮ್ಮ ವಂಶೀಯರು ಆಳಿದ ಈ ರಾಜ್ಯವನ್ನು ಒಂದು ದೇಶೀಯ ಸಂಸ್ಥಾನವಾಗಿಯೇ ಉಳಿಸಿಕೊಂಡುಬಂದು ನಮ್ಮ ವಂಶಜರೇ ಆಳಬೇಕೆಂಬುದು ನಮ್ಮ ಸತ್ಯಸಂಕಲ್ಪ" ಎಂಬುದಾಗಿ ಗದ್ಗದ ಕಂಠದಿಂದ ನುಡಿದರು.

ನಿರುತ್ಸಾಹದ ಕಾರ್ಮೋಡಗಳು ಕವಿದಾಗಲೂ, ಮಹಾರಾಜರು ಸಮತೆಗೆಡುತ್ತಿರಲಿಲ್ಲ; ತಾಳ್ಮೆ ತಪ್ಪುತ್ತಿರಲಿಲ್ಲ. ಅವರು ಸದಾ ಆಶಾವಾದಿಗಳಾಗಿದ್ದರು. "ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ" ಎಂಬ ಭಗವದ್ವಾಕ್ಯದಂತೆ, ಮಹಾರಾಜರು ನಿರಾಶೆಯಿಂದ ಅಳುಕದೆ ಪುನಃ ಪುನಃ ಪ್ರಯತ್ನ ಮಾಡತೊಡಗಿದರು. ಕೆಲವು ದಿನಗಳ ತರುವಾಯ ಅವರು ಬೌರಿಂಗ್‌ರವರಿಗೆ ಒಂದು ಕಾಗದವನ್ನು ಬರೆದು " ನಾವು ಒಬ್ಬ ಪುತ್ರನನ್ನು ದತ್ತುಮಾಡಿಕೊಳ್ಳುತ್ತೇವೆ. ಆ ಕುಮಾರನೇ ಮುಂದೆ ನಮ್ಮ ರಾಜ್ಯಕ್ಕೆ ಉತ್ತರಾಧಿಕಾರಿಯಾಗುತ್ತಾನೆ. ಬ್ರಿಟಿಷ್ ಸರ್ಕಾರದವರು ನಮ್ಮ ಸಂಸ್ಥಾನವನ್ನು ಸಾಮ್ರಾಜ್ಯ ಮಹಾಸಾಗರದಲ್ಲಿ ಮುಳುಗಿಸದೆ ಎಂದಿನಂತೆಯೇ ಒಂದು ದೇಶೀಯ ಸಂಸ್ಥಾನವಾಗಿರುವಂತೆ ಏರ್ಪಡಿಸಬೇಕಾದುದು ಅವಶ್ಯಕವಾಗಿದೆ"ಎಂದು ಸೂಚಿಸಿದ್ದರು. ಬೌರಿಂಗ್‌ರವರು ಆ ಪತ್ರವನ್ನು ಆಗ ಗವರ್ನರ್ ಜನರಲ್‌ರವರಾಗಿದ್ದ ಸರ್ ಜಾರ್ಜ್ ಬಾರ್ಲೋಸ್‌ರವರಿಗೆ ಕಳುಹಿಸಿಕೊಟ್ಟರು. ಅವರು ಮಹಾರಾಜರ

ಅಭಿಪ್ರಾಯವನ್ನು ಅನುಮೋದಿಸಿ, "ಮಹಾರಾಜರು ಪುತ್ರ ಸ್ವೀಕಾರಮಾಡಿಕೊಳ್ಳುವ ವಿಚಾರದಲ್ಲಿ ಬ್ರಿಟಿಷ್ ಸರ್ಕಾರದವರ ಅಭ್ಯಂತರವೇನೂ ಇಲ್ಲ. ಆದರೆ, ಸ್ವೀಕೃತಪುತ್ರನು ಮಹಾರಾಜರ ಸ್ವಂತ ಆಸ್ತಿಗೆ ಮಾತ್ರ ಹುಕ್ಕುದಾರನಾಗಬಹುದೇ ಹೊರತು, ಮೈಸೂರು ಸಿಂಹಾಸನದ ಹಕ್ಕುದಾರನಾಗಲು ಅವಕಾಶವಿಲ್ಲ" ಎಂಬುದಾಗಿ ತಿಳಿಸಿದರು. ಆಗ ಸ್ಟೇಟ್ ಸೆಕ್ರಿಟೆರಿಯವರಾಗಿದ್ದ ಸರ್ ಚಾರ್ಲೆಸ್ ವುಡ್‌ರವರೂ ಅದೇ ರೀತಿಯಾಗಿ ಅಭಿಪ್ರಾಯಪಟ್ಟರು.

ಆಗ ಡಾಕ್ಟರ್ ಕ್ಯಾಂಬಲ್ ಎಂಬುವರು ಮಹಾರಾಜರ ದರ್ಬಾರ್ ಸರ್ಜನ್‌ರವರಾಗಿದ್ದರು. ಅವರು ರಜವನ್ನು ಪಡೆದು ವಿಲಾಯಿತಿಗೆ ಹೋಗಿ ಅಲ್ಲಿ ಕೆಲವು ಕಾಲವಿದ್ದಾಗ, ಸ್ಟೇಟ್ ಸೆಕ್ರಿಟೆರಿಯವರನ್ನು ಅನೇಕ ಸಲ ಸಂದರ್ಶಿಸಿ, ಮಹಾರಾಜರ ಪರವಾಗಿ ಎಲ್ಲ ವಿಷಯಗಳನ್ನು ಬಹಳ ಕೂಲಂಕಷವಾಗಿ ವಿವರಿಸಿ ಹೇಳಿದ್ದರು. ಆದರಿಂದ ಸ್ಟೇಟ್ ಸೆಕ್ರಿಟೆರಿಯವರಿಗೆ ಮೈಸೂರಿನ ವಿದ್ಯಮಾನಗಳೆಲ್ಲಾ ಪರಿಷ್ಕಾರವಾಗಿ ಗೊತ್ತಾದರೂ, ಅವರಿಂದ ಏನೂ ಪ್ರಯೋಜನವಾಗಲಿಲ್ಲ ಮತ್ತು ಅವರು ತಮ್ಮ ಮನಸ್ಸನ್ನು ಬದಲಾಯಿಸಲೂ ಇಲ್ಲ. ಆದರೆ, ಚಾರ್ಲೆಸ್ ವುಡ್‌ರವರು ಮಹಾರಾಜರಿಗೆ ಬಹುಮಾನವಾಗಿ ಕೊಡುವಂತೆ ಹೇಳಿ, ಕ್ಯಾಂಬಲ್‌ರವರ ಸಂಗಡ ಪ್ರಿನ್ಸ್ ಆಫ್ ವೇಲ್ಸ್‌ರವರ ಒಂದು ಭಾವಚಿತ್ರವನ್ನೂ ಒಂದು ಗಡಿಯಾರವನ್ನೂ ಮತ್ತು ಇತರ ಕೆಲವು ಅಮೂಲ್ಯವಾದ ವಸ್ತುಗಳನ್ನೂ ಕೊಟ್ಟು ಕಳುಹಿಸಿದರು. ಡಾಕ್ಟರು ವಿಲಾಯಿತಿಯಿಂದ ಹಿಂತಿರುಗಿ ಬಂದು, ಆ ಬಹುಮಾನ ವಸ್ತುಗಳನ್ನು ಮಹಾರಾಜರಿಗೆ ಒಪ್ಪಿಸಲು ಬೌರಿಂಗ್‌ರವರ ವಶಕ್ಕೆ ಕೊಟ್ಟರು. ಆಗ ಮಹಾರಾಜರಿಗೆ ೭೦ನೆಯ ವರ್ಷದ ವರ್ಧಂತಿಮಹೋತ್ಸವವು ನಡೆಯುತ್ತಿತ್ತು. ಆ ದಿನದ ದರ್ಬಾರಿನಲ್ಲಿ ಬೌರಿಂಗ್‌ರವರು ಆ ಪಾರಿತೋಷಿಕಗಳನ್ನು ಮಹಾರಾಜರಿಗೆ ಒಪ್ಪಿಸಿದರು. ಅವರು ಅತ್ಯಂತ ಗೌರವಪೂರ್ವಕವಾಗಿ ಆ ಉಡುಗೊರೆಯನ್ನು ಸ್ವೀಕರಿಸಿ ಆನಂದಪಟ್ಟರು. ತಮ್ಮ ಧರ್ಮಯುದ್ಧವನ್ನು ಕ್ರಮಬದ್ಧವಾದ ರೀತಿಯಲ್ಲಿ ಇನ್ನು ಮುಂದೆಯೂ ನಡೆಯಿಸುವುದಾಗಿ ತಿಳಿಸಿದರು.

ಡಾಕ್ಟರ್ ಕ್ಯಾಂಬಲ್ ಅವರು ಇಂಗ್ಲೆಂಡಿನಿಂದ ಹಿಂದಿರುಗಿ ಬಂದಮೇಲೆ ಮಹಾರಾಜರ ಪ್ರಯತ್ನಗಳು ಫಲದಾಯಕವಾಗುವ ಶುಭಚಿಹ್ನೆಗಳು ಕಂಡು



ಆಗಾ ಅಲೀ ಅಸ್ಗರ್ ಅವರು

ಬರುತ್ತಿದ್ದುವು. ಮಹಾರಾಜರ ವಿಷಯವಾಗಿ ಆಸಕ್ತಿಯಿಂದ ಕೆಲಸಮಾಡಲು ಕ್ಯಾಂಬಲ್‌ರವರು ಇಂಗ್ಲೆಂಡಿನಲ್ಲಿದ್ದ ತಮ್ಮ ಅನೇಕ ಮಿತ್ರರಿಗೆ ತಿಳಿಸಿದ್ದರು. ಮೈಸೂರು ದೇಶದ ಪ್ರಜೆಗಳೂ ಮಹಾರಾಜರ ವಿಷಯದಲ್ಲಿ ರಾಜಭಕ್ತಿಯುತರಾಗಿ ಕೆಲಸಮಾಡಲು ತಾವಾಗಿಯೇ ಮುಂದೆ ಬಂದಿದ್ದರು. ಆಗ ವಿಲಾಯಿತಿಯಲ್ಲಿ ಪ್ರಕಟವಾಗುತ್ತಿದ್ದ "ಎಡಿಂಬರೋ ರಿವ್ಯೂ" ಎಂಬ ಪತ್ರಿಕೆಯಲ್ಲಿ ಮಹಾರಾಜರ ವಿಷಯವಾಗಿ ಒಂದು ಲೇಖನ ಪ್ರಕಟವಾಯಿತು. ಒಡೆಯರ ಹಕ್ಕುಬಾಧ್ಯತೆಗಳನ್ನು ಸಮರ್ಥಿಸಿ ಆ ಪತ್ರಿಕೆಯು ಪ್ರಕಟಿಸಿದ್ದ ಸಮಂಜಸವಾದ ಲೇಖನದಿಂದ ಬ್ರಿಟಿಷ್ ಅಧಿಕಾರಿಗಳ ಮನಸ್ಸಿನಲ್ಲಿದ್ದ ಅನೇಕ ತಪ್ಪು ಅಭಿಪ್ರಾಯಗಳು ಅಳಿಸಿಹೋದುವು. ಮಹಾರಾಜರು ದತ್ತು ತೆಗೆದುಕೊಳ್ಳತಕ್ಕ ಪುತ್ರರಿಗೆ ರಾಜ್ಯದ ಹಕ್ಕನ್ನು ಕೊಡಬೇಕೆಂದು ಕೋರಿ, ಮೈಸೂರು ನಗರದ ಪ್ರಜೆಗಳೂ ಮತ್ತು ಸುತ್ತಮುತ್ತಣ ಗ್ರಾಮಗಳವರೂ ೭,೩೪೫ ಜನರು ರುಜುಮಾಡಿದ ಒಂದು ಅರ್ಜಿಯನ್ನು ವೈಸ್ರಾಯ್‌ರವರಿಗೆ ಕಳುಹಿಸಿಕೊಟ್ಟರು. ಆ ಅರ್ಜಿಗೆ ಮೈಸೂರು ದೇಶದಲ್ಲಿದ್ದ ಇಂಗ್ಲಿಷಿನವರೂ ರುಜು ಮಾಡಿದ್ದರು. ಇದರಂತೆಯೇ ಇನ್ನೂ ಅನೇಕ ಅರ್ಜಿಗಳು ದೇಶದ ನಾನಾ ಭಾಗಗಳಿಂದಲೂ ವೈಸ್ರಾಯ್‌ರವರಿಗೆ ಬರುತ್ತಿದ್ದುವು. ನಾನಾಭಾಯಿ ನಸರವಾಂಜೀ ಎಂಬ ಪಾರ್ಸೀ ದೊಡ್ಡ ಮನುಷ್ಯರೊಬ್ಬರು ಪ್ರಜೆಗಳ ಮುಖಂಡರಾಗಿ ಸಾಮ್ರಾಜ್ಯ ಸರ್ಕಾರದವರೊಂದಿಗೆ ಪತ್ರವ್ಯವಹಾರ ನಡೆಯಿಸುತ್ತಿದ್ದರು.

ಮೈಸೂರು ಸಂಸ್ಥಾನದಲ್ಲಿ ಈಗ ದಿವಾನರವರಾಗಿರುವ ಅಮೀನ್-ಉಲ್-ಮುಲ್ಕ್, ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಒ.ಬಿ.ಇ., ಅವರ ತಾತಂದಿರಾದ ಅಗಾ ಅಲೀ ಆಸ್ಕರ್‌ರವರು ಮಹಾರಾಜರಿಗೆ ಆಪ್ತ ಮಿತ್ರರಾಗಿದ್ದರು. ಅಲೀ ಆಸ್ಕರ್‌ರವರು ಅತ್ಯಂತ ಸ್ವಾಮಿಭಕ್ತಿಯುಳ್ಳವರಾಗಿದ್ದುಕೊಂಡು ಮಹಾರಾಜರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಆಸ್ಕರ್‌ಅವರು ಶ್ರೀಮಂತ ಸಂಸಾರದಲ್ಲಿ ಹುಟ್ಟಿದವರು. ಈ ಕುಟುಂಬದವರು ಇರಾನ್ ದೇಶದಿಂದ ಬಹಳ ಕಾಲಕ್ಕೆ ಹಿಂದೆಯೇ ಬಂದು ಮೈಸೂರಿನಲ್ಲಿ ನೆಲೆಸಿದ್ದರು. ಅಲೀ ಆಸ್ಕರ್‌ರವರು ಮೈಸೂರು ದೇಶದಲ್ಲಿ ಗಣ್ಯರಾದ ವರ್ತಕರಾಗಿದ್ದರು. ಅಶ್ವಲಕ್ಷಣ ಪರೀಕ್ಷೆಯಲ್ಲಿ ಅವರು ಅತ್ಯಂತ ಪ್ರವೀಣರೆಂದು ಹೆಸರುಗೊಂಡಿದ್ದರು. ಅವರು ದೈವಭಕ್ತರು, ಸರಳ ಹೃದಯರು,

ಸ್ನೇಹಪರರು, ಸತ್ಕುಲ ಪ್ರಸೂತರು; ತುಂಬು ಸಂಸಾರದಲ್ಲಿ ಸುಖಿಸುತ್ತಿದ್ದ ಅದೃಷ್ಟವಂತರು. ಅವರಿಗೆ ಐದು ಮಂದಿ ಸತ್ಪುತ್ರರಿದ್ದರು. ಅವರಲ್ಲಿ ಆಗಾಜಾರ್ ಎಂಬುವರು ಹಿರಿಯ ಕುಮಾರರು. ಇವರೇ ಸರ್ ಮಿರ್ಜಾರವರ ಪೂಜ್ಯ ಪಿತೃವರ್ಯರು.

ಆಲೀ ಆಸ್ಕರ್‌ರವರು ಆಗ ಕಮಿಷನರಾಗಿದ್ದ ಸರ್ ಮಾರ್ಕ್ ಕಬ್ಬ ರವರಿಗೆ ಪರಮಮಿತ್ರರಾಗಿದ್ದರು. ಅವರು ಪ್ರಭು ಪ್ರೀತಿಗೆ ಪಾತ್ರರಾಗಿದ್ದು ದಲ್ಲದೆ, ಬ್ರಿಟಿಷ್ ಸರ್ಕಾರದವರ ಗೌರವಾದರಗಳಿಗೂ ಭಾಗಿಗಳಾಗಿದ್ದರು. ಮಹಾರಾಜರು ಆಲೀ ಆಸ್ಕರ್‌ರವರಲ್ಲಿಟ್ಟಿದ್ದ ನಂಬುಗೆಯು ಅಚಲವಾದುದು: ಪ್ರೇಮವು ಅವ್ಯಾಜವಾದುದು. ಮುಮ್ಮಡಿ ಶ್ರೀ ಕೃಷ್ಣರಾಜ ಭೂಪಾಲರು ಬ್ರಿಟಿಷ್ ಸರ್ಕಾರದವರೊಂದಿಗೆ ಧರ್ಮಯುದ್ಧವನ್ನು ನಡೆಯಿಸುತ್ತಿದ್ದ ಕಾಲದಲ್ಲಿ ಆಲೀ ಆಸ್ಕರ್‌ರವರು ಮಹಾರಾಜರಿಗೆ ನಿರ್ವಂಚನೆಯಿಂದ ಸೇವೆ ಸಲ್ಲಿಸಿದರು. ವಿಲಾಯಿತಿಯಲ್ಲಿ ಡಾಕ್ಟರ್ ಕ್ಯಾಂಬಲ್‌ರವರು ಮಹಾರಾಜರ ಪರವಾಗಿ ವ್ಯವಹಾರ ನಡೆಯಿಸುತ್ತಿದ್ದಂತೆಯೇ, ಆಸ್ಕರ್‌ರವರು ಬಹಳ ಜಾಣ್ಮೆಯಿಂದಲೂ ಶ್ರದ್ಧಾಸಕ್ತಿಗಳಿಂದಲೂ ಇಲ್ಲಿ ಪ್ರಭುಸೇವಾ ನಿರತರಾಗಿದ್ದರು. ಮಹಾರಾಜರು ಇಂಗ್ಲೆಂಡಿನಲ್ಲಿದ್ದ ಡಾಕ್ಟರ್ ಕ್ಯಾಂಬಲ್‌ರವರಿಗೂ, ಇತರ ಮಿತ್ರರಿಗೂ ಆಗಿನ ವಿದ್ಯಮಾನಗಳಿಗೆ ಸಂಬಂಧಪಟ್ಟ ಕಾಗದಗಳನ್ನು ಬರೆದು, ಆಸ್ಕರ್‌ರವರಿಗೆ ಕೊಡುತ್ತಿದ್ದರೂ ಅವರು ಆ ರಾಜಕಾರ್ಯ ಸಂಬಂಧವಾದ ಕಾಗದ ಪತ್ರಗಳನ್ನು ಮೈಸೂರು ಗಡಿಯ ಹೊರಗಿರುವ ಹೊಸೂರಿಗೆ ತೆಗೆದುಕೊಂಡು ಹೋಗಿ, ಅಲ್ಲಿ ಅಂಚೆಗೆ ರವಾನಿಸುತ್ತಿದ್ದರು. ಮಹಾರಾಜರ ಆಪ್ತಮಿತ್ರರಲ್ಲಿ ಆಲೀ ಆಸ್ಕರ್‌ರವರೂ ಒಬ್ಬರು. ಒಡೆಯರು ಯಾವುದೊಂದು ಗುರುತರವಾದ ಕಾರ್ಯದಲ್ಲಿಯೂ, ಸಂದಿಗ್ಧ ಸಮಯದಲ್ಲಿಯೂ ಆಲೀ ಆಸ್ಕರ್‌ರವರ ಸಲಹೆಯನ್ನು ಕೇಳುತ್ತಿದ್ದರು.

ಪ್ರಭುಸೇವೆಯಲ್ಲಿ ಕೃತಕೃತ್ಯರೆನ್ನಿಸಿಕೊಂಡ ಆಲೀ ಆಸ್ಕರ್‌ರವರ ಕುಮಾರರಾದ ಆಗಾ ಜಾರ್‌ರವರು ಸಹ ಅತ್ಯಂತ ದಕ್ಷತೆಯಿಂದಲೂ ಸ್ವಾಮಿಭಕ್ತಿಯಿಂದಲೂ ರಾಜಸೇವೆಯಲ್ಲಿ ನಿರತರಾಗಿದ್ದರು. ಅವರು ಆಳಿದ ಮಹಾಸ್ವಾಮಿಯವರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಅಂಗರಕ್ಷಕರಾಗಿದ್ದರು. ಆಮೇಲೆ ಮಹಾಮಾತೃಶ್ರೀ ರೀಜೆಂಟ್‌ರವರ ಕಾಲದಲ್ಲಿಯೂ,

ಆಳುವ ಮಹಾಸ್ವಾಮಿಯವರ ಸನ್ನಿಧಿಯಲ್ಲಿಯೂ ಬಹಳಕಾಲ ಸೇವೆಮಾಡಿ ಧನ್ಯರಾದರು! ಇಂಥ ಪ್ರಭುಭಕ್ತಿಪರಾಯಣರ ಕುಟುಂಬದಲ್ಲಿಯೇ ಈಗಿನ ದಿವಾನರವರು ಜನ್ಮ ತಾಳಿರುವುದು. ಸರ್ ಮಿರ್ಜಾರವರು ತಮ್ಮ ಹಿರಿಯರಂತೆಯೇ ದೇಶಪ್ರೇಮಿಗಳೂ, ಪ್ರಭುಸೇವಾನಿರತರೂ, ಸಹೃದಯರೂ. ಪ್ರಜಾವತ್ಸಲರೂ ಆಗಿರುತ್ತಾರೆ.

ಮೈಸೂರು ಸಂಸ್ಥಾನದ ನೆರೆಹೊರೆಯ ಪ್ರಾಂತಗಳಲ್ಲಿದ್ದ ರಾಜನೀತಿಜ್ಞರೂ ಮಹಾರಾಜರ ಪರವಾಗಿ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಮದ್ರಾಸ್ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ಮಾನ್ಯಮಹನೀಯರಾದ ಗಾಜುಲು ಲಕ್ಷ್ಮೀನರಸುಚೆಟ್ಟಿ ಎಂಬುವರು "ಕ್ರೆಸೆಂಟ್" ಎಂಬ ಪತ್ರಿಕೆಯಲ್ಲಿ ಶಕ್ತಿಯುತವಾದ ಒಂದು ಲೇಖನವನ್ನು ಬರೆದರು. ಮಹಾರಾಜರ ಹಕ್ಕುಬಾಧ್ಯತೆಗಳನ್ನು ಬ್ರಿಟಿಷ್ ಸರ್ಕಾರದವರು ಒಪ್ಪಿಕೊಳ್ಳಬೇಕಾದುದು ಧರ್ಮವೆಂದು ಅವರು ಆ ಲೇಖನದಲ್ಲಿ ತಿಳಿಸಿದ್ದರು. ಲಕ್ಷ್ಮೀನರಸುಚೆಟ್ಟಿಯವರು ಕಾರ್ಯಗೌರವದಿಂದ ಮೈಸೂರಿಗೆ ಬಂದಿದ್ದಾಗ ಅರಮನೆಯಲ್ಲಿ ಮಹಾರಾಜರನ್ನು ಭೇಟಿ ಮಾಡಿ ಒಡೆಯರು ಒಬ್ಬ ಪುತ್ರನನ್ನು ದತ್ತುಮಾಡಿಕೊಳ್ಳುವುದು ಸರ್ವೋತ್ತಮವಾದುದೆಂದು ಅವರಿಗೆ ಸಲಹೆ ಮಾಡಿದರು. ಮಹಾರಾಜರಿಗೆ ರಾಜ್ಯವನ್ನು ಹಿಂದಕ್ಕೆ ಕೊಡುವ ವಿಷಯವು ತೀರ್ಮಾನವಾಗುವವರೆಗೂ, ಅವರು ದತ್ತು ಮಾಡಿಕೊಳ್ಳುವುದಿಲ್ಲವೆಂದು ಎಲ್ಲರೂ ತಿಳಿದಿದ್ದರು.

"ಇಂಗ್ಲೆಂಡಿನಲ್ಲಿರುವ ಬ್ರಿಟಿಷ್ ಸರ್ಕಾರದವರಿಂದ ನಮಗೆ ನ್ಯಾಯ ದೊರೆಯದೇ ಇದ್ದಲ್ಲಿ, ನಾವು ನಮ್ಮ ವಿವಾದವನ್ನು ಬ್ರಿಟಿಷ್ ಪಾರ್ಲಿಮೆಂಟಿನವರ ಪರ್ಯಾಲೋಚನೆಗೆ ಒಪ್ಪಿಸುತ್ತೇವೆ. ಅಲ್ಲದೆ ನಮಗೆ ಪರಮಮಿತ್ರರೂ ಹಿತೈಷಿಗಳೂ ಆಗಿರುವ ಡಾಕ್ಟರ್ ಕ್ಯಾಂಬಲ್‌ರವರನ್ನು ನಮ್ಮ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಕಳುಹಿಸಿಕೊಡುತ್ತೇವೆ. ಅವರು ಅಲ್ಲಿ ನಮ್ಮ ಪರವಾಗಿ ಆವಶ್ಯಕವಾದ ಎಲ್ಲ ಸಂದರ್ಭಗಳಲ್ಲಿಯೂ ಭಾಗಿಗಳಾಗುವರು" ಎಂಬುದಾಗಿ ಸೂಚಿಸಿ ಮಹಾರಾಜರು ವೈಸ್ರಾಯ್‌ರವರಿಗೆ ಒಂದು ಖರೀತವನ್ನು ಬರೆದು ಅದನ್ನು ಶೀಘ್ರವಾಗಿಯೇ ಇಂಗ್ಲೆಂಡಿಗೆ ಕಳುಹಿಸಿಕೊಡಬೇಕೆಂದು ತಿಳಿಸಿದರು. ವೈಸ್ರಾಯ್‌ರವರು ಆ ಖರೀತವನ್ನು ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸಿಕೊಟ್ಟಿರುವುದಾಗಿ ಕೆಲವು ದಿನಗಳಲ್ಲಿಯೇ ಮಹಾರಾಜರಿಗೆ ಉತ್ತರವೂ ಬಂದಿತು.

ಹನ್ನೊಂದನೆಯ ಅಧ್ಯಾಯ

ಪುತ್ರ ಸ್ವೀಕಾರ, ಪಾರ್ಲಿಮೆಂಟಿನವರ ತೀರ್ಮಾನ

" ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ "

[ಭಗವದ್ಗೀತೆ

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರಿಗೆ ೭೧ ವರ್ಷವಾಗುತ್ತಾ ಬಂತು. ಅವರ ದೇಹಾರೋಗ್ಯವು ದಿನದಿನಕ್ಕೆ ಕಡಮೆಯಾಗುತ್ತಿತ್ತು. ಇಂಗ್ಲೆಂಡಿನಲ್ಲಿದ್ದ ಕ್ಯಾಂಬಲ್‌ರವರು ಅಲ್ಲಿನ ವಿದ್ಯಮಾನಗಳನ್ನು ಅವರಿಗೆ ಆಗಾಗ ತಿಳಿಸುತ್ತಿದ್ದರಲ್ಲದೆ, ಮಹಾರಾಜರು ಆದಷ್ಟು ಜಾಗ್ರತೆಯಾಗಿಯೇ ಪುತ್ರ ಸ್ವೀಕಾರಮಾಡಿಕೊಳ್ಳುವುದು ಅನುಕೂಲವೆಂದೂ ತಿಳಿಸಿದ್ದರು. ಆಗ ಮಹಾರಾಜರು ತಮ್ಮ ಅಂತರಂಗ ಮಿತ್ರರಾದ ಬಕ್ಷಿನರಸಪ್ಪ, ಕೋಲಾರದ ಬಿ. ಕೃಷ್ಣ ಅಯ್ಯಂಗಾರ್ ಮತ್ತು ಎಸ್. ವೆಂಕಟವರದ ಅಯ್ಯಂಗಾರ್ ಎಂಬುವರನ್ನೂ ಇತರ ಕೆಲವು ಹಿತೈಷಿಗಳನ್ನೂ ಕರೆಯಿಸಿ, ಅರಮನೆಯಲ್ಲಿ ಅವರೊಡನೆ ರಹಸ್ಯವಾಗಿ ಆಲೋಚನೆಮಾಡಿ, ಒಬ್ಬ ಪುತ್ರನನ್ನು ದತ್ತು ಮಾಡಿಕೊಳ್ಳುವುದು ಸೂಕ್ತವೆಂದು ನಿರ್ಧರಿಸಿದರು. ಮಹಾರಾಜರು ದತ್ತು ತೆಗೆದುಕೊಳ್ಳುವ ವಿಚಾರವು ಮೈಸೂರು ದೇಶದಲ್ಲಿದ್ದ ಇಂಗ್ಲಿಷ್ ಅಧಿಕಾರಿಗಳಿಗೂ ಮತ್ತು ವೈಸ್‌ರಾಯರವರಿಗೂ ಸಮ್ಮತವಾಗಿ ಕಾಣದಿರಬಹುದೆಂದು ತಿಳಿದು ಪುತ್ರಸ್ವೀಕಾರಸಮಾರಂಭಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನೂ ಗೋಪ್ಯವಾಗಿ ನಡೆಯಿಸುವಂತೆ ಏರ್ಪಾಟು ಮಾಡಿದರು.

ಮಹಾರಾಜರ ೭೧ನೆಯ ವರ್ಷ ವರ್ಧಂತಿ ಮಹೋತ್ಸವವು ಮರುದಿನ ನಡೆಯಬೇಕಾಗಿದ್ದುದರಿಂದ, ತತ್ಪೂರ್ವವಾಗಿ ನಡೆಯಬೇಕಾದ ಆಯುಷ್ಹೋಮ ಸಂಬಂಧವಾದ ಕಾರ್ಯಗಳಿಗೆ ಪ್ರಾತಃಕಾಲ ಅರಮನೆಗೆ ಬರಬೇಕೆಂದು ಮೈಸೂರು ಪಟ್ಟಣದ ಎಲ್ಲ ಪಂಗಡಗಳ ಮುಖ್ಯ ಮುಖ್ಯ ಜನರಿಗೂ

ಆಹ್ವಾನಪತ್ರಿಕೆಗಳನ್ನು ಕಳುಹಿಸಿದರು. ಅದರಂತೆಯೇ, ಪ್ರಾತಃಕಾಲದಲ್ಲಿ ಎಲ್ಲರೂ ಬಂದು ಅರಮನೆಯ ಅಂಬಾವಿಲಾಸದಲ್ಲಿ ಸೇರಿದರು. ಮಹಾರಾಜರು ಸಭೆಯ ಮಧ್ಯದಲ್ಲಿ ಭದ್ರಾಸನದಮೇಲೆ ಕುಳಿತಿದ್ದರು. ಪುರೋಹಿತರೂ ವೈದಿಕರೂ ಶಾಸ್ತ್ರಕರ್ಮಗಳನ್ನು ಯಥಾವಿಧಿಯಾಗಿ ಜರುಗಿಸುತ್ತಿದ್ದರು. ತರುವಾಯ ಮಹಾರಾಜರು ಎದ್ದು "ಸಭಾಸದರೇ, ನಮಗೆ ಔರಸ ಸಂತಾನವಿಲ್ಲವೆಂಬ ಸಂಗತಿ ನಿಮಗೆಲ್ಲಾ ತಿಳಿದೇ ಇದೆ. ಅನೂಚಾನವಾಗಿ ನಡೆದುಕೊಂಡು ಬಂದಿರುವ ಈ ನಮ್ಮ ಯದುವಂಶದಲ್ಲಿ ಇಂದು ಸಂತಾನವಿಲ್ಲದಂತಾಗಿದೆ. ಈ ನಮ್ಮ ಸದ್ವಂಶದಲ್ಲಿ ಹಿಂದೆ ಯದುರಾಯರು, ರಾಜ ಒಡೆಯರು, ಕಂಠೀರವ ನರಸರಾಜ ಒಡೆಯರು, ಚಿಕ್ಕ ದೇವರಾಜ ಒಡೆಯರು, ಮುಂತಾದ ಮಹಾ ಪರಾಕ್ರಮಿಗಳೂ, ಸತ್ಯಸಂಧರೂ ಜನ್ಮವೆತ್ತಿ ಪ್ರಜಾವರ್ಗವನ್ನು ರಕ್ಷಿಸಿ ಶಾಶ್ವತ ಕೀರ್ತಿಯನ್ನು ಗಳಿಸಿದರು. ಈಗ ನಮಗೆ ಮಕ್ಕಳಿಲ್ಲದಿರುವುದರಿಂದ ಮುಂದೆ ರತ್ನಸಿಂಹಾಸನವನ್ನು ಹತ್ತುವ ಅವಕಾಶವೇ ನಮ್ಮ ವಂಶಜರಿಗೆ ತಪ್ಪಿಹೋಗತಕ್ಕ ಕಾಲ ಬಂದಿದೆ. ನಮಗೆ ಈಗಾಗಲೇ ೭೧ ವರ್ಷ ಕಳೆಯಿತು; ಪುತ್ರಸಂತಾನವಾಗುವುದೆಂಬ ನಂಬುಗೆಯೂ ತಪ್ಪಿತು. ಮುಂದೆ ಪ್ರಭುವಾಗತಕ್ಕ ಕುಮಾರನೊಬ್ಬನನ್ನು ದತ್ತು ಮಾಡಿಕೊಳ್ಳಬೇಕೆಂಬ ಅಪೇಕ್ಷೆ ನಮಗಿದೆ. ಇಲ್ಲವಾದರೆ, ರಾಜ್ಯವು ಅನ್ಯಾಕ್ರಾಂತವಾಗುವುದು. ಅಲ್ಲದೆ, ಅಪುತ್ರಸ್ಯ ಗತಿರ್ನಾಸ್ತಿ ಎಂದು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಈ ವಿಚಾರದಲ್ಲಿ ನಿಮ್ಮೆಲ್ಲರ ಸಲಹೆಯನ್ನೂ ತಿಳಿಸಬೇಕಾಗಿದೆ" ಎಂದು ಹೇಳಿ, ಉಕ್ಕಿಬರುತ್ತಿದ್ದ ಕಣ್ಣೀರನ್ನು ಒರಸಿಕೊಳ್ಳುತ್ತಾ ಗಂಭೀರ ಭಾವದಿಂದ ಭದ್ರಾಸನದಲ್ಲಿ ಮಂಡಿಸಿದರು.

"ಮಹಾಸ್ವಾಮಿಯವರು ಸತ್ಕುಲಪ್ರಸೂತರಾದ ಪುತ್ರರೊಬ್ಬರನ್ನು ದತ್ತುಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕ; ಇದು ಸಮಸ್ತ ಪ್ರಜೆಗಳಿಗೂ ಸಮ್ಮತವಾಗಿದೆ" ಎಂದು ಸಭಿಕರೆಲ್ಲರೂ ಏಕವಾಕ್ಯತೆಯಿಂದ ಹೇಳಿದರು. ಮಹಾರಾಜರು ತಮಗೆ ಇಷ್ಟಬಂದವರನ್ನು ದತ್ತು ಮಾಡಿಕೊಳ್ಳಬೇಕೆಂದು ಹೇಳಿ ಸಭಿಕರು ಅದರ ಭಾರವನ್ನು ಪ್ರಭುಗಳಿಗೇ ಬಿಟ್ಟುಬಿಟ್ಟರು. ಆಗ ಮಹಾರಾಜರು "ಯದುವಂಶದ ಸಮೀಪಬಂಧುಗಳಾದ ಬೆಟ್ಟದ ಕೋಟೆ ಮನೆತನದ ಕತ್ತಿ ಗೋಪಾಲರಾಜೇ ಅರಸಿನವರ ಕುಮಾರರಾದ ದೊಡ್ಡ

ಕೃಷ್ಣೇಅರಸಿನವರ ಪುತ್ರರಾದ ಚಿಕ್ಕ ಕೃಷ್ಣೇಅರಸಿನವರ ತೃತೀಯ ಪುತ್ರನನ್ನು ದತ್ತು ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ್ದೇವೆ. ಆ ಮಗುವಿಗೆ ಈಗ ಸುಮಾರು ಮೂರುವರ್ಷ ವಯಸ್ಸು. ಚಿಕ್ಕ ಕೃಷ್ಣೇಅರಸಿನವರು ಬದುಕಿದ್ದಾಗ ಈ ಮಗುವನ್ನು ನಮಗೆ ದತ್ತು ಮಾಡಿಕೊಡಬೇಕೆಂದು ಕೇಳಿದ್ದೆವು. ಅವರು ಆದರಂತೆಯೇ ಮಾತುಕೊಟ್ಟಿದ್ದರು. ದುರದೃಷ್ಟವಶದಿಂದ ಚಿಕ್ಕ ಕೃಷ್ಣೇ ಅರಸಿನವರು ಕೆಲವು ದಿನಗಳಲ್ಲಿಯೇ ಕಾಲವಾದರು. ಈ ಮಗುವನ್ನು ನಾವು ಕೇಳಿದರೆ ನಮಗೆ ದತ್ತು ಮಾಡಿಕೊಡಬೇಕೆಂದು ಅವರು ತಮ್ಮ ಅವಸಾನಕಾಲದಲ್ಲಿ ಅವರ ಧರ್ಮಪತ್ನಿ ದೇವಾಜಮ್ಮಣ್ಣಿಯವರಿಗೂ ಹೇಳಿದ್ದರು. ಈ ಮಗುವು ಜನಿಸಿರುವ ವಂಶವು ಸರ್ವೋತ್ತಮವಾದುದು ನಮ್ಮ ಪಿತಾಮಹಿಯರಾದ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಜನಿಸಿದ ವಂಶದಲ್ಲಿಯೇ ಈ ಕುಮಾರನು ಜನ್ಮಧಾರಣೆಮಾಡಿರುತ್ತಾನೆ ಸಮಸ್ತ ರಾಜಲಕ್ಷ್ಮಣ ಸಂಪನ್ನನಾಗಿ ಒಪ್ಪುತ್ತಿರುವ ಈ ಮಗುವನ್ನು ದತ್ತು ಮಾಡಿಕೊಳ್ಳುತ್ತೇವೆ. ಅವರು ಮುಂದೆ ನಮಗೆ ಪುತ್ರರಾಗಿರುವುದೂ ಅಲ್ಲದೆ, ರತ್ನ ಸಿಂಹಾಸನದ ಉತ್ತರಾಧಿಕಾರಿಯೂ ಆಗಿರುತ್ತಾರೆ. ಅವರೇ ನಿಮ್ಮೆಲ್ಲರ ಪ್ರಭುವೂ ಆಗತಕ್ಕವರು" ಎಂದು ಹೇಳಿ, ತೆರೆಯ ಹಿಂದುಗಡೆಗೆ ಹೋಗಿ, ಅಲ್ಲಿ ಅರಮನೆಯ ರಾಣಿವಾಸದವರೊಂದಿಗೆ ಕುಳಿತಿದ್ದ ದೇವಾಜಮ್ಮಣ್ಣಿಯವರ ತೊಡೆಯಮೇಲೆ ಆಡುತ್ತಿದ್ದ ಮಗುವನ್ನು ಎತ್ತಿಕೊಂಡು ಬಂದು ಸಭೆಯವರಿಗೆ ದರ್ಶನಮಾಡಿಸಿದರು. ಸಭಿಕರೆಲ್ಲರೂ ಎದ್ದುನಿಂತು ಆನಂದಬಾಷ್ಪಗಳನ್ನು ಸುರಿಸುತ್ತಾ ಸುಲಕ್ಷಣವಾದ ಮಗುವನ್ನು ಕಣ್ಣಾರೆ ನೋಡಿ ಅತ್ಯಾನಂದಪಟ್ಟರು. ಆಗ ಮಹಾರಾಜರು "ನಾವು ಈ ಮಗುವಿನ ತಾಯಿಯ ಸಮ್ಮತಿಯನ್ನೂ, ನಿಮ್ಮೆಲ್ಲರ ಒಪ್ಪಿಗೆಯನ್ನೂ ಪಡೆದು ಈ ಮಗುವನ್ನು ದತ್ತು ಮಾಡಿಕೊಳ್ಳಲು ಅನುಮತಿಸುವಿರಾ!" ಎಂದು ಕೇಳಿದರು. ಮಹಾಜನರೆಲ್ಲರೂ "ತಥಾಸ್ತು" "ಶುಭಮಸ್ತು" ಎಂದರು. ಕೂಡಲೇ ಪುರೋಹಿತರು ಹೋಮಾದಿಕರ್ಮಗಳನ್ನು ಯಥಾಶಾಸ್ತ್ರವಾಗಿ ನೆರವೇರಿಸುತ್ತಿರಲು ಕೋಟೆಯ ಬತೇರಿಯಿಂದ ಗೌರವಸೂಚಕವಾದ ಫಿರಂಗಿಗಳು ಹಾರಿದುವು. ಆ ಶುಭ ಸಮಯದಲ್ಲಿ ಅರಮನೆಯ ಗುರುಗಳಾದ ಪರಕಾಲ ಮಠದ ಸ್ವಾಮಿಗಳೂ ಬಂದಿದ್ದರು. ಸ್ವೀಕೃತ ಪುತ್ರನಿಗೆ "ಚಾಮರಾಜೇಂದ್ರ ಒಡೆಯರು" ಎಂದು ನಾಮಕರಣ ಮಾಡಿದರು.

ಇನ್ನೂ ಕರ್ಮಾಂಗವಾಗಿ ಉಳಿದಿದ್ದ ಶಾಸ್ತ್ರಕಾರ್ಯಗಳು ನಡೆಯು ತ್ತಿರುವಾಗಲೇ ಮಹಾರಾಜರ ಇಷ್ಟಾನುಸಾರವಾಗಿ ಮೇಜರ್ ಎಲಿಯಟ್ ರವರು ಅರಮನೆಗೆ ಬಂದರು. ಎಲಿಯಟ್‌ರವರು ಅಷ್ಟಗ್ರಾಮ ಡಿವಿಜನಿನ ಸೂಪರಿಂಟೆಂಡೆಂಟರಾಗಿದ್ದರು ಮತ್ತು ಅರಮನೆಯ ಆಡಳಿತಗಳ ಮೇಲ್ವಿ ಚಾರಕರೂ ಆಗಿದ್ದರು. ಅವರು ಅರಮನೆಯ ಅಂಬಾವಿಲಾಸವನ್ನು ಪ್ರವೇಶಿಸಿ ದಾಗ, ಮಹಾರಾಜರು ವೈದಿಕ ಬ್ರಾಹ್ಮಣರ ಮಧ್ಯದಲ್ಲಿ ಕುಳಿತು ಶಾಸ್ತ್ರ ಕಾರ್ಯಗಳಲ್ಲಿ ನಿರತರಾಗಿದ್ದುದನ್ನೂ ಮತ್ತು ಅಲ್ಲಿ ಸೇರಿದ್ದ ಮಹಾಜನರ ಸಭೆಯನ್ನೂ ಕಂಡು ವಿಸ್ಮಿತರಾಗಿ ಉಚಿತಾಸನದಲ್ಲಿ ಕುಳಿತುಕೊಂಡರು. ಮಹಾರಾಜರು ದತ್ತಪುತ್ರನನ್ನು ತಮ್ಮ ಸಂಬಂಧಿಯೊಬ್ಬನ ಕೈಲಿ ಎತ್ತಿಸಿ ಕೊಂಡು, ಎಲಿಯಟ್‌ರವರ ಬಳಿಗೆ ಹೋಗಿ "ನಮಗೆ ಮಕ್ಕಳಿರಲಿಲ್ಲವಾದು ದರಿಂದ ಈ ಮಗುವನ್ನು ದತ್ತುಮಾಡಿಕೊಂಡಿದ್ದೇವೆ. ಈ ಕುಮಾರನು ಮುಂದೆ ನಮ್ಮ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಬೇಕಾಗಿದೆ" ಎಂದು ಹೇಳಿದರು. ವೈಸ್ರಾಯ್‌ರವರಿಗೂ ಮತ್ತು ಇತರರಿಗೂ ಬರೆದಿದ್ದ ಕಾಗದಗಳನ್ನೂ, ತಂತಿ ವರ್ತಮಾನಗಳನ್ನೂ ಎಲಿಯಟ್‌ರವರ ಕೈಗೆ ಕೊಟ್ಟರು. "ಇಲ್ಲಿ ನಮ್ಮ ಬಂಧುಬಳಗದವರೂ, ಎಲ್ಲ ಪಂಗಡಗಳ ಮುಖಂಡರೂ ಸೇರಿದ್ದಾರೆ. ಅವರೆಲ್ಲರ ಸಮ್ಮತಿಯಮೇರೆಗೆ ನಾವು ಪುತ್ರಸ್ವೀಕಾರ ಮಾಡಿಕೊಂಡಿದ್ದೇವೆ" ಎಂದು ಎಲಿಯಟ್‌ರವರಿಗೆ ತಿಳಿಸಿ, ಅವರ ಗೌರವಕ್ಕೆ ತಕ್ಕಂತೆ ಮನ್ನಣೆಮಾಡಿ ಕಳುಹಿಸಿಕೊಟ್ಟರು. ಅಂದಿನ ಕಾರ್ಯಗಳೆಲ್ಲಾ ಪರಿಸಮಾಪ್ತಿಯಾಗುವುದಕ್ಕೆ ಮುಂಚೆ, ಸಭಿಕರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಗಳನ್ನೂ, ಹೂವಿನ ಹಾರಗಳನ್ನೂ ಕೊಟ್ಟು ಮರ್ಯಾದಿಸಿದರು ದತ್ತು ಮಾಡಿಕೊಂಡ ವಿಚಾರವನ್ನು ಮಹಾರಾಜರು ಕಮಿಷನರ್‌ರವರಿಗೂ, ವೈಸ್ರಾಯ್‌ರವರಿಗೂ ಮತ್ತು ಸ್ಟೇಟ್ ಸೆಕ್ರೆಟರಿಯವರಿಗೂ ತಂತೀ ವರ್ತಮಾನ ಕಳುಹಿಸಿದರು. ಅಲ್ಲದೆ ನಡೆದ ಕಾರ್ಯಕ್ರಮಗಳನ್ನೆಲ್ಲಾ ಅನುಕೂಲಾಗ್ರವಾಗಿ ವಿವರಿಸಿ ವೈಸ್ರಾಯ್‌ರವರಿಗೆ ವರದಿಯನ್ನೂ ಬರೆದರು.

"ಯದುವಂಶಸಂಭವರಾದ ನಮಗೆ ಭಗವಂತನು ಒಬ್ಬ ಔರಸ ಪುತ್ರನನ್ನು ಕರುಣಿಸದಿರುವುದು ನಮ್ಮ ದೌರ್ಭಾಗ್ಯವೇ ಸರಿ. ನಾವು ಸುಪ್ರಸಿದ್ಧ ವಾದ ಮತ್ತು ಶ್ರೇಷ್ಠತಮವಾದ ನಮ್ಮ ವಂಶದ ಉತ್ತರೋತ್ತರಾಭಿ

ವೃದ್ಧಿಗಾಗಿಯೂ, ನಮ್ಮ ಸಂಸ್ಥಾನದ ಪ್ರಜಾ ಸಂರಕ್ಷಣಾರ್ಥವಾಗಿಯೂ ಈಗ ಒಬ್ಬ ಕುಮಾರನನ್ನು ದತ್ತು ತೆಗೆದುಕೊಳ್ಳಬೇಕಾದ ಸಂಭವವುಂಟಾಗಿರುವುದರಿಂದ, ಇದೇ ಶಾಲಿವಾಹನಶಕ ೧೭೮೮ನೆಯ ಕ್ರೋಧನನಾಮ ಸಂವತ್ಸರದ ಜ್ಯೇಷ್ಠ ಬಹುಳ ೧೦ ಭಾನುವಾರ (೧೮೬೫ನೆಯ ಇಸವಿ ಜೂನ್ ೧೮ನೆಯ ತಾರೀಖು) ದಿವಿ ೧೧ ಘಂಟೆ ಶುಭ ಮುಹೂರ್ತದಲ್ಲಿ ಸರ್ವಜನ ಸಮ್ಮತವಾಗಿಯೂ, ಶಾಸ್ತ್ರೋಕ್ತವಾಗಿಯೂ ಒಬ್ಬ ಪುತ್ರನನ್ನು ದತ್ತು ಮಾಡಿಕೊಂಡಿ ರುತ್ತೇವೆ. ಈಗ ನಾವು ದತ್ತು ಮಾಡಿಕೊಂಡಿರುವ ಬಾಲಕನು ನಮಗೆ ಅತ್ಯಂತ ಸಮೀಪ ಬಂಧುಗಳಾದ ಬೆಟ್ಟದಕೋಟೆ ಕತ್ತಿ ಗೋಪಾಲರಾಜ ಅರಸಿನವರ ಪುತ್ರಿಯರಾದ ಮತ್ತು ೧೮೪೯ನೆಯ ಇಸವಿಯಲ್ಲಿ ನಮಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ನಡೆದ ತಹನಾಮೆಗೆ ರುಜುಮಾಡಿರುವ ಮಹಾಮಾತೃಶ್ರೀ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ತಮ್ಮಂದಿರಾದ ಗೋಪಾಲರಾಜ ಅರಸಿನವರ ಮೊಮ್ಮಗ ಚಿಕ್ಕ ಕಷ್ಣೇ ಅರಸಿನವರ ಮೂರನೆಯ ಮಗನು. ಈ ದತ್ತ ಪುತ್ರರು ನಮ್ಮ ತರುವಾಯ ನಮ್ಮ ಸಂಸ್ಥಾನದ ಆಳ್ವಿಕೆಯ ಹಕ್ಕುಗಳಿಗೂ, ನಮ್ಮ ಸಿಂಹಾಸನಕ್ಕೂ ಉತ್ತರಾಧಿಕಾರಿಯಾಗಿರುತ್ತಾರೆ. ವೃದ್ಧಾಪ್ಯದ ದೆಸೆಯಿಂದ ನಾವು ಈ ಶುಭ ಸಮಾರಂಭವನ್ನು ಪ್ರತ್ಯೇಕವಾಗಿ ನಡೆಯಿಸುವಷ್ಟು ಅವಕಾಶವಿಲ್ಲದೆ ಹೋದುದಕ್ಕಾಗಿ ವಿಷಾದಿಸುತ್ತೇವೆ. ಆದರೆ ಈಗ ನಡೆಯಿಸಿರುವ ದತ್ತಸ್ವೀಕಾರ ಕರ್ಮವು ಯಾವ ರೀತಿಯಿಂದಲೂ ಲೋಪಯುಕ್ತವಾಗಿಲ್ಲ. ಈ ಪುತ್ರ ಸ್ವೀಕಾರ ಸಮಾರಂಭ ಮಹೋತ್ಸವಕ್ಕೆ ಪೂರ್ವಭಾವಿಯಾಗಿ ನಡೆದಿರುವ ಸಂಗತಿಯನ್ನು ತಮಗೆ ಸಂಕ್ಷೇಪವಾಗಿ ತಿಳಿಸುವುದು ಆವಶ್ಯಕವೆಂದು ಭಾವಿಸುತ್ತೇವೆ."

"ಸುಮಾರು ಮೂರು ವರ್ಷಗಳ ಹಿಂದೆ, ನಾವು ಒಂದು ದಿನ ಚಿಕ್ಕ ಕೃಷ್ಣೇ ಅರಸಿನವರ ಮನೆಗೆ ಹೋಗಿ, ಅವರನ್ನೂ ಅವರ ಧರ್ಮಪತ್ನಿ ದೇವಾಜಮ್ಮಣ್ಣಿಯವರನ್ನೂ ಹತ್ತಿರ ಕುಳ್ಳಿರಿಸಿಕೊಂಡು ಬಹಳ ಹಿಂದಿನಿಂದಲೂ ನಮಗೂ ಅವರಿಗೂ ಸಮೀಪ ಬಂಧುತ್ವ ನಡೆದುಕೊಂಡು ಬರುತ್ತಿರುವುದೆಂಬ ಅಂಶವನ್ನು ಅವರಲ್ಲಿ ಪ್ರಸ್ತಾವಿಸಿ, ನಮ್ಮ ವಂಶಾಭಿವೃದ್ಧ್ಯರ್ಥವಾಗಿ ಅವರ ಮಕ್ಕಳಲ್ಲಿ ಒಬ್ಬ ಮಗನನ್ನು ದತ್ತು ಮಾಡಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದೇವೆಂದು ತಿಳಿಸಿದೆವು. ಅದುವರೆಗೆ ಅವರಿಗೆ ಇಬ್ಬರು ಗಂಡುಮಕ್ಕಳಿದ್ದರು.

ಮತ್ತು ದೇವಾಜಮ್ಮಣ್ಣಿಯವರು ಆಗ ಗರ್ಭವತಿಯಾಗಿದ್ದರು. ನಮ್ಮ ಮಾತನ್ನು ಕೇಳಿ ಆ ದಂಪತಿಗಳು ಕೂಡಲೆ ಮನಃಪೂರ್ವಕವಾಗಿ ಒಪ್ಪಿಕೊಂಡು ನಾವು ಇಚ್ಛಿಸುವ ಕಾಲದಲ್ಲಿ ಯಾವ ಮಗುವನ್ನಾದರೂ ಸರಿಯೆ ನಮಗೆ ದತ್ತು ಮಾಡಿಕೊಡುವುದಾಗಿ ಅರಿಕೆ ಮಾಡಿಕೊಂಡಿದ್ದರು. ಕೆಲವು ದಿನಗಳ ಮೇಲೆ, ಚಿಕ್ಕ ಕೃಷ್ಣೇ ಅರಸಿನವರು ವಿಧಿವಶರಾದುದರಿಂದ ದೇವಾಜಮ್ಮಣ್ಣಿಯವರು ಅವರ ಮೂರನೆಯ ಮಗನನ್ನು ನಮಗೆ ದತ್ತು ಮಾಡಿಕೊಡುವುದಾಗಿ ಅರ್ಜಿ ಬರೆದುಕೊಂಡರು. ನಾವು ಈಗ ದತ್ತು ಮಾಡಿಕೊಂಡಿರುವ ಸುಮಾರು ಮೂರು ವರ್ಷದ ಮಗುವಿಗೆ ಚಾಮರಾಜೇಂದ್ರ ಒಡೆಯರ್ ಬಹಾದ್ದೂರ್ ರವರೆಂಬುದಾಗಿ ನಾಮಕರಣ ಮಾಡಿರುತ್ತೇವೆ."

"ಔರಸ ಪುತ್ರನು ತಂದೆಯ ಸಮಸ್ತ ಹಕ್ಕುಗಳಿಗೂ ಬಾಧ್ಯನಾಗಿರುವ ರೀತಿಯಲ್ಲಿಯೇ ಸ್ವೀಕೃತ ಪುತ್ರನೂ ದತ್ತು ಮಾಡಿಕೊಂಡ ತಂದೆಯ ಸಮಸ್ತ ಹಕ್ಕುಬಾಧ್ಯತೆಗಳಿಗೂ ಅರ್ಹನಾಗಿರುತ್ತಾನೆಂಬುದಾಗಿ ಹಿಂದೂ ಧರ್ಮಶಾಸ್ತ್ರಗಳಲ್ಲಿ ಉಕ್ತವಾಗಿದೆ. ಆದುದರಿಂದ ನಮಗೂ ಕಂಪೆನಿ ಸರ್ಕಾರದವರಿಗೂ ನಡೆದಿರುವ ಶ್ರೀರಂಗಪಟ್ಟಣದ ತಹನಾಮೆಯ ಮೇರೆಗೂ ಮತ್ತು ಅದೇ ವರ್ಷದಲ್ಲಿ ನಿಜಾಮರಿಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ನಡೆದಿರುವ ತಹನಾಮೆಯ ಮೇರೆಗೂ ನಮಗೆ ಯಾವಯಾವ ಹಕ್ಕುಬಾಧ್ಯತೆಗಳುಂಟಾಗಿವೆಯೋ, ಆ ಸಮಸ್ತ ಹಕ್ಕುಬಾಧ್ಯತೆಗಳೂ ನಮ್ಮ ಸ್ವೀಕೃತ ಕುಮಾರನಿಗೆ ಸಲ್ಲತಕ್ಕವುಗಳಾಗಿವೆಯೆಂಬ ಅಂಶವನ್ನು ತಾವು ದಯೆಯಿಟ್ಟು ಘನಹೊಂದಿದ ಮಹಾರಾಜ್ಞೀ ಚಕ್ರವರ್ತಿನಿಯವರ ಸ್ಟೇಟ್ ಸೆಕ್ರಿಟರಿಯವರ ಗಮನಕ್ಕೆ ತರಬೇಕೆಂದು ಬಿನ್ನವಿಸುತ್ತೇವೆ. ಈ ದಿನ ನಾವೂ ಸಹ ಎಲ್ಲ ಸಂಗತಿಗಳನ್ನು ಸ್ಟೇಟ್ ಸೆಕ್ರಿಟರಿಯವರಿಗೆ ತಂತೀ ವರ್ತಮಾನ ಕಳುಹಿಸಿರುತ್ತೇವೆ. ಬ್ರಿಟಿಷಿನವರು ಟೀಪೂ ಸುಲ್ತಾನನನ್ನು ಜಯಿಸಿ, ನಮ್ಮ ಹಕ್ಕನ್ನು ನಮಗೆ ಸಲ್ಲಿಸಿ ನಮ್ಮ ರಾಜ್ಯವನ್ನು ಪುನಃ ಸಂಸ್ಥಾಪಿಸಿದಂತೆಯೇ, ನಮ್ಮ ಸ್ವೀಕೃತ ಪುತ್ರನನ್ನು ಸಮಸ್ತ ಮಾನ ಮರ್ಯಾದೆಗಳಿಂದಲೂ, ಘನತೆ ಗೌರವಗಳಿಂದಲೂ ಕಾಪಾಡಿಕೊಂಡು ಬರುವುದಲ್ಲದೆ, ಶ್ರೀರಂಗಪಟ್ಟಣದ ತಹನಾಮೆಯಲ್ಲಿ ಕಂಡ ಕರಾರುಗಳ ಸಂಬಂಧವು ಆಚಂದ್ರಾರ್ಕವಾಗಿ ನಡೆದುಕೊಂಡು ಬರುವಂತೆ ಉಭಯ

ಪಕ್ಷದವರೂ ಬದ್ಧರಾಗಿರಬೇಕೆಂಬುದಾಗಿ ಬಿನ್ನವಿಸಿಕೊಳ್ಳುತ್ತೇವೆ" ಎಂಬ ಅರ್ಥ ಬರುವ ಖರೀತವನ್ನು ಬರೆದು, ಮಹಾರಾಜರು ವೈಸ್ರಾಯ್‌ರವರಾದ ಸರ್ ಜಾರ್ಜ್ ಲಾರ್ರೆನ್ಸ್, ಜಿ.ಸಿ.ಬಿ.,ಕೆ.ಎಸ್.ಐ., ಅವರಿಗೆ ಕಳುಹಿಸಿಕೊಟ್ಟರು. ಇದರಂತೆಯೇ ಅವರು ಇಂಗ್ಲೆಂಡಿನಲ್ಲಿದ್ದ ಅನೇಕ ಜನ ತಮ್ಮ ಆಪ್ತ ಮಿತ್ರರಿಗೂ, ಹಿತೈಷಿಗಳಿಗೂ ಪುತ್ರ ಸ್ವೀಕಾರ ವಿಚಾರವನ್ನು ಸೂಚಿಸಿ ಕಾಗದಗಳನ್ನು ಬರೆದರು. ಸ್ಟೇಟ್ ಸೆಕ್ರೆಟೆರಿಯವರೂ ಮತ್ತು ವೈಸ್ರಾಯ್‌ರವರೂ "ದತ್ತು ಪುತ್ರನು ಮಹಾರಾಜರ ಸ್ವಂತ ಆಸ್ತಿಗೆ ಹಕ್ಕುದಾರನಾಗಬಹುದೇ ಹೊರತು ಮೈಸೂರು ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಲು ಅವಕಾಶವಿಲ್ಲ. ಹಾಗೆ, ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳಬಹುದಾದ ಯಾವುದೊಂದು ಅಧಿಕಾರವೂ ಮಹಾರಾಜರಿಗೆ ಇರಲಾರದು ಮತ್ತು ಈಗ ಅಂಥ ಅಧಿಕಾರವನ್ನು ಕೊಡಲೂ ಸಾಧ್ಯವಿಲ್ಲ" ಎಂಬುದಾಗಿ ಉತ್ತರ ಬರೆದರು.

ಮಹಾರಾಜರು ದತ್ತು ಮಾಡಿಕೊಂಡಮೇಲೆ ಅವರ ಹಕು ಬಾಧ್ಯತೆಗಳ ಸಂಬಂಧವಾದ ಪ್ರಶ್ನೆಯು ಮತ್ತಷ್ಟು ತೊಡಕಾಯಿತು. ಸ್ಟೇಟ್ ಸೆಕ್ರೆಟೆರಿಯವರು ಮಹಾರಾಜರ ಅಭಿಮತವನ್ನು ಅನುಮೋದಿಸದೇ ಇದ್ದರೂ ಆಗ ಇಂಡಿಯಾ ದೇಶದಲ್ಲಿದ್ದ ಕೆಲವು ಬ್ರಿಟಿಷ್ ಅಧಿಕಾರಿಗಳು "ಮಹಾರಾಜರಿಗೆ ರಾಜ್ಯವನ್ನು ಹಿಂದಕ್ಕೆ ಕೊಡುವುದೇ ನ್ಯಾಯವಾಗಿದೆ. ಹಾಗಿಲ್ಲವಾದರೆ ಕಾವೇರೀ ನದಿಯ ದಕ್ಷಿಣ ಭಾಗದ ಮೈಸೂರು ಸೀಮೆಯನ್ನು ಮಹಾರಾಜರಿಗೆ ಬಿಟ್ಟುಕೊಡಬಹುದು. ಅದರಿಂದ ಅವರಿಗೆ ಪ್ರತಿವರ್ಷವೂ ೧೦ ಲಕ್ಷ ರೂಪಾಯಿ ಹುಟ್ಟುವಳಿ ಬರುತ್ತದೆ. ಆಗ ಮಹಾರಾಜರು ರಾಜ್ಯದ ವಿಚಾರವಾಗಿ ತಮ್ಮ ಹಕ್ಕನ್ನು ಸಂಪೂರ್ಣವಾಗಿ ಬಿಟ್ಟುಬಿಡಬಹುದು" ಎಂಬುದಾಗಿ ಅಭಿಪ್ರಾಯಪಟ್ಟರು. ಅದನ್ನು ಕೇಳಿ, ಮಹಾರಾಜರು ತಮ್ಮ ಹಕ್ಕಿನಲ್ಲಿ ಲವಲೇಶವನ್ನೂ ಬಿಡಲು ಸಾಧ್ಯವಿಲ್ಲವೆಂದು ತಿಳಿಸಿಬಿಟ್ಟರು.

ಹೀಗಿರಲಾಗಿ, ಇಂಗ್ಲೆಂಡಿನಲ್ಲಿ ಹೊಸ ಮಂತ್ರಿಮಂಡಲವು ರಚಿತವಾಯಿತು. ಇಂಗ್ಲೆಂಡಿನ "ಎಗ್ಜಾಮಿನರ್" ಎಂಬ ಪತ್ರಿಕೆಯು "ಮೈಸೂರು ದೇಶವನ್ನು ಬ್ರಿಟಿಷ್ ಪ್ರಾಂತಕ್ಕೆ ಸೇರಿಸಿಕೊಳ್ಳಬೇಕೆಂದು ಪ್ರಯತ್ನಮಾಡುವುದು ಸುತರಾಂ ಖಂಡನೀಯವಾದುದು" ಎಂಬ ವಿಚಾರದಲ್ಲಿ ಶಕ್ತಿಯುತ

ವಾದ ಒಂದು ಲೇಖನವನ್ನು ಪ್ರಕಟಿಸಿತು. ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು ಮಹಾರಾಜರು ಕ್ಯಾಂಬಲ್‌ರವರ ಸಹಾಯದಿಂದ ಕಾಲ ಕಾಲಕ್ಕೆ ತಿಳಿದುಕೊಳ್ಳುತ್ತಿದ್ದರು. ಮಹಾರಾಜರು ತಮ್ಮ ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ಬ್ರಿಟಿಷ್ ಪಾರ್ಲಿಮೆಂಟಿನವರ ತೀರ್ಮಾನಕ್ಕೆ ಬಿಡುವುದಾಗಿ ನಿರ್ಧರಿಸಿದರು. ಈ ನಿರ್ಧಾರವನ್ನು ಕುರಿತು ಕ್ಯಾಂಬಲ್‌ರವರಿಗೂ ಕಾಗದ ವನ್ನು ಬರೆದರು. ಮಂತ್ರಿಮಂಡಲವು ಬದಲಾವಣೆಯಾದುದರಿಂದ ಲಾರ್ಡ್ ಕ್ರ್ಯಾನ್‌ಬೋರ್ನ್‌ರವರು ಸ್ಟೇಟ್ ಸೆಕ್ರೆಟರಿಯಾಗಿ ಬಂದರು. ಮಹಾರಾಜರಿಗೆ ಮೈಸೂರು ಸಂಸ್ಥಾನವನ್ನು ಪುನಃ ವಹಿಸಿಕೊಡಬೇಕಾದುದು ನ್ಯಾಯವೆಂದು ಇಂಗ್ಲೆಂಡಿನಲ್ಲಿ ಅನೇಕ ಮಹನೀಯರು ಅಭಿಪ್ರಾಯಪಡುತ್ತಿದ್ದರು. ಅಂಥವರಲ್ಲಿ ಸರ್ ಹೆನ್ರಿ ರಾಲಿನ್ಸನ್ ಎಂಬುವರು ಬಹಳ ಪ್ರಮುಖರಾಗಿದ್ದರು. ಅವರು ಗಣ್ಯರಾದ ಇತರ ಕೆಲವು ಸದ್ಗೃಹಸ್ಥರೊಂದಿಗೆ ಸ್ಟೇಟ್ ಸೆಕ್ರೆಟರಿಯವರ ಬಳಿಗೆ ರಾಯಭಾರ (Deputation) ಹೋಗಿ, ಮಹಾರಾಜರ ಹಕ್ಕು ಬಾಧ್ಯತೆಗಳ ವಿಚಾರವನ್ನು ವಿವರಿಸಿ, ಅವರ ಮನಸ್ಸಿಗೆ ನಾಟುವಂತೆ ತಿಳಿಸಿದರು. ಆ ರಾಯಭಾರದಲ್ಲಿ ಪಾರ್ಲಿಮೆಂಟಿನ ಅನೇಕ ಮಾನ್ಯ ಸದಸ್ಯರು ಗಳೂ, ಮೇಧಾವಿಗಳಾದ ಹಲವು ದೊಡ್ಡ ಮನುಷ್ಯರುಗಳೂ ಮತ್ತು ಇಂಡಿಯಾ ದೇಶದಲ್ಲಿ ಅಧಿಕಾರಿಗಳಾಗಿದ್ದಾಗ ಇಲ್ಲಿನ ವಿದ್ಯಮಾನಗಳನ್ನೆಲ್ಲಾ ಚೆನ್ನಾಗಿ ತಿಳಿದಿದ್ದ ಅನುಭವಶಾಲಿಗಳೂ ಸೇರಿದ್ದರು. ಲಾರ್ಡ್ ಕ್ರ್ಯಾನ್ ಬೋರ್ನ್‌ರವರು ಎಲ್ಲವನ್ನೂ ಸಾವಧಾನದಿಂದ ಕೇಳಿ, ಸೂಕ್ತವಾಗಿ ಪರ್ಯಾ ಲೋಚಿಸುವಂತೆ ಮಾತುಕೊಟ್ಟರು.

ಅದೇ ಸಮಯದಲ್ಲಿ, ಇಂಗ್ಲೆಂಡಿನ ಪತ್ರಿಕೆಗಳು ಬ್ರಿಟಿಷ್ ಜನತೆ ಮನಸ್ಸಿನಮೇಲೆ ಸತ್ಪರಿಣಾಮವನ್ನುಂಟುಮಾಡುವಂಥ ಲೇಖನಗಳನ್ನು ಯುಕ್ತಿಯುಕ್ತವಾಗಿ ಪ್ರಕಟಿಸಿ ಮಹಾರಾಜರ ಹಕ್ಕನ್ನು ಸಾಧಿಸಿದುವು. ಆಗ ಸುಪ್ರಸಿದ್ಧ ಲೇಖಕರೂ, ಗ್ರಂಥಕರ್ತರೂ ಆಗಿದ್ದ ಜಾನ್ ಮಾರ್ಲೆಯವರು ಮೈಸೂರು ದೇಶದ ವಿಚಾರವನ್ನು ಕುರಿತು ಇಂಗ್ಲೆಂಡಿನ ಒಂದು ಪತ್ರಿಕೆಯಲ್ಲಿ ಅತ್ಯಂತ ಉಜ್ವಲವಾದ ಒಂದು ಲೇಖನವನ್ನು ಬರೆದು ವಿರುದ್ಧ ಮನೋಭಿ ಪ್ರಾಯದವರು ಯಾರೂ ಉಸಿರೆತ್ತದಂತೆ ಮಾಡಿದರು. "ಸೂರ್ಯಚಂದ್ರ ರಿರುವತನಕ" ಮೈಸೂರು ದೇಶವನ್ನು ಒಂದು ದೇಶೀಯ ಸಂಸ್ಥಾನವನ್ನಾಗಿ

ಇರಿಸತಕ್ಕದೆಂದು ಹಿಂದೆ ನಡೆದ ಶ್ರೀರಂಗಪಟ್ಟಣದ ಕರಾರಿನಲ್ಲಿ ಹೇಳಿದ್ದ ಅಂಶವನ್ನು ಬಹಳ ಚೆನ್ನಾಗಿ ಪ್ರತಿಪಾದಿಸಿ ಜನರ ಮನಸ್ಸಿಗೆ ಹಿಡಿಯುವಂತೆ ತಮ್ಮ ಲೇಖನವನ್ನು ಗಂಭೀರವಾದ ಶೈಲಿಯಲ್ಲಿ ಬರೆದರು. ಮೈಸೂರು ದೇಶಕ್ಕೆ ಮಾಡಿದ ಅನ್ಯಾಯದಿಂದ ಬ್ರಿಟಿಷ್ ಸರ್ಕಾರದವರ ಘನತೆ ಗೌರವಗಳಿಗೆ ವಿಶೇಷ ಕುಂದಕವುಂಟಾಯಿತೆಂದು ಪ್ರಸಿದ್ಧರಾದ ರಾಜನೀತಿಕುಶಲರೂ ಅಭಿಪ್ರಾಯಪಟ್ಟರು: ಮಹಾರಾಜರಿಗೆ ಇರತಕ್ಕ ಹಕ್ಕುಬಾಧ್ಯತೆಗಳ ವಿಚಾರದಲ್ಲಿ ತಮ್ಮ ಧಾರ್ಮಿಕ ಬೆಂಬಲವನ್ನು ಕೊಟ್ಟರು. ಬೊಂಬಾಯಿ ನಗರದಲ್ಲಿ ಪ್ರಸಿದ್ಧ ವಕೀಲರಾಗಿದ್ದ ಆನರಬಲ್ ರಾವ್ ಸಾಹೇಬ್ ವಿಶ್ವನಾಥ ನಾರಾಯಣ ಮಾಂಡಲಿಕ್ ಎಂಬುವರು "ಬ್ರಿಟಿಷರು ಮಾಡಿರುವ ತಪ್ಪನ್ನು ಸರಿಪಡಿಸಿಕೊಳ್ಳಲು ನಿಜವಾಗಿಯೂ ಪಾರ್ಲಿಮೆಂಟಿನವರಿಗೆ ಈಗ ಒಂದು ಉತ್ತಮವಾದ ಅವಕಾಶ ದೊರೆತಿದೆ. "ಸೂರ್ಯಚಂದ್ರರಿರುವತನಕ" ಉಭಯರೂ ಕರಾರಿಗೆ ಬದ್ಧರಾಗಿರತಕ್ಕುದೆಂದು ಹೇಳಿರುವ ಮಾತಿಗೆ ಹಾನಿ ಬರದಂತೆ ನೋಡಿಕೊಂಡು ಬ್ರಿಟಿಷ್ ಜನಾಂಗದವರು ತಮ್ಮ ಗೌರವವನ್ನು ಕಾಪಾಡಿಕೊಳ್ಳಬೇಕಾಗಿದೆ" ಎಂದು ಬಹಳ ದಿಟ್ಟತನದಿಂದ ಒಂದು ಪುಟ್ಟ ಪುಸ್ತಕವನ್ನು ಬರೆದು ಪ್ರಕಟಿಸಿದರು. ಹೀಗೆ ನಾನಾಕಡೆಗಳಿಂದ ಪ್ರಬಲವಾದ ಆಕ್ಷೇಪಣೆಗಳೇ ಬರಲು ಪ್ರಾರಂಭವಾಯಿತು.

ರಾಲಿನ್ಸರವರು ರಾಯಭಾರ ಹೋಗಿಬಂದಮೇಲೆ, ಮೈಸೂರು ರಾಜ್ಯವನ್ನು ಮಹಾರಾಜರಿಗೆ ಹಿಂದಕ್ಕೆ ಕೊಡುವ ವಿಚಾರವಾಗಿ "ಹೌಸ್ ಆಫ್ ಕಾಮನ್ಸ್ ಸಭೆಯವರು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸಿ, ರಾಜಕೀಯ ನಿಪುಣರೂ, ತತ್ತ್ವಶಾಸ್ತ್ರವಿಶಾರದರೂ ಆದ ಜಾನ್ ಸ್ಟೂವರ್ಟ್‌ಮಿಲ್ ಎಂಬುವರು ಪಾರ್ಲಿಮೆಂಟಿನವರಿಗೆ ಒಂದು ಅರ್ಜಿಯನ್ನು ಕೊಟ್ಟರು ಆ ಅರ್ಜಿಗೆ ಅನೇಕ ಸಭ್ಯಗೃಹಸ್ಥರೂ ಮತ್ತು ಇಂಡಿಯಾ ದೇಶದಲ್ಲಿ ಅಧಿಕಾರಿಗಳಾಗಿದ್ದವರೂ ರುಜು ಮಾಡಿದ್ದರು.

ಕ್ರಿ. ಶ. ೧೮೬೭ನೆಯ ಇಸವಿ ಫೆಬ್ರವರಿ ೨೨ನೆಯ ತಾರೀಖಿನ ದಿನ ಮೈಸೂರು ವಿಷಯವಾಗಿ "ಹೌಸ್ ಆಫ್ ಕಾಮನ್ಸ್" ಸಭೆಯಲ್ಲಿ ಪ್ರಚಂಡವಾದ ಚರ್ಚೆ ನಡೆಯಿತು. ಆ ದಿನವು ಮೈಸೂರು ದೇಶೀಯರಿಗೆ ಚಿರಸ್ಮರಣೀಯವಾದುದು. ಮೈಸೂರು ದೇಶದ ಭವಿಷ್ಯವೂ, ಮೈಸೂರು ರಾಜವಂಶ

ವರ ಸುಕೃತವೂ ಆ ದಿನದ ತೀರ್ಮಾನವನ್ನು ಅವಲಂಬಿಸಿದ್ದುವು. ಕಳೆದ ೩೬ ವರ್ಷಗಳಿಂದಲೂ ಮಹಾರಾಜರು ಅವಿಶ್ರಾಂತರಾಗಿ ನಡೆಯಿಸಿದ ಧರ್ಮಯುದ್ಧದಲ್ಲಿ ಜಯಶೀಲರಾಗಬೇಕಾದ ದಿನ! ನ್ಯಾಯ ಧರ್ಮಗಳು ತಮ್ಮ ಅಕಲಂಕ ಕೀರ್ತಿಯನ್ನು ಅಂದು ಜಗತ್ತಿಗೆ ಬೀರಬೇಕಾಗಿದ್ದಿತು! ಮೈಸೂರು ದೇಶದ ಪ್ರಜೆಗಳ ಸೌಭಾಗ್ಯವೂ, ಮಹಾರಾಜರ ಆಸೆಭರವಸೆಗಳೂ, ಸ್ವೀಕೃತ ಪುತ್ರರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಮುಂದಿನ ಶ್ರೇಯೋಭಿವೃದ್ಧಿಯೂ ಸುಗಮವಾಗಿ ಈಡೇರಬಹುದೆಂಬ ನಿರ್ಣಯವನ್ನು ಅಂದು ಕಾಣಬೇಕಾಗಿದ್ದಿತು. ಆ ದಿನ ಸಭೆಯಲ್ಲಿ ರಾಲ್ಲಿನ್ಸ್‌ರವರು ಮಹಾರಾಜರ ಹಕ್ಕುಬಾಧ್ಯತೆಗಳ ಸಂಬಂಧವಾಗಿ ಬಹಳ ಜಾಣ್ಮೆಯಿಂದ ವಾದಿಸಿ ವಿಷಯವನ್ನು ಬಹಳ ಚೆನ್ನಾಗಿ ಪ್ರತಿಪಾದಿಸಿದರು. ಸರ್ ಎಡ್ವರ್ಡ್ ಕೋಲ್‌ಬ್ರೂಕ್ ಎಂಬುವರು ರಾಲ್ಲಿನ್ಸ್‌ರವರ ವಾದವನ್ನು ಸಮರ್ಥಿಸಿ ಮಾತನಾಡಿದರು. ಮಹಾರಾಜರಿಗೆ ರಾಜ್ಯವನ್ನು ಪುನಃ ವಹಿಸಿಕೊಡಬೇಕೆಂಬ ವಿಚಾರದಲ್ಲಿ ತೀವ್ರವಾದ ಚರ್ಚೆ ನಡೆಯಿತು. ತರುವಾಯ, ಲಾರ್ಡ್ ಕ್ರ್ಯಾನ್‌ಬೋರ್ನ್‌ರವರು ತಮ್ಮ ನಿರ್ಣಯವನ್ನು ವ್ಯಕ್ತಪಡಿಸುತ್ತಾ "ಮಹಾರಾಜ್ಞೀ ಸರ್ಕಾರದವರು ಮಹಾರಾಜರ ವಂಶಪಾರಂಪರ್ಯವಾದ ಹಕ್ಕನ್ನು ಅಂಗೀಕರಿಸಿ, ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ಪ್ರಾಂತಗಳಿಗೆ ಸೇರಿಸಿಕೊಳ್ಳಕೂಡದೆಂದು ತೀರ್ಮಾನಿಸಿರುತ್ತಾರೆ. ದತ್ತ ಪುತ್ರರು ಪ್ರಾಪ್ತವಯಸ್ಕರಾದಮೇಲೆ ರಾಜ್ಯಾಡಳಿತಗಳನ್ನು ನಡೆಯಿಸಲು ಸಮರ್ಥರಾಗಿರಬಹುದೆಂಬ ಭರವಸೆಯು ಇಂಗ್ಲೆಂಡ್ ಸರ್ಕಾರದವರಿಗಿದೆ" ಎಂದು ತಿಳಿಸಿದರು. ಅದನ್ನು ಕೇಳಿ, ಮಹಾರಾಜರ ಹಿತೈಷಿಗಳಿಗೂ, ಮಿತ್ರರಿಗೂ ಅತ್ಯಾನಂದವಾಯಿತು. "ಸತ್ಯಮೇವೋದ್ಧರಾಮ್ಯಹಂ" ಎಂಬ ಯದುವಂಶದ ಪ್ರಭುಗಳ ಪುಣ್ಯಲತೆಯು ಕೊನರಿ, ಹೂತು, ಫಲಿಸುವಂತಾಯಿತು!

ಇದಾದ ಒಂದೆರಡು ತಿಂಗಳುಗಳಲ್ಲಿಯೇ ರಾಜಕೀಯ ಕಾರಣಗಳ ಪೆಸೆಯಿಂದ ಸರ್ ಸ್ಟ್ಯಾಫೋರ್ಡ್ ನಾರ್ತ್‌ಕಾಟ್‌ರವರು ಹೊಸದಾಗಿ ಸ್ಟೇಟ್ ಸೆಕ್ರೆಟರಿಯವರಾದರು. ಅವರು "ಹೌಸ್ ಆಫ್ ಕಾಮನ್ಸ್" ಸಭೆಯಲ್ಲಿ ಆದ ನಿರ್ಣಯವನ್ನು ವೈಸ್ರಾಯ್‌ರವರ ಮೂಲಕ ಮಹಾರಾಜರಿಗೆ ತಿಳಿಸಿದರು. "ವಿಕ್ಟೋರಿಯಾ ಮಹಾರಾಜ್ಞಿಯವರು ಶ್ರೀರಂಗಪಟ್ಟಣದ ತಹನಾಮೆಗನು

ಸಾರವಾಗಿ ಮಹಾರಾಜರ ಹಕ್ಕುಬಾಧ್ಯತೆಗಳನ್ನು ಅಂಗೀಕರಿಸಿ, ಅವರ ದತ್ತ ಪುತ್ರರನ್ನು ರತ್ನಸಿಂಹಾಸನಾಧೀಶ್ವರರನ್ನಾಗಿ ಮಾಡಿ, ಮೈಸೂರು ರಾಜವಂಶ ವನ್ನು ಸಾರ್ಥೋದ್ಧಾರವಾಗಿ ನಡೆಯಿಸಿಕೊಂಡು ಬರಬೇಕೆಂಬ ಸದಭಿಪ್ರಾಯ ವುಳ್ಳವರಾಗಿದ್ದಾರೆ. ಮಹಾರಾಜಶ್ರೀ ಸರ್ಕಾರದವರ ಆಡಳಿತದಲ್ಲಿ ಮೈಸೂರು ದೇಶದ ಪ್ರಜೆಗಳು ಈಗ ಅಭಿವೃದ್ಧಿ ಸ್ಥಿತಿಯಲ್ಲಿರುತ್ತಾರೆ. ಅಂಥ ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಅಧಿಕಾರವನ್ನು ದೇಶೀಯ ರಾಜರಿಗೆ ವಹಿಸಿಕೊಡುವುದಕ್ಕೆ ಮೊದಲು, ಆ ರಾಜರ ವಿದ್ಯಾಭ್ಯಾಸಕ್ಕೆ ತಕ್ಕ ಸಹಾಯ ಸೌಕರ್ಯಗಳನ್ನು ಇಂಡಿಯಾ ಸರ್ಕಾರದವರು ಕಲ್ಪಿಸಬೇಕು. ಆದುದರಿಂದ ಮಹಾರಾಜರ ದತ್ತಪುತ್ರರಿಗೆ ಇಂಡಿಯಾ ಸರ್ಕಾರದವರ ಮೇಲ್ವಿಚಾರಣೆಯಲ್ಲಿ ರಾಜೋಚಿತವಾದ ವಿದ್ಯಾಭ್ಯಾಸವು ನಡೆಯುವಂತೆ ಏರ್ಪಾಟು ಮಾಡಬೇಕು. ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ ಅವಸಾನ ಕಾಲದಲ್ಲಿ ದತ್ತಪುತ್ರರು ಪ್ರಾಪ್ತವಯಸ್ಕರಾಗಿರದೇ ಇದ್ದರೆ, ಆಗ ರಾಜ್ಯವನ್ನು ದತ್ತಪುತ್ರರ ಹೆಸರಿನಲ್ಲಿ ಈಗಿರುವ ಪದ್ಧತಿಯಂತೆ ಬ್ರಿಟಿಷ್ ಕವರ್ನರವರೇ ಆಳುತ್ತಿರಬೇಕು. ದತ್ತ ಪುತ್ರರು ಪ್ರಾಪ್ತವಯಸ್ಕರಾಗಿ ರಾಜ್ಯಾಡಳಿತಗಳನ್ನು ಸ್ವತಃ ನಡೆಯಿಸಲು ಸಮರ್ಥರಾಗಿರುವರೆಂದು ಇಂಡಿಯಾ ಸರ್ಕಾರದವರಿಗೆ ಕಂಡುಬಂದರೆ, ಭಾವೀ ಮಹಾರಾಜರಿಗೆ ಎಲ್ಲ ರಾಜ್ಯವನ್ನಾಗಲಿ ಅಥವಾ ಒಂದು ಭಾಗವನ್ನಾಗಲಿ ಒಪ್ಪಿಸುವುದಕ್ಕೆ ಮೊದಲು ಪ್ರಜೆಗಳ ಯೋಗಕ್ಷೇಮಕ್ಕೆ ಯಾವುದೊಂದು ತೊಂದರೆಯೂ ಬಾರದಂತೆ ರಾಜ್ಯಭಾರ ಕ್ರಮವನ್ನು ಸರಿಯಾದ ರೀತಿಯಲ್ಲಿ ನೆಲೆಗೊಳಿಸಲು ತಕ್ಕ ಏರ್ಪಾಡುಗಳನ್ನು ಮಾಡಬೇಕು ಮತ್ತು ಬ್ರಿಟಿಷ್ ಸರ್ಕಾರಕ್ಕೆ ಕೊಡಬೇಕಾಗಿರುವ ಪೊಗದಿಯನ್ನೂ ಆವಶ್ಯಕ ತೋರಿದಂತೆ ಹೆಚ್ಚಿಸಬೇಕು" ಎಂಬ ಅಭಿಪ್ರಾಯವನ್ನೊಳಗೊಂಡ ನಿರ್ಣಯವನ್ನು ಸೂಚಿಸಿ ಸ್ಟೇಟ್ ಸೆಕ್ರಿಟೆರಿಯವರು ಖರೀತವನ್ನು ಬರೆದಿದ್ದರು. ಇದರಿಂದ ಮಹಾರಾಜರು ಸ್ವತಃ ರಾಜ್ಯಭಾರ ನಡೆಯಿಸುವ ಸುಯೋಗವು ತಪ್ಪಿಹೋಯಿ ತಾದರೂ ತಮ್ಮ ವಂಶಜರಿಗೆ ರಾಜ್ಯಪ್ರಾಪ್ತವಾದುದಕ್ಕಾಗಿ ಅವರು ಬಹಳ ಸಂತೋಷಪಟ್ಟರು.

ಆ ಸಮಯದಲ್ಲಿ ಮಹಾರಾಜರ ೭೪ನೆಯ ವರ್ಷ ವರ್ಧಂತಿಯ ದರ್ಬಾರು ಮೈಸೂರು ಅರಮನೆಯಲ್ಲಿ ನಡೆಯಿತು. ಆಗ ತಾತ್ಕಾಲಿಕವಾಗಿ

ಕಮಿಷನರರವರಾಗಿದ್ದ ಸಿ. ಬಿ. ಸಂಡರ್ಸ್‌ರವರು ಆದಿನ ದರ್ಬಾರಿಗೆ ಬಂದಿದ್ದರು. ರಾಜಕುಮಾರರಾದ ಶ್ರೀ ಚಾಮರಾಜ ಒಡೆಯರನ್ನು ರಾಜೋಚಿತವಾದ ಮರ್ಯಾದೆಗಳೊಂದಿಗೆ ದರ್ಬಾರಿಗೆ ಕರೆತಂದರು. ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳಾಗಿ ಸಂಡರ್ಸ್‌ರವರು ರಾಜಕುಮಾರನನ್ನು ಮೈಸೂರು ಸಂಸ್ಥಾನದ ಉತ್ತರಾಧಿಕಾರಿಯನ್ನಾಗಿ ಅಂಗೀಕರಿಸಿ ಗೌರವಿಸಿದರು. ಮಹಾರಾಜರು ತಮ್ಮ ನಿರತಿಶಯವಾದ ಕೃತಜ್ಞತೆಯನ್ನು ಮಹಾರಾಜ್ಞೀ ಸರ್ಕಾರದವರಿಗೆ ತಿಳಿಸಬೇಕೆಂದು ಕಮಿಷನರರವರಿಗೆ ಶೃತಪಡಿಸಿದರು. ಮಹಾರಾಜರು ಅವಿಶ್ರಾಂತರಾಗಿ ನಡೆಯಿಸಿದ ಧರ್ಮ ಯುದ್ಧದಲ್ಲಿ ಜಯಶಾಲಿಗಳಾದರು. 'ಆಧುನಿಕ ಮೈಸೂರು ನಿರ್ಮಾಪಕ' ರೆಂಬ ಶಾಶ್ವತ ಕೀರ್ತಿಯನ್ನು ಗಳಿಸಿದರು!

ಮಹಾರಾಜರು "ಧೈರ್ಯಂ ಸರ್ವತ್ರ ಸಾಧನಂ" ಎಂಬ ಲೋಕೋಕ್ತಿಯಂತೆ, ಬ್ರಿಟಿಷ್ ಸಾಮ್ರಾಜ್ಯದವರೊಂದಿಗೆ ನ್ಯಾಯಬದ್ಧವಾದ ರೀತಿಯಲ್ಲಿ ಪತ್ರವ್ಯವಹಾರ ನಡಸಿ ಹಿಡಿದ ಕಾರ್ಯದಲ್ಲಿ ಸಫಲ ಮನೋರಥರಾದರು!

ಹನ್ನೆರಡನೆಯ ಅಧ್ಯಾಯ

ಮಹಾರಾಜರ ಆಸ್ಥಾನ, ಸಾಹಿತ್ಯಪರಿಪೋಷಣೆ, ಸನಾತನ ಧರ್ಮೋಜ್ಜೀವನ.

"ಆದಿರಾಜಯಶೋಬಿಂಬಮಾದರ್ಶಂ ಪ್ರಾಪ್ಯವಾಙ್ಮಯಂ
ತೇಷಾಮಸನ್ನಿಧಾನೇಽಪಿ ನ ಸ್ವಯಂ ಪಶ್ಯ ನಶ್ಯತಿ ||

[ದಂಡಿಮಹಾಕವಿ

ಪುಣ್ಯ ಶ್ಲೋಕರಾದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ಮೈಸೂರು ರತ್ನ ಸಿಂಹಾಸನಾಧೀಶ್ವರರಾಗಿ ೨೦ ವರ್ಷಕಾಲ ಸ್ವತಃ ರಾಜ್ಯಾಡಳಿತಗಳನ್ನು ನಡೆಯಿಸಿದಾಗಲೂ, ಮೈಸೂರು ರಾಜ್ಯವು ಬ್ರಿಟಿಷರ ಆಡಳಿತದಲ್ಲಿದ್ದ ಕಾಲದಲ್ಲಿಯೂ, ರಾಜಾಶ್ರಯದಲ್ಲಿ ಕನ್ನಡ ಸಾಹಿತ್ಯವು ಅಪಾರವಾಗಿ ಬೆಳೆಯಿತು. "ರಾಜರು ತಮ್ಮ ನಾಡಿನ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರಬೇಕಾದುದು ಅವರ ಮುಖ್ಯ ಕರ್ತವ್ಯ. ತಮ್ಮನಾಡು, ತಮ್ಮಜನ, ತಮ್ಮ ನಾಡಿನ ಭಾಷೆ ಮತ್ತು ಸಂಸ್ಕೃತಿಗಳನ್ನು ಏಳಿಗೆಗೆ ತರುವುದರಲ್ಲಿ ರಾಜರು ಸದಾ ಬದ್ಧಕಂಕಣರಾಗಿರಬೇಕು. ವಂಶವು ಸತ್ಪುತ್ರನಿಂದ ಶೋಭಿಸುವಂತೆ ರಾಜ್ಯವು ಉತ್ತಮ ಸಂಸ್ಕೃತಿಯಿಂದ ಶೋಭಿಸುತ್ತದೆ. ರಾಜಾಶ್ರಯವಿಲ್ಲದೆ ಸಂಸ್ಕೃತಿ, ಸಾಹಿತ್ಯ ಮತ್ತು ಕಲೆ-ಇವುಗಳು ಅಭಿವೃದ್ಧಿಯಾಗಲಾರವು" ಎಂದು ರಾಜನೀತಿಜ್ಞರಾದ ವಿದ್ವಾಂಸರು ಹೇಳುತ್ತಾರೆ. ಈ ತತ್ತ್ವವನ್ನು ತಿಳಿದಿದ್ದ ಮಹಾರಾಜರು ಕನ್ನಡ ಸಾಹಿತ್ಯ ಪರಿಪೋಷಣೆಯನ್ನು ಮಾಡುತ್ತಾ, ಸನಾತನ ಧರ್ಮೋಜ್ಜೀವನಕಾರ್ಯಗಳಿಗೆ ಆಶ್ರಯವಿತ್ತರು. ಅವರ ಆಸ್ಥಾನದಲ್ಲಿ ಅನೇಕ ಜನ ಪಂಡಿತರೂ, ಕವಿಗಳೂ, ಗಮಕಿಗಳೂ, ಕಲಾವಿದರೂ ಪರಿಶೋಭಿಸುತ್ತಿದ್ದರು. ಮಹಾರಾಜರು ಸ್ವಯಂ ಕವಿಗಳೂ, ವಿದ್ವಾಂಸರೂ ಆಗಿದ್ದರು. ಆಗ ಮೈಸೂರು ಆಸ್ಥಾನದಲ್ಲಿ ಅಳಿಯಲಿಂಗರಾಜ, ಕುಣಿಗಲು ರಾಮಶಾಸ್ತ್ರಿ, ವ್ಯಾಕರಣ ಪಂಡಿತ ನರಸಿಂಹಶಾಸ್ತ್ರಿ, ಕೆಂಪು ನಾರಾಯಣ ಕವಿ,

ಬಸವಪ್ಪಶಾಸ್ತ್ರಿ, ಕವಿ ವರದಾಚಾರ್ಯ, ಮಾದಪ್ಪಶಾಸ್ತ್ರಿ, ಲಕ್ಷ್ಮೀಪತಿ ಪಂಡಿತ, ಸೂರಪಂಡಿತ, ಧರ್ಮಸಾಮ್ರಾಜ್ಯಪಂಡಿತ, ಮಧುಗಿರಿ ಬ್ರಹ್ಮಯ್ಯ ಪಂಡಿತ, ಆನಂದಾಳ್ವಾರ್, ಸಜ್ಜಯಾಚಾರ್ಯ, ಸೋಸಲೆ ಗರಳಪುರೀಶ ಶಾಸ್ತ್ರಿ, ದೇವಲಾಪುರದ ನಂಜುಂಡಕವಿ, ದಾದಾಶಾಸ್ತ್ರಿ, ಮುಂತಾದ ಬಹಳ ಮಂದಿ ಪಂಡಿತಪ್ರಕಾಂಡರೂ, ತಾರ್ಕಿಕರೂ, ವಿದ್ವಾಂಸರೂ ಇದ್ದರು.

ಉದಾರಹೃದಯರೂ, ವಿದ್ವತ್ಪಕ್ಷಪಾತಿಗಳೂ ಆಗಿದ್ದ ಮಹಾರಾಜರು ವಿದ್ವಾಂಸರುಗಳಿಗೆಲ್ಲಾ ದತ್ತಿಗಳನ್ನು ಬಿಟ್ಟುಕೊಟ್ಟು ರಾಜಾಶ್ರಯವನ್ನು ನೀಡಿದರು. ಅವರ ಆಸ್ಥಾನವು ಭೋಜರಾಜನ ಒಡ್ಡೋಲಗವನ್ನು ಹೋಲುತ್ತಿದ್ದಿತು. ಮಹಾರಾಜರನ್ನು "ಅಭಿನವಭೋಜ" ಎಂಬುದಾಗಿ ಕರೆಯುತ್ತಿದ್ದರು. ಅವರ ಆಸ್ಥಾನದ ವಿದ್ವದ್ಗೋಷ್ಠಿಯಲ್ಲಿ ಬ್ರಾಹ್ಮಣ ಪಂಡಿತರೇ ಅಲ್ಲದೆ, ವೀರಶೈವ ಮತ್ತು ಜೈನ ವಿದ್ವಾಂಸರೂ ಅನೇಕರಿದ್ದರು. ಮಹಾರಾಜರ ಆಸ್ಥಾನಕ್ಕೆ ಅನೇಕ ಕಡೆಗಳಿಂದ ಪಂಡಿತರೂ, ಕವಿಗಳೂ, ಬಂದು ತಮ್ಮ ವಿದ್ಯಾಪ್ರೌಢಿಮೆಯನ್ನು ಪ್ರದರ್ಶಿಸಿ ಪ್ರಭುಗಳಿಂದ ಸನ್ಮಾನ ಪಡೆಯುತ್ತಿದ್ದರು. ಆಸ್ಥಾನದಲ್ಲಿ ಆಗಾಗ ಶಾಸ್ತ್ರಾರ್ಥಗಳು ನಡೆಯುತ್ತಿದ್ದುವು. ಒಡೆಯರು ದಿಗ್ದಂತಿಗಳಾದ ಪಂಡಿತರ ವಾಕ್ಯಾರ್ಥಗಳನ್ನು ಕೇಳುತ್ತಾ ತಲೆದೂಗುತ್ತಿದ್ದರು.

ಮಹಾರಾಜರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಗಳಿಸಿದ್ದರು. ಅವರು ಕನ್ನಡ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ಕೊಡುತ್ತಿದ್ದಂತೆಯೇ, ಸಂಸ್ಕೃತ ಭಾಷೆಗೂ ಆಶ್ರಯದಾತರಾಗಿದ್ದರು. ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಗಳು ವಿಶೇಷವಾಗಿ ಅಭಿವೃದ್ಧಿಗೆ ಬಂದುವು. ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ ಕಾಲದಲ್ಲಿ ಆದಷ್ಟು ಸಾಹಿತ್ಯಪ್ರಚಾರವು ಅದುವರೆಗೆ ಆಳಿದ ಕನ್ನಡನಾಡಿನ ಯಾವ ರಾಜರ ಕಾಲದಲ್ಲಿಯೂ ಆಗಲಿಲ್ಲವೆಂದು ಹೇಳಬಹುದು. ಮಹಾರಾಜರ ಆಶ್ರಯದಲ್ಲಿ ಕನ್ನಡ ಭಾಷೆಯು ಸರ್ವತೋಮುಖವಾಗಿ ಬೆಳೆಯಿತು; ಅನೇಕ ಗ್ರಂಥಗಳು ಹುಟ್ಟಿದುವು. ಒಡೆಯರು ಸ್ವತಃ ರಚಿಸಿರುವ ಅಧ್ಯಾತ್ಮ ರಾಮಾಯಣ, ರಾಮಕಥಾಕಲ್ಪವೃಕ್ಷ, ಕೃಷ್ಣಕಥಾ ರತ್ನಾಕರ, ನಂಜುಂಡ

ಶತಕ, ಭಕ್ತವಿಲಾಸದರ್ಪಣ, ನಳೋಪಾಖ್ಯಾನ, ಸೌಗಂಧಿಕಾಪರಿಣಯ- ಇವೇ ಮೊದಲಾದ ಅನೇಕ ಗದ್ಯ, ಪದ್ಯ ಗ್ರಂಥಗಳಿಂದ ಅವರಿಗಿದ್ದ ಕವಿತಾ ಶಕ್ತಿಯೂ, ಪಾಂಡಿತ್ಯವೂ ವ್ಯಕ್ತವಾಗುತ್ತವೆ. ಅವರು ತಮ್ಮ ಗ್ರಂಥಗಳಲ್ಲಿ ಹೇಳಿಕೊಂಡಿರುವ "ಉಭಯ ಕವಿತಾಲಕ್ಷಣ ವಿಚಕ್ಷಣ", "ಸ್ವಯಂಕೃತಕವಿತಾ ವಧೂರತ್ನ" ಎಂಬ ವಿಶೇಷಣಗಳು ಅವರಿಗೆ ಬಹು ಚೆನ್ನಾಗಿ ಒಪ್ಪುತ್ತವೆ.

ಮಹಾರಾಜರು ಜ್ಯೋತಿಶ್ಶಾಸ್ತ್ರದಲ್ಲಿ ಪಾರಂಗತರಾಗಿದ್ದರು. ಅವರು "ದಶಾವಿಭಾಗಪದಕ" ಎಂಬ ಜ್ಯೋತಿಷ ಗ್ರಂಥವನ್ನು ರಚಿಸಿರುತ್ತಾರೆ. ಅವರ ಆಸ್ಥಾನ ವಿದ್ವಾಂಸರಾಗಿದ್ದ ಕುಣಿಗಲು ರಾಮಶಾಸ್ತ್ರಿಯ ಎರಡನೆಯ ಮಗು ಶಿವಸ್ವಾಮಿಯು ಜನ್ಮಿಸಿದಾಗ, ಅವರು ಆ ಮಗುವಿನ ಜಾತಕವನ್ನು ನೋಡಿ, "ಮುಂದೆ ಈ ಕುಮಾರರು ಗುರುಪೀಠವನ್ನು ಅಲಂಕರಿಸುವರು" ಎಂದು ಹೇಳಿದ್ದರಂತೆ! ಅದರಂತೆಯೇ ಶಿವಸ್ವಾಮಿಯವರು ಕಾಲಕ್ರಮದಲ್ಲಿ ಶೃಂಗೇರಿ ಜಗದ್ಗುರು ಪೀಠವನ್ನು ಅಲಂಕರಿಸಿದರು! ನಮ್ಮ ಭರತಖಂಡದ ಪುರಾತನ ರಾಜರ ಚರಿತ್ರೆಯನ್ನು ಕಾಲಗಣನ ಪೂರ್ವಕವಾಗಿ ರಚಿಸಬೇಕೆಂಬ ಉದ್ದೇಶದಿಂದ, ಅವರು "ಸೂರ್ಯಚಂದ್ರ ವಂಶಾವಳಿ" ಮತ್ತು "ಶಕಕಾಲ ನಿರ್ಣಯ" ಎಂಬ ಗ್ರಂಥಗಳನ್ನು ರಚಿಸಿರುವರು. ಮಹಾರಾಜರ ಮಹಿಷಿಯರಾದ ರಮಾವಿಲಾಸದ ಚೆಲುವಾಜಮ್ಮಣ್ಣಿಯವರ ಮತ್ತು ಸೀತಾವಿಲಾಸದ ದೇವಾಜಮ್ಮಣ್ಣಿಯವರ ಪ್ರೋತ್ಸಾಹಬಲದಿಂದ ಭಾಗವತ ಕೃಷ್ಣಸ್ವಾಮಿ ಎಂಬುವನು ವಾಸಿಷ್ಠ ರಾಮಾಯಣ ಟೀಕೆಯನ್ನು ಬರೆದಿದ್ದಾನೆ. ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರು ಕವಿಗಳ ಕಾವ್ಯಗಳ ಮೂಲಕ ಸಾಹಿತ್ಯಪ್ರಪಂಚದಲ್ಲಿ ಅಮರರಾಗಿರುತ್ತಾರೆ!

ಮಹಾರಾಜರ ಕೃಪಾಶ್ರಯದಲ್ಲಿ ಅಳಿಯ ಲಿಂಗರಾಜ ಕವಿಯು 'ನರಪತಿ ಚರಿತೆ' ಯನ್ನೂ, ಬಸವಪ್ಪ ಶಾಸ್ತ್ರಿಯು 'ಕೃಷ್ಣರಾಜಾಭ್ಯುದಯ' ಗ್ರಂಥವನ್ನೂ, ಚಂದ್ರಕವಿಯು 'ಆಂಧ್ರಭಾಷಾಭೂಷಣ' ಎಂಬ ಗ್ರಂಥವನ್ನೂ ಮತ್ತು ಸೋಸಲೆ ಗರಳಪುರೀಶ ಶಾಸ್ತ್ರಿಯು 'ಕೃಷ್ಣಭೂಪಾಲೀಯ' ಎಂಬ ಅಲಂಕಾರ ಗ್ರಂಥವನ್ನೂ ಬರೆದಿದ್ದಾರೆ. ಮಹಾರಾಜರ ವರ್ಧಂತಿ ಮಹೋತ್ಸವವನ್ನು ನೋಡಲು ಗೋಕರ್ಣದಿಂದ ಒಮ್ಮೆ ಬಂದಿದ್ದ ಶ್ರೀನಿವಾಸನೆಂಬ

ಕವಿಯು 'ಮುಮ್ಮಡಿ ಶ್ರೀ ಕೃಷ್ಣರಾಜ ವರ್ಷ ವರ್ಧಂತೀಶತಕ'—ಎಂಬ ಕೃತಿಯನ್ನು ರಚಿಸಿರುತ್ತಾನೆ. ಇದರಂತೆಯೇ, ಇನ್ನೂ ಅನೇಕ ಪಂಡಿತರು ನಾನಾ ವಿಧವಾದ ಗ್ರಂಥಗಳನ್ನು ರಚಿಸಿರುತ್ತಾರೆ.

ಮಹಾರಾಜರು ಸಂಸ್ಕೃತ ವಿದ್ಯಾಭ್ಯಾಸಕ್ಕೆ ವಿಶೇಷ ಸಹಾಯಗಳನ್ನು ಒದಗಿಸಿದರು. ಆ ಕಾಲದಲ್ಲಿ ಗೀರ್ವಾಣಭಾಷೆಗೆ ಮೈಸೂರು ಪಟ್ಟಣವು ತವರುಮನೆಯಂತಿದ್ದಿತು. ಸಾಹಿತ್ಯ, ವ್ಯಾಕರಣ, ತರ್ಕ, ವೇದಾಂತ ಮತ್ತು ಸಂಗೀತ—ಇವುಗಳಲ್ಲಿ ಪ್ರಸಿದ್ಧರಾದ ಅನೇಕ ಪಂಡಿತರು ರಾಜಧಾನಿಯಲ್ಲಿ ರಾಜಾಶ್ರಯದಿಂದ ಜೀವನಮಾಡುತ್ತಿದ್ದರು. ಮಹಾರಾಜರು ವಿದ್ವಾಂಸರಿಗೆಲ್ಲಾ ಯಥೇಚ್ಛವಾಗಿ ಮಾಸಾಶನಗಳನ್ನೂ, ಭೂಮಿಕಾಣಿಗಳನ್ನೂ, ಅಗ್ರಹಾರ ಗಳನ್ನೂ ಕೊಟ್ಟು ಗೌರವಿಸುತ್ತಿದ್ದರು. ರಾಜಕೃಪಾಪೋಷಿತರಾಗಿದ್ದ ವಿದ್ವಾಂಸರು ತಮ್ಮ ತಮ್ಮ ಮನೆಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠಪ್ರವಚನಗಳನ್ನು ಹೇಳಿಕೊಡುತ್ತಿದ್ದರಲ್ಲದೆ, ಅವರ ಭೋಜನೋಪಚಾರಗಳಿಗೂ ಅನುಕೂಲ ಪಡಿಸಿದ್ದರು. ಪ್ರತಿಯೊಬ್ಬ ವಿದ್ವಾಂಸರ ಮನೆಯೂ ಒಂದು ಗುರುಕುಲ; ಅಷ್ಟೇಕೆ! ಒಂದು ವಿದ್ಯಾಪೀಠದಂತಿದ್ದಿತು. ಮಹಾರಾಜರು ಪ್ರತಿ ತಿಂಗಳಿ ನಲ್ಲಿಯೂ ವಿದ್ಯಾರ್ಥಿಗಳಿಗೆ ಹಾಗ, ಮುಪ್ಪಾಗ, ಹಣ, ಹಣವಡ್ಡದಂತೆ ಆಯಾ ತರಗತಿಗನುಸಾರವಾಗಿ ಅರಮನೆಯಿಂದ ವಿದ್ಯಾರ್ಥಿವೇತನಗಳನ್ನು ಕೊಡಿಸುತ್ತಿದ್ದರು

ಮಹಾರಾಜರು ಸಾಹಿತ್ಯ ಪ್ರೇಮಿಗಳಾಗಿದ್ದಂತೆಯೇ, ಕಲಾಪ್ರಿಯರೂ, ರಸಿಕಶಿರೋಮಣಿಗಳೂ ಆಗಿದ್ದರು. ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳಿಗೆ ಉದಾರವಾದ ಆಶ್ರಯವಿತ್ತು ಕಲಾಪರಿಪೋಷಣೆಮಾಡಿದರು. ಆ ಕಾಲದಲ್ಲಿ ಚಿತ್ರಕಾರ ತಿಪ್ಪಯ್ಯನೆಂಬ ಕಲಾವಿದನು ಮಹಾರಾಜರ ಆಸ್ಥಾನದಲ್ಲಿದ್ದನು. ಅವರು ಜಗನ್ಮೋಹನ ಅರಮನೆಯನ್ನು ಕಟ್ಟಿಸಿ ಅದರಲ್ಲಿ ಚಿತ್ರವಿಚಿತ್ರತರವಾದ ಅನೇಕ ವಸ್ತುಗಳನ್ನು ಸಂಗ್ರಹಿಸಿಟ್ಟು ಸುಂದರ ವಾದ ಚಿತ್ರಗಳನ್ನು ಬರೆಯಿಸಿ, ಜನತೆಯ ಕಲಾಭಿರುಚಿಯನ್ನು ಹೆಚ್ಚಿಸಲು ಸಹಾಯಕರಾದರು. ಒಡೆಯರ ಆಸ್ಥಾನಕ್ಕೆ ಚಿತ್ರಕಾರರೂ, ಶಿಲ್ಪಿಗಳೂ ಅನೇಕ ಪ್ರಾಂತಗಳಿಂದ ಬಂದು, ತಮ್ಮ ಕಲಾನೈಪುಣ್ಯವನ್ನು ಪ್ರದರ್ಶಿಸಿ,

ತಕ್ಕ ಬಹುಮಾನಗಳನ್ನು ಪಡೆಯುತ್ತಿದ್ದರು. ಸಂಗೀತವೆಂದರಂತೂ, ಮಹಾರಾಜರಿಗೆ ಪಂಚಪ್ರಾಣ. ಸಂಗೀತ ಶಾಸ್ತ್ರದಲ್ಲಿ ಪಾರಂಗತರಾಗಿದ್ದ ವೀಣಾ ಸಾಂಬಯ್ಯ, ವೀಣಾ ವೆಂಕಟಸುಬ್ಬಯ್ಯ, ಸದಾಶಿವರಾಯ ಮೊದಲಾದವರು ಮಹಾರಾಜರ ಆಸ್ಥಾನದಲ್ಲಿದ್ದರು. ಸಂಗೀತದಲ್ಲಿ ಘನ ವಿದ್ವಾಂಸನೆಂದು ಹೆಸರುಪಡೆದಿರುವ ತ್ಯಾಗರಾಜರು ಆ ಕಾಲದಲ್ಲಿ ಒಮ್ಮೆ ಮೈಸೂರು ಸಂಸ್ಥಾನಕ್ಕೆ ಬಂದಿದ್ದನೆಂದು ತಿಳಿದುಬರುತ್ತದೆ. ಆಯುರ್ವೇದ ವಿದ್ವಾಂಸರಾದ ಗುಂಡುಲು ಪಂಡಿತ, ಜಿನಚಂದ್ರ ಪಂಡಿತ, ಗುರುಮೂರ್ತಿ ಪಂಡಿತ, ಕಿಚ್ಚಾ ಪಂಡಿತ ಮುಂತಾದವರು ರಾಜಾಶ್ರಯದಲ್ಲಿ ಪ್ರಸಿದ್ಧರಾಗಿದ್ದುಕೊಂಡಿದ್ದರು. ಗುಂಚಾಜೋಯಿಸ್ಯ, ಪಾಳ್ಯಂ ವೆಂಕಟಸುಬ್ಬಾಜೋಯಿಸ್ಯ ಮತ್ತು ಕ್ಯಾತನಹಳ್ಳಿ ಶ್ರೀನಿವಾಸ ಜೋಯಿಸ್ಯ—ಮುಂತಾದವರು ಮೈಸೂರು ಆಸ್ಥಾನದಲ್ಲಿ ಪ್ರಖ್ಯಾತರಾಗಿದ್ದರು.

ಮಹಾರಾಜರು ಪಟ್ಟಕ್ಕೆ ಬಂದಮೇಲೆ, ಸನಾತನ ಧರ್ಮ ಮತ್ತು ಸಂಸ್ಕೃತಿಗಳ ಪುನರುದ್ಧಾರ ಕಾರ್ಯಗಳಿಗೆ ವಿಶೇಷವಾಗಿ ಪ್ರೋತ್ಸಾಹ ಕೊಟ್ಟರು. ಶ್ರೀಚಾಮುಂಡೇಶ್ವರೀ ದೇವಸ್ಥಾನಕ್ಕೆ ಚಿನ್ನ ಮತ್ತು ಬೆಳ್ಳಿಯ ಪೂಜೋಪಕರಣಗಳನ್ನೂ, ನವರತ್ನ ಪದಕವನ್ನೂ ಒಪ್ಪಿಸಿ, ಪ್ರತಿ ವರ್ಷವೂ ಶ್ರೀ ದೇವಿಯ ರಥೋತ್ಸವವು ನಡೆಯುವಂತೆ ಏರ್ಪಾಟು ಮಾಡಿದರು. ಚಾಮುಂಡೀಬೆಟ್ಟದ ಮೇಲಿದ್ದ ಅನೇಕ ಕಮರಿಗಳನ್ನು ಮುಚ್ಚಿಸಿ, ದೇವಸ್ಥಾನದ ಸುತ್ತಲೂ ಸುಭದ್ರವಾದ ಕೋಟೆಯನ್ನು ಕಟ್ಟಿಸಿ, ದೇವಾಲಯದ ದ್ವಾರದ ಮೇಲ್ಗಡೆಯಲ್ಲಿ ಉನ್ನತವಾಗಿಯೂ, ಸುಂದರವಾಗಿಯೂ ಇರುವ ಏಳ್ನೆಲೆಯ ಗೋಪುರವನ್ನು ನಿರ್ಮಿಸಿದರು. ದೇವಸ್ಥಾನದ ಒಳಗಡೆಯಲ್ಲಿ ಉತ್ಸವ ವಿಗ್ರಹದ ಎದುರಿಗೆ ಶಿಲೆಯಿಂದ ತಮ್ಮ ಭಕ್ತ ವಿಗ್ರಹವನ್ನೂ, ತಮ್ಮ ಪತ್ನಿಯರ ಭಕ್ತ ವಿಗ್ರಹಗಳನ್ನೂ ಕೈಜೋಡಿಸಿ ನಿಂತುಕೊಂಡಿರುವ ಭಾವಭಂಗಿಯಲ್ಲಿ ನಿರ್ಮಿಸಿ ಪ್ರತಿಷ್ಠೆಮಾಡಿಸಿದರು.

ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಶಿವನ ಪಂಚವಿಂಶತಿ ಲೀಲಾಮೂರ್ತಿಗಳನ್ನು ಪ್ರತಿಷ್ಠೆಮಾಡಿಸಿ, ದೇವರಿಗೆ ರತ್ನ ಖಚಿತವಾದ ಶ್ರೀಕಂಠ ಮುಡಿಯನ್ನೂ, ಪಾರ್ವತೀದೇವಿಗೆ ಮುಕ್ತಾಹಾರ, ಚಿನ್ನದ ಕಿರೀಟ,

ರನ್ನದ ಒಡ್ಯಾಣ, ನವರತ್ನದ ಮೂಗುತಿ, ಕರ್ಣಾಭರಣ ಮತ್ತು ರತ್ನದ ನಕ್ಷತ್ರಮಾಲಿಕೆ-ಇವುಗಳನ್ನು ಸಮರ್ಪಿಸಿದರು. ಆ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿ, ಪೂಜಾಕಾರ್ಯಗಳು ಶಾಶ್ವತವಾಗಿ ನಡೆಯುವಂತೆ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. ಈಶ್ವರ ಪ್ರೀತ್ಯರ್ಥವಾಗಿ, ಮಹಾರಾಜರು ಶತಗೋವುಗಳನ್ನೂ, ಒಂದು ವೃಷಭವನ್ನೂ ಧಾರೆಯೆರೆದುಕೊಟ್ಟು, ಪ್ರತಿದಿನವೂ ದೇವಸ್ಥಾನಕ್ಕೆ ಹಾಲು, ಮೊಸರು, ಬೆಣ್ಣೆ-ಬರುವಂತೆ ಏರ್ಪಡಿಸಿದರು. ಆ ಗೋವೃಂದವನ್ನು ಕಾಪಾಡುವುದಕ್ಕಾಗಿ ಅನೇಕ ಹುಲ್ಲುಗಾವಲುಗಳನ್ನು ಬಿಟ್ಟುಕೊಟ್ಟರು.

ಮಹಾರಾಜರ ತಂದೆಯವರಾದ ಖಾಸಾ ಚಾಮರಾಜ ಒಡೆಯರು ಅರಿಕುಠಾರವೆಂಬ ಗ್ರಾಮದಲ್ಲಿ ಜನ್ಮತಾಳಿದರು. ಅವರು ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಆ ಊರಿಗೆ ಚಾಮರಾಜನಗರವೆಂಬುದಾಗಿ ಹೆಸರಿಟ್ಟು, ಅಲ್ಲಿ ಒಂದು ಈಶ್ವರ ದೇವಸ್ಥಾನವನ್ನು ಕಟ್ಟಿಸಿ, ಚಾಮರಾಜೇಶ್ವರ ಎಂಬ ಹೆಸರಿನ ಶಿವಲಿಂಗವನ್ನು ಪ್ರತಿಷ್ಠೆಮಾಡಿಸಿದರು. ಪೂಜ್ಯಮಾತೆಯವರಾದ ಕೆಂಪನಂಜಮ್ಮಣ್ಣಿಯವರ ಹೆಸರಿನಲ್ಲಿ ಪಾರ್ವತೀದೇವಿಯನ್ನು ಪ್ರತಿಷ್ಠೆಮಾಡಿಸಿದರು. ಆ ದೇವಾಸ್ಥಾನದಲ್ಲಿ ಪೂಜಾಕಾರ್ಯಗಳನ್ನು ನಿರಂತರವಾಗಿ ನಡೆಯಿಸುವುದಕ್ಕಾಗಿ ಮಹಾರಾಜರು ತಸ್ತೀಕನ್ನು ಏರ್ಪಡಿಸಿದರು; ಮಾನ್ಯಗಳನ್ನು ಬಿಟ್ಟುಕೊಟ್ಟರು.

ಮೇಲುಕೋಟೆಯ ದೇವಸ್ಥಾನಗಳನ್ನು ಜೀರ್ಣೋದ್ಧಾರಮಾಡಿಸಿ, ಚೆಲುವ ನಾರಾಯಣಸ್ವಾಮಿಗೆ ಕೃಷ್ಣರಾಜಮುಡಿ ಎಂಬ ಚಿನ್ನದ ಕಿರೀಟವನ್ನು ಮಾಡಿಸಿಕೊಟ್ಟರು. ಮೇಲುಕೋಟೆಯಲ್ಲಿ ವಾಸಮಾಡತಕ್ಕ ಬ್ರಾಹ್ಮಣರಿಗೆ ಪ್ರತಿದಿನವೂ ಒಬ್ಬೊಬ್ಬರಿಗೆ ಒಂದೊಂದು ಪಾವು ಸ್ಥಳವಾಸದ ಅಕ್ಕಿಯನ್ನು ಕೊಡಬೇಕೆಂದು ನಿಬಂಧನೆಮಾಡಿದರು. ಒಮ್ಮೆ ಮಹಾರಾಜರು ಶಿವಗಂಗೆಗೆ ಹೋಗಿದ್ದರು. ಆ ಬೆಟ್ಟದ ಶಿಖರದಲ್ಲಿರುವ ಒಂದು ಕೋಡುಗಲ್ಲಿಗೆ ಹಿಂದಿನ ಕಾಲದಲ್ಲಿ ಕಟ್ಟಿದ್ದ ಘಂಟೆಯು ಬಿದ್ದುಹೋಗಿದೆಯೆಂದು ತಿಳಿದು ಅವರು ಆ ನಿರಾಲಂಬ ಪ್ರದೇಶದ ಕೋಡುಗಲ್ಲಿಗೆ ಬೆಳ್ಳಿಯ ಐದು ಘಂಟೆಗಳನ್ನು ಹಾಕಿಸಿದರು.

ಮೈಸೂರು ಸಂಸ್ಥಾನದ ಹೊರಗಡೆಯಲ್ಲಿರುವ ಪುಣ್ಯಕ್ಷೇತ್ರಗಳಲ್ಲಿ ನಡೆಯತಕ್ಕ ದೇವತಾಕಾರ್ಯಗಳಿಗೂ ಮಹಾರಾಜರು ಉದಾರವಾಗಿ ಸಹಾಯ ಮಾಡಿದರು. ಕಾಶೀ ಕ್ಷೇತ್ರದಲ್ಲಿ ಒಂದು ಅನ್ನಸತ್ರವನ್ನಿಡಿಸಿದರು. ತಿರುಪತಿ ವೆಂಕಟರಮಣಸ್ವಾಮಿಯ ಪೂಜೆಗೆ ಬೇಕಾದ ಅನೇಕ ಸೌಕರ್ಯಗಳನ್ನು ಕಲ್ಪಿಸಿದರು. ಪರಸ್ಥಳದಿಂದ ಯಾತ್ರಾರ್ಥಿಗಳಾಗಿ ಬರತಕ್ಕ ಬ್ರಾಹ್ಮಣರಿಗಾಗಿ ತಿರುಪತಿ ಬೆಟ್ಟದಮೇಲೆ ಒಂದು ಅನ್ನಸತ್ರವನ್ನು ಏರ್ಪಡಿಸಿದರು. ಶ್ರೀಶೈಲದ ಮಲ್ಲಿಕಾರ್ಜುನಸ್ವಾಮಿಗೆ ರುದ್ರಾಕ್ಷಿಮಂಟಪವನ್ನೂ, ಕಂಚಿಯ ಏಕಾಂಬರೇಶ್ವರ ಸ್ವಾಮಿಗೆ ಮುತ್ತಿನ ಪಾಲಕಿಯನ್ನೂ, ಒಂದು ಆನೆಯನ್ನೂ ಭಕ್ತಿಕಾಣಿಕೆಯಾಗಿ ಅರ್ಪಿಸಿದರು. ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪ್ರತಿ ದಿನವೂ ನೂರು ಮಂದಿ ಬ್ರಾಹ್ಮಣರಿಗೆ ಭೋಜನ ನಡೆಯುವಂತೆ ಏರ್ಪಾಟುಮಾಡಿ, ದೇವರಿಗೆ ಒಂದು ಬೊಂಬೆಯ ತೇರನ್ನು ಮಾಡಿಸಿಕೊಟ್ಟರು. ಧರ್ಮಸ್ಥಳ, ಕಾರ್ಕಳ, ಮೂಡಬಿದರೆ, ಮುಂತಾದ ಜೈನ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿ ನಡೆಯುವ ಪೂಜಾ ಕಾರ್ಯಗಳಿಗೆ ಸಹಾಯ ಮಾಡಿದರು. ಉಡುಪಿ ಶ್ರೀ ಕೃಷ್ಣ ದೇವರಿಗೆ ರತ್ನಕಿರೀಟವನ್ನು ಒಪ್ಪಿಸಿ, ಅನೇಕ ದ್ರವ್ಯಾಭರಣಗಳನ್ನು ಸಲ್ಲಿಸಿದರು. ಮಹಾರಾಜರು ಸರ್ವಸಮತಾಭಾವದಿಂದ ಎಲ್ಲ ಪುಣ್ಯಕ್ಷೇತ್ರಗಳಿಗೂ ಹೋಗಿ ಬರುತ್ತಿದ್ದರು. ಅವರು ಸ್ವಧರ್ಮನಿರತರೂ, ಪರಧರ್ಮಸಹಿಷ್ಣುಗಳೂ ಆಗಿದ್ದರು. ಎಲ್ಲ ಮತಗಳ ಪ್ರಜೆಗಳನ್ನೂ ಪುತ್ರನಿರ್ವಿಶೇಷವಾಗಿ ಕಾಪಾಡುತ್ತಿದ್ದರು.

'ಅಭಿನವ ಕರ್ಣ' ನೆಂದು ಕೀರ್ತಿಪಡೆದ ಮಹಾರಾಜರು ಮಾಡಿದ ದಾನಧರ್ಮಗಳನ್ನು ಈ ಚಿಕ್ಕ ಪುಸ್ತಕದಲ್ಲಿ ವಿವರಿಸಲು ಸಾಧ್ಯವಿಲ್ಲ. ಸನಾತನ ಧರ್ಮತ್ರಾಣಸ್ವರೂಪರಾಗಿದ್ದ ಅವರು ಸಂಸ್ಕೃತಿಯನ್ನು ಪುನರುದ್ಧಾರ ಮಾಡಿ, ಆರ್ಯಧರ್ಮಕ್ಕೆ ನವಚೈತನ್ಯವನ್ನುಂಟುಮಾಡಿದರು. ಅವರು ಅನೇಕ ಅಗ್ರಹಾರಗಳನ್ನು ಕಟ್ಟಿಸಿ, ವೇದವಿದರೂ ಕರ್ಮಠರೂ ಆದ ಬ್ರಾಹ್ಮಣರಿಗೆ ದಾನಮಾಡಿದರು. ಕಪಿಲಾ ನದಿಯ ತೀರದಲ್ಲಿ ಶ್ರೀ ಕೃಷ್ಣ ರಾಜೇಂದ್ರ ಪುರವೆಂಬ ಅಗ್ರಹಾರವನ್ನೂ ಮೈಸೂರು ಕೋಟೆಯ ದಕ್ಷಿಣ ಭಾಗದಲ್ಲಿ ದೇವೀರಮ್ಮಣ್ಣಿ ಅಗ್ರಹಾರವನ್ನೂ ನೈರುತ್ಯ ದಿಕ್ಕಿನಲ್ಲಿ ಕೊತ್ತವಾಡಿ ಅಗ್ರಹಾರವನ್ನೂ ಪಶ್ಚಿಮ ಭಾಗದಲ್ಲಿ ಚೆಲುವಾಂಬಾ ಅಗ್ರಹಾರವನ್ನು ಕಟ್ಟಿಸಿ

ಬ್ರಾಹ್ಮಣರಿಗೆ ದಾನಮಾಡಿದರು. ರಾಜಾಶ್ರಯದಿಂದ ಸಂತೃಪ್ತರಾದ ಬ್ರಾಹ್ಮಣರು ವೇದಾಧ್ಯಯನಸಂಪನ್ನರಾಗಿ, ಚತುಃಶ್ಶಾಸ್ತ್ರಪಂಡಿತರಾಗಿ ಸಂಸ್ಕೃತಿಯನ್ನು ಕಾಪಾಡಿಕೊಂಡುಬರುತ್ತಿದ್ದರು.

ಸಂಸ್ಥಾನದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚಾರ ಮಾಡತಕ್ಕ ಪ್ರಯಾಣಿಕರ ಸೌಕರ್ಯಕ್ಕಾಗಿ ರಾಜಮಾರ್ಗಗಳ ಕೆಲದಲ್ಲಿ ಒಂದೊಂದು ಗಾವುದ ದೂರಕ್ಕೆ ಒಂದೊಂದು ಅನ್ನಸತ್ರವನ್ನು ಇಡಿಸಿದರು. ದಾರಿಯ ಪಕ್ಕಗಳಲ್ಲಿ ಸಾಲುಮರಗಳನ್ನು ನೆಡಿಸಿ, ಅಲ್ಲಲ್ಲಿ ಗುಂಡುತೋಪುಗಳನ್ನು ಹಾಕಿಸಿ, ಸರೋವರ, ತಟಾಕಾದಿಗಳನ್ನು ನಿರ್ಮಿಸಿ ನೀರೂ, ನೆಳಲೂ, ಯಥೇಚ್ಛವಾಗಿ ದೊರೆಯುವಂತೆ ಮಾಡಿದರು. ತಿರುಮಕೂಡಲು ನರಸೀಪುರ ಮಾರ್ಗದಲ್ಲಿ ಕೊರವಣವೆಂಬ ಗ್ರಾಮದ ಬಳಿಯಲ್ಲಿ ದೇವಾಂಬುಧಿ ಎಂಬ ಕೆರೆಯನ್ನೂ ಹೆಗ್ಗಡದೇವನಕೋಟೆ—ತಲಚೇರಿ ಮಾರ್ಗದಲ್ಲಿ ಲಿಂಗಾಂಬುಧಿ ಎಂಬ ಕೆರೆಯನ್ನೂ ಕಟ್ಟಿಸಿದರು. ನಂಜನಗೂಡು, ಸುಬ್ರಹ್ಮಣ್ಯ, ಶ್ರೀರಂಗಪಟ್ಟಣ, ತಿರುಮಕೂಡಲು, ಕೊಳ್ಳೇಗಾಲ, ಗರ್ಗೇಶ್ವರಿ ಮುಂತಾದ ಸ್ಥಳಗಳಿಗೆ ಹೋಗುವ ರಾಜಮಾರ್ಗಗಳಲ್ಲಿ ಧರ್ಮಶಾಲೆಗಳನ್ನೂ, ಕಲ್ಯಾಣಿಗಳನ್ನೂ ಕಟ್ಟಿಸಿ, ಅಲ್ಲಲ್ಲಿ ಅರವಟಿಗೆಗಳನ್ನು ಇಡಿಸಿ, ಪ್ರಯಾಣಿಕರಿಗೆ ಅನ್ನೋದಕಗಳು ದೊರೆಯುವಂತೆ ಮಾಡಿದರು. ಧರ್ಮ ಪ್ರಭುಗಳ ರಾಜ್ಯದಲ್ಲಿ ಎಲ್ಲಿ ನೋಡಿದರೂ ಧರ್ಮಕಾರ್ಯಗಳು ತುಂಬಿರಲು, ಜನರು "ಧರ್ಮರಾಜ್ಯ" ವೆಂಬುದಾಗಿ ಕೊಂಡಾಡುತ್ತಿದ್ದರು. ಮೈಸೂರು ಪಟ್ಟಣದಲ್ಲಿ ಭಿಕ್ಷುಕರೂ, ಗೋಸಾಯಿಗಳೂ, ಬೈರಾಗಿಗಳೂ, ಸಂನ್ಯಾಸಿಗಳೂ ಇಳಿದುಕೊಳ್ಳಲು ಮಧುವನದ ಬಳಿಯಲ್ಲಿ ಧರ್ಮಶಾಲೆಯನ್ನು ಕಟ್ಟಿಸಿದರು. ಮಹಾರಾಜರಿಗೆ ತಿರುಕರಲ್ಲಿಯೂ, ಬಡವರಲ್ಲಿಯೂ ಅಪಾರವಾದ ದಯೆಯಿತ್ತು. ಬಡಬಗ್ಗರಿಗೆ ಆಗಾಗ ಬಟ್ಟೆಬರೆ ಗಳನ್ನೂ ಅರಮನೆಯಿಂದ ಕೊಡಿಸುತ್ತಿದ್ದರು.

ಮಹಾರಾಜರಿಗೆ ಗುರುಪೀಠಗಳಲ್ಲಿ ಅನನ್ಯಸಾಧಾರಣವಾದ ಭಕ್ತಿ ಗೌರವಗಳಿದ್ದುವು. ಪರಕಾಲಮಠ, ಶೃಂಗೇರಿಮಠ, ಬಾಳೆಹೊನ್ನೂರುಮಠ, ವ್ಯಾಸರಾಯಮಠ, ಶಿವಗಂಗೆಮಠ, ಶ್ರವಣಬೆಳಗೊಳಮಠ, ಉತ್ತರಾದಿಮಠ, ಸೋಸಲೆಮಠ, ಮೈಸೂರಿನಲ್ಲಿರುವ ಗಚ್ಚಿನಮಠ, ಜಪದಕಟ್ಟೆಮಠ—ಇವೇ

ಮೊದಲಾದ ಎಲ್ಲ ಮತೀಯರ ಶ್ರೀ ಮಠಗಳಿಗೂ ಒಂದೇ ರೀತಿಯಾದ ರಾಜಗೌರವವನ್ನು ಸಲ್ಲಿಸುತ್ತಿದ್ದರು. ವೈದಿಕ ಮತಸಂಪ್ರದಾಯದಂತೆ ಮಹಾರಾಜರು ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ಚಾಮರಾಜನಗರ, ಮೇಲುಕೋಟೆ, ಶಿವಗಂಗೆ ಮುಂತಾದ ಕ್ಷೇತ್ರಗಳಲ್ಲಿ ತ್ರಿಮತಸ್ಥ ಬ್ರಾಹ್ಮಣರಿಂದ ಅಗ್ನಿಷ್ಟೋಮ, ಅತಿರಾತ್ರ, ಉಕ್ಥ್ಯ, ವಾಜಪೇಯ, ಗರುಡಚಯನ, ಸರ್ವತೋಮುಖ, ಬೃಹಸ್ಪತಿಸವನ ಮೊದಲಾದ ಅನೇಕ ಯಜ್ಞಗಳನ್ನು ಮಾಡಿಸಿದರು.

ಈ ಮಹಾಪ್ರಭುವರ್ಯರು ಕೊಟ್ಟಿರುವಷ್ಟು ಅಗ್ರಹಾರಗಳನ್ನೂ ಮಾನ್ಯಗಳನ್ನೂ, ಭೂದಾನವನ್ನೂ, ಕರ್ಣಾಟಕದಲ್ಲಿ ಆಳಿದ ಯಾವ ರಾಜರೂ ಕೊಟ್ಟಿಲ್ಲವೆಂದು ಹೇಳಬಹುದು. ಅವರು ಧರ್ಮೈಕಪ್ರಾಣರಾಗಿ ತಮ್ಮ ಪವಿತ್ರ ಜೀವನಯಾತ್ರೆಯನ್ನು ಸಾಗಿಸಿ, ತ್ಯಾಗಶೀಲರೆಂದೂ, ಧರ್ಮನಿಷ್ಠರೆಂದೂ ಕೀರ್ತಿವೆತ್ತು ಆದರ್ಶಪುರುಷರೆನ್ನಿಸಿಕೊಂಡ ಮಹಾನುಭಾವರಾಗಿದ್ದಾರೆ.

ಹದಿಮೂರನೆಯ ಅಧ್ಯಾಯ

ಚರಮ ದೃಶ್ಯ.

'ಜಾತಸ್ಯ ಮರಣಂ ಧ್ರುವಂ'
ಸತ್ತವಂತರ ನೀನು ಸತ್ತರೆಂದೆನಬೇಡ
ಸತ್ತವ್ರು ಮಗನ ಕರೆವಂತೆ ನಿನ್ನನವ
ರೆತ್ತಿ ಕೊಂಬುವರು॥ಸರ್ವಜ್ಞ ॥

ಪ್ರಪಂಚವು ಪರಮಾತ್ಮನ ಲೀಲಾರಂಗವೆಂಬುದಾಗಿ ಜ್ಞಾನಿಗಳು ಹೇಳುತ್ತಾರೆ. ಅವನ ಅಪಾರ ಮಹಿಮೆಯನ್ನೂ, ಅನಂತ ಕಲ್ಯಾಣಗುಣಗಳನ್ನೂ ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ. ಭಗವಂತನು ತನ್ನ ದಿವ್ಯ ಸೃಷ್ಟಿಯಲ್ಲಿ ಮನುಷ್ಯನಿಗೆ ಗಣ್ಯಸ್ಥಾನವನ್ನು ಕೊಟ್ಟಿರುತ್ತಾನೆ. ಪ್ರತಿಯೊಬ್ಬ ಮನುಷ್ಯನೂ ತನ್ನ ಆಯುಃಪರಿಮಿತಿಯಲ್ಲಿ ಆತ್ಮೋನ್ನತಿಗಾಗಿಯೂ, ಸರ್ವ ಜೀವಿಗಳ ಮೇಲ್ಮೆಗಾಗಿಯೂ ನಿರಂತರ ಶ್ರಮಿಸಬೇಕು. ಯಾರು ನಿಜವಾದ ಮಾನವಸೇವೆಯನ್ನು ಮಾಡಿರುತ್ತಾರೆಯೋ ಅವನ ಹೆಸರು ಈ ಪ್ರಪಂಚ ಇರುವವರೆಗೂ ಸ್ಥಿರವಾಗಿರುತ್ತದೆ.

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು ಜನತೆಯ ಸರ್ವತೋಮುಖವಾದ ಅಭ್ಯುದಯವನ್ನು ಸಾಧಿಸಲು ಧೈರ್ಯದಿಂದಲೂ, ನಿಸ್ಪೃಹತೆಯಿಂದಲೂ, ನಿಸ್ವಾರ್ಥತೆಯಿಂದಲೂ ದುಡಿದರು. ಅವರು ಸಾಹಿತ್ಯ, ಸಂಸ್ಕೃತಿ, ಸನಾತನ ಧರ್ಮ—ಇವುಗಳ ಪುನರುಜ್ಜೀವನಕ್ಕಾಗಿ ಉದಾರಹೃದಯದಿಂದ ರಾಜಾಶ್ರಯವನ್ನಿತ್ತರು. ಆ ಮಹಾಪುರುಷರ ಹೆಸರು ಜನರ ಸ್ಮೃತಿಪಥದಲ್ಲಿ ಅಚ್ಚಳಿಯದೆ ಉಳಿಯುವಂತಾಯಿತು! ಅವರು ಪ್ರಭುವಾಗಿ ರಾಜ್ಯವಾಳಿದರು: ಕವಿಯಾಗಿ ಸಾಹಿತ್ಯಸೇವೆ ಮಾಡಿದರು: ಕಲಾಭಿಮಾನಿಗಳಾಗಿ ಕಲಾಪರಿಪೋಷಣೆ ಮಾಡಿದರು; ಸಹೃದಯರಾಗಿ ವಿದ್ವಜ್ಜನಾಶ್ರಯರಾಗಿದ್ದರು; ರಸಿಕರಾಗಿ ಭೋಗಭಾಗ್ಯಗಳನ್ನು ಅನುಭವಿಸಿದರು; ಸನ್ಮಿತ್ರರಾಗಿ ಸಾಮ್ರಾಜ್ಯ ಸರ್ಕಾರದವರ ಮನ್ನಣೆಗೆ ಪಾತ್ರರಾದರು!

ಹಿಡಿದ ಕಾರ್ಯದಲ್ಲಿ ಕೃತಕೃತ್ಯರಾದ ಮಹಾರಾಜರು "ಕಾವ್ಯಶಾಸ್ತ್ರ ವಿನೋದೇನ ಕಾಲೋಗಚ್ಛತಿ ಧೀಮತಾಂ" ಎಂಬಂತೆ, ಸದಾ ಸತ್ಸಂಗದಲ್ಲಿ ಕಾಲ ಕಳೆಯುತ್ತಾ ಹರ್ಷಚಿತ್ತರಾಗಿರುತ್ತಿದ್ದರು. ಅವರು ಪ್ರತಿ ದಿನವೂ ಪುಟ್ಟ ಮಹಾರಾಜರನ್ನು ಎತ್ತಿಕೊಂಡು ಮುದ್ದಾಡುತ್ತಾ, ಆಗಾಗ ವಿನೋದ ಮಾಡುತ್ತಾ ಸಂತೋಷಪಡುತ್ತಿದ್ದರು. ಪ್ರಾತಃಕಾಲ ಬಹಳ ಹೊತ್ತಿನವರೆಗೂ ದೇವರ ಪೂಜೆಯನ್ನು ನೆರವೇರಿಸುತ್ತಾ, ಆಮೇಲೆ ಬಕ್ಷಿ ನರಸಪ್ಪ, ಭಾಗವತ ಸುಬ್ಬರಾವ್, ಗುರಿಕಾರ್ ಮರಿಮಲ್ಲಪ್ಪ ಮೊದಲಾದ ಆಪ್ತ ಜನರೊಂದಿಗೆ ನಾನಾ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದರು ಅವರಿಗೆ ಪ್ರತಿನಿತ್ಯವೂ ಆರೋಗಣೆಯ ಸಮಯಕ್ಕೆ ನಂಜನಗೂಡಿನಿಂದ ಶ್ರೀಕಂಠೇಶ್ವರ ಸ್ವಾಮಿಯ ನೈವೇದ್ಯಾನ್ನವು ಬರುತ್ತಿತ್ತು. ಅವರು ಪರಮಭಕ್ತಿಯಿಂದ ನೈವೇದ್ಯವನ್ನು ಸ್ವೀಕರಿಸಿ ಆರೋಗಣೆಯನ್ನು ಮುಗಿಸುತ್ತಿದ್ದರು. ಅವರಿಗೆ ವಯಸ್ಸಾಗುತ್ತಾ ಬರುತ್ತಿದ್ದರೂ. ಬಹಳ ಲವಲವಿಕೆಯುಳ್ಳವರಾಗಿಯೇ ಇದ್ದರು. ಚಾಮರಾಜ ಒಡೆಯರಿಗೆ ನಾಲ್ಕನೆಯ ವರ್ಷ ತುಂಬುತ್ತಿತ್ತು. ಮುಮ್ಮಡಿ ಶ್ರೀ ಕೃಷ್ಣ ರಾಜೇಂದ್ರ ಒಡೆಯರು ಇಹಲೋಕದಲ್ಲಿ ಮಾಡಬೇಕಾದ ಕಾರ್ಯಗಳೆಲ್ಲಾ ಪೂರ್ಣವಾಗುತ್ತಾ ಬಂದವೋ ಎಂಬಂತೆ, ಅವರ ದೇಹಸ್ಥಿತಿಯು ಕೆಡುತ್ತಾ ಬಂದು ಹಾಸಿಗೆ ಹಿಡಿದು ಮಲಗಿದರು. ಅವರಿಗೆ ಆಲಸ್ಯವು ಹೆಚ್ಚಾಗುತ್ತಲೇ ಬಂದಿತು; ನಿಶ್ಶಕ್ತರಾಗುತ್ತಾ ಬಂದರು. ತಾವು ಇನ್ನು ಬದುಕುವ ಸಂಭವವಿಲ್ಲವೆಂದು ಅವರಿಗೆ ಕಂಡುಬಂದಿತು. ೧೮೬೮ನೆಯ ಇಸವಿ ಮಾರ್ಚಿ ೨೬ನೆಯ ತಾರೀಖಿನ ದಿನ ಮಹಾರಾಜರ ಸ್ಥಿತಿಯು ಬಹಳ ಕಳವಳಕ್ಕಾಸ್ಪದವನ್ನು ಕೊಟ್ಟಿತು. ಅವರು ಕೂಡಲೆ, ಗುರಿಕಾರ ಮರಿಮಲ್ಲಪ್ಪನನ್ನು ಚಿಕ್ಕ ಅರಮನೆಗೆ ಕಳುಹಿಸಿ, ಕುಮಾರ ಮಹಾರಾಜರನ್ನು ಕರೆಯಿಸಿಕೊಂಡರು. ಮಹಾರಾಜರ ಆಪ್ತರಾದ ಬಕ್ಷಿ ನರಸಪ್ಪ ಮುಂತಾದ ಅರಮನೆಯ ಕೆಲವು ಅಧಿಕಾರಿಗಳು ಸಮೀಪದಲ್ಲಿಯೇ ಇದ್ದರು. ರಾಣಿವಾಸದವರು ತೆರೆ ಮರೆಯಲ್ಲಿ ಕುಳಿತು ಮಹಾರಾಜರಿಗಾಗಿ ವ್ಯಥೆಪಡುತ್ತಿದ್ದರು. ಅವರು ಕುಮಾರನನ್ನು ಕಣ್ಣು ತುಂಬ ನೋಡಿ, ಮೈದಡವಿ, ಮುದ್ದಾಡಿ ಹರಸಿ ಚಿಕ್ಕ ಅರಮನೆಗೆ ಕಳುಹಿಸಿ ಕೊಟ್ಟರು. ಮರುದಿನ ಪ್ರಾತಃಕಾಲ ಮಹಾರಾಜರ ಸ್ಥಿತಿಯು ನಿರಾಶಾಜನಕವಾಗಿತ್ತು ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನದಿಂದ ಪ್ರತಿದಿನವೂ ಪದ್ಧತಿಯಂತೆ ಬರುತ್ತಿದ್ದ ನೈವೇದ್ಯಾನ್ನವು ಇನ್ನು ಮೇಲೆ

ಬರಬೇಕಾದುದಿಲ್ಲವೆಂದು ತಿಳಿಸಿ, ಪ್ರಭುಗಳು ಧ್ಯಾನಾಸಕ್ತರಾಗಿದ್ದರು. ಘಳಿಗೆ ಘಳಿಗೆಗೂ ದೇಹಸ್ಥಿತಿಯು ಕೆಡುತ್ತಲೇ ಬಂದಿತು ಸಮರ್ಥರಾದ ವೈದ್ಯರು ಎಷ್ಟೇ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ. ವಿಧಿನಿಯಮವೇ ಬೇರೆಯಾಗಿದ್ದಿತು! ಆದಿನ ರಾತ್ರಿ ೧೧ ಘಂಟೆಯ ವೇಳೆಗೆ ಮಹಾರಾಜರು ಇಹಲೋಕ ವ್ಯಾಪಾರವನ್ನು ಪರಿತ್ಯಜಿಸಿ ಸ್ವರ್ಗಸ್ಥರಾದರು. ಅರಮನೆಯು ದುಃಖಸಾಗರದಲ್ಲಿ ಮುಳುಗಿತು! ಆಗ ಮಹಾರಾಜರಿಗೆ ೭೪ ವರ್ಷ ವಯಸ್ಸಾಗಿದ್ದಿತು.

ಬಕ್ಷಿ ನರಸಪ್ಪನು ಆಗಲೇ ಹೋಗಿ, ಮೇಜರ್ ಎಲಿಯಟ್ ಅವರಿಗೆ ಈ ದುಃಖ ಸಮಾಚಾರವನ್ನು ತಿಳಿಸಿದನು. ಆಗ ಅವೇಳೆಯಾಗಿದ್ದುದರಿಂದ ಮಹಾರಾಜರ ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಯಾವುದೊಂದು ಏರ್ಪಾಟನ್ನು ಕೈಗೊಂಡರೂ ಪಟ್ಟಣದ ಜನಗಳ ಮನಸ್ಸಿನಲ್ಲಿಯೂ ಮತ್ತು ಅರಮನೆಯ ಜನರ ಮನಸ್ಸಿನಲ್ಲಿಯೂ ಸಂಶಯವುಂಟಾಗಬಹುದೆಂದು ತಿಳಿದು ಬೆಳಗಾಗುವ ವರೆಗೂ ಆ ವಿಚಾರಗಳಿಗೆ ಗಮನ ಕೊಡಕೂಡದೆಂದು ಎಲಿಯಟ್‌ರವರು ಹೇಳಿಕಳುಹಿಸಿದರು. ಫ್ರೆಂಚ್‌ರಾಕ್ಸ್‌ನಲ್ಲಿದ್ದ ದೇಶೀಯ ಪದಾತಿದಳದವರು ಕೂಡಲೆ ಮೈಸೂರಿಗೆ ಬರತಕ್ಕದೆಂದು ಶೀಘ್ರ ವರ್ತಮಾನವನ್ನು ಕಳುಹಿಸಿದರು. ಆ ಸೈನ್ಯವು ಬೆಳಕು ಹರಿಯುವುದಕ್ಕೆ ಸ್ವಲ್ಪ ಮುಂಚಿತವಾಗಿ ಮೈಸೂರನ್ನು ಸೇರಿತು. ಮಹಾರಾಜರ ಸೈನ್ಯಾಧಿಕಾರಿಯೂ ಮತ್ತು ಮೈಸೂರು ನಗರದ ಮ್ಯಾಜಿಸ್ಟ್ರೇಟರೂ ಆಗಿದ್ದ ಮೇಜರ್ ರೇರ್ಟಿರವರು ಸೈನ್ಯಸಮೇತರಾಗಿ ಕೋಟೆಯ ರಕ್ಷಣೆಯಲ್ಲಿ ನಿರತರಾದರು. ಎಲಿಯಟ್‌ರವರು ಬಕ್ಷಿ ನರಸಪ್ಪ ನೊಂದಿಗೆ ಅರಮನೆಯ ಪ್ರತಿಯೊಂದು ಕೊಠಡಿಗೂ ಹೋಗಿ, ಜವಾಹಿರ್, ನಗನಾಣ್ಯ, ವಸ್ತ್ರಾಭರಣಗಳನ್ನು ಭದ್ರಪಡಿಸಿ, ಪ್ರತಿಯೊಂದು ಬಾಗಿಲಿಗೂ ಬೀಗ ಮುದ್ರೆಯನ್ನು ಹಾಕಿಸಿ ರೆಸಿಡೆಂಸಿ ಮೊಹರನ್ನು ಒತ್ತಿದರು. "ಮಹಾ ರಾಜರ ರಾಣಿವಾಸದವರಿಗೂ, ಆಶ್ರಿತರಿಗೂ ಯಾವುದೊಂದು ತೊಂದರೆಯಾಗ ದಂತೆ ನೋಡಿಕೊಳ್ಳುತ್ತೇವೆ" ಎಂದು ಎಲಿಯಟ್‌ರವರು ಭಾಗವತ ಸುಬ್ಬ ರಾವ್ ಎಂಬುವರ ಮೂಲಕ ಅಂತಃಪುರಕ್ಕೆ ಹೇಳಿಕಳುಹಿಸಿದರು. ಬೆಂಗಳೂರಿ ನಲ್ಲಿದ್ದ ಕಮಿಷನರವರಾದ ಬೌರಿಂಗ್‌ರವರಿಗೆ ಈ ವರ್ತಮಾನವನ್ನು ಕಳುಹಿಸಿ ಎಲಿಯಟ್‌ರವರು ಅರಮನೆಯ ರಕ್ಷಣೆಯಲ್ಲಿ ಬಹಳ ಜಾಗರೂಕರಾಗಿದ್ದರು.

ಬೆಳಗಾದಮೇಲೆ ಮಹಾರಾಜರ ಕಳೇಬರವನ್ನು ಅಲಂಕರಿಸಿದ್ದ ಪಲ್ಲಕ್ಕಿಯಲ್ಲಿರಿಸಿಕೊಂಡು ಸಮಸ್ತ ಸೇನಾ ಮರ್ಯಾದೆಗಳೊಡನೆ ರುದ್ರಭೂಮಿಗೆ ಶ್ಮಶಾನಯಾತ್ರೆ ಸಾಗಿತು. ರಾಜಧಾನಿಯ ಜನರೂ, ಸುತ್ತಮುತ್ತಣ ಗ್ರಾಮಗಳಿಂದ ಬಂದಿದ್ದ ಸಾವಿರಾರು ಪ್ರಜೆಗಳೂ ಮಹಾರಾಜರ ಕಳೇಬರವನ್ನು ನೋಡಿ ನೋಡಿ ದುಃಖವನ್ನು ತಡೆಯಲಾರದೆ ಗೋಳಿಡುತ್ತಿದ್ದರು. ಅರಮನೆಯ ಅಂತಃಪುರ ಸ್ತ್ರೀಯರ ದುಃಖವನ್ನಂತೂ ಹೇಳತೀರದು. ಮಹಾರಾಜರ ಕಳೇಬರವನ್ನು ಶ್ರೀಗಂಧದ ಮರದ ಚಿತೆಯಮೇಲಿರಿಸಿ, ಕರ್ಪೂರದರಾಶಿಯನ್ನು ಅಳವಡಿಸಿ ದಹನಕಾರ್ಯವನ್ನು ನೆರವೇರಿಸಿದರು. ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ ಪಾಂಚಭೌತಿಕಶರೀರವು ಕಣ್ಮರೆಯಾಯಿತು!

ಅದೇ ದಿನ ಸಾಯಂಕಾಲ, ಬೆಂಗಳೂರು ಕವಾಯತು ಮೈದಾನದಲ್ಲಿ ಸೈನಿಕರೆಲ್ಲರೂ ಸೇರಿದ್ದರು. ನಗರದ ಸಾವಿರಾರು ಜನರೂ ಅಧಿಕಾರಿಗಳೂ ಬಂದಿದ್ದರು. ಆಗ ಇಂಡಿಯಾ ಸರ್ಕಾರದವರು ಹೊರಡಿಸಿದ್ದ ಪ್ರಸಿದ್ಧ ಪತ್ರಿಕೆಯನ್ನು ಬೌರಿಂಗ್‌ರವರು ನೆರೆದಿದ್ದ ಜನಸಮೂಹದಲ್ಲಿ ಪಠಿಸಿದರು. "ಶ್ರೀಮನ್ ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಕೆ.ಜಿ.ಸಿ.ಎಸ್.ಐ., ಅವರು ನಿಧನರಾದರೆಂಬ ಅತ್ಯಂತ ದುಃಖ ಸಮಾಚಾರವನ್ನು ಘನವನ್ನೈದಿದ ಇಂಡಿಯಾ ದೇಶದ ವೈಸ್ರಾಯ್‌ರವರೂ ಮತ್ತು ಗವರ್ನರ್ ಜನರಲ್‌ರವರೂ, ಮೈಸೂರು ದೇಶದ ಸಮಸ್ತ ಪ್ರಜೆಗಳಿಗೂ ಮುಖಂಡರಿಗೂ ಈ ಮೂಲಕ ತಿಳಿಯಪಡಿಸುತ್ತಾರೆ. ಕಳೆದ ಅರ್ಧ ಶತಮಾನಕ್ಕಿಂತಲೂ ಹೆಚ್ಚಾದ ಕಾಲದಿಂದಲೂ ಶ್ರೀಮನ್ ಮಹಾರಾಜರು ಬ್ರಿಟಿಷ್ ಸರ್ಕಾರದವರೊಂದಿಗೆ ಸ್ನೇಹಸೌಹಾರ್ದಗಳಿಂದಿದ್ದುದರಿಂದ ಈಗ ಅವರ ವಿಯೋಗಕ್ಕಾಗಿ ನಾವು ದುಃಖಪಡುತ್ತೇವೆ. ಈಗ ಇನ್ನೂ ಚಿಕ್ಕ ವಯಸ್ಸಿನವರಾಗಿರುವ ದತ್ತುಪುತ್ರರಾದ ಶ್ರೀಮನ್ ಮಹಾರಾಜ ಚಾಮರಾಜ ಒಡೆಯರ್ ಬಹದ್ದೂರ್‌ರವರು ಮೈಸೂರು ಸಿಂಹಾಸನಕ್ಕೆ ಉತ್ತರಾಧಿಕಾರಿಗಳಾಗಿಯೂ ಮತ್ತು ಮೈಸೂರು ಸಂಸ್ಥಾನದ ಮಹಾರಾಜರಾಗಿಯೂ ಇರುತ್ತಾರೆ. ಅವರು ಪ್ರಾಪ್ತವಯಸ್ಕರಾಗುವವರೆಗೂ ಸಂಸ್ಥಾನವನ್ನು ಅವರ ಹೆಸರಿನಲ್ಲಿಯೇ ಬ್ರಿಟಿಷ್ ಸರ್ಕಾರದವರು ಪರಿಪಾಲಿಸುತ್ತಾರೆ. ಮಹಾರಾಜರಿಗೆ ೧೮ ವರ್ಷ ವಯಸ್ಸಾದಾಗ ಅವರು ರಾಜಕಾರ್ಯಗಳನ್ನು ನಿರ್ವಹಿ

ಸಲು ಶಕ್ತರಾಗಿದ್ದರೆ. ರಾಜ್ಯವನ್ನು ಆಗ ಅವರಿಗೆ ವಹಿಸಿಕೊಡಲಾಗುತ್ತದೆ” ಎಂಬುದಾಗಿ ಬೌರಿಂಗ್‌ರವರು ಪ್ರಸಿದ್ಧ ಪತ್ರಿಕೆಯನ್ನು ಓದಿ ಹೇಳಿದಂತೆಯೇ ಅದೇ ದಿನ, ಮೈಸೂರಿನಲ್ಲಿಯೂ, ಅರಮನೆಯ ಮುಂಭಾಗದಲ್ಲಿ ಸೇರಿದ್ದ ಪ್ರಜಾಸಮೂಹಕ್ಕೆ ಎಲಿಯಟ್‌ರವರು ಆ ಪ್ರಸಿದ್ಧ ಪತ್ರಿಕೆಯನ್ನು ಓದಿ ತಿಳಿಸಿದರು. ಬೌರಿಂಗ್‌ರವರು ಮೈಸೂರಿಗೆ ಬಂದು ಅರಮನೆಗೆ ಹೋಗಿ, ಮಹಾರಾಜರ ರಾಣಿವಾಸದವರಿಗೆ ಬ್ರಿಟಿಷ್ ಸರ್ಕಾರದವರ ಅಪಾರ ದುಃಖವನ್ನು ತಿಳಿಸಿದರು. ಮಹಾರಾಣಿಯವರು “ನಮ್ಮ ಕೃತಜ್ಞತೆಗಳನ್ನು ಸಾಮ್ರಾಜ್ಯ ಸರ್ಕಾರದವರಿಗೆ ಶ್ರುತಪಡಿಸಬೇಕು” ಎಂದು ಬೌರಿಂಗ್‌ರವರಿಗೆ ತಿಳಿಯಪಡಿಸಿದರು. ಮುಮ್ಮಡಿ ಶ್ರೀ ಕೃಷ್ಣ ಭೂಪಾಲರ ತುಂಬು ಜೀವನದ ಲೀಲಾರಂಗವು ಪರಿಸಮಾಪ್ತಿಯಾಯಿತು! ಅವರು ಚಿರಶಾಂತಿಯನ್ನು ಪಡೆದರು!

ಹದಿನಾಲ್ಕನೆಯ ಅಧ್ಯಾಯ

ಗುಣನಿರೂಪಣೆ, ಶುಭಾಶಂಸನೆ

" ಸರ್ವಸ್ಯ ಜೀವಲೋಕಸ್ಯ ರಾಜಧರ್ಮಃ ಪರಾಯಣಂ "

[ಮಹಾಭಾರತ]

ಮುಮ್ಮಡಿ ಶ್ರೀಕೃಷ್ಣರಾಜೇಂದ್ರ ಒಡೆಯರ ಆದರ್ಶ ವ್ಯಕ್ತಿತ್ವವನ್ನೂ ಗುಣಶೀಲಗಳನ್ನೂ ಹಿಂದಿನ ಅಧ್ಯಾಯಗಳಲ್ಲಿ ಸಂದರ್ಭೋಚಿತವಾಗಿ ಹೇಳಿರುವುದಾದರೂ, ಅಲಂಕರಿಸಿಕೊಂಡ ಮುತ್ತೈದೆಯ ಹಣೆಗೆ ಕುಂಕುಮದ ಬೊಟ್ಟು ಶೋಭಿಸುವಂತೆ, ಈ ಅಧ್ಯಾಯದಲ್ಲಿ ಮಹಾರಾಜರ ಗುಣ ನಿರೂಪಣೆಯನ್ನು ಮಾಡಿ ಅವರ ಜೀವನ ಚರಿತ್ರೆಯನ್ನು ಸಂಪೂರ್ಣಗೊಳಿಸಬೇಕಾಗಿದೆ. ಮಹಾರಾಜರು ತುಂಬ ಜೀವನವನ್ನು ಸಾಗಿಸಿದ ಮಹಾಪುರುಷರು. ಅವರು ತಮ್ಮ ಜೀವಮಾನ ಕಾಲದ ಬಹು ಭಾಗವನ್ನೆಲ್ಲಾ ರಾಜಕೀಯ ಸಂಬಂಧವಾದ ಹೋರಾಟದಲ್ಲಿಯೇ ಕಳೆದರು. ತಮ್ಮ ಕೈತಪ್ಪಿ ಹೋಗಿದ್ದ ರಾಜ್ಯವನ್ನು ಪುನಃ ತಮ್ಮ ವಂಶಜರಿಗೆ ದೊರಕಿಸಿಕೊಡುವ ಪ್ರಯತ್ನಗಳಲ್ಲಿಯೇ ಹಣ್ಣಾದರು. ಅವರು ಬಹಳ ದೃಢಕಾಯರು; ಅಷ್ಟು ಎತ್ತರವಾಗಿಯೂ ಇರಲಿಲ್ಲ, ಅಷ್ಟು ಕುಳ್ಳಾಗಿಯೂ ಇರಲಿಲ್ಲ. ಅವರ ಮುಖದಲ್ಲಿ ಗಾಂಭೀರ್ಯವು ತಾಂಡವವಾಡುತ್ತಿತ್ತು. ಅವರ ಅಗಲವಾದ ಎದೆ; ತೋರವಾದ ಬಾಹುಗಳು; ಪರಿಪುಷ್ಟವಾದ ಅಂಗಗಳು; ಮಹಾರಾಜ ಪದವಿಗೆ ತಕ್ಕ ಮುಖಲಕ್ಷಣಗಳು—ಇವುಗಳೆಲ್ಲಾ ಅವರ ಭವ್ಯ ಶರೀರ ಸಂಪತ್ತನ್ನು ಸೂಚಿಸುತ್ತಿದ್ದುವು. ಅವರು ಬಹಳ ಆಚಾರ ಸಂಪನ್ನರು, ಈಶ್ವರನ ಪರಮಭಕ್ತರು. ಅವರು ಯಾವಾಗಲೂ ಬಹು ಸುಂದರವಾದ ಉಡುಪನ್ನು ಧರಿಸುತ್ತಿದ್ದರು. ಉತ್ಸವ ಕಾಲಗಳಲ್ಲಿ ಅಮೂಲ್ಯವಾದ ವಸ್ತ್ರಗಳನ್ನು ಧರಿಸಿ, ಕೊರಳಿಗೆ ಮೂರೆಳೆಯ ಆಣಿ ಮುತ್ತಿನ ಹಾರಗಳನ್ನು ಹಾಕಿಕೊಳ್ಳುತ್ತಿದ್ದರು. ನಡುವಿನಲ್ಲಿ ನಡುಕಟ್ಟನ್ನು ಬಿಗಿದು ಆ ನಡುಕಟ್ಟಿಗೆ ಒಂದು ಖಡ್ಗವನ್ನು ನೇತಾಡುವಂತೆ ಕಟ್ಟಿರುತ್ತಿದ್ದರು. ಆ ಖಡ್ಗದ ಹಿಡಿಯು

ಮೇಲೆ ಇಂಗ್ಲೆಂಡ್ ದೇಶದ ಮಹಾರಾಜ್ಞಿಯವರ ಭಾವಚಿತ್ರವನ್ನು ಕೆತ್ತಿದ್ದಿತು. ಅವರು ಸ್ವಭಾವತಃ ಪರಮ ದಯಾಳು, ಉದಾರ ಹೃದಯರು. ದೇಹಿ ಎಂದವರಿಗೆ ನಾಸ್ತಿ ಎಂದವರಲ್ಲ. ಅವರು ಕೊಡುಗೈಯ ವೀರಶಿಖಾಮಣಿ ಗಳಾಗಿದ್ದರು. ಜನರು ಅವರನ್ನು ಕಲಿಯುಗದ ಕರ್ಣನೆಂದು ಕರೆಯುತ್ತಿದ್ದರು.

ಮಹಾರಾಜರು ರಾಜ್ಯಾಡಳಿತಗಳಲ್ಲಿ ದಕ್ಷರಾಗಿದ್ದರು. ಅವರು ಒಂದು ಸಲ ನೋಡಿದುದನ್ನೂ, ಒನ್ಮೆ ಕೇಳಿದುದನ್ನೂ ಎಷ್ಟು ದಿನಗಳಾದರೂ ಮರೆಯುತ್ತಿರಲಿಲ್ಲ. ಅವರಿಗೆ ಅಮೋಘವಾದ ಜ್ಞಾಪಕಶಕ್ತಿಯಿತ್ತು. ಹಿಡಿದ ಕೆಲಸವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತಿದ್ದರು. ಅವರಿಗಿದ್ದ ತಾಳ್ಮೆಯು ಅನನ್ಯಸದೃಶವಾದುದು. ತಮ್ಮ ಮನೋಗತವನ್ನು ಸಾಧಿಸಿ ಕೊಳ್ಳುವುದರಲ್ಲಿ ಅವರು ವ್ಯಕ್ತಪಡಿಸುತ್ತಿದ್ದ ಚತುರತೆ, ಕಾರ್ಯಸಂಧಾನಪರತೆ, ದೂರದೃಷ್ಟಿ, ಸದಾಲೋಚನೆ—ಮುಂತಾದ ಗುಣಗಳು ಅವರಲ್ಲಿ ಸಹಜ ವಾಗಿಯೇ ನೆಲಸಿದ್ದುವು.

ಮಹಾರಾಜರಿಗೆ ದೇವರಲ್ಲಿ ನಿಶ್ಚಲವಾದ ಭಕ್ತಿಯಿದ್ದಂತೆಯೇ ಸ್ನೇಹಿತರಲ್ಲಿ ಅಕಲಂಕವಾದ ಪ್ರೇಮವಿತ್ತು. ಡಾಕ್ಟರ್ ಕ್ಯಾಂಬಲ್ ಅವರು ವಿಲಾಯಿತಿಯಲ್ಲಿ ಮಹಾರಾಜರಿಗೆ ಸಂಬಂಧಪಟ್ಟ ವಿವಾದವನ್ನು ಬಗೆಹರಿಸಲು ಸರಿಯಾದ ಮಾರ್ಗದಲ್ಲಿ ಪ್ರವರ್ತಿಸುತ್ತಿಲ್ಲವೆಂದು ಕೆಲವರು ಆಕ್ಷೇಪಣೆ ಮಾಡಿ ಮಹಾರಾಜ ರಿಗೆ ತಿಳಿಸಿದರು. ಆಗ ಅವರು "ಕ್ಯಾಂಬಲ್ ಅವರು ನಮ್ಮ ಪರಮ ಮಿತ್ರರು. ಅವರಲ್ಲಿ ನಮಗೆ ಸಂಪೂರ್ಣವಾದ ನಂಬುಗೆಯುಂಟು. ನಮಗಾಗಿ ಅವರು ಪ್ರಾಣವನ್ನಾದರೂ ಒಪ್ಪಿಸಲು ಹಿಂದೆಗೆಯುವುದಿಲ್ಲ ನಮ್ಮ ಹಿತವೇ ಅವರ ಹಿತವೆಂದು ಭಾವಿಸಿದ್ದಾರೆ" ಎಂದು ಹೇಳಿ 'ಸಖಿರಿಂದುನ್ನತ ವಸ್ತುವೇ' ಎಂಬುದನ್ನು ತಿಳಿಸಿ ಆಕ್ಷೇಪಣೆ ಮಾಡಿದವರಿಗೆ ಸಮಾಧಾನ ಹೇಳಿದರು. ಕಬ್ಬನ್ ಅವರು ರೋಗಗ್ರಸ್ತರಾಗಿ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಇಂಗ್ಲೆಂಡಿಗೆ ಪ್ರಯಾಣ ಮಾಡುವುದಕ್ಕೆ ಮುಂಚಿತವಾಗಿ ಮಹಾರಾಜರಿಗೆ ಆ ವಿಚಾರ ತಿಳಿಯಿತು. ಅವರು ಸರ್ ಮಾರ್ಕ್ ಕಬ್ಬನ್ ಅವರಂಥ ಉತ್ತಮ ಸ್ನೇಹಿತರನ್ನು ಅಗಲುವ ಸಂದರ್ಭ ಬಂದುದಕ್ಕಾಗಿ ಮನಮರುಗಿದರು. ಅವರು ವಿಲಾಯಿತಿಗೆ ಹೊರಡುವುದಕ್ಕೆ ಮುಂಚೆ ಸಮಕ್ಷ ಮಾತನಾಡಿ ಬೀಳ್ಕೊಡಲು ಅವಕಾಶ ದೊರೆಯಲಿಲ್ಲವೆಂದು ಬಹಳವಾಗಿ ವಿಷಾದಿಸಿದರು. ಕೆಲವು ಕಾಲದ

ಮೇಲೆ ಬೆಂಗಳೂರಿನಲ್ಲಿ ಕಬ್ಬನ್ನರವರ ಲೋಹಪ್ರತಿಮೆಯನ್ನು ಮೈಸೂರು ನಾಡಿನ ಪ್ರಜೆಗಳು ಸ್ಥಾಪಿಸಿದ ಸಮಯದಲ್ಲಿ ಮಹಾರಾಜರು ತಮ್ಮ ಸ್ನೇಹ ಕಾಣಿಕೆಯಾಗಿ, ೧೦,೦೦೦ ರೂಪಾಯಿಗಳನ್ನು ಉದಾರಹೃದಯರಾಗಿ ಸಲ್ಲಿಸಿ ತಮ್ಮ ಸೌಜನ್ಯವನ್ನು ವ್ಯಕ್ತಪಡಿಸಿದರು.

ಮಹಾರಾಜರು ಹಾಸ್ಯಪ್ರಿಯರೂ, ಕಲಾಪ್ರೇಮಿಗಳೂ ಆಗಿದ್ದರು. ಹಿಂದೂಸ್ಥಾನದಲ್ಲೆಲ್ಲಾ ಅವರ ಕೀರ್ತಿಯು ಪ್ರಸರಿಸಿದ್ದುದರಿಂದ, ಕಲಾವಿದರೂ, ಶಿಲ್ಪಿಗಳೂ ಚಿತ್ರಕಾರರೂ ನಾನಾ ಕಡೆಗಳಿಂದ ಮೈಸೂರಿಗೆ ಬಂದು ಕಲಾಭಿಮಾನಿಗಳಾದ ಮಹಾರಾಜರ ಗೌರವಕ್ಕೂ, ಪ್ರಶಂಸೆಗೂ ಪಾತ್ರರಾಗುತ್ತಿದ್ದರು. ಒಮ್ಮೆ ಉತ್ತರ ಹಿಂದೂಸ್ಥಾನದ ಒಬ್ಬ ಶಿಲ್ಪಿಯು ಗಾಜಿನಿಂದ ಒಂದು ಪಾಲಕಿಯನ್ನು ತಯಾರಿಸಿಕೊಂಡು ಅದನ್ನು ಮಹಾಸ್ವಾಮಿಯವರ ಕೃಪಾವಲೋಕನಕ್ಕೆ ತರಲು ಬಹಳ ದೂರದಿಂದ ಬಂದಿದ್ದನು. ಶಿಲ್ಪಕಲಾ ಚಾತುರ್ಯದಿಂದ ಕೂಡಿದ್ದ ಆ ಪಾಲಕಿಯು ನಯನಮನೋಹರವಾಗಿ ಒಪ್ಪುತ್ತಿತ್ತು. ಆ ಶಿಲ್ಪಿಯು ಪ್ರಭುಗಳ ದರ್ಶನಮಾಡಿ, ಪಾಲಕಿಯನ್ನು ಸನ್ನಿಧಿಯಲ್ಲಿ ಸಮರ್ಪಿಸಬೇಕೆಂಬ ಅಭಿಲಾಷೆಯಿಂದ ಬಹಳ ದಿನಗಳವರೆಗೂ ಆಶ್ರಯಿಸಿದನು. ಮಹಾರಾಜರ ಭೇಟಿಗೆ ಸಮಯವರಿತು ಅವಕಾಶವನ್ನು ಕಲ್ಪಿಸಿಕೊಡಬೇಕೆಂಬುದಾಗಿ ಶಿಲ್ಪಿಯು ಸಂಬಂಧಪಟ್ಟ ಅಧಿಕಾರಿಯನ್ನು ಪ್ರಾರ್ಥಿಸಿಕೊಂಡನು ಆ ಅಧಿಕಾರಿಯು ಪ್ರತಿದಿನವೂ ಯಾವುದಾದರೊಂದು ನೆಪಹೇಳಿ ಹಿಂದಕ್ಕೆ ಕಳುಹಿಸುತ್ತಲೇ ಬಂದನು. ಇದರಿಂದ ಭಗ್ನಮನೋರಥನಾದ ಶಿಲ್ಪಿಯು ಆ ಪಾಲಕಿಯನ್ನು ಮೈಸೂರು ದೊಡ್ಡಕೆರೆ ಕೋಡಿಯ ಹತ್ತಿರ ಒಡೆದುಹಾಕಿ ಹೊರಟುಹೋದನು. ಮರುದಿನವೇ ಈ ಸಮಾಚಾರವು ಮಹಾರಾಜರಿಗೆ ಹೇಗೋ ಅರಿಕೆಯಾಯಿತು. ಅವರು ಕೂಡಲೆ ಆ ಗಾಜಿನ ಪಾಲಕಿಯ ಚೂರುಗಳನ್ನೆಲ್ಲಾ ತರಿಸಿ, ಆ ಶಿಲ್ಪಿಯನ್ನು ಹುಡುಕಿಸಿ ಅರಮನೆಗೆ ಕರೆಯಿಸಿದರು. ಉದಾರಹೃದಯರಾದ ಪ್ರಭುಗಳು ನಡೆದ ಸಮಾಚಾರವನ್ನೆಲ್ಲ ಆ ಶಿಲ್ಪಿಯಿಂದ ತಿಳಿದುಕೊಂಡು ಆ ಪಾಲಕಿಯ ಮೌಲ್ಯವನ್ನು ಕೊಟ್ಟು, ಅವನ ಕಲಾನೈಪುಣ್ಯಕ್ಕೆ ತಕ್ಕ ಬಹುಮಾನವನ್ನು ದಯಪಾಲಿಸಿ ಕಳುಹಿಸಿಕೊಟ್ಟುದಲ್ಲದೆ, ಆ ಶಿಲ್ಪಿಗೆ ನಿರಾಶೆಯನ್ನುಂಟುಮಾಡಿದ್ದ ಅಧಿಕಾರಿಯನ್ನು ಶಿಕ್ಷಿಸಿದರಂತೆ!

ಮಹಾರಾಜರು ಎಂಥ ಕಷ್ಟಕಾಲದಲ್ಲಿಯೂ ಎದೆಗುಂದುವ ಸ್ವಭಾವವನ್ನೇ ಅರಿಯರು. ಬ್ರಿಟಿಷ್ ಸರ್ಕಾರದವರು ರಾಜ್ಯವನ್ನು ಹಿಂದಕ್ಕೆ ಕೊಡುವ ಸಂಭವವೇ ಇಲ್ಲವೆಂದು ಕಂಡುಬಂದಾಗಲೂ, ಅವರು ನಿರಾಶರಾಗದೆ ನಿಟ್ಟಿತನದಿಂದ ಪ್ರಯತ್ನಮಾಡಿ ಕೃತಾರ್ಥರಾದರು. ಸಾಮ್ರಾಜ್ಯ ಸರ್ಕಾರದವರಲ್ಲಿ ಅವರಿಗೆ ವಿಶೇಷವಾದ ಪ್ರೀತಿಗೌರವಗಳೂ, ಸ್ನೇಹ ಸೌಹಾರ್ದಗಳೂ ಇದ್ದುವು. ಇಂಡಿಯಾ ದೇಶದಲ್ಲಿ ಸಿಪಾಯಿ ದಂಗೆಯು ಶಾಂತವಾದಮೇಲೆ ವಿಕ್ಟೋರಿಯಾ ಮಹಾರಾಜ್ಞಿಯವರು ಭರತಖಂಡದ ದೌಲತ್ತನ್ನು ತಾವೇ ನೇರವಾಗಿ ವಹಿಸಿಕೊಂಡ ಸಂದರ್ಭದಲ್ಲಿ ಮಹಾರಾಜರು ಆ ಚಕ್ರವರ್ತಿನಿಯವರ ಗೌರವಸೂಚಕವಾಗಿ ರಾಜಧಾನಿಯಲ್ಲಿ ಕುಶಾಲು ತೋಪುಗಳನ್ನು ಹಾರಿಸಿ, ಪಟ್ಟಣದಲ್ಲೆಲ್ಲಾ ಸಕ್ಕರೆಯನ್ನು ಹಂಚಿಸಿದರು. ವೈಸ್ರಾಯ್‌ರವರ ಅನುಮತಿಯನ್ನು ಪಡೆದು ಮಹಾರಾಜ್ಞಿಯವರಿಗೆ ಅಮೂಲ್ಯವಾದ ಎರಡು ರತ್ನಹಾರಗಳನ್ನೂ, ಏಳೆಳೆಯ ಆಣೆ ಮುತ್ತಿನ ಹಾರವನ್ನೂ, ಮೈಸೂರು ದೇಶದಲ್ಲಿ ಹುಟ್ಟಿ ಬಳೆದ ಒಂದು ಜೊತೆ ಕರಿಯ ಕುದುರೆಗಳನ್ನೂ, ಎರಡು ಜೊತೆ ಹಸುಗಳನ್ನೂ, ಒಂದು ಜೊತೆ ಹೋರಿಗಳನ್ನೂ ಮತ್ತು ಅನೇಕವಾದ ಇತರ ವಸ್ತುಗಳನ್ನೂ ಪಾರಿತೋಷಿಕವಾಗಿ ಡಾಕ್ಟರ್ ಕ್ಯಾಂಬೆಲ್‌ರವರ ಸಂಗಡ ಕಳುಹಿಸಿಕೊಟ್ಟರು. ಮಹಾರಾಜ್ಞಿಯವರು ಅವುಗಳನ್ನು ಸ್ವೀಕರಿಸಿ ಸುಪ್ರೀತರಾಗಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮಹಾರಾಜರಿಗೆ ಬ್ರಿಟಿಷ್ ಸರ್ಕಾರದವರಲ್ಲಿ ಅವ್ಯಾಜಪ್ರೇಮವಿದ್ದಿತು. ಬ್ರಿಟಿಷರ ಜಯವೇ ತಮ್ಮ ಜಯವೆಂದು ಭಾವಿಸಿದ್ದರು. ಬ್ರಿಟಿಷ್ ಜನಾಂಗದ ಅಭ್ಯುದಯದಲ್ಲಿ ಅವರಿಗೆ ಅಪಾರವಾದ ಪ್ರೇಮಾದರಗಳಿದ್ದುವು. ಒಮ್ಮೆ ಇಂಗ್ಲಿಷಿನವರು ಶತದ್ರುನದಿಯ ತೀರದಲ್ಲಿ ಸಿಕ್ ಜನರೊಂದಿಗೆ ಯುದ್ಧಮಾಡಿ ಜಯಶಾಲಿಗಳಾದರೆಂಬ ವರ್ತಮಾನವನ್ನು ಗವರ್ನರ್ ಜನರಲ್‌ರವರು ಮಹಾರಾಜರಿಗೆ ತಿಳಿಸಿದರು. ಅದನ್ನು ಕೇಳಿ ಅವರು ಬ್ರಿಟಿಷ್ ಸೈನಿಕರ ಶುಭಾಶಂಸನೆಯನ್ನು ಕೋರಿ ಅಭಿನಂದನೆಗಳನ್ನು ಶ್ರುತಪಡಿಸಿದರು. ಮಹಾರಾಜರು ಬ್ರಿಟಿಷ್ ಸರ್ಕಾರದವರ ಮಧುರ ಬಾಂಧವ್ಯಕ್ಕೆ ಎಳ್ಳಷ್ಟೂ ಚ್ಯುತಿ ಬಾರದಂತೆ ನಡೆದುಕೊಳ್ಳುತ್ತಿದ್ದರು. ಸಮಯ ಬಂದಾಗ ಮಹಾರಾಜರು ಅವರಿಗೆ ಸಹಾಯಮಾಡಲು ಹಿಂದೆಗೆಯುತ್ತಿರಲಿಲ್ಲ. ಸಾಮ್ರಾಜ್ಯ ಸರ್ಕಾರ

ದವರಲ್ಲಿ ಅವರಿಗೆ ದ್ವೇಷಬುದ್ಧಿಯಾಗಲಿ, ಅಸೂಯೆಯಾಗಲಿ ಇರಲಿಲ್ಲ. ಸರ್ ಮಾರ್ಕ್ ಕಬ್ಬನ್ ಅವರು ಮಹಾರಾಜರ ಒಂದು ಸ್ವಂತ ಮನೆಯಲ್ಲಿ ಸರ್ಕಾರಿ ಖಜಾನೆಯನ್ನಿಡಬೇಕೆಂದು ಯೋಚಿಸಿ, ಆ ಮನೆಯನ್ನು ಬಿಟ್ಟು ಕೊಡಬೇಕೆಂದು ಅವರು ಮಹಾರಾಜರನ್ನು ಕೇಳಿದರು. ಒಡೆಯರು ಕೂಡಲೇ ಆ ಮನೆಯನ್ನು ಕಮಿಷನರರವರ ವಶಕ್ಕೆ ಬಿಟ್ಟುಕೊಟ್ಟು "ನಾವು ಯಾವಾಗಲೂ ಬ್ರಿಟಿಷರ ಹಿತಚಿಂತಕರಾಗಿರುತ್ತೇವೆ. ಬ್ರಿಟಿಷ್ ಸರ್ಕಾರದವರ ಅಭ್ಯುದಯಕ್ಕಾಗಿ ನಮ್ಮ ತನು ಮನ ಧನಗಳನ್ನು ಅರ್ಪಿಸಲು ಸಿದ್ಧರಾಗಿರುತ್ತೇವೆ" ಎಂದು ಕಬ್ಬನ್‌ರವರಿಗೆ ತಿಳಿಸಿದರು. ಕಬ್ಬನ್‌ರವರು ಮಹಾರಾಜರ ಪ್ರೀತಿ ಗೌರವಗಳನ್ನೂ, ಸ್ನೇಹ ಸೌಹಾರ್ದಗಳನ್ನೂ ಕಂಡು, ಅಭಿನಂದಿಸಿ ಗವರ್ನರ್ ಜನರಲ್‌ರವರಿಗೆ ಆ ವಿಚಾರವಾಗಿ ಪತ್ರವನ್ನೂ ಬರೆದರು.

ಸಾಮಾನ್ಯವಾಗಿ ಪ್ರತಿಯೊಬ್ಬ ಗವರ್ನರ್ ಜನರಲ್‌ರವರೂ ತಮ್ಮ ಅಧಿಕಾರದ ಅವಧಿಯಲ್ಲಿ ಮೈಸೂರಿಗೆ ಬಂದು ಹೋಗುತ್ತಿದ್ದರು. ಅವರು ಮಹಾರಾಜರಲ್ಲಿದ್ದ ಸೌಜನ್ಯ ಸೌಶೀಲ್ಯ ವಿವೇಕ ಕಾರ್ಯಪಟುತ್ವ ರಾಜಕೀಯ ನೈಪುಣ್ಯ ಮುಂತಾದ ಗುಣಗಳನ್ನು ಕಂಡು ಹರ್ಷಿಸುತ್ತಿದ್ದರು. "ಮಹಾರಾಜರ ಮನೋವೃತ್ತಿಯು ಶಾಂತರೀತಿಯದು: ದುಂಡಾವರ್ತಿಯ ಸ್ವಭಾವವೇ ಅವರಲ್ಲಿರಲಿಲ್ಲ. ಅವರ ಬುದ್ಧಿಶಕ್ತಿ ಅಮೋಘವಾದುದು: ಲೋಕವ್ಯವಹಾರಜ್ಞಾನವು ಅಸದೃಶವಾದುದು" ಎಂದು ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಹೇಳಿದ್ದಾರೆ.

ಕ್ರಿ. ಶ. ೧೮೬೬ನೆಯ ಇಸವಿ ಮೇ ತಿಂಗಳಿನಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯವರು ತಮ್ಮ ವರ್ಧಂತಿ ಮಹೋತ್ಸವ ಸಮಯದಲ್ಲಿ ಮಹಾರಾಜರಿಗೆ ಕೆ.ಜಿ.ಸಿ.ಎಸ್.ಐ. (Knight Grand Commander of the Most Exalted Order of the Star of India) ಬಿರುದನ್ನು ಕೊಟ್ಟು ಗೌರವಿಸಿದರು.

ಮಹಾರಾಜರು ಬಹಳ ಸೌಜನ್ಯಶೀಲರು, ದಯಾದಾಕ್ಷಿಣ್ಯಪರರು. ಬಡವರಲ್ಲಿಯೂ ಮಕ್ಕಳಲ್ಲಿಯೂ ಅವರಿಗೆ ಬಹಳ ಪ್ರೇಮ. ಒಂದು ದಿನ ಅರಮನೆಯ ಊಳಿಗದ ಹೆಂಗಸಿನ ಡಾಬನ್ನು ಒಬ್ಬ ಪಹರೆಯವನು ಹೇಗೋ

ಕದ್ದುಬಿಟ್ಟನು. ಅವಳು ಎಲ್ಲಿ ಹುಡುಕಿದರೂ ಅವಳಿಗೆ ಆ ಒಡವೆ ಸಿಕ್ಕಲಿಲ್ಲ. ಕಡೆಗೆ ಆ ಪಹರೆಯವನಮೇಲೆ ಅನುಮಾನಹುಟ್ಟಿ, ಆ ಸಂಗತಿಯನ್ನು ಪ್ರಭುಗಳಿಗೆ ಬಿನ್ನವಿಸಿಕೊಂಡಳು. ಅವರು ಆ ಪಹರೆಯವನನ್ನು ಕರೆಯಿಸಿ ಕೇಳಲು ಅವನು ತಬ್ಬಿಬ್ಬಾದನು. ಕಳ್ಳತನ ಮಾಡಿದುದು ನಿಜವೆಂದು ಒಪ್ಪಿಕೊಂಡನು. "ನನಗೆ ಮನೆತುಂಬ ಮಕ್ಕಳಿದ್ದಾರೆ. ಅವರಿಗೆ ಏನಾದರೂ ಒಡವೆಯನ್ನು ಮಾಡಿಸಿಕೊಡಬೇಕೆಂದು ಹಾಗೆ ಮಾಡಿದೆನು" ಎಂದು ಹೇಳಿದನು. ಮಹಾರಾಜರು ಆ ಮಕ್ಕಳನ್ನೆಲ್ಲಾ ಕರೆಯಿಸಿ ನೋಡಿ, ಆ ಬಡ ಸಿಪಾಯಿಯ ಅಪರಾಧವನ್ನು ಮನ್ನಿಸಿ, ಆ ಒಡವೆಯನ್ನು ಅವನಿಗೇ ಬಿಟ್ಟು ಊಳಿಗದ ಹೆಂಗಸಿಗೆ ಬೇರೆ ಒಡವೆಯನ್ನು ಅರಮನೆಯಿಂದ ಕೊಡಿಸಿದರಂತೆ!

ಒಮ್ಮೆ ಮಹಾರಾಜರ ಸವಾರಿಯು ನಂಜನಗೂಡಿಗೆ ಚಿತ್ತೈಸಿತ್ತು. ಅವರು ಕುದುರೆಯಮೇಲೆ ಕುಳಿತು ಅರಮನೆಗೆ ದಯಮಾಡಿದಾಗ, ಊರಿನ ಜನರೆಲ್ಲರೂ ಪ್ರಭುದರ್ಶನದಿಂದ ಸಂತೋಷಪಡುತ್ತಿದ್ದರ. ಆ ಜನರ ಗುಂಪಿನಲ್ಲಿ ಒಬ್ಬ ಹೆಂಗಸು ತನ್ನ ಮಗುವನ್ನು ಎತ್ತಿಕೊಂಡು, ಆ ಮಗುವಿಗೆ ಮಹಾರಾಜರನ್ನು ತೋರಿಸುತ್ತಿದ್ದಳು. ಪ್ರಭುಗಳು ಅರಮನೆಯನ್ನು ಸೇರಿದರು. ಆ ಮಗುವಿನ ಆಸೆಯು ಮಾತ್ರ ತೀರಿರಲಿಲ್ಲ. ಮಹಾರಾಜರನ್ನು ಮತ್ತೊಮ್ಮೆ ನೋಡಬೇಕೆಂದು ಹಠಹಿಡಿದು ಅಳತೊಡಗಿತು. ಆ ತಾಯಿ ಏನು ಮಾಡಿಯಾಳು! ಎಷ್ಟು ಮುದ್ದಿಸಿದರೂ ಮಗು ಸುಮ್ಮನಾಗಲಿಲ್ಲ! ಅರಮನೆಯ ಎದುರಿಗೇ ಅವರ ಮನೆಯಿದ್ದಿತು. ಮಗುವು ಅಳುತ್ತಿದ್ದುದನ್ನು ಕೇಳಿ, ಅರಮನೆಯ ಓಲೆಕಾರನು ಬಂದು, "ಮಹಾರಾಜರು ಸುಖಶಯನದಲ್ಲಿರುತ್ತಾರೆ. ಮಗುವಿನ ಅಳುವಿನಿಂದ ವಿಶ್ರಾಂತಿಗೆ ಭಂಗವಾದೀತು" ಎಂದು ಹೇಳಿದನು. ತಾಯಿ ಭಯಪಟ್ಟು ಮಗುವನ್ನು ಎತ್ತಿಕೊಂಡು ಪರಿಪರಿಯಾಗಿ ಸಂತೈಸಿದಳು. ಮಗುವು ಅಳುತ್ತಿದ್ದ ಕಾರಣವನ್ನು ಊಳಿಗದವನಿಗೆ ತಿಳಿಸಿದಳು. ಆವನು ಅರಮನೆಗೆ ಹೋಗಿ, ಪ್ರಭುಸನ್ನಿಧಿಯಲ್ಲಿ ಬಿನ್ನವಿಸಿಕೊಂಡನು.

ಬೆಳಗಾಯಿತು. ಮಹಾರಾಜರು ದಿವ್ಯಾಭರಣಭೂಷಿತರಾಗಿ ಕುದುರೆಯ ಮೇಲೆ ಕುಳಿತು ದಯಮಾಡಿಸಿದರು. ತಾಯಿಯು ಮಗುವನ್ನೆತ್ತಿಕೊಂಡು ಬಂದು ಮನೆಯ ಅಂಗಳದಲ್ಲಿ ನಿಂತು ಸವಾರಿಯನ್ನು ಮಗುವಿಗೆ ಕಣ್ಣಾರೆ ಕಾಣಿಸಿದಳು. ಮಗುವು ಆನಂದದಿಂದ ಮಹಾರಾಜರನ್ನು ನೋಡಿ ಅಳುವನ್ನು

ನಿಲ್ಲಿಸಿಬಿಟ್ಟಿತು! ಸವಾರಿಯೂ ಆ ಮಗುವಿನ ಆಸೆಯು ತೀರಿದುದಕ್ಕಾಗಿ ಅತ್ಯಾನಂದ ಹೊಂದಿದರು! ಮಹಾರಾಜರಿಗೆ ಮಕ್ಕಳಮೇಲೆ ಎಷ್ಟೊಂದು ಮಮತೆ!

ಮಹಾರಾಜರು ರಾತ್ರಿಯವೇಳೆ ಬಹಳ ಹೊತ್ತಿನವರೆಗೂ ಅರಮನೆಯ ಅಂಬಾವಿಲಾಸದಲ್ಲಿ ಕುಳಿತುಕೊಂಡು ಇಷ್ಟಮಿತ್ರರೊಂದಿಗೆ ಅನೇಕ ಸಂಗ ಗಳನ್ನು ಕುರಿತುಮಾತನಾಡುತ್ತಿದ್ದರು. ನಾನಾ ವಿಧವಾದ ಹಾಸ್ಯಪ್ರಸಂಗ ಗಳನ್ನೆತ್ತಿ ವಿನೋದಪಡುತ್ತಿದ್ದರು. ಒಂದೊಂದು ದಿನ ಪಂಡಿತರ ಸಂಗಡ ಶಾಸ್ತ್ರ ವಿಚಾರಗಳನ್ನು ಮಾತನಾಡುತ್ತಿದ್ದರು. ಸದ್ಧರ್ಮನಿರತರಾದ ಬ್ರಾಹ್ಮಣರನ್ನು ಕಂಡರೆ ಮಹಾರಾಜರಿಗೆ ಬಹಳ ಸಂತೋಷ. ಅರಮನೆಯ ಖಾಸಾ ಖಜಾನೆಯ ಅಧಿಕಾರಿಯಾಗಿದ್ದ ಭಾಗವತ ಸುಬ್ಬರಾಯರೆಂ ಪ್ರಭುಗಳಿಗೆ ಅಚ್ಚುಮೆಚ್ಚು. ಅವರಲ್ಲಿ ಸಲಿಗೆ ಹೆಚ್ಚು. ಸುಬ್ಬರಾಯ ಕರ್ಮಠರಾದ ಬ್ರಾಹ್ಮಣರು; ಅವರಿಗೆ ಅಂತಃಪುರದಲ್ಲಿ ಗೋಷಾ ಇರಲಿ

ಮಹಾರಾಜರ ಆಸ್ಥಾನದಲ್ಲಿದ್ದ ಪಂಡಿತ ಮಂಡಲಿಯಲ್ಲಿ ರಾಮಶೇ ಶಾಸ್ತ್ರಿಗಳೆಂಬುವರು ಗಣ್ಯರಾದ ವಿದ್ವಾಂಸರಾಗಿದ್ದರು. ಅವರು ಒಂದು ಪ್ರಾತಃಕಾಲ ಎಂದಿನಂತೆಯೇ, ಹೊತ್ತಿಗೆ ಮುಂಚೆ ಎದ್ದು ಸ್ನಾನಾಹ್ನಿಕಗಳ ತೀರಿಸಿಕೊಂಡು ಪೇಟೆಯಕಡೆ ಹೊರಟಿದ್ದರು. ರಾಮಶೇಷಶಾಸ್ತ್ರಿಗಳೆಂದ ಶಾಸ್ತ್ರವಿಚಾರದಲ್ಲಿ ದಕ್ಷಿಣಾಮೂರ್ತಿಯ ಅವತಾರವೆಂದು ಪ್ರಖ್ಯಾತರಾಗಿದ್ದ ಅವರು ಆ ದಿನ ಪೇಟೆಯಲ್ಲಿ ಹಸುವಿಗೆ ಒಂದು ಹೊರೆ ಹುಲ್ಲನ್ನು ಕೊ ಕೊಂಡು, ಅದನ್ನು ತಲೆಯಮೇಲೆ ಹೊತ್ತುಕೊಂಡು, ನಾಲ್ಕು ನಿ ತೊಗರಿಬೇಳೆಯ ಗಂಟನ್ನು ಕೈಯಲ್ಲಿ ಹಿಡಿದುಕೊಂಡು, ಮೈಸೂರು *ಕಲಾ ಮೈದಾನದಲ್ಲಿ ಬರುತ್ತಿದ್ದರು. ಆಗ ಬೆಳಿಗ್ಗೆ ಸುಮಾರು ೯ ಘಂಟೆ ಸಮ ಆ ಹೊತ್ತಿಗೆ ಸರಿಯಾಗಿ ಮಾರ್ಗವಶದಿಂದ ಆನವಟ್ಟಿ ಶ್ರೀನಿವಾಸ ರೆಂಬ ಪಂಡಿತರೊಬ್ಬರು ಅದೇ ದಾರಿಯಲ್ಲಿ ಬರುತ್ತಾ, ರಾಮಶೇಷಶಾಸ್ತ್ರಿ ಕಂಡರು. ಪಂಡಿತರಿಬ್ಬರಿಗೂ ಪರಸ್ಪರ ಕುಶಲ ಪ್ರಶ್ನೆಗಳು ನಡೆದಮೇ ಆಮಾತು ಈಮಾತು ಬಂದು, ಕಡೆಗೆ ಅವರ ಸಂಭಾಷಣೆಯು ಗಹನವ

* ಈಗಿನ ಟೌನ್ ಹಾಲಿನ ಹತ್ತಿರ.